UNIVERSAL
LIBRARY
OU_202244
UNIVERSAL
LIBRARY

ಹರಿಃ ಓಂ

ಶ್ರೀಮಜ್ಜಗನ್ನಾಥದಾಸಾರ್ಯರ

ಪರಮ ಪ್ರಿಯ ಶಿಷ್ಯರೂ ಅಪರೋಕ್ಷಜ್ಞಾನಿಗಳೂ ಆದ

ಶ್ರೀಪ್ರಾಣೇಶ ವಿಠಲ ವಿರಚಿತ

ಶ್ರೀ ಹರಿಕೀರ್ತನಮಾಲಾ ಪಂಚಮ ಪುಷ್ಪ.

ಶ್ರೀಪ್ರಾಣೇಶ ವಿಠಲರ
ಕೀರ್ತನಗಳು

ಮತ್ತು

ಶ್ರೀಗುರುಪ್ರಾಣೇಶ, ಶ್ರೀಶಪ್ರಾಣೇಶ ವಿಠಲರ

ಕೀರ್ತನಗಳೂ ಶ್ರೀವರದೇಂದ್ರ ಸ್ವಾಮಿಗಳವರ

ಸ್ವಪ್ನವೃಂದಾವನಾಖ್ಯಾನವೂ.

(ಶಕ ೧೮೫೮)

All rights reserved.

Price: 1-8-0.] [ಕ್ರಯ: ರೂ. ೧॥.

PRINTED AT
THE DHARMA PRAKASH PRESS,
MANGALORE.

हरिः ॐ

ಶ್ರೀ ಹರಯೇ ನಮಃ
ಶ್ರೀ ಮಾತರಿಶ್ವಾಯ ನಮಃ
ಶ್ರೀ ರಾಘವೇಂದ್ರವರದೇಂದ್ರ ಗುರುಭ್ಯೋ ನಮಃ

नैवात्मनः प्रभुरयं निजलाभपूर्णो मानं जनाद्विदुषः करुणो वृणीते ॥
यद्यज्जनो भगवते विदधीतमानं तच्चात्मने प्रतिमुखस्य यथा मुखश्रीः ॥

ಉಪೋದ್ಘಾತ.

ಶ್ರೀ ಹರಿಕೀರ್ತನಮಾಲೆಯ ಈ ಪಂಚಮ ಪುಷ್ಪವನ್ನು
ಪಂಚರೂಪಾತ್ಮಕನ ಪಾದಗಳಿಗರ್ಪಿಸಿ ಪ್ರಕಟಿಸುವೆನು.

ಹರಿದಾಸ ಕುಲೋತ್ತಂಸರಾದ ಶ್ರೀಪ್ರಾಣೇಶ ದಾಸಾರ್ಯರಿಂದ ವಿರಚಿತವಾದ ಈ ಕೀರ್ತನಗಳ ಪುಸ್ತಕವು ಮುದ್ರಿತವಾಗಿ ಎಷ್ಟೋ ದಿವಸಗಳಾಗುತಿದ್ದವು. ಆದರೆ ಕೆಳಗೆ ಬರೆದ ಕೆಲವೊಂದು ಅನಿವಾರ್ಯ ಕಾರಣಗಳ ಮೂಲಕ ಮುದ್ರಿಸುವ ಕಾರ್ಯವು ನಿಂತುಹೋಯಿತು.

(೧) ಮೂಲಪ್ರತಿಯ ಮೇಲಿಂದ ಈ ಪದಗಳನ್ನು ಬರೆದು ಮುದ್ರಣ ಮಾಡಿಸುವದಕ್ಕಾಗಿ, ಮ। ರಾ। ರಾ। ಪಾವಂಜೆ ಗುರುರಾವ ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ, ಇವರು ವಚನವನ್ನಿತ್ತು ಸಹಾನುಭೂತಿಯನ್ನು ಪ್ರಕಟಮಾಡಿದ್ದರಿಂದ, ಈ ಪುಸ್ತಕವು ಮುದ್ರಣಗೋಸುಗ ಅವರ ಕಡಿಗೆ ಶಕೆ ೧೮೩೭ ನಿಜವೈಶಾಖ ಶು ।. ೧೦ ದಿವಸ ಕಳುಹಿಸಲ್ಪಟ್ಟಿತು. ಅದೇ ವರ್ಷ ನಾನು ಪರ್ಯಾಯೋತ್ಸವಕ್ಕೆಂದು ಶ್ರೀ ಉಡುಪಿ ಕ್ಷೇತ್ರಕ್ಕೆ ಹೋಗಲು, ಮ। ರಾ। ಪಾವಂಜೆ ಗುರುರಾಯರ ಭೇಟಿಯಾಗಿ, ಮುದ್ರಣ ವಿಷಯವಾಗಿ ಕೆಲವು ಮಾತುಕಥೆಗಳು ನಡೆದವು. ಆಗ್ಗೆ ಅವರು: " ಈ ಪುಸ್ತಕದ

ಪ್ರತಿಗಳು ತೀವ್ರ ಖರ್ಚಾಗುವದಿಲ್ಲವಾದ ಕಾರಣ ನೀವು ನಾಲ್ಕು ನೂರು ರೂಪಾಯಿಗಳು ಕೊಟ್ಟಲ್ಲಿ ಮುದ್ರಿಸಿ ೧೦೦ ಪ್ರತಿಗಳನ್ನು ನಿಮಗೆ ಕೊಟ್ಟು, ಸಕಲ ಸ್ವಾತಂತ್ರ್ಯವನ್ನು ನಮ್ಮ ಕಡಿಗೆ ಇಟ್ಟುಕೊಳ್ಳುವೆವು" ಎಂದು ಹೇಳಿದರು. ಆಗ್ಗೆ ಶ್ರೀಮನ್ನಾರಾಯಣ ಒಕ್ಕಲರಾದ ನಮ್ಮಿಂದ ಅಷ್ಟು ರೂಪಾಯಿಗಳು ಕೊಡಲಿಕ್ಕಾಗದ್ದರಿಂದ ಅವರು ಪುಸ್ತಕವನ್ನು ತಿರುಗಿ ಕೊಟ್ಟರು

(೨) ಇಷ್ಟರಲ್ಲಿಯೇ ನಮ್ಮ ಇಷ್ಟ ಜನರೆಲ್ಲರೊಂದಾಗಿ — ಈ ಕೀರ್ತನಗಳನ್ನು ಅಚ್ಚುಹಾಕಿಸಿದರೆ ಇದರಲ್ಲಿದ್ದ ಸಾನ್ನಿಧ್ಯವು ಕಡಿಮೆಯಾಗಿ, ಜನರು ಅಶ್ರದ್ಧೆಯಿಂದ ಅಚ್ಚಾದ ಪುಸ್ತಕಗಳನ್ನು ಅಲ್ಲಲ್ಲಿ ಒಗೆಯುವರೆಂದೂ, ಕಂಡ ಕಂಡ ಹಾಗೆ ಅರ್ಥವನ್ನು ಕಲ್ಪಿಸಿ ಅವಿಶ್ವಾಸವನ್ನುಂಟುಮಾಡಲಿಕ್ಕೆ ಕಾರಣರಾಗುವರೆಂದೂ, ಹೇಳಿದ ಕಾರಣ ಅವರ ಅಭಿಪ್ರಾಯವನ್ನನುಸರಿಸಿ, ದ್ರವ್ಯಾನುಕೂಲವಿದ್ದರೂ ಕೆಲಸವನ್ನು ನಿಲ್ಲಿಸಿ, ಅನೇಕ ಮಹನೀಯರನ್ನು ಈ ವಿಷಯವಾಗಿ ವಿಚಾರಿಸುತ್ತಿರಲು, ಕಲವರು ಹೇಳಿದ್ದೇನಂದರೆ:— ಅಕ್ಷರರೂಪವಾದ ಈ ಪದಪದ್ಯಗಳ ಪುಸ್ತಕಗಳನ್ನು ಅಶ್ರದ್ಧೆಯಿಂದ ಒಗೆದರೆ ಆ ಕೀರ್ತನೆಗಳಲ್ಲಿದ್ದ ಸಾನ್ನಿಧ್ಯವು ಎಂದೂ ಹೋಗಲಾರದು ಹೇಗೆಂದರೆ: "**अर्चकस्यतपो बलात्**" ಎಂಬ ಉಕ್ತಿಯಂತೆ ಅರ್ಚಕನಲ್ಲಿದ್ದ ತಪೋಬಲದ ಪ್ರಮಾಣದಿಂದ ಪ್ರತಿಮೆಯಲ್ಲಿದ್ದ ಸಾನ್ನಿಧ್ಯವು ಹೆಚ್ಚುಕಡಿಮೆಯಾಗುವದು; ಆದರೆ ಅರ್ಚಕನಲ್ಲಿಯ ತಪೋಬಲಾಭಾವದಿಂದ ಸಾನ್ನಿಧ್ಯವು ಮಾತ್ರ ಎಂದೂ ಹೋಗಲಾರದು ಮತ್ತೂ ರತ್ನದ ಬೆಲೆಯನ್ನರಿಯದ ಮೂಢನು, ಅದಕ್ಕೆ ಕಾಜು ಎಂದು ಭಾವಿಸಿ, ಅದನ್ನು ಉದಾಸೀನದಿಂದ ಎಲ್ಲಾದರೂ ಒಗೆದರೆ, ಆ ರತ್ನದ ಪ್ರಕಾಶವು ಹೇಗೆ ಕಡಿಮೆಯಾಗದಿರುವದೋ, ಹಾಗೆಯೆ ಪ್ರತಿಮಾ, ಮತ್ತು ರತ್ನೋಪಮವಾದ ಈ ದಿವ್ಯ ಕೀರ್ತನೆಗಳಲ್ಲಿದ್ದ ಸಾನ್ನಿಧ್ಯವು ಹೋಗಲಾರದು.

ಮತ್ತು ಕುಹಕರ ನಿಂದಾರೂಪ ವಾಕ್ಯಗಳಿಂದ ಆ ಮಹನೀಯರಿಗೆ ಯಾವ ವಿಧದಿಂದಲೂ ಕುಂದುಬರಲಾರದು. ಇಂಥ ಜನರ ಸ್ಥಿತಿಯನ್ನು ಶ್ರೀಮಜ್ಜಗನ್ನಾಥ ದಾಸಾರ್ಯರು ಅಪೂರ್ವವಾದ ಶ್ರೀ ಹರಿಕಥಾಮೃತ ಸಾರ ಗ್ರಂಥದಲ್ಲಿ—

"ಭಾಸ್ಕರನ ಮಂಡಲವ ಕಂಡು ನಮಸ್ಕರಿಸಿ ಮೋದಿಸದೆ
ದ್ವೇಷದಿ, ತಸ್ಕರನು ನಿಂದಿಸಲು ಕುಂದಹುದೇ ದಿವಾಕರಗೆ"

ಎಂಬುವ ಶ್ಲೋಕದಿಂದ ಯಥಾರ್ಥವಾಗಿ ವರ್ಣಿಸಿರುವರು. ಇತ್ಯಾದಿ ಸಮಾಧಾನಗಳಿಂದ ಬಂದ ಶಂಕೆಗಳೆಲ್ಲವೂ ದೂರಾಗಿ ಪುನಃ ಅಚ್ಚುಹಾಕಿಸ ಲಿಕ್ಕೆ ಪ್ರಯತ್ನವು ನಡೆಯಲಾರಂಭಿಸಿತು

(೩) ಈ ಅವಧಿಯಲ್ಲಿ ಅಚ್ಚುಹಾಕಿಸುವ ಮಹಾ ಕಾರ್ಯವನ್ನು ಸಂಪೂರ್ಣವಾಗಿ ವಹಿಸಿದವರೂ, ನನ್ನ ಭಾವಮೈದುನರೂ ಆದ ಶ್ರೀಯುತ ಸ್ವಾಮಿರಾವ ವಕೀಲ ಕಲೂರ, ಇವರು ಶಕೆ ೧೮೪೦ ಆಶ್ವೀನ ಶು। ೩ ದಿವಸ ಪರಲೋಕಯಾತ್ರೆಯನ್ನು ಮಾಡಿದ ಕಾರಣ ಈ ವಿಚಾರವು ಅಲ್ಲಿಗೇ ನಿಂತುಹೋಯಿತೆಂದು ಬರೆಯಲು ಅತ್ಯಂತ ವಿಷಾದವಾಗುತ್ತದೆ. ಇವರು ಶ್ರೀಗುರುಪ್ರಾಣೇಶ ದಾಸಾರ್ಯರ ದೌಹಿತ್ರ ಪುತ್ರರರು, ಚಿಕ್ಕಂದಿನಲ್ಲಿಯೇ ಒಳ್ಳೇ ಸುಶೀಲರಾಗಿದ್ದು ಬಹು ಕಷ್ಟದಿಂದ ವಿದ್ಯಾರ್ಜನೆಯನ್ನು ಮಾಡಿ, ಅನೇಕ ಲೌಕಿಕ ಮಹಾ ಕಾರ್ಯಗಳಲ್ಲಿ ಪ್ರಖ್ಯಾತಿಯನ್ನು ಪಡೆದರು. ಇದ ಲ್ಲದೆ ಪೂರ್ವಾರ್ಜಿತ ಸುಕೃತದಿಂದ ಬಾಲ್ಯದಲ್ಲಿಯೇ ಅವರ ಮನಸ್ಸಿನ ಮೇಲೆ ಪರಮಾರ್ಥದ ಸಂಸ್ಕಾರವಾದ್ದರಿಂದ ಸರ್ವದಾ ಅದೇ ವಿಚಾರ ದಲ್ಲಿಯೇ ಮಗ್ನರಾಗಿರುತಿದ್ದರು ಶ್ರೀ ಮಹಾ ಯಾತ್ರಾದಿಗಳನ್ನು ಮಾಡಿ ಕೊಂಡು ಬಂದ ಮೇಲೆ ಇವರಿಗೆ ಬಹು ಜಾಡ್ಯವಾಗಲು, ಶ್ರೀ ಮುಂಡೇ ವಾಡಿ ದಾಸಾರ್ಯರ ಅನುಗ್ರಹದಿಂದ ಜಾಡ್ಯವು ಗುಣಮುಖವಾಗಹತ್ತಿತು. ಅದೇ ಅಸ್ವಸ್ಥತೆಯಲ್ಲಿಯೇ ಅನೇಕ ವಿಧವಾಗಿ ದೇವರ ಸ್ತೋತ್ರಗಳನ್ನು ಪದ್ಯ ರೂಪವಾಗಿ ಮಾಡಲು ಇವರಿಗೆ ಪೂರ್ಣ ಆರೋಗ್ಯವಾಯಿತು ಕೆಲವು ದಿವಸಗಳ ಮೇಲೆ ಶ್ರೀ ವರದೇಂದ್ರ ಸ್ವಾಮಿಗಳವರ ಅನುಗ್ರಹದಿಂದ ಅವರ ಆಜ್ಞಾ ಪ್ರಕಾರವೇ ಶ್ರೀ ಗೋಪಾಲ ದಾಸಾರ್ಯರ ಶಿಷ್ಯ ಸಂತತಿಗೆ ಸೇರಿದ ಜ್ಞಾನಿಗಳಾದ ಗುರುಜಗನ್ನಾಥ ವಿಠಲರಲ್ಲಿ "ವರದೇಶ ವಿಠಲ" ಎಂಬುವ ಅಂಕಿತವನ್ನು ಸಂಪಾದಿಸಿ, ಅತ್ಯುತ್ತಮವಾದ ಅನೇಕ ಪದಪದ್ಯಗಳನ್ನೂ, ವರದೇಂದ್ರ ಸ್ವಾಮಿಗಳು ಪುಣೆಯಿಂದ ಲಿಂಗಸೂಗೂರಿಗೆ ಸ್ವಪ್ನದಿಂದ ಬಂದ ಆಖ್ಯಾನವನ್ನೂ, ಮನೋಹರವಾದ ಪದಪದ್ಯಗಳಿಂದ ಯುಕ್ತವಾದ ಶ್ರೀ

ಮದ್ಭಾಗವತ ಸಪ್ತಮಸ್ಕಂಧಾಂತರ್ಗತ ಶ್ರೀ ಪ್ರಲ್ಹಾದ ಚರಿತ್ರೆಯನ್ನೂ, ಮತ್ತೂ ಮಂತ್ರಾಲಯ ಗುರುರಾಜರ ಒಂದು ಚಮತ್ಕಾರಿಕ ಆಖ್ಯಾನವನ್ನೂ ರಚಿಸಿ, ಒಳ್ಳೇ ಜ್ಞಾನವನ್ನು ಸಂಪಾದಿಸಿ ಗುರ್ವನುಗ್ರಹಕ್ಕೆ ಪಾತ್ರರಾದರು. ಇಂತಹ ಸುಶೀಲರೂ ಜ್ಞಾನಿಗಳೂ ಯಾತ್ರಾಮಾಡಿದ ತರುವಾಯ, ನನಗೆ ಲೌಕಿಕ ಪರಮಾರ್ಥಿಕ ಸಹಾಯವು ತಪ್ಪಿಹೋದಕಾರಣ ಎಲ್ಲ ವಿಚಾರಗಳು ಅಲ್ಲಿಯೇ ಉಪರಮಿಸಿದವು.

(೪) ಶ್ರೀಯುತ ಸ್ವಾಮಿರಾವ ಇವರು ಯಾತ್ರಾಮಾಡಿದ ಬಳಿಕ (ಅವರು ಶ್ರೀ ಪುರಂದರ ದಾಸಾರ್ಯರ ಪುಣ್ಯತಿಥಿಯ ನಿಮಿತ್ತ ಪ್ರತಿ ವರ್ಷ ಮುಂಡೇವಾಡಿ ದಾಸಾರ್ಯರಲ್ಲಿ ಹೋಗುವಂತೆ ಶಕೆ ೧೮೪೨ರಲ್ಲಿ ನಾನು ಮುಂಡೆವಾಡಿಗೆ ಹೋಗಿದ್ದೆನು. ಆಗ್ಗೆ ಶ್ರೀ ಮುಂಡೇವಾಡಿ ದಾಸಾರ್ಯರ ಮುಖ್ಯ ಶಿಷ್ಯರಾದ ಮ। ರಾ। ಬಿಂದೂರಾವ ಮುತಾಲೀಕ (ಧಾರವಾಡ) ಇವರು ಶ್ರೀಪ್ರಾಣೇಶ ದಾಸಾರ್ಯರ ಪದಪದ್ಯಗಳನ್ನು ಕೇಳಿ ಸಂತೋಷಬಟ್ಟು, ನಾವೇ ಸ್ವಂತ ನಮ್ಮ ಖರ್ಚಿನಿಂದ ದಾಸಾರ್ಯರ ಪದಪದ್ಯಗಳನ್ನು ಮುದ್ರಿಸಿ ಕೊಡುವೆವೆಂದು ಹೇಳಿ ಅದರಂತೆ ಕೆಲವು ಪದ್ಯಗಳನ್ನು ಮಾತ್ರ ಮುದ್ರಿಸಿದರು. ಆದರೆ ಮುಂದೆ ಕೆಲವು ಕಾರಣಾಂತರಗಳಿಂದ ಉದ್ದಿಷ್ಟ ಕಾರ್ಯವು ಅವರಿಂದ ನೆರವೇರಲಿಲ್ಲ. ಆದರೂ ನಾವು ಈಗ ಪ್ರವರ್ತಿಸಿರುವ ಕಾರ್ಯಕ್ಕೆ ಅವರ ಉತ್ತೇಜನವೇ ಕಾರಣವಾಯಿತೆನ್ನುವದಕ್ಕೆ ಸಂದೇಹವಿಲ್ಲಾ. ಈ ಪ್ರಕಾರವಾಗಿ ಈ ಸತ್ಕಾರ್ಯಕ್ಕೆ ನಮ್ಮನ್ನು ಪ್ರೋತ್ಸಾಹಿಸಿದ್ದಕ್ಕಾಗಿ ಅವರ ಉಪಕಾರವನ್ನು ಎಂದೂ ಮರೆಯುವಂತಿಲ್ಲ.

(೫) ಹೀಗೆ ಒಂದಲ್ಲ ಎರಡಲ್ಲ ಅನೇಕ ಕಾರಣಗಳಿಂದ, ನೆನೆಗುದಿಗೆ ಬಿದ್ದ ಈ ಕಾರ್ಯವನ್ನು ಲೋಕೋಪಕಾರಾರ್ಥವಾಗಿಯೂ, ದಾಸಾರ್ಯರ ಗ್ರಂಥಗಳು ದೇಶದಲ್ಲಿ ಹಬ್ಬಿ ಹರಿ ಬೀಳಲೆಂಬದಾಗಿಯೂ, ಶ್ರೀ ಹರಿವಾಯುಗಳ ಪ್ರೇರಣೆಯಿಂದ ಪುನಃ ಕೈಕೊಂಡಿರುವೆವು. ಶ್ರೀ ಪ್ರಾಣೇಶ ದಾಸಾರ್ಯರ ಶಿಷ್ಯರು ಅನೇಕ ಪ್ರಾಂತಗಳಲ್ಲಿ ಅನೇಕರಾಗಿರುವದರಿಂದ ಇವರ ಪದಪದ್ಯಗಳಾದರೂ, ಅನೇಕ ಕಡೆಯಲ್ಲಿ ಖಂಡಮಂಡಲವಾಗಿರುವವು. ಆದಕಾರಣ ದಾಸಾರ್ಯರ ಸಂಪೂರ್ಣ ಕೀರ್ತನಗಳನ್ನು

ಸಂಗ್ರಹಿಸುವದು ಸುಲಭಸಾಧ್ಯವಲ್ಲ. ಇದರಲ್ಲಿರುವ ಎಲ್ಲ ಪದಗಳು, ಒಂದು ಪ್ರಾಚೀನ ಪುಸ್ತಕದ ಮೇಲಿಂದ ಬರೆಯಲ್ಪಟ್ಟವೆ. ಈ ಪುಸ್ತಕವನ್ನು ಬರೆದು ಸುಮಾರು ೧೨೫–೧೩೦ ವರ್ಷಗಳಾದಕಾರಣ ಕೆಲವು ಪುಟಗಳ ಕೊನೆಯು ಹರಿದುಹೋಗಿರುವದು. ಕೆಲವು ಅಕ್ಷರಗಳು ಹಾರಿಹೋಗಿರುವವು. ಆದರೂ ಈ ಸ್ಥಳದಲ್ಲಿ ದಾಸಾರ್ಯರ ವಂಶಸ್ಥರೂ ಪದಪದ್ಯಗಳನ್ನು ಬಲ್ಲವರೂ ಇದ್ದಕಾರಣ ವಿಶೇಷವಾದ ತೊಂದರೆಗಳೇನೂ ಸಂಭವಿಸಲಿಲ್ಲ. ದಾಸಾರ್ಯರು ಬರೆದ ಕಥೆಗಳಲ್ಲಿ ಕೆಲವುಗಳನ್ನು ಈ ಮೊದಲೆ ಪ್ರಕಟಿಸಿದ್ದು ಉಳಿದ ೭ ಕಥೆಗಳನ್ನು ಯಥಾನುಕೂಲ ಮುಂದೆ ಪ್ರಸಿದ್ಧಿಸುವೆವು. ಈ ಗ್ರಂಥದಲ್ಲಿ ಶ್ರೀಪ್ರಾಣೇಶ ದಾಸಾರ್ಯರ ೨೫೨ ಕೀರ್ತನಗಳಲ್ಲದೆ, ಶ್ರೀ ಗುರು ಪ್ರಾಣೇಶ ದಾಸಾರ್ಯರ ೧೮ ಕೀರ್ತನಗಳನ್ನೂ, ಮತ್ತು ಶ್ರೀ ಶ್ರೀಶ ಪ್ರಾಣೇಶ ವಿಠಲರ (ರಾಮದಾಸರ) (೧೪) ಕೀರ್ತನಗಳನ್ನೂ, ಹಾಗೂ ಸ್ವಾಮಿರಾವ ಇವರಿಂದ ರಚಿತವಾದ ಶ್ರೀ ವರದೇಂದ್ರ ಸ್ವಾಮಿಗಳವರ ಸ್ವಪ್ನವೃಂದಾವನಾಖ್ಯಾನವನ್ನೂ ಸಂಗ್ರಹಿಸಿರುವೆವು.

ಮೊದಲಿಗೆ ಈ ಕೀರ್ತನಗಳನ್ನು ಸಂಗ್ರಹಮಾಡುವ ಕೆಲಸದಲ್ಲಿ ಪೂರ್ಣ ಸಹಾಯಮಾಡಿದಂಥ ದಾಸಾರ್ಯರ ಪ್ರಪೌತ್ರರಾದ ತಿ। ರಾಮಚಂದ್ರ ವಿಜಯರಾವ ಕುಲಕರ್ಣಿ, ಮತ್ತು ದಾಸಾರ್ಯರ ವಂಶಸ್ಥರಾದ ಹನಮಂತ ವ್ಯಾಸರಾವ ಕು। ಲಿಂಗಸೂಗೂರ ಇವರ ಉಪಕಾರವು ಚಿರಸ್ಮರಣೀಯವಾಗಿರುವದು ಪದಗಳನ್ನು ಬರೆಯುವದರಲ್ಲಿಯೂ ಸಮಾಖ್ಯ ಮಾಡುವದರಲ್ಲಿಯೂ ಸಹಾಯಮಾಡಿದ, ದಾಸಾರ್ಯರ ಶಿಷ್ಯವರ್ಗ ವಂಶಸ್ಥರಾದ ತಿ। ರಾ। ಹನುಮಂತಾಚಾರ್ಯ ಜೋಸಿ, ಮ। ರಾ। ವೆಂಕಟರಾವ ಹಳ್ಳೆರಾವ ವಕೀಲ ಇವರಿಗೂ ಅತ್ಯಂತ ಕೃತಜ್ಞತನಾಗಿರುವೆನು ಇತ್ತೀಚಿಗೆ ಈ ಮುದ್ರಣ ಕಾರ್ಯದಲ್ಲಿ ಸಂತತವಾಗಿ ಶ್ರಮ ತೆಗೆದುಕೊಂಡು ಪದಪದ್ಯಗಳನ್ನು ಬರೆಯುವದರಲ್ಲಿಯೂ, ಸಮಾಖ್ಯ ಮಾಡುವದರಲ್ಲಿಯೂ ಪೂರ್ಣ ಸಹಾಯ ಮಾಡಿದ ದಾಸಾರ್ಯ ವಂಶಸ್ಥರಾದ ಮುದ್ದುರಂಗರಾವ ಮಾಸ್ತರ ಇವರ ಉಪಕಾರ ಸ್ಮರಿಸಿ, ಇವರಿಗೆ ದಿನೆದಿನೇ ಜ್ಞಾನಭಕ್ತ್ಯಾದಿಗಳು ವರ್ಧಿಸಲೆಂದು ಶ್ರೀ ಹರಿಯನ್ನು ಪ್ರಾರ್ಥಿಸುವೆನು.

ಈ ಗ್ರಂಥವು ಲೋಕಮಾನ್ಯವಾಗಿ ಭಗವದ್ಭಕ್ತರಿಗೆ ಹಿತಕರವಾಗಿ ತೋರಿದಲ್ಲಿ, ನಮ್ಮ ಶ್ರಮವು ಸಫಲವಾಯಿತೆಂದು ತಿಳಿಯುತ್ತೇವೆ ಶ್ರೀ ಹರಿ ವಾಯುಗಳು ಈ ಸದ್ಧೇತುವನ್ನು ಪೂರ್ಣ ಮಾಡಲೆಂದು ಪ್ರೇಮಪೂರ್ವಕ ವಾಗಿ ಪ್ರಾರ್ಥಿಸುತ್ತೇನ.

ಶ್ರೀ ದಾಸಾರ್ಯರ ವಂಶಜರ ಬಂಧುವರ್ಗಕ್ಕೆ ಸೇರಿದ
ಕಶ್ಚಿದ್ಭಕ್ತನಾದ
ಹನಮಂತರಾವ ವೆಂಕಟರಾವ ಕುಲಕರ್ಣಿ ಗೋರಾಬಾಳ,
ವಕೀಲ, ಲಿಂಗಸೂಗೂರ,

ಶಕ ೧೮೪೮ ಆಷಾಢ ಶು॥ ೧೦ **ಜಿಲ್ಲಾ ರಾಯಚೂರ, ನೈಜಾಂ.**

॥ श्री सीताराम चंद्रो विजयते ॥

प्राणपतिपदद्वंद्व पंकजासक्त मानस ॥
शमादि गुण संयुक्तं श्री प्राणेश गुरुं भजे ॥

ಸಂಕ್ಷಿಪ್ತ

ಶ್ರೀ ಪ್ರಾಣೇಶ ದಾಸಾರ್ಯರ ಚರಿತ್ರೆ.

ಪರಮ ಭಾಗವತ ಶಿರೋಮಣಿಗಳೆನಿಸಿ, ದಾಸವರ್ಗದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಶ್ರೀಪ್ರಾಣೇಶ ದಾಸರಾಯರು, ನೈಜಾಂ ಇಲಾಖೆ ಜಿಲ್ಲಾ ರಾಯಚೂರ ತಾಲೂಕು ಲಿಂಗಸೂಗೂರ ಪೈಕಿ ಲಿಂಗಸೂಗೂರದಲ್ಲಿ, ಕಾಶ್ಯಪ ಗೋತ್ರದ, ಶ್ರೀಪತಿ ಅಯ್ಯನವರೆಂಬ ಪ್ರಸಿದ್ಧ ಸದ್ವೈಷ್ಣವ ವಂಶದಲ್ಲಿ ಶಾನುಭೋಗ ತಿರುಕಪ್ಪನವರ ಸುತರಾಗಿ ಜನಿಸಿ, ಯೋಗೇಂದ್ರರಾಯರೆಂಬ ಹೆಸರಿನಿಂದ ಕರೆಸಿಕೊಂಡರು ಜನನ ಕಾಲದಲ್ಲಿಯೇ ಶ್ರೀ ದಾಸಾರ್ಯರ ಶರೀರವೆಲ್ಲವೂ ಶ್ವೇತ ವರ್ಣ ಪರಿಪುಷ್ಟವಾಗಿ, ಅತಿತೇಜಃಪುಂಜವಾಗಿತ್ತು. ದಾಸಾರ್ಯರ ಜನನಿಜನಕರು ಇದೊಂದು ಕೆಟ್ಟ ರೋಗವೆಂದು ಭಾವಿಸಿ, ಚಿಕ್ಕಂದಿನಲ್ಲಿಯೇ ಶ್ರೀ ಮನ್ಮಂತ್ರಾಲಯದಲ್ಲಿ ಕೆಲಕಾಲ ಸೇವಾಮಾಡಿಸಲು, ಸಕಲ ಶ್ವೇತವು ನಿವಾರಣವಾಗಿ ಅಂಗಾಲಿನಲ್ಲಿ ಮಾತ್ರ ಸ್ವಲ್ಪ ಉಳಿಯಿತು ಇದನ್ನು ಕಂಡು, ಪೂರ್ವದಂತೆ ಪುನಃ ಸೇವಾನಡೆಸಲು, ಶ್ರೀ ಗುರುರಾಜರಿಂದ:—"ಮೂಲ ಸ್ವರೂಪಕ್ಕೆ ಸೇರಿದ್ದ ಕಾರಣ ಇದು ಹೋಗಲಾರದೆಂದು" ಸ್ವಪ್ನವಾಗಲಾಗಿ, ಶ್ರೀ ದಾಸಾರ್ಯರ ಜನಕರಾದ ತಿರುಕಪ್ಪನವರು ಬಹು ಆನಂದದಿಂದ ಗುರುರಾಜರ ಸೇವೆಯನ್ನು ಸಂಪೂರ್ಣ ತೀರಿಸಿಕೊಂಡು, ಮರಳಿ ತಮ್ಮ ಗ್ರಾಮಕ್ಕೆ ದಾಸಾರ್ಯರೊಂದಿಗೆ ಬರುವವರಾದರು. ಶ್ರೀ ಮತ್ಪೂಜ್ಯ ದಾಸಾರ್ಯರು ಸಾಕ್ಷಾತ್ ಮರುದಂಶಯುಕ್ತರಾದ, ಪಾಂಡುರಾಜನ ಅವತಾರವೆಂದು ಹಿರಿಯರ ಹೇಳಿಕೆಯ ಮೇಲಿಂದ ತಿಳಿದುಬರುತ್ತದೆ.

ಶ್ರೀ ದಾಸಾರ್ಯರು ಕೆಲಕಾಲ ಲೌಕಿಕದಲ್ಲಿದ್ದು, ಆ ಮೇಲೆ ಶ್ರೀ ಮದ್ಹರಿ ಕಥಾಮೃತಸಾರವೆಂಬ ಸಕಲ ವೇದಾರ್ಥ ಪ್ರತಿಪಾದಕವಾದ ಗ್ರಂಥ

ವನ್ನು ವಿರಚಿಸಿದ ಕವಿಕುಲ ತಿಲಕ ಶ್ರೀಮಾನ್ವಿ ಕ್ಷೇತ್ರಸ್ಥ ಶ್ರೀಮಜ್ಜಗನ್ನಾಥ ದಾಸಾರ್ಯರಲ್ಲಿ ಪರತತ್ತ್ವೋಪದೇಶವನ್ನು ಕೈಕೊಂಡು, ಅನೇಕ ವರ್ಷಗಳ ವರೆಗೆ ದಾಸಾರ್ಯರ ಸೇವೆಯನ್ನು ಮಾಡಿ, "ಶ್ರೀಪ್ರಾಣೇಶ ವಿಠ್ಠಲ" ಎಂಬ ಅಂಕಿತವನ್ನು ಪಡೆದು, ಶ್ರೀಮಜ್ಜಗನ್ನಾಥ ದಾಸಾರ್ಯರ ಪರಮ ಪ್ರೀತಿಗೆ ಪಾತ್ರರಾಗಿ ಶಿಷ್ಯಶಿರೋರತ್ನವೆನಿಸಿಕೊಂಡು, ಭಗವದ ಪರೋಕ್ಷಿಗಳಾದರು

ಶ್ರೀಪ್ರಾಣೇಶ ದಾಸಾರ್ಯರು ಅನೇಕ ಪದಪದ್ಯ ಹರಿಕೀರ್ತನೆ ಗಳನ್ನು ರಚಿಸಿರುವರಲ್ಲದೇ ಎಷ್ಟೋ ಪ್ರಮೇಯ ಭಾಗಗಳಲ್ಲಿಯೂ ಗ್ರಂಥ ರೂಪದಿಂದ ನಿರ್ಣಯ ಮಾಡಿರುತ್ತಾರೆ.

೧ ಗಾಲವ ಚರಿತ್ರ, ೨. ಕಾಲಿಯಾಮರ್ದನ ಕಥೆ, ೩. ಬುದ್ಧಿ ಬ್ರಹ್ಮನ ಕಥೆ, ೪. ಗೋಪಿಕಾವಿಲಾಸ, ೫. ಭ್ರಮರಗೀತಾ, ೬ ಮುಯ್ಯದ ಪದ, ೭. ಶ್ರೀಹರಿ ವಾಯುಸ್ತುತಿ, ೮ ಸೀತಾಸ್ವಯಂವರ, ೯ ಕಾಳೀ ಸ್ವಯಂವರ, ೧೦ ಹನುಮದ್ವಿಲಾಸ (ಗರುಡಗರ್ವಹರಣ), ೧೧ ಭೀಮ ಸೇನವಿಲಾಸ (ಕೀಚಕವಧ), ೧೨ ವೀರಭದ್ರವಿಲಾಸ (ದಕ್ಷಾಸುರಧ್ವಂಸ ಕಥೆ), ೧೩ ಪಾರ್ಥವಿಲಾಸ (ಸುಭದ್ರಾಹರಣ), ೧೪. ಅನಿರುದ್ಧವಿಲಾಸ (ಉಷಾಹರಣ), ೧೫. ವಶಿಷ್ಠ ವಿಶ್ವಾಮಿತ್ರಾಖ್ಯಾನ, ೧೬. ಊರ್ಧ್ವಪುಂಡ್ರ ಮಹತ್ವ್ಯ, ೧೭. ತಿಥಿತ್ರಯನಿರ್ಣಯ ಮುಂತಾದ ಅನೇಕ ಕಥೆಗಳನ್ನು ಬಹು ರಸಭರಿತವಾಗಿಯೂ, ಭಕ್ತ್ಯುದ್ರೇಕವಾಗುವಂತೆಯೂ ರಚಿಸಿರು ವರು ದಾಸಾರ್ಯರ ಕೆಲವು ಕವಿತೆಗಳು ಶುದ್ಧ ಕನ್ನಡದಲ್ಲಿಯೂ, ಕೆಲವು ಹಳೆಗನ್ನಡದಲ್ಲಿಯೂ, ಕೆಲವು ಬಹು ಸರಳವಾಗಿಯೂ, ಕೆಲವು ಬಹು ಪ್ರೌಢವಾಗಿಯೂ, ಕೆಲವು ಶುದ್ಧ ಸಂಸ್ಕೃತದಲ್ಲಿಯೂ ಇರುವವು. ಕೆಲವು ಕವಿತೆಗಳು ಅನೇಕ ಪ್ರಮೇಯಗಳಿಂದಲೂ, ಅನೇಕ ಮಹಾಪುರಾಣ ಉಪ ಪುರಾಣೋಕ್ತ ಕಥೆಗಳಿಂದಲೂ, ದಾಸರ ಗೌಪ್ಯಗೋಷ್ಟಿಗಳಿಂದಲೂ ಕೂಡಿರು ವದರಿಂದ ಅರ್ಥವಾಗುವದೇ ಪರಮ ಕಷ್ಟವಾಗಿದೆ. ಇವೆಲ್ಲ ಕವಿತೆಗಳನ್ನು ನೋಡುವದರಿಂದ, ಇವರು ಹಳೆಗನ್ನಡ ಹಾಗೂ ಸಂಸ್ಕೃತದಲ್ಲಿ ಪೂರ್ಣ ಯೋಗ್ಯತೆಯುಳ್ಳವರೂ, ಭಗವದ ಪರೋಕ್ಷಿಗಳೂ ಇದ್ದರೆಂಬುವದು ಸಹಜ ವಾಗಿಯೇ ವ್ಯಕ್ತವಾಗುತ್ತದೆ.

ಈ ಮಹನೀಯರು ಲೌಕಿಕ ಅತಿ ದಾರಿದ್ರ್ಯವನ್ನು ಅನುಭೋಗಿಸಿ ದಾಗ್ಯೂ ಪ್ರತಿನಿತ್ಯ ಪ್ರಾತಃಕಾಲದಲ್ಲಿ ತಮ್ಮ ಆಹ್ನಿಕವನ್ನು ತೀರಿಸಿಕೊಂಡು, ಸ್ವಗುರುಗಳಿಂದ ದತ್ತವಾದ ಶ್ರೀ ಸೀತಾ, ರಾಮ, ಲಕ್ಷ್ಮಣ, ವೇದವ್ಯಾಸ, ಪಟ್ಟಾಭಿರಾಮ, ತಾಂಡವಕೃಷ್ಣ, ಶ್ರೀ ಲಕ್ಷ್ಮಿವೆಂಕಟೇಶ ಮುಂತಾದ ೧೪ *ಪ್ರತಿಮೆಗಳನ್ನು ಅರ್ಚಿಸಿ, ಶ್ರೀ ಗೋಪಾಲಕೃಷ್ಣ ದೇವರ ಸೇವೆಯೆಂದು ಭಾವಿಸಿ, ತಮ್ಮ ಗುರುಗಳ "ಗ್ರಹಕರ್ಮವ ಬ್ಯಾಸರದಲೆ ಪರಮೋತ್ಸಹದಲಿ ಮಾಡುತ, ಮೂಜಗದಾ। ಮಹಿತನ ನೇವೆ ಇದೇ ಎನುತಲಿ, ಅಪರಹರ್ಮನ ದಲಿ ಮೋದಿಸಿ ನಮರ್ಪಿಸುತಿಪ್ಪುದೆ" ಎಂಬ ವಚನಾನುಸಾರ ಪ್ರತಿನಿತ್ಯದಲ್ಲಿ ಗೋವುಗಳನ್ನು ಕಾಯುವದಕ್ಕೆ ಅಡವಿಗೆ ಹೋಗಿ, ಅಲ್ಲಿದ್ದ ಗೋಪಾಲಕರಿಗೆ ತಮ್ಮ ಗೋವುಗಳನ್ನು ಮೇಯಿಸುವದಕ್ಕಾಗಿ ಒಪ್ಪಿಸಿ, ತಾವು ಒಂದು ಗಿಡದ ನೆರಳಿನಲ್ಲಿ ಶಾಂತಮನಸ್ಸಿನಿಂದ ಕುಳಿತು ಪರಮಾತ್ಮನ ಸ್ತೋತ್ರಗಳನ್ನು ರಚಿಸುವರು ವಿಶೇಷವಾಗಿ ದಶಮಸ್ಕಂಧ ಭಾಗವತ ಕಥಾಯುಕ್ತವಾದ ಶ್ರೀಕೃಷ್ಣ ದೇವರ ಚರಿತ್ರೆಯನ್ನು ಕೀರ್ತಿಸುವರು; ಮರಳಿ ತಮ್ಮ ಗೃಹಕ್ಕೆ ಗೋವುಗಳನ್ನು ತಿರುಗಿಸಿಕೊಂಡು ಬರುವರು. ಇದಲ್ಲದೆ ತಮ್ಮ ಗುರುಗಳ ಆಜ್ಞೆಯಂತೆ ವರ್ಷಕ್ಕೊಮ್ಮೆ ತಮ್ಮ ನಿತ್ಯಾಹ್ನಿಕವನ್ನು ಸುಮಾರು ನಾಲ್ಕು ತಾಸಿನ ಮೇಲೆ ತೀರಿಸಿಕೊಂಡು, ಲಿಂಗಸೂಗೂರ ಕ್ಷೇತ್ರದಿಂದ ಹದಿನಾರು ಹರದಾರಿಯ ಮೇಲಿದ್ದ "ಮಾನ್ವಿ ಕ್ಷೇತ್ರಕ್ಕೆ" ೬-೭ ತಾಸಿಗೆ ಹೋಗಿ ನೇರು ತಿದ್ದರು. ಅಲ್ಲಿಂದ ಶ್ರೀ ಜಗನ್ನಾಥ ದಾಸರಾಯರು ತಮ್ಮ ಪಿತೃಕಾರ್ಯ ದಲ್ಲಿ ಇವರೊಬ್ಬರಲ್ಲಿಯೇ "एकंसंतं बहुधाकल्पयंति" ಎಂಬೋರಿತ್ಯಾ ಚಿಂತ ನೆಯನ್ನು ಮಾಡಿ ತಮ್ಮ ಪಿತೃಗಳನ್ನು ತೃಪ್ತಿಗೊಳಿಸುತಿದ್ದರು. ಇದರ ಮೇಲಿಂದ ಈ ದಾಸಾರ್ಯರಿಗೆ ಸಾಂಶರೂ ದೇವತಿಗಳೂ ಅನ್ನಲಿಕ್ಕೆ ಸ್ವಲ್ಪಾ ದರೂ ಸಂಶಯವಿಲ್ಲ

ದಾಸಾರ್ಯರಿಗೆ ಇಬ್ಬರು ಬಂಧುಗಳಿದ್ದರು; ಇವರಲ್ಲಿ ಇವರ ಅಣ್ಣಂದಿರಾದ ರಾಘಪ್ಪನವರು ಒಳ್ಳೇ ಭಗವದ್ಭಕ್ತರೂ, ಶ್ರೀ ಗುರುರಾಜರ ಅನುಗ್ರಹಕ್ಕೆ ಪಾತ್ರರೂ ಆಗಿದ್ದರು. ಇವರು ಲೌಕಿಕ ಕಾರ್ಯದಲ್ಲಿದ್ದಾಗ ಸರಕಾರದ

---

* ಈ ೧೪ ಪ್ರತಿಮೆಗಳು ಇನ್ನೂ ದಾಸಾರ್ಯರ ವಂಶಜರಲ್ಲಿ ಇರುವವು.

ದ್ರವ್ಯದ ಅಪವ್ಯಯವನ್ನು ಮಾಡಿದರೆಂಬ ಆರೋಪದಿಂದ ಇವರನ್ನು ಗ್ರಾಮಾಂತರಕ್ಕೆ ವೈದು ಬಂಧನದಲ್ಲಿಡಲು, ಶ್ರೀ ಗುರುರಾಜರ ಅನುಗ್ರಹದಿಂದ ತಮ್ಮ ನಿತ್ಯಾಹ್ನಿಕ ಸಮಯದಲ್ಲಿ ಪ್ರಕಟವಾದ ಸರ್ಪಕ್ಕೆ (ತಮಗೆ ಕೊಟ್ಟ) ಹಾಲನ್ನು ಸಮರ್ಪಿಸಿ, ತಾವು ಉಪೋಷಣದಿಂದ ಕೆಲವು ದಿನಗಳ ವರೆಗೆ ಕಾಲಕಳೆದು ಸ್ವಮಹಿಮೆಯನ್ನು ತೋರಿಸಿ, ಬಿಡುಗಡೆಯಾದರಂತೆ. ದಾಸಾರ್ಯರು ರಚಿಸಿದ (೨೫೨) ಕೀರ್ತನಗಳು ರಾಘಪ್ಪನವರಿಂದಲೇ ಬರೆಯಲ್ಪಟ್ಟವೆ. ಮತ್ತು ದಾಸಾರ್ಯರ ತಮ್ಮಂದಿರಾದ ಸುಬ್ಬಣ್ಣನವರು ೨೫-೩೦ ವರ್ಷಗಳ ವರೆಗೆ ಅತಿ ಮುಗ್ಧಭಾವದಿಂದಿದ್ದು ಭೂಮಿಯ ಕೆಲಸವನ್ನು ಮಾಡಿಸುತ್ತಿದ್ದರು. ಒಂದು ದಿನ ಒಬ್ಬ ವಿಜಾತಿಯ ಪುರುಷನು ಜೈಮಿನಿಭಾರತದ ಕೆಲವು ಪದ್ಯಗಳ ಅರ್ಥವನ್ನು ತಪ್ಪು ಹೇಳಲಾಗಿ, ಸುಬ್ಬಣ್ಣನವರು ಅವನನ್ನು ಸನ್ಮಾರ್ಗಕ್ಕೆ ತರಲೋಸುಗ ಪ್ರಯತ್ನಮಾಡಿದರು ಆಗ ಇವರ ಸಂತತ ಮುಗ್ಧಭಾವವನ್ನು ನೋಡಿದ್ದ ಅವನು: "ಇದು ಕೋಣವನ್ನು ಕಟ್ಟಿ ಮೊಟ್ಟೆಯ ನೀರನ್ನು ಹೊಡೆದಂತೆ ಅಲ್ಲವೆಂದು" ಸ್ವಲ್ಪ ಡೊಂಕ ಮಾತನ್ನಾಡಲು, ಇವರಿಗೆ ವೈರಾಗ್ಯ ಪುಟ್ಟಿ, ಶ್ರೀಪ್ರಾಣೇಶ ದಾಸಾರ್ಯರ ಅನುಗ್ರಹದಿಂದ ಭಗವದ್ಭಕ್ತರನಿಸಿಕೊಂಡರು.

ದಾಸಾರ್ಯರ ಕಾಲದಲ್ಲಿ ಅನೇಕ ಮಹಿಮೆಗಳು ಪ್ರಕಟವಾಗಿರುವವೆಂದು ಶಿಷ್ಯವರ್ಗದಲ್ಲಿ ಸೇರಿದ ಹಿರಿಯರ ಹೇಳಿಕೆಯಿಂದ ತಿಳಿದುಬರುತ್ತದೆ ಅವುಗಳಲ್ಲೊಂದು ವಿಶೇಷ ಮಹತ್ವದ ಸಂಗತಿ ಏನಂದರೆ:—ಶ್ರೀ ಮದ್ರಾಘವೇಂದ್ರ ಸ್ವಾಮಿಗಳವರಿಂದ (೭) ಏಳನೇ ಪೀಠಸ್ಥರಾದ ಶ್ರೀ ಮದ್ವರದೇಂದ್ರ ಸ್ವಾಮಿಗಳವರು ಲೋಕೋದ್ಧಾರಾರ್ಥವಾಗಿ ಸಂಚಾರಕ್ಕೆ ಹೊರಟು, ಲಿಂಗಸೂಗೂರಲ್ಲಿ ದಾಸಾರ್ಯರ ಗೃಹದಲ್ಲಿ ಅತಿಥಿಗಳಾಗಿ ಬಿಜಯಂಗೈಸಿದಾಗ್ಗೆ ದಾಸಾರ್ಯರ ಆತಿಥ್ಯವನ್ನು ಸ್ವೀಕರಿಸಿ, ಅವರ ಉತ್ತಮ ಗುಣಗಳಿಗೂ ಭಕ್ತಿಭಾವಗಳಿಗೂ ಲುಬ್ಧರಾಗಿ, ದಾಸಾರ್ಯರ ಮೇಲೂ, ಅವರ ವಂಶಸ್ಥರ ಮೇಲೂ ಪರಮಾನುಗ್ರಹ ಮಾಡಬೇಕಾಗಿ ದಾಸಾರ್ಯರ ಕಡೆಯಿಂದ ಒಂದು ಬಣವಿಯ ದೊಡ್ಡಿಯನ್ನು ಕೃಷ್ಣಾರ್ಪಣವೆನಿಸಿಕೊಂಡು, ನಾವು ಕೇಳಿದಾಗ್ಗೆ ಒಪ್ಪಿಸಬೇಕೆಂದಾಜ್ಞಾಪಿಸಿ, ಮುಂದೆ ದಿಗ್ವಿಜಯ ಮಾಡುತ್ತ

ಮಾಡುತ್ತ ಪುಣೆ ಶಹರದಲ್ಲಿ ಶಾಲಿವಹನ ಶಕೆ ೧೭೦೭ನೇ ವಿಶ್ವಾವಸು ನಾಮ ಸಂವತ್ಸರದ ಆಷಾಢ ಶು| ೭ ಮಂಗಳವಾರ ಉತ್ತರಾನಕ್ಷತ್ರದಲ್ಲಿ ಇಹ ಲೋಕವನ್ನು ಬಿಟ್ಟು ವೈಕುಂಠಕ್ಕೆ ತೆರಳುವರಾದರು. ಆ ಮೇಲೆ ಕೆಲಕಾಲ ದಲ್ಲಿ ಶ್ರೀಗಳವರು ಶ್ರೀಪ್ರಾಣೇಶ ದಾಸಾರ್ಯರ ಸ್ವಪ್ನದಲ್ಲಿ ಅಪ್ಪಣೆಮಾಡಿದ್ದೇ ನಂದರೆ: – "ನಾವು ವೈಷ್ಣವಾಗ್ರಹಾರವಾದ ಲಿಂಗಸೂಗೂರಲ್ಲಿ ಇರಲಪೇಕ್ಷಿಸಿ ನೀವು ದಾನಕೊಟ್ಟಿರುವ ದೊಡ್ಡಿಯಲ್ಲಿ ಬಣವಿಯ ನೊಪ್ಪೆಯ ಕೆಳಗೆ ತುಲಸಿ ವೃಕ್ಷರೂಪದಿಂದ ಬಂದಿದ್ದೇವೆ; ಅಲ್ಲಿ ವೃಂದಾವನ್ನು ಸ್ಥಾಪಿಸಿರಿ; ಪುಣೆ ಯಿಂದ ನಮ್ಮ ಪಾದುಕಗಳನ್ನು ಇಲ್ಲಿಗೆ ಕಳುಹುವದಾಗಿ ಆಜ್ಞಾಪಿಸಿದ್ದೇವೆ; ಅವನ್ನು ವೃಂದಾವನದಡಿಯಲ್ಲಿರಿಸಿ ಪೂಜಿಸಿರಿ.

ಶ್ರೀಗಳವರ ಆಜ್ಞೆಯ ಪ್ರಕಾರ ನೋಡಲು ಬಣವಿಯ ನೊಪ್ಪೆಯ ಕೆಳಗೆ ಒಂದು ಪುರುಷಪ್ರಮಾಣದ ಪ್ರಫುಲ್ಲಿತ ತುಲಸಿ ವೃಕ್ಷವಿದ್ದದ್ದನ್ನು ನೋಡಿ, ಸರ್ವರೂ ಆಶ್ಚರ್ಯಚಕಿತರಾಗಿ, ಗುರುಗಳ ಮಹಿಮೆಯನ್ನು ಕೊಂಡಾಡಿ, ಕೆಲಕಾಲ ಆ ವೃಕ್ಷವನ್ನು ಪೂಜಿಸಿ ಅಲ್ಲಿ ವೃಂದಾವನವನ್ನು ಸ್ಥಾಪಿಸಿದರು ಅತ್ತ ಪುಣೆಯಲ್ಲಿದ್ದ ಅರ್ಚಕರಿಗೆ ಪಾದುಕಗಳನ್ನು ಮಂತ್ರಾಕ್ಷತಸಮೇತ ಲಿಂಗಸೂ ಗೂರಿಗೆ ಕಳುಹುವದೆಂದು ಸ್ವಪ್ನದಲ್ಲಿ ಆಜ್ಞಾಪಿಸಿದ ಪ್ರಕಾರ ಸ್ವತಃ ಅರ್ಚ ಕರೇ ಪಾದುಕಗಳನ್ನು ಲಿಂಗಸೂಗೂರಿಗೆ ತಗದುಕೊಂಡುಬಂದು, ಶ್ರೀ ದಾಸಾ ರ್ಯರಿಗೆ ಕೊಡಲು, ಬಹು ಸಂಭ್ರಮದಿಂದ ವೃಂದಾವನದ ಅಡಿಯಲ್ಲಿಟ್ಟು ಪೂಜಿಸಿದರು ಇಂದಿಗೂ ಅವೇ ಪಾದುಕೆಗಳು ಇರುವವು ಅಂದಿನಿಂದ ಪ್ರತಿ ವರ್ಷ ಆಷಾಢ ಶು| ೭ಯಲ್ಲಿ ಶ್ರೀ ಗುರುಗಳ ಆರಾಧನಾರಥೋತ್ಸವ ಪ್ರತಿ ಗುರುವಾರ ಪಲ್ಲಕ್ಕಿಸೇವೆ, ನಿತ್ಯದಲ್ಲಿಯೂ ವೃಂದಾವನ ಪಾದುಕಗಳ ಪೂಜಾ ಮುಂತಾದ ಸೇವೆಗಳು ಸಂಭ್ರಮದಿಂದ ಜರುಗುತ್ತಿರುತ್ತವೆ. ಅರ್ವಾ ಚೀನ ಜನರಿಗೆ ಇಷ್ಟು ಸೇವಾ ಸಂಘಟಿಸುವದು ಶ್ರೀಪ್ರಾಣೇಶ ದಾಸರಾಯರ ಪುಣ್ಯಫಲವೇ ಸರಿ. ಶ್ರೀ ವರದೇಂದ್ರಾರ್ಯರು ಇಲ್ಲಿಗೆ ಸ್ವಪ್ನದಿಂದ ಬಂದ ಬಗ್ಗೆ ಶ್ರೀ ಗುರು ಪ್ರಾಣೇಶ ದಾಸಾರ್ಯರ ಶಿಷ್ಯವರ್ಗದಲ್ಲಿಯ ಒಬ್ಬ ದಾಸ ರಾಯರು ಬರೆದ ಒಂದು ಐತಿಹ್ಯವಿರುವದು. ಅದನ್ನು ಇಲ್ಲಿ ಬರೆಯುವದು ಅಪ್ರಾಸಂಗಿಕವಾಗದೆಂದೆಣಿಸಿ ಕೆಳಗೆ ಬರೆದಿರುತ್ತವೆ.

॥ ಮಧ್ವನಾಮದ ಧಾಟಿ, ಝಂಪೆತಾಳ ॥

ಯತಿ ಶಿರೋಮಣಿಯಾದ ವರದೇಂದ್ರ ಗುರುರಾಯ । ರತಿಹರುಷ ದಿಂದ ಈ ಸ್ಥಳಕೆ ಬಂದೂ ॥ ಸಥಿಯಿಂದ ನಿಂತ ವೃತ್ತಾಂತಮಂ ಪೇಳ್ವದಕೆ । ಮತಿಗೊಟ್ಟು ಪೇಳಿಸಲಿ ಗುರುರಾಯರೂ ॥ ಪಲ್ಲ ॥ ಶ್ರೀಶ ರಾಮವ್ಯಾಸ, ದೇವರರ್ಚಕರಾದ । ಈ ಸ್ವಾಮಿಗಳವರಿಗೆ ಪ್ರೇಮಾಸ್ಪದಾ ॥ ದಾಸಕುಲ ದೀಪ ಶ್ರೀ ಗುರು ಜಗನ್ನಾಥಾಖ್ಯ । ದಾಸರಾಯರ ದಯವ ಸೂಸಿ ಪಡದಾ ॥ ೧ ॥ ಶ್ರೀಪತಿ ಅಯ್ಯನವರ ವಂಶಸ್ಥರಾದ ಈ । ಶ್ರೀಪ್ರಾಣೇಶ ದಾಸವರ್ಯರಿಗೇ ॥ ಶ್ರೀಪತೀ ದಯಮಾಡಿ ಒಲಿದ ಕಾರಣದಿಂದ । ಭೂಪ ಮುನಿವರರು ಬಂದಾಸಮಯದೀ ॥ ೨ ॥ ಆ ವನಿತು ಗುರುವರರ । ಶ್ರೀಪಾದ ಪೂಜೆಯನು । ತಾಪರಯುತರಾಗಿ ಅರ್ಚಿಸಲ್ಕೇ ॥ ಗೋಪತಿಯು ಅರ್ಚಕರು ಬಹು ತುಷ್ಟರಾಗಿ ಈ । ತಾಪಸದ ಸ್ಥಳವೆಮಗೆ ಈಯನಲ್ಕೇ ॥ ೩ ॥ ಈ ಕಾಯವೇ ತಮ್ಮ ಶ್ರೀಪಾದಕಮಲಕ್ಕ ಸ್ವೀಕಾರ ಮಾಡಿಸುವೆ ಕರುಣಿಸುವದೂ ॥ ಬೇಕೆಂದು ಅನುಗ್ರಹವ ಮಾಡಿ ಬರುವಂಥ ಸುಖ । ನಾ ಕಾಣೆನೆಲ್ಲಿ ಈ ಪೃಥ್ವಿಯೊಳಗೇ ॥ ೪ ॥ ಅಂದು ಇವರಿಗೆ ದಾಸವರ್ಯರೀ ಭಾಷೆ ನುಡಿ । ದಂದದೀಯತಿವರರು ಅತಿ ಹರುಷದೀ ॥ ಸಾಂದೀಪಗೊಲಿದ ಶ್ರೀಹರಿ ಯಾತ್ರೆ ಆ ಪುಣ್ಯ । ಮಂದಿರದಿ ಮಾಡಿದಾನಂತರದಲೀ ॥ ೫ ॥ ಕೆಲವು ದಿವಸಾದ ಮ್ಯಾಲೀ ದಿವ್ಯಸ್ಥಳದಲ್ಲಿ । ತುಳಸಿ ವೃಕ್ಷದ ರೂಪ ತಾಳ್ವೆನೆನುತಾ ॥ ಸಲೆ ಸ್ವಪ್ನದಲಿ ಬಂದು ಪೇಳಲಾಬಣವಿಯನು । ಬಲು ಬ್ಯಾಗದಿಂ ತಗಿಸಿ ನೋಡುತಿರಲೂ ॥ ೬ ॥ ದಿವ್ಯವಾದಂಥ ದಳಯುಕ್ತದಲಿ ಬೆಳದಿದ್ದ ಸೇವೆಗರ್ಹವಾದ ವೃಕ್ಷ ನೋಡಿ ॥ ಸವ್ಯಸಾಚಿಯ ಸೂತನೀ ಪರಿಯ ತೋರಿದಾ । ನೀವೆಲ್ಲ ನೋಡಿ ಆಶ್ಚರ್ಯವೆನುತಾ ॥ ೭ ॥ ಬಳ್ಳಿದಾರಾದ ಯತಿ ಮನುಷ್ಯನಳತೆಯ ವೃಕ್ಷ । ದಲ್ಲಿ ಪೂಜೆಯಗೊಳುತ ಇರುತಯಿರಲೂ ॥ ಸಲ್ಲಲಿತವಾದ ವೃಂದಾವನದಿ ಪೂಜೆಗಳು । ಸಲ್ಲಬೇಕೆಂದೆನುತ ಇಚ್ಛೆಮಾಡೀ ॥ ೮ ॥ ಯಾತ್ರೆ ಮಾಡಿದ ಬಳಿಕ ಒಂದೆರಡನೇ ವರುಷ । ಅತ್ರ ವೃಂದಾವನದಿ ಪೂಜೆಯನ್ನೂ ॥ ಸೂತ್ರನಾಮಕ ಪ್ರಾಣಪತಿಯೊಡನೆ ಆಗಲೆಂ । ಧಾತ್ರಿಸುರರಿಗೆ ಸೂಚನಾದ ಮೇಲೆ ॥ ೯ ॥ ಗುಲಗುಂಜಿ ಮರದಿ

ಯೊಳಗಿದ್ದ ವೃಂದಾವನದ । ತಿಲೆಯನ್ನು ತರುವದಕ ಸ್ವಪ್ನವಾಗೇ ॥ ಶುಲ ಭವ್ರೋ ಹ್ಯಾಗೂ ನೋಡಲಬಹುದು ಎಂದು ಆಹೊ । ಬಲನ ಸ್ಮರಿಸುತ ಪ್ರೋಗಲಾಕ್ಷಣದಲೀ ॥ ೧೦ ॥ ಖರಿಯುವಾಗಿರಲದನು ತಂದು ಸ್ಥಾಪಿಸು ವಾಗ । ಸರುವಜ್ಞರಾಯರಂಶಸ್ಥರಾದಾ ॥ ವರ ಭುವನೇಂದ್ರ ಯತಿಗಳು ಜುಮಲಪುರದಿಂದ । ನರಹರಿಯು ಶಾಲಗ್ರಾಮ ಕಳಿಸಿದಪನೂ ॥ ೧೧ ॥ ಈ ಶ್ರೇಷ್ಠವಾದ ವೃಂದಾವನದ ಮಧ್ಯದಲಿ । ಆರ್ಪಿಸಿ ಯಿಟ್ಟ ಕಾರಣದಿಂದಲೀ ॥ ಕು ಶ್ರೇಷ್ಠವಾದ ಸರ್ಪಗಳ ಭೀತಿಯು ಇಲ್ಲ । ಭೂಶ್ರೇಷ್ಠರಾದ ಜನರು ಗಳು ಕೇಳೀ ॥ ೧೨ ॥ ಕರ್ಮಗಂಟವರರು ತಾವ್ ಪಡುವಂಥ ಹಾವಿ ಗಯು । ಪೇರ್ಮೆಯಿಂದೀ ಲಿಂಗಸೂಗುರದಲೀ ॥ ನಿರ್ಮಲದಿ ತಮ್ಮ ವೃಂದಾವನದ ಸನ್ನಿಧಿಲಿ । ಸರ್ವದಾ ಪೂಜಿಗಿರಲೆಂದು ಸ್ವಪ್ನಾ ॥ ೧೩ ॥ ಅಲ್ಲಿ ಪುನಹವಲಿದ್ದ ಅರ್ಚಕರಿಗಾಗಲ್ಕೆ । ಸಲ್ಲಲಿತನಾಗಿ ಕಳುಹಿದ ಕಾರಣಾ ॥ ಬಲ್ಲವರು ಬಹು ಭಕುತಿಯಿಂದ ಪೂಜಿಸಿ ಕೊನೆಗೆ । ನಲ್ಲುವರು ಸದ್ಗತಿಗೆ ಕೇಳಬಹುದು ॥ ೧೪ ॥ ಈ ಸ್ಥಳವು ಬಹು ಪುಣ್ಯ ಮಾಡಿದದರಿಂದಲ್ಲಿ । ವಾಸ್ತವ್ಯ ಇವರು ಬಂದಿರುಪ್ಪತಿಹ್ಯಾ ॥ ಆಸ್ಥೆಯಿಂದಲ ಕೇಳಿ ತೋಷಬಡುವ ವರ ಮನದ । ಆಸ್ಥೆ ಪೂರೈಸುವರು ಸರ್ವಜ್ಞರೂ ॥ ೧೫ ॥ ಸತ್ಯಸಂಕಲ್ಪ ಶ್ರೀ ಬಾದರಾಯಣ ತನ್ನ । ಭೃತ್ಯವತ್ಸಲನೆಂಬ ಪ್ರತ್ಯಕ್ಷವಾ ॥ ಮರ್ತ್ಯ ಲೋಕದ ಪದವಿ ಕೀಟದಿಂದಾಳಿಸಿದ । ನಾ ತೆರದಲೆನ್ನಿಂದ ಪೇಳಿಸಿದ ಪದವಾ ॥ ೧೬ ॥ ವೇದದಿಂದಲಿ ಈ ಹದಿನೇಳು ನುಟಯು ಶ್ರೀ । ವೇದ ತೀರ್ಥರ ಪಾದಕರ್ಪಿಸಿದನೂ ॥ ವೇದ ಪುಟ್ಟುವಂತೆ ಪರಣೆಮಾಡಲ್ಕೆ ಮಾ । ವೇದ ವಿಠ್ಠಲ ಪ್ರೀತನಾಗುತಿಪನೂ ॥ ೧೭ ॥ ಶ್ರೀ ಮಧ್ವೇಶಾರ್ಪಣಮಸ್ತು ॥

ಶ್ರೀ ವರದೇಂದ್ರ ಸ್ವಾಮಿಗಳವರು ಲಿಂಗಸೂಗೂರಲ್ಲಿ ವಾಸಮಾಡಿದ ಮೇಲೆ, ಶ್ರೀಪ್ರಾಣೇಶ ದಾಸಾರ್ಯರು ಸರ್ವದಾ ಹರಿಸ್ಮರಣೆಯನ್ನು ಮಾಡುತ್ತಾ, ಗುರುಗಳ ಸೇವಾ ಮತ್ತು ಸದ್ಗ್ರಂಥಪಾಠ ಸತ್ಕಥಾಲಾಪವನ್ನೇ ಮಾಡುತ್ತ, ಅನೇಕ ಶಿಷ್ಯರಿಗೆ ಜ್ಞಾನೋಪದೇಶವನ್ನು ಮಾಡಿ ಉದ್ಧಾರ ಮಾಡುತ್ತ, ಶಾಶ್ವತವಾದ ಸತ್ಕೀರ್ತಿಯನ್ನು ಸಂಪಾದಿಸಿ, ದೇಹಸಾರ್ಥಕತ ಯನ್ನು ಮಾಡಿಕೊಂಡು, ಶಾಲಿವಾಹನ ಶಕ ೧೭೪೪ನೇ ಚಿತ್ರಭಾನು ಸಂವತ್ಸ

ರದ ಆಶ್ವೀನ ಶು। ೭ ದಿವಸ ಈ ಮರ್ತ್ಯಲೋಕವನ್ನು ಬಿಟ್ಟು, ಶ್ರೀ ಹರಿ ನಾಮೋಚ್ಚಾರಣೆ ಮಾಡುತ್ತ ಶಾಶ್ವಿತವಾದ ಲೋಕವನ್ನೈದಿದರು. ಈ ವಿಷಯದಲ್ಲಿ ಶ್ರೀಪ್ರಾಣೇಶ ದಾಸಾರ್ಯರ ಮಕ್ಕಳೂ, ಶಿಷ್ಯರೂ ಆದ ಶ್ರೀ ಗುರು ಪ್ರಾಣೇಶವಿಠ್ಠಲರು ರಚಿಸಿದ "ತೆರಳಿದರು ಪರಮ ತೋಷದಲಿ ಹರಿಪುರಕೆ" ಎಂಬುವ ಪದವು ಇದೇ ಪುಸ್ತಕದಲ್ಲಿ ಶ್ರೀ ಗುರು ಪ್ರಾಣೇಶ ವಿಠ್ಠಲ ಪದಗಳಲ್ಲಿ (೧೭)ನೇ ಪದ್ಯವಾಗಿ ಕೊಟ್ಟದೆ.

ಶ್ರೀಪ್ರಾಣೇಶ ದಾಸಾರ್ಯರಿಗೆ ಗುರು ಪ್ರಾಣೇಶ ದಾಸರೆಂಬ ಒಬ್ಬ ಮಕ್ಕಳಿದ್ದರೆಂದು ಮೇಲೆ ಬರೆದಿದೆಯಷ್ಟೇ! ಇವರ ಮೂಲ ಹೆಸರು ವೆಂಕಟ ದಾಸರು, ಶ್ರೀಪ್ರಾಣೇಶ ದಾಸಾರ್ಯರು ಚಿಕ್ಕಂದಿನಲ್ಲಿಯೇ ಇವರನ್ನು ತಮ್ಮ ಗುರುಗಳಾದ ಶ್ರೀ ಜಗನ್ನಾಥ ದಾಸಾರ್ಯರಲ್ಲಿ ಸೇವಾವೃತ್ತಿಗಾಗಿಡಲು, ಶ್ರೀ ವೆಂಕಟ ದಾಸರು ಸಂತತ (೧೨) ಹನ್ನೆರಡು ವರುಷ ತಮ್ಮ ಪರಮ ಗುರುಗಳ ಸೇವಾ ಮಾಡಿ, ಅವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಿ, ಸಕಲ ವಿದ್ಯಾ ಸಂಪಾದಿಸಿಕೊಂಡು, ಶ್ರೀ ಜಗನ್ನಾಥ ದಾಸಾರ್ಯರ ಆಜ್ಞಾ ಪ್ರಕಾರ ತಮ್ಮ ಪಿತೃಗಳಾದ ಶ್ರೀಪ್ರಾಣೇಶ ವಿಠಲರಲ್ಲಿ "ಶ್ರೀಗುರು ಪ್ರಾಣೇಶ ವಿಠ್ಠಲ" ಎಂಬ ಅಂಕಿತವನ್ನು ತಗೆದುಕೊಂಡು ಭಗವದ ಪರೋಕ್ಷಿಗಳಾದರು ಈ ಮಹನೀಯರಿಗೆ ಶ್ರೀ ಜಗನ್ನಾಥ ದಾಸಾರ್ಯರು ಪರಮಾನುಗ್ರಹ ಮಾಡಿಕೊಟ್ಟ ತಂಬೂರಿಯು ಈಗ್ಯೂ ದಾಸಾರ್ಯರ ವಂಶಸ್ಥರಲ್ಲಿ ಇರುವದು ಮಹಾತ್ಮರೂ ದೇವಾಂಶರೂ ಆದ ಇವರೂ ಕೆಲವು ಪದಗಳನ್ನು ರಚಿಸಿರುವರು ಇನ್ನು ಮುಂದೆ ಅನೇಕ ಕೀರ್ತನಗಳನ್ನು ಮಾಡಬೇಕನ್ನುತ್ತಿರುವಷ್ಟರಲ್ಲಿ ಗುರುಗಳಾದ ಶ್ರೀಪ್ರಾಣೇಶ ದಾಸಾರ್ಯರು ಬೇಡೆಂದು ಆಜ್ಞಾಪಿಸಿದ ಕಾರಣ ತಿರುಗಿ ಪದಗಳನ್ನು ರಚಿಸಲಿಲ್ಲ

ಶ್ರೀ ಗುರು ಪ್ರಾಣೇಶ ದಾಸಾರ್ಯರು ಕಲಕಾಲ ಲೌಕಿಕ ಕಾರ್ಯಗಳನ್ನು ಮಾಡುತಿದ್ದಾಗ್ಗೆ ಯಾವದೋ ಒಂದು ಕೆಲಸದ ಸಲುವಾಗಿ, ಅಶ್ವಾರೂಢರಾಗಿ ತಮ್ಮ ಕುಲಕರ್ಣಿ ಗ್ರಾಮವಾದ ರಾಮಪುರಕ್ಕೆ ಹೋಗುತ್ತಿರಲು, ಮಾರ್ಗದಲ್ಲಿ ನಿಬಿಡವಾದ ಈಚಲ ಪೊದೆಯೊಳಗಿಂದ ಒಂದು ವ್ಯಾಘ್ರವು ಬಂದು ಕುದುರೆಯನ್ನು ಹಿಂಸಿಸಿ, ಇವರಿಗೆ ಮಾತ್ರ ಸ್ವಲ್ಪಾದರೂ ತ್ರಾಸ

ಕೊಡವೆ ತಿರುಗಿಹೋಯಿತು ಆಗ್ಗ ಇವರ ತಲೆಯ ಮೇಲಿದ್ದ ರುಮಾಲವು ಕೆಳಗೆ ಬಿದ್ದಿತಂತೆ; ಅಂದಿನಿಂದಲೇ ಇವರು ಲೌಕಿಕವನ್ನು ಪೂರ್ಣವಾಗಿ ತ್ಯಜಿಸಿ, ಅನೇಕ ದೊಡ್ಡ ದೊಡ್ಡ ಜ್ಞಾನಿಗಳಿಂದಲೂ, ಮತ್ತು ಗೃಹಸ್ಥರುಗಳಿಂದಲೂ ಮರ್ಯಾದಿತರಾಗಿ ಸದಾಭಗವತ್ಪರರಾಗಿ ಇದ್ದರು

ಈ ಮಹನೀಯರು ತಮ್ಮ ಅವತಾರಕಾಲವು ಸಮಾಪಿಸಲು, ನಿರ್ಯಾಣಕ್ಕೆ ಆರು ತಿಂಗಳು ಮೊದಲಿಗೇಯೆ, ತಮ್ಮ ಚಿಕ್ಕ ಮಕ್ಕಳಿಗೆ :—"ನಾವು ಇಂದಿನಿಂದ ಆರು ತಿಂಗಳಿಗೆ ಸರಿಯಾಗಿ ಮಾಘ ಬ॥ ೩೦ ಅಮಾವಾಸಿ ದಿವಸ ನಿರ್ಯಾಣ ಮಾಡುತ್ತೇವೆ ನಮ್ಮ ಭೌತಿಕದೇಹ ಯಜ್ಞಕ್ಕೆ ಬೇಕಾಗುವ ಯಾಗಸ್ಥಳವನ್ನು ಶುಚಿರ್ಭೂತವನ್ನಾಗಿಮಾಡಿ, ಅಲ್ಲಿ ಗಚ್ಚಿನ ಕಟ್ಟೆಯನ್ನು ಕಟ್ಟಿಸಿ, ಶ್ರೀ ತುಲಸಿ, ಚಂದನಕಾಷ್ಟ ಮೊದಲಾದ ತಕ್ಕ ಯಜ್ಞದ್ರವ್ಯಗಳನ್ನು ಸಂಗ್ರಹಿಸಬೇಕು" ಎಂದು ಆಜ್ಞಾಪಿಸಿದರು ಅದರಂತೆ ಯಾವ ಯೋಚನೆ, ಮತ್ತೂ ಪ್ರಯತ್ನವಿಲ್ಲದೆ ಒಂದು ತಿಂಗಳು ಮೊದಲಿಗೇಯೇ ಸಕಲ ಸಾಮಾಗ್ರಿಗಳನ್ನು ಸಿದ್ಧಪಡಿಸಲು, ಶ್ರೀ ಗುರು ಪ್ರಾಣೇಶ ದಾಸಾರ್ಯರು ಶಕೆ ೧೭೮೨ ಗತಾಬ್ದ ರೌದ್ರಿ ಸಂವತ್ಸರದ ಮಾಘ ಬ॥ ೩೦ ಸೋಮವಾರ ದಿವಸ, ತಮ್ಮ ಶಿಷ್ಯರಿಂದ ಲಿಂಗಸೂಗೂರ ಕ್ಷೇತ್ರಕ್ಕೆ ೪ ಹರದಾರಿಯ ಮೇಲಿರುವ ಶ್ರೀ ಕೃಷ್ಣಾ ಭಾಗಿರಥಿಯ ಜಲವನ್ನು ತರಿಸಿ, ಸ್ನಾನವನ್ನು ಮಾಡಿ, ಊರ್ಧ್ವಪುಂಡ್ರಗಳನ್ನು ಧಾರಣಮಾಡಿ, ತಮಗೆ ಪರಮ ಪ್ರಿಯ ಶಿಷ್ಯರಾದ ಮತ್ತು ಅಪರೋಕ್ಷಜ್ಞಾನಿಗಳಾದ ಶ್ರೀ ಶ್ರೀಶ ಪ್ರಾಣೇಶ ವಿಠ್ಠಲಾಂಕಿತ, ರಾಮದಾಸರಿಂದ ಶಾಲಿಗ್ರಾಮ ತೀರ್ಥವನ್ನು ಪ್ರಾಶನ ಮಾಡಿ, ರಾಮದಾಸರ ಶಿರದಲ್ಲಿ "ಈ ಕರಗಳು ಹನ್ನೆರಡು ವರ್ಷಗಳ ವರೆಗೆ ಶ್ರೀ ಪರಮ ಗುರುಗಳಾದ ಶ್ರೀಜಗನ್ನಾಥದಾಸಾರ್ಯರ ಸೇವೆಯನ್ನು ಮಾಡಿರುವವು" ಎಂದು ಹೇಳಿ, ತಮ್ಮ ವರದ ಹಸ್ತವನ್ನಿಟ್ಟು ಪೂರ್ಣ ಅನುಗ್ರಹಿಸಿ, ಸರ್ವರಿಂದಲೂ ಅಪ್ಪಣೆಯನ್ನು ತಗೆದುಕೊಂಡು, ಯಾವ ತರದ ರೋಗೋಪದ್ರವಗಳಿಲ್ಲದೆ, ಸ್ಥಿರಾಸನದಲ್ಲಿ ಕುಳಿತು ಲಯದ ಚಿಂತನವನ್ನು ಬೆಳಿಸಿ, ದಿವದ್ವಿತಿಯ ಯಾಮವನ್ನು ಸಂಪೂರ್ಣ ನಿರೀಕ್ಷಣೆಮಾಡಿ, ತಮ್ಮ ನೇತ್ರಗಳೆರಡನ್ನೂ ಅಂಗೈ ಅಗಲು ವಿಸ್ತರಿಸಿ, ಶಿರೋರ್ಧ್ವದ್ವಾರದಿಂದ ವೈಕುಂಠಕ್ಕೆ

ತೆರಳುವರಾದರು. ಇವರಾದರೂ ಅನೇಕ ಮಹಾತ್ಮ್ಯಗಳನ್ನು ಪ್ರಕಟ ಮಾಡಿರುವರು. ಇವರು ಯಾತ್ರಾಮಾಡಿ ಸುಮಾರು (೬೬) ವರ್ಷಗಳಾದವು. ಇವರ ಹೆಸರನ್ನು ಚಿರಸ್ಥಾಯಿಕ ಮಾಡಲೋಸುಗ, ಇವರ ಪರಮ ಮಿತ್ರರೂ ಮಹನೀಯರೂ ಆದ, ವೇದಶಾಸ್ತ್ರಸಂಪನ್ನ ಕೃಷ್ಣಾಚಾರ್ಯ ಗಾರಲವಾಡ, ಇವರು ಶ್ರೀ ದಾಸಾರ್ಯರು ಯಾತ್ರಾಮಾಡಿದ ನಾಲ್ಕಾರು ವರುಷಗಳಲ್ಲಿಯೇ ಅವರು ಕೂಡ್ರುವ ಸ್ತಂಭದ ಬುಡದಲ್ಲಿ ಒಂದು ಸಣ್ಣದಾದ ಕಟ್ಟೆಯನ್ನು ತಾವು ಸ್ವತಃ ಕಟ್ಟಿ, ಅನೇಕ ವಿಧದಿಂದ ಪೂಜಾದಿಗಳನ್ನು ಮಾಡಿ, ದಾಸಾರ್ಯರ ವಂಶಸ್ಥರಿಗೆ ನಿರಂತರದಲ್ಲಿಯೂ ಪೂಜಿಸಲಿಕ್ಕೆ ಆಜ್ಞಾಪಿಸಿದರು. ಅದರಂತೆ ಅದ್ಯಾಪಿ, ಪ್ರತಿನಿತ್ಯದಲ್ಲಿ ಶ್ರೀ ದಾಸರಾಯರ ಸ್ತಂಭ ಮತ್ತೂ ಕಟ್ಟೆಗೆ ಪೂಜಾ ಆಗುತ್ತಲಿದೆ. ಪ್ರತಿ ವರುಷ ಮಾಘ ಬ॥ ೩೦ಕ್ಕೆ ಅನೇಕ ಜನರು ಕೂಡಿ, ವಿಜೃಂಭಣೆಯಿಂದ ದಾಸಾರ್ಯರ ಪುಣ್ಯತಿಥಿಯನ್ನು ನೆರವೇರಿಸಿ, ಅನ್ನಸಂತರ್ಪಣೆ ಭಜನಾದಿಗಳನ್ನು ಮಾಡುವರು. ಇಂತಹ ಭಗವದ ಪರೋಕ್ಷಿಗಳಾದ ಶ್ರೀ ಗುರು ಪ್ರಾಣೇಶ ದಾಸಾರ್ಯರಿಗೆ ಅನೇಕ ಶಿಷ್ಯರಾಗಿ ಹೋಗಿರುವರು ಅವರಲ್ಲಿ ಅವರ ಶಿಷ್ಯಾಗ್ರೇಸರರಾದ ರಾಮದಾಸರು ಗುರ್ವನುಗ್ರಹಕ್ಕೆ ಪಾತ್ರರಾದವರು.

ಇವರು ಶ್ರೀ ಗುರು ಪ್ರಾಣೇಶ ದಾಸಾರ್ಯರ ಸೋದರಳಿಯಂದಿರು, ಅಂದರೆ ಶ್ರೀಪ್ರಾಣೇಶ ದಾಸಾರ್ಯರ ಅಣ್ಣಂದಿರಾದ ರಾಘಪ್ಪನವ ಪೌತ್ರರು; ಶ್ರೀಪ್ರಾಣೇಶ ದಾಸಾರ್ಯರು, ತಮ್ಮ ಅಣ್ಣಂದಿರ ಪುತ್ರಿಯಾದ ಹಿರೆ ವೆಂಕಮ್ಮನವರಿಂದಲೇ ತಮ್ಮ ಗುರುಗಳಾದ ಶ್ರೀಜಗನ್ನಾಥ ದಾಸಾರ್ಯರ ಸೇವೆಯನ್ನು ಮಾಡಿಸುತ್ತಿದ್ದರಂತೆ; ಹೆಚ್ಚಿಗೇಕ ಪರಮ ಪೂಜ್ಯ ಜಗನ್ನಾಥರಾಯರೂ ಸಾಯಂಕಾಲದ ಭಜನಾಸೇವಾದಿಗಳಲ್ಲಿ ಅನುಗ್ರಹಿಸಿ, ಹಿರೆ ವೆಂಕಮ್ಮನವರಿಂದಲೇ ಪದಪದ್ಯಗಳನ್ನು ಹಾಡಿಸುತಿದ್ದರಂತೆ; ಈ ಪ್ರಕಾರ ಪತಿಪತ್ನಿಯರು ಸೇವಾಮಾಡುತ್ತಿರಲು, ಅವರ ಪ್ರಸಾದದಿಂದಲೇಯೆ ಹಿರೆ ವೆಂಕಮ್ಮನವರು ರಾಮದಾಸರೆಂಬುವ ಓರ್ವ ಪುತ್ರರತ್ನವನ್ನು ಪಡೆದರು ಈ ರಾಮದಾಸರ ಮೈಬಣ್ಣವು ಕಪ್ಪಾದದ್ದು; ತೇಜೋಮಯರಾಗಿ ಶಾಲಿಗ್ರಾಮ ಶಿಲೆಯಂತ ಶೋಭಿಸುತ್ತಿದ್ದರು ಇವರು ಪೂರ್ವವಯಸ್ಸಿನಲ್ಲಿ

ಯಾರಲ್ಲಿಯೂ ವಿದ್ಯಾಭ್ಯಾಸ ಮಾಡಲಿಲ್ಲ. ಅತಿ ಹುಡುಗಾಟಿಕೆಯಿಂದ
ಕತ್ತೆ ನಾಯಿಗಳನ್ನು ಹಿಡಿದು ಅವುಗಳೊಂದಿಗೆ ಆಟಗಳನ್ನಾಡುವರು. ಈ
ಸ್ಥಿತಿಯು ಸುಮಾರು ೨೦-೨೫ ವರ್ಷಗಳ ವರಿಗೆ ಇರಲು, ಒಂದು ದಿನ
ಇವರ ಸೋದರ ಮಾವಂದಿರಾದ ಶ್ರೀ ಗುರು ಪ್ರಾಣೇಶ ವಿಠಲರು ದೇವಾತಾ
ರ್ಚನೆಯ ಉದ್ದಿಶ್ಯ ಗಂಧ ತೆಗೆಯುವ ಕಾಲದಲ್ಲಿ: "ಇದೇನು ನಿನ್ನ ಆಟ
ವೆಂದು" ರಾಮದಾಸರಿಗೆ ಕೈಯಲ್ಲಿ ಇದ್ದ ಗಂಧದ ಕೊರಡಿನಿಂದ ಭರದಿಂದ
ಒಗೆಯಲು, ಅದರ ಪೆಟ್ಟು ತಲೆಗೆ ತಗಲಿ, ರಕ್ತಸ್ರವಿಸಲಿಕ್ಕೆ ಹತ್ತಿತು; ಆಗ್ಗೆ
ಶ್ರೀ ಗುರು ಪ್ರಾಣೇಶ ವಿಠಲ (ವೆಂಕಟ ದಾಸರ) ಧರ್ಮಪತ್ನಿಯರಾದ ವರ
ದೇಂದ್ರಮ್ಮನವರು ರಾಮದಾಸರನ್ನು ಸಮಾಧಾನಗೊಳಿಸಿ, ರಕ್ತ ಸ್ರವಿಸುವ
ಸ್ಫೋಟನ ದ್ವಾರವನ್ನು ನಿರ್ಬಂಧಿಸಬೇಕೆಂದರು; ಆಗ್ಗೆ ಶ್ರೀ ಗುರು ಪ್ರಾಣೇಶ
ದಾಸಾರ್ಯರು ಬೇಡೆಂದು ಹೇಳಲು, ಕೆಲವು ವೇಳೆಯಲ್ಲಿ ರಕ್ತಸ್ರಾವವು
ತನ್ನಷ್ಟಕ್ಕೆ ತಾನೆ ಕಡಿಮೆಯಾಗಿ, ರಾಮದಾಸರಿಗೆ ಪೂರ್ವಜನ್ಮ ಸುಕೃತ
ದಿಂದ ಜ್ಞಾನೋದಯವಾಯಿತು. ಇಷ್ಟಾದ ಬಳಿಕ ಶ್ರೀ ವೆಂಕಟ ದಾಸರು
(ಗುರು ಪ್ರಾಣೇಶ ವಿಠಲರು) ಇವರಿಗೆ ಸ್ನಾನಾದಿಗಳನ್ನು ಮಾಡಿಸಿ—"ಶ್ರೀಪ
ಪ್ರಾಣೇಶ ವಿಠ್ಠಲ ಎಂಬುವ" ಅಂಕಿತವನ್ನು ಪ್ರದಾನಮಾಡಿದರು ಅಂದಿನಿಂದ
ಇವರು ದಿನೆದಿನೇ ಗುರುಗಳ ಸೇವೆಯಲ್ಲಿ ಹೆಚ್ಚು ತತ್ಪರರಾಗಿ ಅತಿ ದೃಢ
ವಾದ ಗುರುಭಕ್ತಿಯನ್ನು ಪ್ರಕಟಿಸಿ ಗುರ್ವನುಗ್ರಹದಿಂದ ಭಗವದ ಪರೋ
ಕ್ಷಿಗಳಾದರು ಮತ್ತು ದೇಶದೇಶಗಳಲ್ಲಿ ಸಂಚರಿಸಿ, ಅನೇಕ ಭಗವದ್ದಾಸ
ರಿಂದ ಮರ್ಯಾದಿತರಾಗಿ ಅನೇಕ ಶಿಷ್ಯವರ್ಗಕ್ಕೆ ಶ್ರೀಹರಿ ನಾಮಾಮೃತ
ವನ್ನಿತ್ತು ಉದ್ಧಾರಮಾಡಿದರು ಈಗಲೂ ಇವರ ಶಿಷ್ಯರುಗಳು ಎಷ್ಟೋ
ಕಡೆಯಲ್ಲಿರುವರು

ಇವರು ಶ್ರೀ ಗುರುರಾಜರ ದರ್ಶನಕ್ಕೆಂದು ಪ್ರತಿ ವರುಷ ಶ್ರೀಮನ್
ಮಂತ್ರಾಲಯಕ್ಕೆ ಹೋಗುತ್ತಿದ್ದರಂತೆ; ಆ ಕಾಲದಲ್ಲಿ ಇವರು ಗುರ್ವನುಗ್ರಹ
ದಿಂದ ಅನೇಕ ಮಹಾತ್ಮ್ಯಗಳನ್ನು ತೋರಿರುವರು. ಅವೆಲ್ಲವನ್ನು ಇಲ್ಲಿ ವಿಶ
ದೀಕರಿಸಲು ಸಾಧ್ಯವಿಲ್ಲ ಇವರು ಅನೇಕ ಜನರ ರೋಗೋಪದ್ರವಾದಿ
ಗಳನ್ನು ಭಗವಂತನನ್ನು ಪ್ರಾರ್ಥಿಸಿ ದೂರಮಾಡಿರುವರು ಮತ್ತು ಯಾವಾ

ಗಲೂ ಮೂಕಬಧಿರರಂತೆ ಇದ್ದು ಗೌಪ್ಯವಾಗಿ ಭಗವನ್ನಾಮಸ್ಮರಣೆಯನ್ನು ಮಾಡುವರು. ಯಾರಾದರು ಇವರಿಗೆ ಹೆಚ್ಚಿಗೆ ದ್ರವ್ಯಾನುಕೂಲ ಮಾಡಿಕೊಡಲು, ಅಂದಿನ ದಿನದ ದೇವರ ನೈವೇದ್ಯಕ್ಕೆ ಬೇಕಾದಷ್ಟು ಸ್ವೀಕರಿಸಿ ಹೆಚ್ಚಾದ್ದನ್ನು ಹಿಂದಕ್ಕೆ ಕೊಡುವರು. ಈ ಪ್ರಕಾರ ಸತ್ಕಾಲಕ್ಷೇಪಮಾಡುತ್ತಿರಲು, ಒಂದು ವರುಷ ಶ್ರೀ ಮನ್ಮಂತ್ರಾಲಯಕ್ಕೆ ಹೋಗುವದಕ್ಕೆ ಗುರುರಾಜರ ಆಜ್ಞೆಯಾಗದಿದ್ದರೂ, ತಮ್ಮ ಪತ್ನಿಯವರ ಆಗ್ರಹದಿಂದ ಸ್ವಗ್ರಾಮವಾದ ಲಿಂಗಸೂಗೂರಿಂದ ತೆರಳಿದರು. ಮಾರ್ಗದಲ್ಲಿ ಕುದುರೆಯು ಬೆದರಲು ಅದರ ಮೇಲಿಂದ ಬಿದ್ದದಕ್ಕಾಗಿ, ಇವರ ಕಾಲುಗಳಿಗೆ ವಿಶೇಷವಾಗಿ ಪೆಟ್ಟುತಗಲಿ ವಿಸ್ಮೃತಿಯಾಯಿತು. ಅದೇ ವಿಸ್ಮೃತಿಯಲ್ಲಿಯೇ ಗುರುರಾಜರು ಮರಳಿ ನೀನು ನಿನ್ನ ಸ್ಥಳಕ್ಕೆ ಹೋಗೆಂದು ಆಜ್ಞಾಪಿಸಲು, ಹಾಗೇ ತಿರುಗಿ ಬರುವವರಾದರು. ಅಂದಿನಿಂದ ಅವರ ಎರಡೂ ಕಾಲುಗಳು ಹೋಗಿ ನಡೆಯಲು ಬಾರದಂತಾಯಿತು. ಇಂತಹ ಸ್ಥಿತಿಯಲ್ಲಿಯೇ ಎಷ್ಟೋ ವರ್ಷಗಳ ವರಿಗೆ, ಪುನಃ ಮಂತ್ರಾಲಯ ಯಾತ್ರೆಮಾಡುವಾಗ್ಗೆ ಮಹನೀಯರಾದ ಕೆಲವು ದಾಸವರ್ಯರುಗಳು ಪ್ರತಿಮಯಂತ ಇವರ ಪೂಜಾದಿಗಳನ್ನು ಮಾಡುವರು. ಮತ್ತು ದಾಸವರ್ಗಕ್ಕೆ ಸೇರಿ ಅಪರೋಕ್ಷಿಗಳೆನಿಸದ ಭಕ್ತರುಗಳು ಇವರನ್ನು ಎತ್ತಿಕೊಂಡು ತಿರುಗಾಡುವರು. ಹೀಗೆ ರಾಮದಾಸರು ಸನ್ಮಾನಿತರಾದರು; ಮತ್ತು ಕಾಲು ಇಲ್ಲದಾಗಲೆ ಇವರು ಪ್ರತಿನಿತ್ಯ ಶ್ರೀ ವರದೇಂದ್ರ ಸ್ವಾಮಿಗಳ ಮಠವನ್ನು ತಾವೇ ಸ್ವಂತ ಉಡುಗುವರು; ತಮ್ಮ ಗುರುಗಳು ಕುಳಿತು ಭಜನಾದಿಗಳನ್ನು ಮಾಡಿದ ಸ್ಥಳದಲ್ಲಿ ಎಂದಿಗೂ ಕೂಡ್ರರು. ಹೀಗೆ ಒಂದಲ್ಲ, ಅನೇಕ ಭಾಗವತ ಧರ್ಮಗಳನ್ನು ಆಚರಿಸಿ, ಅತಿ ವಿಮಲವಾದ ಕೀರ್ತಿಯನ್ನು ಸಂಪಾದಿಸಿ, ಶಕ ೧೮೧೪ ನಂದನ ನಾಮಸಂವತ್ಸರದ ಭಾದ್ರಪದ ಶು। ೮ ದಿವಸ ಪರಲೋಕಯಾತ್ರೆಯನ್ನು ಬೆಳೆಸಿದರು.

ಈ ಸಂಕ್ಷಿಪ್ತವಾದ ಚರಿತ್ರೆಗಳು, ಶ್ರೀ ಗುರು ಪ್ರಾಣೇಶ ದಾಸಾರ್ಯರ ದೌಹಿತ್ರರಾದ ಮ। ರಾ। ಹನಮಂತರಾವ ಕುಲಕರ್ಣಿ ಕೆಲೂರ ಇವರಿಂದ ತಿಳಿದಿರುತ್ತವೆ. ಈ ಪರಮ ಪಾವನವಾದ ಚರಿತ್ರೆಗಳನ್ನು ಓದಿ, ಮತ್ತು

ಕೇಳಿ ಭಗವದ್ಭಕ್ತರು ಆನಂದಿಸಲೆಂದು ಶ್ರೀ ಪರಮಾತ್ಮನನ್ನು ಪ್ರಾರ್ಥಿಸಿ, ಶ್ರೀ ದಾಸಾರ್ಯರುಗಳ ಸಂಕ್ಷಿಪ್ತ ಅವತಾರ ಚರಿತ್ರೆಯನ್ನು ಮದ್ಗುರುವಂತರ್ಗತ ಶ್ರೀ ವರದೇಂದ್ರ ಶೀ ರಾಘವೇಂದ್ರ ಗುರ್ವಂತರ್ಯಾಮಿ ಶ್ರೀ ಮಧ್ವೇಶನಿಗೆ ಅರ್ಪಿಸುವೆನು

ಸಜ್ಜನ ವಿಧೇಯ,

ಹನಮಂತರಾವ ಕುಲಕರ್ಣಿ ಗೊರಾಬಾಳ,

ವಕೀಲ, ಲಿಂಗಸೂಗೂರ

ವಿಷಯಾನುಕ್ರಮಣಿಕೆ

ಕ್ರಮಾಂಕ	ವಿವರ	ಪದ್ಯಗಳ ಸಂಖ್ಯೆ	ಪುಟಗಳು
೧	ಜಗನ್ನಾಥರಾಯರ ಸ್ತುತಿ	೩	೧-೨-೧೭೧
೨	ವಿಜಯರಾಯರ ಸ್ತುತಿ	೧	೨
೩	ಶ್ರೀಧರ ತೀರ್ಥರ ಸ್ತುತಿ	೧	೪
೪	ಭುವನೇಂದ್ರತೀರ್ಥರ ಸ್ತುತಿ	೨	೩-೫
೫	ವರದೇಂದ್ರತೀರ್ಥರ ಸ್ತುತಿ	೧೧	೫-೯-೧೭೬
೬	ಶ್ರೀ ರಾಘವೇಂದ್ರರಾಯರ ಸ್ತುತಿ	೫	೯-೧೦-೧೮೫
೭	ಸುಬೋಧೇಂದ್ರರ ಸ್ತುತಿ	೨	೧೩
	(ಈ ಸುಬೋಧೇಂದ್ರರ ಸ್ತುತಿಗಳು ಶ್ರೀಧರ ತೀರ್ಥರ ಸ್ತೋತ್ರವಾದ ಮೇಲೆ ಹಾಕಬೇಕಾಗಿತ್ತು ಇವರು ಶ್ರೀ ಬುವನೇಂದ್ರರ ಶಿಷ್ಯರು ಆದರೆ ದೃಷ್ಟಿದೋಷದಿಂದ ಮರೆತು ಇಲ್ಲಿ ಹಾಕಿದೆ)		
೮	ವ್ಯಾಸರಾಯರ ಸ್ತುತಿ	೧	೧ -೧೪
೯	ಯತಿವೃಂದಸ್ಮರಣೆ	೧	೧೪
೧೦	ಅಕ್ಷೋಭ್ಯತೀರ್ಥರ ಸ್ತುತಿ	೧	೧೪
೧೧	ಮಾಧವತೀರ್ಥರ ಸ್ತುತಿ	೧	೧೫
೧೨	ಪದ್ಮನಾಭತೀರ್ಥರ ಸ್ತುತಿ	೧	೧೫
೧೩	ಶ್ರೀ ಮಧ್ವರಾಯರ ಸುವ್ವಾಲೆ	೧	೧೫-೧೬
	(ಇಲ್ಲಿಗೆ ಗುರುಪರಂಪರಾ ಆರೋಹಣ ತಾರತಮ್ಯ) ಮುಂದೆ (ದೇವತಾ ತಾರತಮ್ಯ)		
೧೪	ಪಾರ್ವತೀದೇವಿ ಸ್ತುತಿ	೧	೧೬-೧೮
೧೫	ರುದ್ರದೇವರ ಸ್ತುತಿ	೬	೧೮-೨೦
೧೬	ಹರಿಹರನ ಪರವಾಗಿ ಸ್ತುತಿ	೧	೨೧
೧೭	ಭಾರತೀದೇವಿ ಸ್ತುತಿ	೬	೨೧-೨೪
೧೮	ಸರಸ್ವತೀ ಸ್ತುತಿ	೧	೨೪
೧೯	ವಾಯುದೇವರ ಸ್ತುತಿ	೩೦	೨೫-೪೪
೨೦	ಲಕ್ಷ್ಮೀ ಸ್ತುತಿ	೧೧	೪೪ ೫೦
೨೧	(ಪರಮಾತ್ಮ ಸ್ತುತಿ)	೩೮	೫೦ ೮೫-೧೮೭
೨೨	ಶ್ರೀ ಕೃಷ್ಣಲೀಲಾ ಕೀರ್ತನಗಳು (ದಶಮ ಸ್ಕಂದ ಬಾಗವತೋಕ್ತ)	೪೧	೮೭-೧೦೮

ಕ್ರಮಾಂಕ	ವಿವರ.	ಪದ್ಯಗಳ ಸಂಖ್ಯೆ	ಪುಟಗಳು.
೨೩.	ಶ್ರೀ ದೇವರ ವಿವಾಹಮಹೋತ್ಸವ ಪದಗಳು. (ಪ್ರಮೇಯಯುಕ್ತವಾದವು ಮತ್ತು ವಿವಾಹ ಮಂಗಳಾರ್ತಿ ಪದಗಳು)	೧೬	೧೦೭–೧೨೩
೨೪.	ಬೋಧಪರ ಕೀರ್ತನಗಳು	೩೭	೧೨೩–೧೪೪
೨೫	ಪ್ರಮಾಣಪ್ರಮೇಯಯುಕ್ತ ಶ್ರುತಿಸ್ಮೃತಿ ವಚನಾನುಸಾರ ಕೀರ್ತನಗಳು	೧೩	೧೪೪–೧೬೭
೨೬.	ಉಗಾಭೋಗಗಳು	೧೪	೧೬೭–೧೭೦–೧೭೫
೨೭	ಮಂಗಳಾರ್ತಿ ಕೀರ್ತನಗಳು	೭	೧೭೧–೧೭೬
೨೮	ಶ್ರೀಗುರುಪ್ರಾಣೇಶ ವಿಠಲರ ಕೀರ್ತನಗಳು	೧೦	೧೭೭–೧೮೫
೨೯	ಶ್ರೀಶ ಪ್ರಾಣೇಶ ವಿಠಲರ ಕೀರ್ತನಗಳು	೧೪	೧೮೬–೧೯೨
೩೦	ಶ್ರೀ ಗುರು ವರದೇಂದ್ರ ಸ್ವಾಮಿಗಳವರ ಸ್ವಪ್ನ ವೃಂದಾವನ ಚರಿತ್ರೆ	೨೦೪ ಒಟ್ಟು ಪದ್ಯಗಳು ೯೪ ನುಡಿಗಳುಳ್ಳದ್ದು	೧೯೩–೨೦೪

ಈ ಪ್ರಕಾರ ಬಹು ಶ್ರಮದಿಂದ ತಾರತಮ್ಯ ಕ್ರಮಾನುಸಾರವಾಗಿ ಪದಗಳನ್ನು ಕ್ರೋಢೀಕರಿಸಿ, ಸಂಗ್ರಹಿಸಲ್ಪಟ್ಟದೆ. ಶ್ರೀಪ್ರಾಣೇಶ ದಾಸಾರ್ಯರ ಪದಗಳಲ್ಲಿ ಮಾತ್ರ ತಾರತಮ್ಯವಾಗಿ ಕ್ರೋಢೀಕರಿಸುವಲ್ಲಿ, ವಾಯುದೇವರ ಪದಗಳಲ್ಲಿ ದ್ವಾದಶಸೂರ್ಯರ ಹೆಸರುಗಳು, ೫೩ನೇ ಪದ್ಯ ಬಂದಿರುವವು. ಆದರೆ ಇದು ಸೂರ್ಯರಿಗೇನೆ ಬರತಕ್ಕದ್ದು. ಮತ್ತು ಕೆಲವು ಉಗಾಭೋಗಗಳು (೨೪೯–೨೫೦)ನೇ ಪದಗಳು ಹಿಂದಿನಿಂದ ದೊರೆತ ಕಾರಣ ಕಡೇಗೆ ಕೊಟ್ಟದೆ ಇದರಲ್ಲಿ ಏನಾದರೂ ದೋಷವಿದ್ದರೆ ಕ್ಷಮಿಸುವದೆಂದು ವಿಜ್ಞಾಪನೆ. ಮತ್ತು ಶ್ರೀಪ್ರಾಣೇಶ ವಿಠಲರ ಕೀರ್ತನಗಳು ೨೫೨ಕ್ಕೆ ಅಕ್ಷರಾನುಕ್ರಮಣಿಕಾ ಕೊಟ್ಟಿರುವೆವು. ಶ್ರೀಗುರುಪ್ರಾಣೇಶ ವಿಠಲರ ಕೀರ್ತನಗಳು, ಶ್ರೀಶಪ್ರಾಣೇಶ ವಿಠಲರ ಕೀರ್ತನಗಳು, ಸ್ವಲ್ಪೇ ಇರುವವು ಮತ್ತು ಶ್ರೀವರದೇಂದ್ರ ಸ್ವಾಮಿಗಳವರ ಆಖ್ಯಾನದಲ್ಲಿಯೂ ಸ್ವಲ್ಪ ಪದ್ಯಗಳಿರುವಕಾರಣ ಅಕ್ಷರಾನುಕ್ರಮಣಿಕೆಯನ್ನು ಕೊಟ್ಟಿಲ್ಲ.

ಪ್ರಕಾಶಕ.

ಹರಿಃ ಓಂ

ಶ್ರೀಪ್ರಾಣೇಶ ವಿಠಲ ವಿರಚಿತ ಕೀರ್ತನಗಳ

ಅಕ್ಷರಾನುಕ್ರಮಣಿಕೆ.

ಅ

	ಪು. ಸಂಖ್ಯೆ.
ಅಂಗನಾಕುಲಶಿರೋಮಣಿ	೮೨
ಅಂಜಿಕ್ಯಾತಕೀ-ಮನವೇ	೪೯
ಅಂದುಂಟಿಂದಿಲ್ಲೇ ಮಾಧವ	೧೦೩
ಅನ್ಯಸತಿಗೆ ಒಲಿಯಬಾರದೂ	೧೯೭
ಅಂಥಾಂತಮನೆ ಪ್ರಾಪ್ತಿ	೨೨೭
ಅಪ್ರಮಯ ಜಲಸ್ನಾನ	೨೪೧
ಅಭಯವೀಗಲಿ ಬೇಡೆ ಗುರು ಸುಬೋಧೇಂದ್ರಾರ್ಯರ	೨೧
ಅಮರಾಸ್ತ್ರ ಮಾಲಿಗೆ	೨೨೫
ಅಲ್ಪ ಧರ್ಮವು ಜ್ಞಾನದಿಂದ	೨೨೨

ಆ

ಆದದ್ದಾಯಿತ್ತಿನ್ನಾದರು ಪಳ್ಳೀ ಹಾದಿ ಹಿಡಿಯೋ ಪ್ರಾಣೀ	೧೭೮
ಆರಮುಂಧಳಲೀ-ಕರಕರಿಯು	೧೪೫

ಇ

ಇಕ್ಕೊಳ್ಳಿಕ್ಕೊ ಸಿಕ್ಕರಂಗ ನೋಡು	೧೪೧
ಇಕ್ಕೊಳ್ಳಿ ಬಿಲ್ಲೂ । ತಕ್ಕೊಳ್ಳಿ ಕಲ್ಲೂ	೧೬೦
ಇಂತಿರುವದೇನು ಬಗೆ ರಾಮಾ	೯೨
ಇಂಥಲ್ಲಿರಬೇಕು ಜನ್ಮಸಾರ್ಥಕಮಾಡುವ	೨೦೦
ಇಂಥಾ ದೂರುವುದೊಳ್ತಲ್ಲವಶಿವ	೧೨೭
ಇದಕಿನ್ನಧಿಕ ಸುಖವ್ರೊಂದವಲ್ಲೆ	೧೦೭
ಇಂದು ನೋಡಿದೆ ಹರಿಹರನ-ದ್ವೈತ್ಯ ವೃಂದಕಪ್ರಿಯನ	೪೬
ಇಂದ್ರಸೇನನಾಥ ಹೋ, ತ್ರೈಲೋಕ್ಯ ವಿಖ್ಯಾತ	೩೫
ಇಲ್ಲೇ ಇದ್ದೇನೆಂದು ತಿಳಿದಿರಲಿ	೧೫೦
ಇಂಥ ಬುದ್ಧಿಯಲ್ಲಿ ಸೇರಿತೊ	೧೩೫

ಈ

ಪದ ಸಂಖ್ಯೆ

ಈ ದುರ್ಮಾರ್ಗಗಳನ್ನು ಬಿಡಿಸಬೇಕೈ ೧೦೪
ಈ ವಸುಧೆಯೊಳೆಲ್ಲರಿಗಿಂತ ಕೃಷ್ಣನು ಅವುದರಿಂದಧಿಕಾ ೧೦೦

ಉ

ಉದ್ಧಾರಮಾಡಿದ ಶ್ರೀರಾಮ, ಅಹಲ್ಯಾ ೧೧೮
ಉಪಕಾರ ಮರೆವುದುಚಿತವಲ್ಲೀ . ೯೭

ಎ

ಎತ್ತಾರೇ ಬಂದಿನಾಮನಾತು ಭಾರತೀಶ ಏನ ೬೫
ಎಂದಿಗೆ ಬಹನೆ ಕೃಷ್ಣ-ಮುಂಪಸ್ಕತಾಸನ . ೧೪೧
ಎಲೊ ರಮಾಪತಿ ಹಕ್ಕಿಗಳು ಬಾಯಿಬಿಡುವಂ ೧೧೪
ಎಲ್ಲಿ ಈ ಪಬ್ಬ ಬಂತಮ್ಮ ಗುರಾ ೧೪೬
ಎಷ್ಟು ಹೇಳಿದರು ರಂಗಾ . ೧೫೫
ಎಷ್ಟೊ ಹರಿ ಮರುತರ ಕೃಪಿಸಿನ್ನಲ್ಲಿ ೩೫

ಏ

ಏನೂ ಫೇನಿಸಿದ್ದೇನಕ್ಕಾ . ೧೫೭
ಏನು ನೋಡಿತ್ತ ಏ ಪರಕೆ ಮಗಳಾ ೧೬೨
ಏನು ಮರುಳಾದೆನ್ವ ಎಲೆ ಭಾರತಿ ೪೧
ಏನು ಸಾರ್ಥಕಾ, ಜಮೊಕಿ ಏನು ಸಾರ್ಥಕಾ . ೨೦೧
ಏನು ಸ್ನೇಹವನು ಮಾಡಿದಿರಿಯುಮ್ಮಾ ೨೦

ಒ

ಒಪಗಿಪಾಲಿಸೊ ಭವಾಂಬುಧಿಯ ದಾಟಿಸೊ ೨೭
ಒಂದಾರೊಳಿಂಟಿ ಮಂದರೊಳಾ ಘನ್ನಿರಾಜೇನ . ೨೩೭
ಒಲ್ಲೇ ಈ ಕುವೃತ್ತಿಗಳ ಒಲ್ಲೆ ಒಲ್ಲೇ ೨೦೬

ಕ

ಕಣ್ಣು ಮುಚ್ಚಿನ್ನಾ ಆಡಿಸೆ ೧೨೨
ಕಟ್ಟಿಮೋಯುಂದೂ ತುಡುಗು ಹೋಗಾಲಿಯುಗಂಘಾ ೨೩೬
ಕರಿವರದಗೆ ಪರಿಯುಧರ್ಾಂಗಿಗೆ ೧೦೨

	ಪದ ಸಂಖ್ಯೆ
ಕೃಷ್ಣ ಹೋಗಿಹ ದಾರೀವಾಧೀತೇ	೧೫೮
ಕಾಯೆ, ನಿನ್ನ ಪದ ತೋಯಜಕೆರಗುವೆ	೭೭
ಕಾಯಯ್ಯ ರೋಗನಿಕಾಯ ಕಳೆದು	೧೧೬
ಕಾಯೇ ಕಾಂತೇ ಇಂದಿರೆ ತೋಯಜಾಕ್ಷಿ	೫
ಕಾಯೆ ಭಾರತೀ ನಿನ್ನ ಆರಾಧಿಸುವೆಯನ್ನ	೪೦
ಕಾಯೋ ಕೃಷ್ಣ, ಭವತೋಯಧಿ ಮುಳುಗಿ	೧೨೦
ಕಾಳೀ ದ್ರೌಪದಿ ಬಾರತೀ ನಿನ್ನ ಪಾದಕೆ ಲಾಲಾಜನುತಿಪೆ	೪೯
ಕೆಡುಬ್ಯಾಡ ಕೆಡುಬ್ಯಾಡವೆಲ ಪ್ರಾಣೀ	೧೮೧
ಕೆಡುವರೊ ವ್ಯರ್ಥ ಈ ಬ್ರಹ್ಮಣ್ಯ	೧೭೪
ಕೇಳೆ ಯಶೋದೆ ನಿನ್ನ ಒಾಲಕನಾಟಗಳು	೧೩೦
ಕೊಡು ಸೀರಿ ಸೀರಿ ಹರಿ,	೧೬೨
ಕೊಡುವೆನು ಕೊಡುವೆನು ॥ ಕಡೆಗೆ	೧೭೨

ಗ

ಗಂಗಾಧರದೇವ ಜಯಗೀಷವ್ಯಾನಂಗಾರಿ	೩೩
ಗಂಗಾಧರ, ಸುಮತಿಪಾಲಿಸೋ	೪೧
ಗಂಗಾಪಿತ ರಾಘವ । ನಂಬಿದೆ ಶ್ಯಾಮ ಲಾಂಗ ನಿನ್ನಯ ಪಾದವ	೬೦
ಗಂಗಾಪಿತ ವೆಂಕಟಪರ್ವತನಿಲಯ	೬೩
ಗುರುಗಳ ನೋಡಿರೈ ಉತ್ತಮ ವರಗಳ ಬೇಡಿರೈ	೮
ಗುರುರಾಯಾ ಗುರುರಾಯಾ । ತರಣಿಪ್ರಕಾಶ	೧೪
ಗುರುವರದೇಂದ್ರ ದಯಾಂಬುಧೇ ಶರಣಾಗತವತ್ಸಲ,	೧೦
ಗುರುವೇ ಶ್ರೀವಸುದೇಂದ್ರ ಕರಜಾತ ಸದ್ಗುಣಸಾಂದ್ರ	೧೧
ಗುರುವೆ, ಭಾರತಿನಾಥ । ಶರಣು, ಲಾಲಿಸೋ ಮಾತ	೮೯
ಗೋಕುಲದೊಳಗೆಲ್ಲ ಕೊಳಲೂದಲು	೧೮೮
ಗೋಪಾಲಕೃಷ್ಣನಿಗೆ ಮಂಗಳಾ	೧೭೬
ಗೋಪಿ ಹೇಳೆ ರಂಗಗೆ ಬುದ್ಧಿ	೧೩೪
ಗೋಪಿಚಂದನ ಮುದ್ರಧಾರಣ ಮಹಾತ್ಮೆಯನು	೨೨೪

ಘ

ಘಾಸಿ ಮಾಡನು ಯಮನು	೧೮೩

ಚ

	ಪದ ಸಂಖ್ಯೆ.
ಚಿತ್ತಜನಪಿತನೆ ಯಮ್ಮ ಬಿಟ್ಟು ನೀ ಎತ್ತ	೧೪೭
ಚಿರಕಾಲಾಮರೆಯೆ । ನಿಮ್ಮ ಸ್ಮರಣೆ	೪

ಜ

ಜಯತೂ ರುಗ್ಮಿಣಿಕಾಂತಾ । ಜಯತೂ ಕಂಸಕೃತಾಂತಾ	೧೭೦
ಜಯ ಪಾಂಡುರಂಗ ಹೋ ಜಲದನಿಭಾಂಗ ಹೋ	೮೬
ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥ ಭುವನೇಂದ್ರ ಗುರುಕರ	೧೬
ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥ ಪುಣ್ಯಾಲಯನಿಲಯಗೆ	೧೫
ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥ ಯೋಗೀಂದ್ರತೀರ್ಥಕರ	೧೯
ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥ ಅಂಜನಾಸುತನಿಗೆ	೭೧
ಜಯಮಂಗಳಂ ನಿತ್ಯ ಶುಭಮಂಗಳಂ ॥ ಪಲ್ಲ ॥ ಶ್ರೀವತ್ಸಲಾಂಛನಗೆ	೧೭೫
ಜಯಮಂಗಳಂ ನಿತ್ಯ ಶುಭಮಂಗಳಂ ॥ ಪಲ್ಲ ॥ ಕೋಪದಿಂ ಭೂಪರಳಿದವಗೆ	೩೪೬
ಜಯಹನುಮಂತ ಭೀಮ । ಜಯಸರ್ವಜ್ಞಾಚಾರ್ಯ	೧೬೫
ಜಲಧಿ ತಕ್ಕದೆ ಸಿನ್ನಳಿಯಗೂ ನಿನಗೂ	೧೬೪
ಜಾರ ಪುರುಷಾರಾಡೋ ನುಡಿಯು	೧೯೮
ಜೋ ಜೋ ಇಂದಿರೆ ಲಕುಮಿ ಜಯಂತೆ	೮೪
ಜೋಜೋ ವೃಷ್ಣಿ ಕುಲಾಂಬುಧಿ ಚಂದ್ರಾ	೧೭೭

ತ

ತಂಗಿನೋಡಿದೆಯೋನಿಂದು	೧
ತ್ವರಿತಾಬಾರಯ್ಯ, ಹೇ ಶ್ರೀ । ಯರಸ	೧೧೩
ತಾಳಲಾರೆನೆಸೀರೆ ಕರತಾರೇ	೧೫೪
ತಿಂಗಳಿಗೆ ತಿಂಗಳಿಗೆ ಬರುತಿಹ	೫೩
ತಿಳಿಯನು ಎಂದೆಂದಿಗನ್ಯ । ರಂಗ ಒಲಿದ ದಾಸರು	೩
ತಿಳಿವದು ಸಜ್ಜನರೂ । ಶಿರಿ । ನಲಿಯ ವಿಧಿಗೆ	೩೩೨
ತುತಿಸಲಳವೇ ಶ್ರೀವರದೇಂದ್ರನಾ	೧೩

ಥ

ಥಟ್ಟನೆ ನಡೆಗೋಕುಲಕಕ್ರೂರ	೧೪೨

ದ

ಪದ ಸಂಖ್ಯೆ.

ದಾತೆ ಇಂದಿರೆ ವಾರಿ-ಜಾತ ಮಂದಿರೆ ೮೧
ದಿತಿಜಕುಲ ತರಿಯು ಬಂದೆನೋ ೭೦
ದೂರ ನೋಡುವುದುಚಿತವಲ್ಲವೋ . . . ೬೭
ದ್ರೌಪದಿ ಕೃಷ್ಣಾ ಪಾಂಚಾಲಿ ೪೨
ದ್ವಯಪರ್ವನಾಮಿಕ । ಕನಿಷ್ಠಾದಿ ಕ್ರಮ ೩೫೨

ಧ

ಧಿಕುಧಿಕು, ನರಪತಿ ಊಳಿಗವು ೩೨೪
ಧೊರೆತನಮಾಡುವರೀಪರಿಯಾಗಲು ೧೨೧

ನ

ನಗಿಬರುವದೋ ಮನವೆ । ನೀನು ಮಾಡುವಾ ೩೨೫
ನಂಬು ಹರಿಯು ಪಾದವಾ । ಮನವೆ ೧೮೭
ನಮಿಸೋ ಗಂಧವಪಗೆ ಪ್ರತಿದಿನ ೪೬
ನಮೋ ನಮೋ ಗುರುನಾಥ । ನಿನ್ನ ಚರಣಯುಗಳಕೆ ೪೪
ನಮೋನಮೋ ಶ್ರೀಭೀಮ ನಮೋನಮೋ ಜಿತಕಾಮ ೪೮
ನಮೋನಮೋ ರಾಮ ಕಳುಹಿಸಿದನಪ್ಪಾ ೬೮
ನರಜನ್ಮ ಬಂದುದಕೆ ಇಪ್ಪತ್ತು ಆರು ಕಳೆ ೨೧೮
ನಾಲಿಗಿದ್ಯಾತಕೆ ಲಕುಮಿಲೋಲನ ನೆನಿಯದೆ ೧೮೮
ನಾಲ್ಕು ಕರ್ಣದೊಳೊಂದು ೩೭೨
ನೀತಿಕೆಟ್ಟಿತು ಕಲಿಯುಗದಲಿ ೨೧೭
ನಿನಗೆ ತಿಳಿದಂತೆ ಮಾಡುವದಯ್ಯ ಬೇಡೆನಲು . . ೧೨೬
ನೀನೇಯೆಂದು ಮರೆಹೊಕ್ಕೆನೋ-ರಂಗ . . . ೧೨೫
ನೀನಲ್ಲ ದನ್ಯರೆ ಸಲಹಲು-ಕಾಯೋ-ಜಾನಕೀಪತಿದೂತ . . . ೬೨
ನಿರುಮಲೋದಕ ಪೆರಿಯಲಿಘುದಶ ೩೨೯
ನೋಡಿದೆ । ನಾ ಧನ್ಯನಿಂದಿಗೆ ನೋಡಿದೆ ೩೬

ಪ

ಪಂಚಭೇದ ತಿಳಿವದು ಪ್ರತಿ ದಿನದಲೀ ೩೧೬
ಪದಕಟ ಬೆರಳು ಕಂಠ ಕಿಂನಿ ಪುಬ್ಬು ಸಂಣವಾರು ೩೭೮
ಪದುಮನಾಭನೆ ಏನೆಂತಾಡಿದ್ಯೊ ೧೪೨

ಪದ ಸಂಖ್ಯೆ.

ಪರವಾದೀ ಪರವಾದೀ । ಪರಮಾತ್ಮನೆ ನೀನೆಂಬುವರೇನೈ . . . ೨೦೮
ಪರಸತಿ ಪಡದವನ್ನೆನೆಂಬವ ಧನ್ಯ ೨೩೫
ಪವಮಾನರಾಯಾ-ಪಾವನಕಾಯಾ-ಕಾಯೋ ೬೦
ಪಕ್ಷಿವಾಹನ ಶ್ರೀವಾಮನ್ನ-ಅಂತರಿಕ್ಷಾಳಕಪ್ರಿಯ ಕಾಯೆನ್ನ . . ೯೨
ಪೃಷವಶ್ವ ಪಾಲಿಸ್ಪುದೆನ್ನ ೬೧
ಪ್ರಥಮ ಪೂಜೆ ಆವಾಹನ ೨೪೦
ಪಾಲಿಸಿರೆನ್ನಣೆ ಮಧುರಿಗೀಗಲು ೧೫೨
ಪಾಲಿಸೋ ಪಾಲಿಸೋ ॥ ಕರುಣಾಲಯ ವರದೇಂದ್ರ-ಮುನಿ, ... ೧೨
ಪಾಲಿಸೋ ವೆಂಕಟಗಿರಿರಾಯಾ ಲಕ್ಷ್ಮೀಲೋಲ ನೀಲಾಂಬುದ. ೯೫
ಪಾರ್ವತೀ, ದಕ್ಷಕುಮಾರೀ ೨೯
ಪಾರ್ವತೀ ಪತಿಪಾಹಿ . . ೩೨
ಪಾಹಿ ಕೃಷ್ಣಾ ನಮ್ಮಸ್ವಾಮಿವೂರೊಳಗೆ ಬಿಟ್ಟು . . . ೧೪೯
ಪಾಹಿಪಾಹಿ, ಜಿತಮಾರ । ಪಾಹಿಸುಬೋಧೇಂಪ್ರ ಸಮಾರ . . . ೨೨
ಪಾಹಿ ನಾರಾಯಣನೆ ಪಾಹಿ ವಾಸುಕಿಶಯನ . . . ೮೯
ಪಾಹಿಮಾಂ ಪಾಹಿಮಾಂ । ಕುಜ-ನಾಹಿವಿಹಂಗ . ೧೧೧
ಪಾಹಿ ಸರಸ್ವತಿ ಸುಗಾಯತ್ರಿ ಶ್ರೀಸಾವಿತ್ರಿ ೪೩
ಪುನಹ ಭೋಜನ, ಕಾಂತ ಹಾರಕ. . ೨೨೬

ಫ

ಫಣಿಯು ನರಪತಿ ಹುಲಿಯು . . . ೨೩೨

ಬ

ಬಂದನಕ್ರೂರ-ವ್ರಜಕೆ ಗೋಪೀ ೧೪೩
ಬಣ್ಣಿಸಲಳವೆ ನಿನ್ನ । ಪನ್ನಗಶಯನ ೯೬
ಬರಬೇಡ-ಬರಬೇಡೆ ॥ ಮಧುರಮತಿಯೊಳಗಿಹ ಕಂಸನು, ... ೧೪೫
ಬಲ್ಲವರಿಗರಿದಲ್ಲ ಪ್ರಮೇಯವಲ್ಲ ೧೨೦
ಬಳಸ ಬ್ಯಾಡಿರೊ ಇಂಥ ಖಳರ ಸ್ನೇಹವಾ ೧೯೨
ಬಾಣವದನ ಸಲಹೋ-ನಾನಮಿಸುವೆ . ೩೦
ಬಿಳಿಯಾಬಟ್ಟೆಯು ಕೆಂಪು ಡೊಳ್ಳಿನವರು . . ೨೩೩
ಬೇಡಬೇಡೆಲಾ-ಕೊಡಬೇಡೆಲಾ-ಸೀರೆ ೧೩೪
ಬೇಡೂವರೋ ಸುಖ । ಬೇಡಾರೋ ಕಷ್ಟವ ೧೯೫
ಬೊಮ್ಮನ ನೊಲ್ಲೆನವ್ವ ವೃದ್ಧನಾಗಿಹನೆ, ... ೭೯

ಭ

ಪದ ಸಂಖ್ಯೆ.

ಭಯ ಉಂಟೆ ಮನುಜ ಶ್ರೀಪತಿಯ ಗತಿಯುಂಡವರಿಗೆ . ೧೮೬
ಭಾರತೀರಮಣ-ನಂಬಿದೆ ಪಾದವಾರಿಜಾ . ೬೪
ಭಾರತೀರಮಣಗೆ ಮಂಗಳ . ೭೩
ಭಾರತೀರಮಣಾ-ಪವಮಾನಾ-ಜಗದೊಳು ಸುತ್ರಾಣ ೫೭
ಭುವನಪನಾ, ಯಂಥ್ಯಾಗಿದ್ದರೆ ಕರ । ಸುಪದು ನಿರಂತರ ೨೧೧

ಮ

ಮಂಗಳಂ ಜಯ ಮಂಗಳಂ । ಶುಭ ಮಂಗಳಂ ಅಕ್ರೂರವರದನಿಗೇ ೨೪೩
ಮಂಗಳಂ ಮಂಗಳಂ । ಜಡಜಂಗಮವ್ಯಾಪ್ತ ೨೪೪
ಮಂಗಳಂ ಮಂಗಳಂ । ದೇವಗಂಗಜನಕ ಶ್ಯಾಮಲಾಂಗಪುರಾರೇ ೩೪೫
ಮಂಗಳಂ ಜಯ ಮಂಗಳಂ । ಜಯ ಮಂಗಳಂ ಪರಮೇಷ್ಠಿಜನಕ ೩೪೬
ಮಂಗಳ ರಾಘವ ಜಾನಕಿಗೆ . ೧೭೪
ಮಂಗಳಂ ಮಂಗಳಂ । ಜಯ ಮಂಗಳಂ ಶ್ರೀ ಸುಧೀಂದ್ರಾಬ್ಧೀಜ ಚಂದ್ರ ೨೫೧
ಮಂಗಳಂ ಮಂಗಳಂ ಜಯ ಮಂಗಳ ಭುವನೇಂದ್ರಪೂಜ್ಯ ೩೫೩
ಮಂಗಳಂ ಮಂಗಳಂ ॥ ಪಲ್ಲ ॥ ಮೂಜ್ಜಗದೊಡಿಯಗೆ ೩೪೭
ಮಂಗಳ ವಿಶ್ವವ್ಯಾಪ್ತ । ವಿಶ್ವಭಿನ್ನನಿಗೇ ೨೪೮
ಮಂಗಳಂ ಜಯ ಮಂಗಳಂ । ಶುಭ ಮಂಗಳ ಶ್ರೀಕೃಷ್ಣೆ ವಲ್ಲಭಗೆ ೭೩
ಮಂಡೆಬಾಗಿ ಕರವ ಮುಗಿವ ಕಾಯೊ, ಹರಿಹರಿ ೧೦೯
ಮಧ್ವಮತ ಪೊಂದಪವ ದೈತ್ಯಾ . ೩೦೭
ಮಧ್ಯರಾತ್ರಿಯೊಳೀಗ ನಾ ನಿದ್ದೆಯೊಳಿರ ೧೨೮
ಮನವೆ ಸ್ಮರಿಸೊ ಕಂಡ್ಯಾ ಹರಿಯಾ. ೧೭೮
ಮರುತದೇವರ ಹೊಂದಿರೋ-ಮೂಜಗದ ಗುರು ೫೦
ಮಹಾದೇವ, ಶಿತಿಕಂಠ, ದಾಸ-ಕಲ್ಪಮಹೀಜ, . . ೪೪
ಮಾರಸ್ಮೈಯ್ಯನೆ ಕೇಳಾ ಕಲಿವ್ಯಾಪ್ತಿ ಆದದ್ದು . ೨೧೪
ಮಾರಿ ಬಂದ ಕೃಷ್ಣ ಎಲ್ಲನೇ . ೧೬೧
ಮುಖ್ಯಪ್ರಾಣನೆ ನಮ್ಮ ಮೂಲ ಗುರುವು ೫೧

ಯ

ಯಶೋದೆ, ನಿನ್ನ ಮಗನಿದು ಧರವೇ . ೧೩೪
ಯಶೋದೆ ಮಜ್ಜಿಗೆ ಮಾಡುತ ಮುದದಿಂದ . . . ೧೨೧

	ಪದ ಸಂಖ್ಯೆ.
ಯಾಕೆ ಸಾಧುಗಳ ಸೇವಿಸಲೊಲ್ಲೀ .	೧೯೦
ಯೋಗಧರತಾತಕಭಲೋಕಪತಿ ದೇವ ಸಿರಿ .	೮೭

ರ

ರಂಗ ಕೊಳಲನೂದುವ-ಮಂಗಳಸ್ವರಕೆ .	೧೩೮
ರಂಗ ಬಂದನಂತಲ್ಲೇ । ಸಖಿ .	೧೫೯
ರಂಗ ಹೋದಾನಲ್ಲೆ ನಮ್ಮ । ನೊಂಚಿಸೀ	೧೫೬
ರಕ್ಷಿಸೆನ್ನನು — ದಯಾಂಬುಧೆ .	೨೫
ರಕ್ಷಿಸೆನ್ನನು ಶ್ರೀ ಪಂಡರೀನಾಥಾ .	೯೪
ರಾಘವನಾಡಿದ ಮಾತಿಗಾಂಜನೇಯ ಬಿನ್ನವಿಸುವನು	೬೬
ರಾಘವೇಂದ್ರ ನಿನ್ನ ಪಾದಸರೋಜಕೆ ಬಾಗುವೆ	೧೭
ರಾಮ ಗೋವಿಂದ ಪೂರ್ಣ . .	೪೮
ರಾಮರಾವಣರಿಂದು ಮಾರುತಿಯು ನಡೆದ .	೬೭
ರೋಜನ ಪೂರ್ವೇಂದ್ರಾ ಧೀರಧರಾಕು .	೫೪

ವ

ವಂದನೆಮಾಡಿರೈ, ಗುರು-ನರಪೇಂದ್ರರ ಪಾಡಿರೈ .	೯
ವಂದಿಸುವೆ ಗುರುಸಂತತಿಗೆ ಪ್ರತಿದಿನಾ	೨೪
ವನಜನಾಭನಥಾಳಿ ಘನವಾಯಿತಿಂದಿಲಿಂದ .	೧೨೬
ವನಹೀನವಾದ ನದಿಗಳವ್ದು ವ್ಯರ್ಥಾ	೨೩೪
ವರುಣಗೂ ನಾರಾಯಣಗೂ ನೆಂಟತನ ಮಾಡುವದಕೆ	೧೬೩
ವೃಂದಾವನಕೆ ಹೋದಕ್ರೂರಾ	೧೪೪
ವಸುಧೀಜ ಸೀತೆ ವೈದೇಹಿ . .	೭೪
ವ್ಯರ್ಥ ವೈಷ್ಣವನಂತೆ ನೋಡಿ ರೋಜಿತ .	೧೮೦
ವಾದಿಯಾ ಪರಮಾತ್ಮಗೊಂದೂ ಇಲ್ಲ . .	೧೧೨
ವಾಸುದೇವನು ಶುಕ್ಲ ಶ್ರೀ ಶಾಂ। ತೀಶ .	೨೩೯
ವಾಸುಕಿಶಯನ ಅಶೋಕ ಪರಾಕೂ . . .	೧೭೩
ವಾಸುಕಿ ಶಯನನೆ ವೆಂಕಟಗಿರಿ	೧೬೭
ವ್ಯಾಸರಾಯರ ಬೇಸರವೇನೆನದಾಸೆ . .	೨೩
ವ್ಯಾಸೋಕ್ತಿಯನುಸರಿಸಿ ಹತ್ತು ಅವತಾರವನು . .	೧೧೯
ವಿಜಯರಾಯರಂಘ್ರಿಜಲಜವ-ಭಜಿಸಿ	೩
ವಿರಲಯ್ಯ ವಿರಲಯ್ಯ ॥ ವಟಪತ್ರಶಯನ . .	೧೧೭

ಪದ ಸಂಖ್ಯೆ

ವೆಂಕಟಾಚಲವಾಸ । ವಂದಿಸಿನೋ ತವ ೯೧
ವೆಂಕಟವಿಠಲ ನಿನ್ನಂಕಿತದವನ ೧೧೫
ವೇದ ಉದ್ಧರಿಸೀದಾ ಮತ್ಸ್ಯಾವತಾರನೇ ೧೬೬
ವೈರಾಗ್ಯವೆ ಜಪತಪ ಮುಖ್ಯಯೋಗ . . . ೧೭೯

ಶ

ಶರಣು ನಿತ್ಯಾನಂದ ಸದ್ಗುಣಸಾಂದ್ರ . . ೨
ಶರಣು ನಿನ್ನ ಚರಣಗಳಿಗೆ ಭಾರತೀಶನೆ . . . ೪೫
ಶರಣು ಭಾರತೀತಾಯೆ । ಕರವ ಬಿಡದಲೆ ಕಾಯೆ ೩೨
ಶರಣು ಶ್ರೀ ಮಾರುತನ ರಾಣಿಯೆ ೩೮
ಶರಣು ಹೊಕ್ಕೆನೊ ನಿನ್ನ-ಜಾತರೂಪಾಂಗದ ೮೫
ಶಿರಿರಮಣ ದಯದಿಂದ ಮಂತ್ರಾರ್ಘ್ಯ . ೨೩೧
ಶಿವಭಕ್ತನಾಗೋ ಪ್ರಾಣೀ ೩೧೭
ಶಿವ ಸತ್ತ ಎಂಥ ಆಶ್ಚರ್ಯವು, ಇದು ನೋಡಿ . ೨೧೦
ಶ್ರೀ ಕಾಂತೊಲಿದ ದಾಸ । ಈ ಕಲಿಯುಗದಲ್ಲಿ . . ೩೪೧
ಶ್ರೀ ನಾರಸಿಂಹಾ, ಕಾಯೊ । ದಾನವಾನೀಕಾಧ್ವಾಂತಾ . ೩೪೭
ಶ್ರೀ ಪೂರ್ಣ ಬೋಧಮತವಾ । ನಂಬಿ . . . ೨೧೫
ಶ್ರೀಮಧ್ವಮತವೆಂಬ ಕ್ಷೀರಪಾರಾವಾರ . . ೬
ಶ್ರೀಭಾರತೀಶ ನಮೋ ನಮೋ-ಬಿನ್ನಪವ ಕೇಳು . ೪೨
ಶ್ರೀರಾಮ ಚಂದ್ರಾಂಘ್ರಿ ಸರಸೀರುಹ ಭೃಂಗನಿಗೆ ೩೦
ಶ್ರೀವಾಯುದೇವರಿಗೆ ನೀತವಾದ ೫೩
ಶೋಭಾನ ಕಾಮಜನಕನಿಗೆ ೧೬೯
ಶೋಭಾನ ಪಾಂಡುರಂಗಗೆ ೧೬೮
ಶೋಭನ ಶ್ರೀನಾರಾಯಣಗೆ ಇಂದಿರಿಗೇ . . . ೧೨೧
ಶೋಭನ ಶ್ರೀಭೂದುರ್ಗಿಗೆ . . . ೮೩

ಸ

ಸಜ್ಜನರ ನಡತಿದೂ । ಶ್ರೀ । ಅರ್ಜುನ ಸಖನ ೩೧೭
ಸಂಜೆಯೊಳಿಂತು ಬರುವರೆ । ಶಬ್ದ ಹೊರುವರೆ . . ೧೨೭
ಸತತ ಹರಿ ಸ್ಮರಿಸುತಿರಬೇಕು ಮನವೇ . . . ೧೮೪
ಸದ್ವೈಷ್ಣವರಾದವರೆಲ್ಲ ಕೇಳಿರಿ । ಅದ್ವೈತರು ಸರಾಡದಂದದಿ . . ೩೨೩
ಸಲಹೋ ಜಡಚೇತನನಿಲಯ ಶ್ರೀಹನುಮಂತ ೫೬

ಪದ ಸಂಖ್ಯೆ.

.....ಸ್ವರ್ಗ ನರ್ಕವೆಂಬುದು ಬ್ಯಾರಿಲ್ಲಾ . . ೨೧೩
ಸ್ವಾಮಿತ್ವದವರಿಗೆ ಅಯುಕ್ತವೇ ಯುಕ್ತ . . ೧೦೪
ಸಿಕ್ಕಿರೆನ್ನ ಕೈಗೀಗ-ಇನ್ ತಕ್ಕೊಳ್ಳಿಸೀರೆಯ . ೧೪೬
ಸೀತೆ, ಸದ್ಗುಣಗಣವ್ರಾತೆ ಈರೇಳುಲೋಕಮಾತೆ ೭೮
ಸುಖತೀರ್ಥರೆದುವರನ ಸ್ಥಾಪಿಸ್ಯೊಂಭತ್ತೆತಿಗಳನು . . . ೨೨೪
ಸುವ್ವಿ ಸುವ್ವಾಲೆ ॥ ಸುವ್ವೀಸಾಧ್ವಿಯರು, ರಾಘವೇಂದ್ರರ ಪಾಡಿ . . ೧೮
ಸೊಕ್ಕಿಲಿ ಇರಬ್ಯಾಡವೆಲ ಹುಚ್ಚಪ್ರಾಣೀ ೧೯೧
ಸುವ್ವಾಲೆ ಸುವ್ವಿ ಸುವ್ವಾಲೆ ॥ ಪ ॥ ಗುರುಮಧ್ವರಾಯರ ಭಾಗ್ಯ ೨೮

ಹ

ಹರಿಸರ್ವೊಗತನ ಮಾದಲೀಸನೆ ಕೇಳಮ್ಮ . ೧೩೯
ಹರಿಭಕ್ತರಾದವರಿಗಾವ ಭಯವೇನೋ ೧೮೩
ಹರಿಭಕ್ತರಾದ ಬಳಿಕ ದುಃಸ್ವಭಾವವ . . . ೩೦೪
ಹರಿಯನ್ನಬಾರದೆ । ಎಲೆ ಮನವೆ ಆವಾಗಲೀ ೧೮೯
ಹರಿಯೆ ಸೀನಲ್ಲದಾರ–ಕಾಣೆ ಕಾಯ್ವರ . . . ೧೦೮
ಹರಿಹರೀ ಎಂಬು ಅನವರತ ಸ್ಮರಿಸೋ . . ೧೩೫
ಹೃದಯಮಂದಿರ ವಿವರ ಈ ಪರಿಯಲಿಂತಿಳಿದು . ೨೧೭
ಹಾಳುಮಾಡಿದ–ಹನುಮ–ಸಾಲುವನಗಳ . . ೬೯
ಹ್ಯಾಂಗೆ ಮಾಡಲೆಮ್ಮ ರಂಗಾ ಹೋಗಿ ಬರಲಿಲ್ಲಾ ೧೫೭
ಹೀಗನುದಿನದಲಿ ಆಚರಿಪರು ಸದ್ವೈಷ್ಣವರೂ ೨೦೨
ಹೀಗೇವೇ ಪ್ರೀತಿ ಹೀಗೇವೇ ೧೪೮
ಹಿಂದಿನ ಸುಕರ್ಮವೇನು । ಒಂದೊದಗಿದಪ್ರೋವರ . . ೮
ಹುಚ್ಚು ಸೇರಿತೆ ನಿನಗೆ, ... ೧೨೭
ಹುಚ್ಚು ಹಿಡಿಸಿದೆಯಾ ಮಾಧವ । ನಿಚ್ಚ ನಿನ್ನ . . ೯೯
ಹೆಂಡತಿಕಿಂತೆಮ್ಮ ಹೆಚ್ಚು ನೋಡಿದೆನೆಂದು, . . ೧೫೧
ಹೇ ದಯಾಬ್ಧೇ ಪಾಲಿಸೆನ್ನನು । ಶ್ರೀವ ಹನುಮಂತ . ೫೮
ಹೋಗುವಳಗಸೀಯ ಪರಿಯಂತಾ . ೧೯೬

ಕ್ಷ

ಕ್ಷೀರವಾರಿಧಿ ಸಂಭೂತೆ । ಪ್ರದ್ಯುಮ್ನಮಾತೆ ೭೬

॥ श्रीः ॥

॥ ಶ್ರೀರಾಮಚಂದ್ರ ಪ್ರಸನ್ನಃ ॥

ಶ್ರೀಮಧ್ವರಾಜ ಗುರುಭ್ಯೋ ನಮಃ

" शृण्वन्गृणन्संस्मरयंश्च चिंतयन् ।
नामानिरूपाणि च मंगलानिते ॥
क्रियासुयस्त्वच्चरणारविंदयोः ।
आविष्टचित्तो न भवाय कल्पते ॥ "

ಶ್ರೀಮಜ್ಜಗನಾಥದಾಸಾರ್ಯರ

ಪರಮ ಪ್ರಿಯ ಶಿಷ್ಯರೂ ಅಪರೋಕ್ಷಜ್ಞಾನಿಗಳೂ

ಶ್ರೀಪ್ರಾಣೇಶ ವಿಠಲರ ಕೀರ್ತನ.

(೧) ಜಗನ್ನಾಥರಾಯರ ಸ್ತುತಿ

೧. ರಾಗ-(ಆದಿತಾಳ).

ತಂಗಿನೋಡಿದೆಯೇನಿಂದು । ಕಂಗಳುದಣಿಯ ಗುರು, ರಂಗನೊಲಿದ ದಾಸರಾಯರ ॥ ಪ ॥ ಶ್ರೀಪತಿಯೊಲಿಯುಲೆಲ್ಲ ಪ್ರಾಪುತಿಯೆಂಬುವ ಪ್ರಮಾಣ-ವೀಪುರುಷರಲ್ಲಿಯೇ ಒಪ್ಪುವದೇ ತಂಗಿ ನೋಡಿದೆನೆ ॥ ಶಾಪಾನುಗ್ರಹಸಮರ್ಥರೀಪೊಡವಿಯೊಳು ನಿತ್ಯ । ಕಾಪಾಡುವರೆಮ್ಮನೆಲ್ಲರ-ತಂಗಿ ॥ ೧ ॥ ಶಿಖಿಯೊಳಿದ್ದ ಪೀಯೂಷ । ಸುಖದಿ ಪಿತೃಗಳುಂಡರು, ಅಕಟಾ ಕಾಣರೀ ಜನವೆಂದೂ ॥ ತಂಗೀ ॥ ಸಕಲಗ್ರಂಥವಶೋಧಿಸಿ ಯುಕುತಿಯಿಂ ಹರಿಕಥಾಮೃತ । ಸಕಲರಿಗಿತ್ತು ಸಲಹುವರೇ ॥ ತಂಗಿ ॥ ೨ ॥ ಕಾಶೀಪ್ರಯಾಗವಾರಣಾಸಿಯಿಂದಧಿಕ ಹರಿ । ದಾಸರಾಯರಿದ್ದಾ ಸ್ಥಾನವೂ ॥ ತಂಗಿ ॥ ನಾಶವಾಗುವದಘ ಮನವಿಾಸಲಾಗುವುದು ಶ್ರೀಪ್ರಾಣೇಶವಿಠ್ಠಲ ಕೈಸೇರುವ ॥ ೩ ॥

೨. ರಾಗ–ಸಾವೇರಿ (ತ್ರಿಪುಡೆ ತಾಳ).

ತಿಳಿಯನು ಎಂದೆಂದಿಗನ್ಯ । ರಂಗ ಒಲಿದ ದಾಸರು ಜಗನ್ಮಾನ್ಯ ॥ ಅಲವ ಮಹಾತ್ಮರೆಂಬ ಪುಣ್ಯ–ಕೀರ್ತಿ–ಗಳ ನಿತ್ಯ ಕೇಳ್ವ ನರಧನ್ಯ ॥ ಪಲ್ಲ ॥ ಹಿರಣ್ಯಕಶ್ಯಪುಜ ಸಹ್ಲಾದನೆವೇ ಎರಡನೆ ಜನ್ಮ ಶಲ್ಯನಾದ । ಗುರುವಾದಿ ರಾಜರನರ್ಚಿಸಿದ ಪುರಂದರದಾಸರಾಯರಲ್ಲುದಿಸಿದ ॥ ೧ ॥ ಅಯ್ದನೆಯ ರೂಪ ವೀಗಿಂದಂತೆ । ಬಹದು ಏಳು ಜನ್ಮ ಮುಂದಂತೆ ॥ ಮೋದಾಭಿವೃದ್ಧಿ ಗೇನೋ ಅಂತೇ ಎಂಬ ವಾದಿಗಿದೆಲ್ಲ ಅಂತಿಗಂತೆ ॥ ೨ ॥ ದಾಸಕೂಟಸ್ಥರಿಗೀ ಮಾತು–ಕೆಲವು–ದೇಶಗಳಲ್ಲಿ ಅನುಭವವಾಯ್ತು । ಈಸುಕಥಾಲಾಪವಲ್ಲಾ ಶ್ರೀಪ್ರಾಣೇಶ ವಿಠಲನಲ್ಲಿಹನಾತು ॥ ೩ ॥

---

(೨) ವಿಜಯರಾಯರ ಸ್ತುತಿ

೩. ರಾಗ–ಶಂಕರಾಭರಣ (ಏಕತಾಳ).

ಯರಾಯರಂಘ್ರಿಜಲಜವ–ಭಜಿಸಿ ಜನರು–ತಡೆಯದಲೆ ॥ ಜವಾ ॥ ಪಲ್ಲವಿ ॥ ಕುತರ್ಕಗಿರಿಗಳ । ಹತನರ್ಗೈಸಿದ । ಶತಕ್ರತಾಖ್ಯರ ಸುತರಾದ ಗುರು–ವಿಜಯರಾಯ ॥ ೧ ॥ ವಸುಧೆಯೊಳಗನ್ಯವೇಷದಿಂ ಚರಿಸಿದ । ಲೇಸಾಗಿ ಸಾರಥಿಶ್ರೀಶನಾದಾ–ಗುರು ॥ ೨ ॥ ಖ್ಯಾತಿಯಿಂ ಲೋಕದಿ, ವಾತಜನ್ನೊಲಿಸಿದ । ದಾತನ ಅರಿಯಜಗನ್ನಾಥನುಳಿದು, ಗುರು ॥ ೩ ॥ ದುಷ್ಟರ ಜರಿದ, ವಿಶಿಷ್ಟರ ಪೊರೆದ, ಶ್ರೀಕೃಷ್ಣನ ಸಖನೋರ್ವ ಸೃಷ್ಟಿಯೊಳಗೆ । ಗುರು ॥ ೪ ॥ ಈಶಗೊಲಿದ ತುರು–ಗಾಸ್ಯನಾಳುಗಳೊಳು ಈಸುಗುಣಿಗೆ ಕಾಣೆನಾಸರಿಯಾ, ಗುರು ॥ ವಿಜಯರಾಯ ॥ ೫ ॥ ತಾತನಾಲಯಕೈದಿ । ನೂತನವಿದ್ಯಂಗಳಾತುರದಲಿ ಯ್ಯೆದಿದಾತನೀತ, ಗುರು ॥ ವಿಜಯ ॥ ೬ ॥ ಪ್ರಾಣೇಶ ವಿಠಲನು ತಾನುಡಿಸದೆ ತುಟಯನು ಹೊಂದಿಸರಜನ್ಹಾಣುವೆನುವ ॥ ಗುರು ॥ ವಿಜಯರಾಯ ॥ ೭ ॥

(೩) ಶ್ರೀಧರ ತೀರ್ಥರ ಸ್ತುತಿ.

೪. ರಾಗ–ಕಾಪಿ (ಅಟತಾಳ).

ಚಿರಕಾಲಾಮರೆಯೆ । ನಿಮ್ಮ ಸ್ಮರಣೆ ॥ ಶ್ರೀಧರತೀರ್ಥಗುರುರಾಯ ಧೊರೆಯೆ ॥ ಪ ॥ ಭವದೂರ, ವೀತ–ವಿಷಯುಸಂಗ ಅವನಿಯೊಳುಖ್ಯಾತ ॥ ತವಕದಿಂದಲಿ ಲಾಲಿಸುವದೆನ್ನಮಾತ । ಭುವನೇಂದ್ರಯುತಿಕರಕಮಲಸಂಜಾತ ॥ ೧ ॥ ಮೃದಸಮಹೇಮಾ–ದಿಗಳನು–ಮಾಡಿದ ಜಿತಕಾಮ ॥ ಬುಧಜನವಂದ್ಯ ಸದ್ಗುಣಗಣಧಾಮ । ಮುದತೀರ್ಥಮತಪಾರಾವಾರಸುಸೋಮ ॥ ೨ ॥ ಪತಿತಪವಿತ್ರ–ದಯಾಂಬುಧೇ–ಶತಪತ್ರನೇತ್ರ ॥ ವಿತರಣೆಯುಲಿ ರವಿಜನೆ ಶುಭಗಾತ್ರ । ಪತಗಾಭ, ದಂಡಾದಿಧರ ಸುಚರಿತ್ರ ॥ ೩ ॥ ನತಸುರಮಣಿಯೆ–ನೀವಲ್ಲದೆ, ಇತರಿಗೆ ಮಣಿಯೇ ॥ ಪ್ರತಿವಾದಿ ಮಹಾತಿಮಿರಕೆದಿನಮಣಿಯು, ಮತಿಯುಪಾಲಿಸೋ ದುಃಖಪ್ರಪದಶ್ವಫಣಿಯೇ ॥ ೪ ॥ ಯಾಕೆನ್ನ ಕೀಳು–ಬುದ್ಧಿಯು ಕಳೆದು–ಜೋಕೆಯಿಂದ ಆಳು ॥ ನೀಕಯ್ಯಬಿಡಲು ನಾಕುವರಿಲ್ಲ ಕೇಳು ॥ ಶ್ರೀಕಾಂತಪ್ರಾಣೇಶ ವಿಟ್ಠಲನ ಆಳು ॥ ೫ ॥

(೪) ಭುವನೇಂದ್ರ ತೀರ್ಥರ ಸ್ತುತಿ.

೫. ರಾಗ–ಭೈರವಿ (ಆದಿತಾಳ).

ಗುರುಗಳ ನೋಡಿರೈ–ಉತ್ತಮ ವರಗಳ ಬೇಡಿರೈ ॥ ಪ ॥ ದುರುಳತಿಮಿರದಿನಕರ, ಶರಣರಸುರತರು, ವರದೇಂದ್ರರ ಕರಪಂಕಜರುಹ ॥ ಪ ॥ ಮಂಗಳ ವಿಗ್ರಹ ಮಧ್ವಮತಾಂಬುಧಿಸೋಮ–ಸದ್ಗುಣಧಾಮ ॥ ಪಿಂಗಳನಿಭಸಂನ್ಯಾಸಕುಲೋತ್ತಮನೀತಾ–ಲೋಕವಿಖ್ಯಾತಾ ॥ ಸಂಗರಹಿತ ಕೌಪೀನಕಮಂಡುಲಧರ–ದೋಷವಿದೂರ । ಮಂಗಳೆಪತಿ ಪದಭಜಕ, ಅಘೋರಗವೀಂದ್ರ ಶ್ರೀಭುವನೇಂದ್ರ ॥ ೧ ॥ ಜನ್ಮಾರಭ್ಯವು ಲೌಕಿಕಸ್ವಪ್ನದೊಳರಿಯು–ಭೂಸುರವರ್ಯಾ । ಸುಮ್ಮನೆ ಈ ಪರಿ ಪದವಿಯು ಜಗದೊಳು ಬಹುದು ಆರಿಗೆ ಅಹುದೂ । ಬೊಮ್ಮನ ಸಂತತಿಯಿದು ಪುಸಿಯಲ್ಲವು ಸತ್ಯಾ–ಭಜಿಸಿರಿಸಿತ್ಯಾ ॥

ಯಮ್ಮ ಬಳಿಯೊಳಿಹ ದುಷ್ಟಮತೇಂಧನ ದಾವಾ,–ಸೌಖ್ಯವನೀವ ॥ ಗುರು ಗಳ ॥ ೨ ॥ ಧಾರಿಣಿಯೊಳು ವಿಸ್ತರಿಸಿದ ಸ್ವಮತವ ಧೀರಾ ಗುಣಗಂಭೀರಾ ಆರಿಂದೊಶ ಚರಿತೆಯ ಪೂರ್ತಿಸಿ । ಪೇಳ್ವುದಕೆ–ಬಹುಸುಖ ಮನಕೆ ॥ ಶ್ರೀ ರಾಘವೇಂದ್ರರನುಗ್ರಹ ಪಾರಾವಾರದೊಳಗೆ ವಿಹಾ ರಾ ॥ ಘೋರಿಸುತಿಹ ಸಂಸಾರ ಸಮುದ್ರಕೆ ಮುನಿಯೂ ಯತಿಶಿರೋಮಣಿಯೂ ॥ ೩ ॥ ಚಿರಕಾ ಲದ ಸುಕೃತದೊರಕಲು ವದಗುವುದೂ, ಸೇವೆಯಿವರದು । ಮರಳ್ಯೊಂದ್ಯೊ ಚಿಸದಲೆ–ಶರಣಾಗತರಾಗಿ–ಚಿಂತೆಯನೀಗೀ ॥ ಎರವಿಲ್ಲದೆ ದುಃಖವ ಪರಿಹರಿ ಪರು ಹತ್ತೇ ಕರೆವರು ಮತ್ತೇ । ಸಿರಿ ಪೂರ್ಣಾಯು ಸುತಾದಿ ವಿಷಯಗಳ ಕೊಡುವ–ದುರಿತವತರಿವ ॥ ೪ ॥ ತವಕದೊಳಿವರ ಪದಾಬ್ಜವ ಸೇವಿಪಭಕ್ತಾ ಜೀವನ್ಮುಕ್ತಾ। ಕುವಲಯದೊಳಗೀಗಿವರಿಗೆ ಸರಿಯಾರಿಲ್ಲಾ–ಕೇಳಿರಿಸೊಲ್ಲಾ ॥ ಅವನೀಶರು ಎಂಬಾಹ್ವಯ ತಿಳಿಯಲಿಕುಂಟೇ–ಅಧಿಕರೂವುಂಟೇ ॥ ಇವರಿಗೆ ರಗದಿರೆ ಒಲಿಯನು ಶ್ರೀಪ್ರಾಣೇಶ–ವಿಠಲನು ಲೇಶ ॥ ೫ ॥

೬. ರಾಗ–ಪಾರ್ಥಿಕ (ಷಟ್ಪದಿ).

ಶ್ರೀಮಧ್ವಮತವೆಂಬ ಕ್ಷೀರಪಾರಾವಾರ । ಸೋಮನೆನಿಸುತಿಹ ವರ ದೇಂದ್ರಕರಸಂಜಾತ । ನೀಮಹಿಯೊಳಾವಾವ ಪರಿಕಾಣಿಸುವ ನೋಡಿ ರಾಮ ಪದ ಜಲಜಭೃಂಗ ॥ ಪ ॥ ಕುಂಡಲಿಯೊ ಭಾರತಿಯೊ ಈಶನೊ ಎಂದು ದ್ವಿಜಷಂಡ ತುತಿಸುವದು ಶ್ರೀ ಭುವನೇಂದ್ರ ರಾಯರ । ಕಂಡು ಪದಯುಕ್ತ ಪುರುಷಾಕಾರ ಶಿಖಾರಹಿತ ಕೂಡದಿದುಯೆನಲು ಪೇಳ್ವೆ॥ ಪಂಡಧರ ಯೋಗ ದಾರ್ಢ್ಯದೊಳುತಾ ಅಹಿಯಂತೆ। ಪಂಡಿತೇಶನು ವಾಗ್ಬಲದಲಿ ಭಾರತಿಯಂತೆ। ರುಂಡಮಾಲಿಯ ತೆರದಿ ತೋರುವರು ವೈರಾಗ್ಯದಲಿ ನಿರುತ ಭಜಿಸುವರಿಗೆ॥ ೧ ॥ ವಿಧಿಯೊ ಅರ್ಕನೊ ಇಂದ್ರನೋ ಎಂಬ ತೆರದಿಂದ । ಬುಧಜನಕೆ ತೋರ್ಪ ನಾಲ್ಮೊಗ ಖಗ ಸಹಸ್ರಾಕ್ಷ । ಇದು ಯೆಂತು ಸಾಮ್ಯಪನೆ, ಸರ್ವಜನರ ಯೋಗ್ಯತೆಯರಿವಂತೆ ಧಾತನಂತೇ ॥ ಮುದಡ ಜ್ಞಾನಾಖ್ಯ ತಮವಳಿವಲ್ಲಿ ರವಿ ಯಂತೆ । ಪದುಮೇಶನ ಗುಣವ ವಿಚಾರಿಸಲನೇಕಾಕ್ಷ ॥ ಚದುರನೆನುವ ಬಗೆಯಿಂದೊಪ್ಪುತಿಹ ನಮ್ಮ ಗುರುವ ತುತಿಸುವೊದಕ್ಕೆನ್ನ ವಶವೆ ॥ ೨ ॥

ಕಡಲೋ ಸುರಧೇನುವೋ ಹಂಸನೋ ಯೆಂಬಂತೆ। ಪೊಡವಿಗೆ ವಿರಾಜಿಸುವ ಉದಕಮಯವಾಗಿಹದು। ಕಡು, ಚತುಷ್ಪಾದಿ ಅಂಡಜಜಂತು ಈ ಸಾಮ್ಯ ಸಲ್ಲದೆನೆ ಸಲ್ಪವಿವರ ॥ ಒಡಲಿನೊಳು ಪ್ರಾಣೇಶವಿಠಲಮಣಿ ಪೊಳೆವುತಿದೆ। ಕೊಡುವ ಬೇಡಿದವರವ ಅಮರರಾಕಳಿನಂತೆ। ಕುಡಿವಂತೆಹಂಸ ಪಯಜಲ ವುಳಿದು, ದೋಷವೆಣಿಸದೆ ಬಿನ್ನಪವಲಾಲಿಪ ॥ ೩ ॥

(೫) ವರದೇಂದ್ರತೀರ್ಥರ ಸ್ತುತಿ.

೭. ರಾಗ–ಭೈರವಿ (ಅಟತಾಳ).

ಶರಣು ಸಿತ್ಯಾನಂದ ಸದ್ಗುಣಸಾಂದ್ರ ನಿನ್ನ ಚರಣ ಕಮಲಂಗಳಿಗೆ ಶ್ರೀ ವರದೇಂದ್ರ ॥ ಪಲ್ಲ ॥ ನಿನ್ನನಂಬಿದ ದಾಸರನವನಿಯೊಳು–ಇಂಥ–ಬನ್ನ ಪಡಿಸುವದುಚಿತವೆ ದಯಾಳು ॥ ಅನ್ಯರುಂಟೇ ನೀವಲ್ಲದುದ್ಧರಿಸಲು ಪ್ರಪನ್ನ ಪೋಷಕ ಯನ್ನ ಬಿನ್ನಪ ಕೇಳು ॥ ಶರಣು ॥ ೧ ॥ ನರರ ಪಾಡಿಸದಿರೊ ಯತಿರಾಯಾ–ಹರಿ–ಸ್ಮರಣೆ ಮಾಡಲು ಮನ ಕೊಡು ಜೀಯ ॥ ಕರೆಕರೆ ಭಾವದೊಳಗೊಂದುಪಾಯು–ಕಾಣೆ–ಹರಿಸಿಕ್ಲೇಶವ ಮೋದತೋರಿಸಯ್ಯ ॥೨॥ ಧರೆಗೆ ಪ್ರಸಿದ್ಧ ಪುಣ್ಯಾಲಯವಾಸ–ಕಾಯೊ–ನೆರೆನಂಬಿದವರನ್ನ ರವಿಭಾಸ ॥ ಪರಿದಾಸರ ಕಾಡುವರನ್ನಾ ಭಾಸಮಾಡೊ ಗುರುಪ್ರಾಣೇಶ ವಿಠಲನ್ನ ನಿಜದಾಸ ॥ ಜಯ ॥ ೩ ॥

೮. ರಾಗ–ಭೈರವಿ (ಅಟತಾಳ).

ಹಿಂದಿನ ಸುಕರ್ಮವೇಸು । ಬಂದೊದಗಿದವೋವರ । ದೇಂದ್ರರಾಯ ಬಂದ ನಮ್ಮ ಮಂದಿರಕಿಂದು ॥ ಪ ॥ ಮುತ್ತಿನ ಅಂದಣದೊಳು । ಸತ್ತಿಗಿ ನೆರಳಿಲಿ। ಪ್ರಶಸ್ತವಾಗಿ ವೇದಶಾಸ್ತ್ರವೊತ್ತಿವೋದುವ ॥ ಉತ್ತಮ ಬುಧರಕೂಡ ಭೃತ್ಯರಸಂಗಡ ಬಹು । ಹತ್ತೆಂಟು ಬಿರುದಾವಳಿಯುಕ್ತ ಬಂದರು ॥ ೧ ॥ ತಂಡತಂಡಕ್ಕೆ ಜನರು । ಹಿಂಡುಗೂಡಿ ಫಲಗಳ । ಕೊಂಡುಬಂದು ಮಾಡು ವರು–ದಂಡಪ್ರಣಾಮ ॥ ಪಂಡಿತಾಗ್ರಗಣ್ಯರು ಭೂ । ಮಂಡಲದೊಳಾಗ ಶ್ರೀಯಾ। ಖಂಡಲನಂತೆ ತೋರ್ವಾ ಕಮಂಡುಲಧರ ॥ ೨ ॥ ಶ್ರೀಕರಪ್ರಾಣೇಶ

ವಿಠ್ಠಲನೇಕಾಂತದಿ ಒಲಿಸುವಲ್ಲಿ ॥ ಈ ಕುಂಭಿಣಿಯೊಳಗೀತಗೆ ಕಾಣೆನೀಡ ॥ ನೀಕಾಯಬೇಕೆಂದವರ ಶೋಕವ ಪರಿಹರಿಸಿ ಜೋಕೆಮಾಡುವ ನಿತ್ಯ ದೇಶಿಕ ಕುಲಪತಿ ॥ ೩ ॥

೯. ರಾಗ–ಭೈರವಿ (ಆದಿತಾಳ).

ವಂದನೆಮಾಡಿರೈ, ಗುರು-ವರದೇಂದ್ರರ ಪಾಡಿರೈ ॥ ಬಂದ ದುರಿತಗಳ ಹಿಂದೆಮಾಡಿ ಸುಖ ತಂದುಕೊಡುವ ದಯಾಸಿಂಧು ಯತೀಂದ್ರರ ॥ ವಂದನೆ ಮಾಡಿರೈ ॥ ಪ ॥ ಮರುತಮತಾಂಬುಧಿ ಸೋಮನೆನಿಪ ವಸುಧೇಂದ್ರ–ಸದ್ಗುಣಸಾಂದ್ರ–ಗುರುಗಳ ಕರಕಮಲದಿ ಜನಿಸಿದ ಸುಕುಮಾರಾ–ಕುಜನ ಕುಠಾರಾ ॥ ನೆರೆನಂಬಿದ ಭಕುತರನನುದಿನದಲಿ ಪೊರೆವಾ–ದುರಿತವತರಿವಾ । ಧರೆಯೊಳು ತ್ಯಾಗದಿ, ಕರ್ಣನಮರೆಸಿದ ನೋಡಿ–ವರಗಳ ಬೇಡಿ ॥ ೧ ॥ ಕರಿಹಿಂಡೊಳು ಹರಿ ಹೊಕ್ಕತೆರದಿ ವಾದಿಗಳ–ಕೀಳು ಮತಗಳ । ವರಶಾಸ್ತ್ರಗಳಲಿ ಗೆಲಿದು ಸುಬುದ್ಧಿಯ ವರದ–ಜಗದೊಳು ಮೆರೆದ ॥ ಶರಭಂಗ ವರದ ಚರಣ ಸರಸೀರುಹ ಭೃಂಗ–ವಿಷಯ ಅಸಂಗ ॥ ಸ್ಮರಣೆಯ ಮಾಡೆ ಪಿಶಾಚ ರೋಗಗಳ ಭಯವೂ ಮುಟ್ಟದಲಿಹವೂ ॥ ೨ ॥ ಸಾನುರಾಗದಲಿ ಶ್ರೀರಾಘವೇಂದ್ರರ ಸ್ತೋತ್ರ–ಮಾಳ್ಪಸುಪಾತ್ರ । ಜಾನಕೀ ಪತಿಯಾನಂದದೊಳಿವರಿಗೆ ಒಲಿವ–ಹೃದಯದಿಸುಳಿವ॥ ದೀನದಯಾಳು ಅಪರಿಮಿತಮಹಿಮ ಗುಣಾಢ್ಯಾ । ವಾದದಿದಾಢ್ರ್ಯಾ ॥ ಧ್ಯಾನಿಸೆಮನದೊಳು ಜ್ಞಾನ ಕೀರ್ತಿ ಸುಖಕೊಡುವ–ಅಘಗಳಕಡಿವ ॥ ವಂದನೆ ॥ ೩ ॥ ವಿಷ್ಣುನಲೋಕ ಪ್ರವೇಶಮಾಡಿದ ಚರಿಯಾ–ಕೇಳಿರಿ ಪರಿಯಾ । ಶಿಷ್ಟಜನರು, ವಿಶ್ವಾವಸು ನಾಮಕ ಅಬ್ದ ಆಷಾಢಶುದ್ಧ ॥ ಷಷ್ಠಿಯುಕುಜವಾಸರ ಉತ್ತರಾ ನಕ್ಷತ್ರಾ, ವರಪುಣ್ಯಕ್ಷೇತ್ರ ॥ ನಟ್ಟನಡುವೆ ವೃಂದಾವನ ಮಧ್ಯದೊಳಿರುವ । ಸೌಖ್ಯವಸುರಿವಾ ॥ ೪ ॥ ಆನೆ ಹಂಡೆವಸನಗಳು–ದ್ರವ್ಯವುನಾನಾ ಮಾಡಿದ ದಾನ । ಅನಗರದಿ ಬಹು ಮಂದಿಯು ಭಕುತಿಯಲಿಂದಾ, ಪೂಜಿಪಚಂದ । ಸೂನುಪಡೆದು ಸುಖ ಪಡುವರು ಸರ್ವರು ನಿತ್ಯಾ ಈತನಸತ್ಯಾ ॥ ನಾನೆಂತುಸಿರಲಿ ಪ್ರಾಣೇಶವಿಠಲನ ದಾಸಾ, ಮುನಿ ಉತ್ತಂಸ ॥ ೫ ॥

೧೦. ರಾಗ–ಕಾಂಬೋಧಿ (ಆದಿತಾಳ).

ಗುರುವರದೇಂದ್ರ ದಯಾಂಬುಧೇ–ಶರಣಾಗತವತ್ಸಲ, ಈಶ ಚರಣ ಕಮಲಷಟ್ಪದ, ಪಾಲಿಸು ಕಾಷಾಯ ವಸನಭೂಷಾ ॥ ಪ ॥ ದುರ್ಮತ ಭುಜಗಕುಘರ್ಮವಿನಾಯಕ । ಕರ್ಮಬದ್ಧವ್ರತಾ ಶರ್ಮ ತ್ರಿಧರಪ್ರಿಯ, ಧರ್ಮಾಸಕ್ತನೆ ನಿರ್ಮಲ ಶುಭಚರಿತ ॥ ಭರ್ಮ ಸಮಾಂಗ ಅಧರ್ಮಶಿಕ್ಷ ಕರಿಚರ್ಮಾಂಬರ ಪ್ರೀತ । ಕಿರ್ಮೀರಾರಿ ಸುಶರ್ಮತೀರ್ಥಸಖ ಕರ್ಮಂದಿಪ ನಾಥ ॥ ೧ ॥ ಶ್ರೀಮನೋರಮ ಸುತ್ರಿಧಾಮದೇವ ಶ್ರೀರಾಮಪದಾಸಕ್ತಾ ॥ ಕಾಮಿತ ಫಲದ, ಧರಾಮರ ವಂದಿತಸ್ವಾಮಿ, ನಮಿಪಭಕ್ತ–ಶ್ರೀಮಂದಾರ, ಅನಾಮಯ, ಸದ್ಗುಣಧಾಮನೆ ಸುವಿರಕ್ತಾ । ಪಾಮರದೂರ ಲಲಾಮ ವದಾನ್ಯ, ಮಹಾಮಹಿಮನೆ ಶಕ್ತ ॥ ೨ ॥ ಮಾನಿಪೂಜ್ಯ ಸುಜ್ಞಾನಿ ಧೀರ ಸದ್ಭಾನುಚಂದ್ರಭಾಸ ॥ ದೀನಪೋಷಕ ನಿಜಾನುಗಪಾಲಕ, ಕ್ಷೋಣಿಪ ನಿರ್ದೋಷ ॥ ಸಾನುರಾಗದಲಿ ಪೋಣಿಸುಸನ್ಮತಿ ಮೌನಿಕುಲಾಧೀಶ । ನೀನಲ್ಲದೆ ಶ್ರೀ ಪ್ರಾಣೇಶ ವಿಠಲ ತಾನೊಲಿಯನು ಲೇಶ ॥ ಗುರು ॥ ೩ ॥

೧೧. ರಾಗ–ಮೋಹನಕಲ್ಯಾಣೀ (ಆದಿತಾಳ).

ಗುರುವೇ ಶ್ರೀವಸುಧೇಂದ್ರ ಕರಜಾತ ಸದ್ಗುಣಸಾಂದ್ರ ವರದೇಂದ್ರರಾಯ ಜಿತೇಂದ್ರ । ಮರುತಮತಾಬ್ಧಿಚಂದ್ರ ॥ ಶರಣು ನಿನ್ನಯಪದ ಸರಸಿಜಯುಗಗಳಿಗೆರವುಮಾಡದೆ ಕಾಯೊ, ಪರಮದಯಾಳು ॥ ಪ ॥ ದಾತಾ, ಧರಿತ್ರೀಸುತೀ ನಾಥಶ್ರೀರಘುಪತಿ–ದೂತ, ಭುವನದೋಳ್ ಖ್ಯಾತಿಯೋತವಸತ್ಕೀರುತಿ ॥ ಭೂತಭಯರೋಗವಾ ತರಿದಟ್ಟುವಾ । ನಾಥ ರಕ್ಷಕ ಜಲಜಾತಾಂಬಕನೇ ॥ ೧ ॥ ದೋಷರಹಿತಯನ್ನ ಕ್ಲೇಶಹಿಂಗಿಸೊ, ಸಂನ್ಯಾಸಶಿರೋಮಣಿಯೆ ಮುನ್ನಾ–ಆಶೆಬಿಡಿಸಿ, ನಿನ್ನ ॥ ದಾಸನೆನಿಸಿಕೊ ಉದಾಸೀಸದಲೆ ಬಹುಘಾಸಿಮಾಡದೆ ರವಿಭಾಸ ಗುಣಾಢ್ಯ ॥ ೨ ॥ ಏನಾದರೇನು, ಕೇಳು ಮಾನವರಾಶ್ರಯ–ಧರೆಯೊಳು । ನಾನಿಚ್ಛಿಸೆನೊ ಕೃಪಾಳು । ಮಾನ ನಿನ್ನದು ಕೇಳು ॥ ನೀನೆಗತಿಯೆಂದು ಧ್ಯಾನಮಾಡುವರಿಗೆ । ಪ್ರಾಣೇಶವಿಠಲನ ಕಾಣಿಸಿಕೊಡುವಿ ॥ ೩ ॥

೧೨ ರಾಗ–ಸುರಟ (ಅಟತಾಳ).

ಪಾಲಿಸೋ ಪಾಲಿಸೋ ॥ ಕರುಣಾಲಯ ವರದೇಂದ್ರ–ಮುನಿ, ಸುಖ ಸಾಂದ್ರ ॥ ಪಾಲಿಸೊ ॥ ಪ ॥ ಪುಣ್ಯಮಂದಿರವಾಸ–ಸನ್ನುತಜನಪಾಲ ॥ ಬನ್ನ ಪಡಿಸದಲೆ ಯನ್ನನುದ್ಧರಿಸೋ ॥ ೧ ॥ ದೀನಸುರದ್ರುಮ । ಹೀನ ಪಂಕಜ ಸೋಮ । ಮಾನಿಸುಜ್ಞಾನಿನಿನ್ನೇನು ಬಣ್ಣಿಪೆನೋ ॥ ೨ ॥ ತ್ರುಟ ಮಾತ್ರಬಿಡ ದಲೆ, ಘಟನೆಯಮಾಡಿಸೊ ॥ ಸಟೆಯಲ್ಲ ಪ್ರಾಣೇಶ । ವಿಟ್ಠಲನ ಸ್ಮರಣೆ ॥ ೩ ॥

೧೩. ರಾಗ–ಪಂತವರಾಳಿ (ಅಟತಾಳ).

ತುತಿಸಲಳವೇ ಶ್ರೀವರದೇಂದ್ರನಾ ಅಮಿತ ಮಹಿಮ । ಕ್ಷಿತಿಸುರಗುರು ಸುಗುಣಸಾಂದ್ರನ–ಮುನಿಪನ ॥ ಪ ॥ ಭಾಗವತರ ಪ್ರಿಯನೆನಿಪನ–ಪ್ರಣತ ಜನರ । ರೋಗಕಳೆದು ಸುಖವಕೊಡುವನ । ಕುಮತಗಳನು–ಬೇಗಗೆಲಿದು ಸುಮತಿಕೊಡುವನ ॥ ದಯಾಸಮುದ್ರ ಯೋಗಿವರ್ಯ ರವಿಪ್ರಕಾಶನಾ, ಅನಘನ ॥ ೧ ॥ ರಾಘವೇಂದ್ರರನುಗ್ರಹಪಾತ್ರನ–ವೈಷಿಕದ ಕುಭೋಗ ತೊರೆದ ನಿಷ್ಪ್ರಪಂಚನ । ದುರ್ಮತಿಗಳ–ಯೋಗಕೂಲಿಯದಿಪ್ಪಧೀರನ । ಭವ ಭಯವನು ॥ ನೀಗಿ ಹರಿಯ ಸದನನತೋರ್ಪನಾ ವರದನ ॥ ೨ ॥ ಕಲಿಮ ಲಾಪಹಾರಶಕ್ತನ–ಪ್ರಾಣೇಶವಿಠಲ–ನೊಲಿಸಿಕೊಂಡಮಿತ ಸಮರ್ಥನ ॥ ಮಾರುತಿಮತಜಲಧಿವೆರ್ಚ್ಚಿಸುತಿಹ ಚಂದ್ರನ । ಬೃಹತ್ಸ್ನತಟನೀ ನಿಲಯ ಶ್ರೀವಸುಧೇಂದ್ರ ಪುತ್ರನ–ವಿರಕ್ತನ ॥ ೩ ॥

೧೪. ರಾಗ–ಪೂರ್ವಿ (ಆದಿತಾಳ).

ಗುರುರಾಯಾ ಗುರುರಾಯಾ । ತರಣಿಪ್ರಕಾಶ ಯತಿಪ ವರದೇಂದ್ರ ॥ ಪ ॥ ಬೆಂದೆನೋ ಭವದೊಳು । ತಂದೆನೀ ಬಹು, ತ್ವರೆಯಿಂದ ಕರಪಿಡಿಯೊ ಮುಂದದಯಾಳೋ ॥ ೧ ॥ ಆರೆನು ಮನುಜರು ದೂರುವಮಾತನು । ಅರಿ ಗುಸಿರಲಿನಿವಾರಿಸೋಸ್ವಾಮಿ ॥ ೨ ॥ ನೀನೊಲಿಯಲು, ಭಯಕಾಣಿಸಿಕೊಂ ಬುದೆ ಹೀನ ಮತಟವಿಕೃಶಾನು ಮಹಾತ್ಮ ॥ ೩ ॥ ಮೇದಿನೀಪರು, ಬೆರ ಗಾದರು ದಾನಕೆ । ಮೋದಮುನಿಮತಮಹೋದಧಿಚಂದ್ರ ॥ ೪ ॥ ಕಾಷಾ ಯವಸನಿ ದೇಶಿಕವರಪ್ರಾ । ಣೇಶ ವಿಠಲನವರ ಸಲಹುವದೋ ॥ ೫ ॥

೧೫. ರಾಗ–ಭೈರವಿ (ಝಂಪೆತಾಳ).

ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥ ಪುಣ್ಯಾಲಯನಿಲಯಗೆ. ವಸುಧೇಂದ್ರ ಕುವರಗೆ । ಸನ್ನುತಜನಸುರತರು ರವಿತೇಜಗೆ ॥ ಪನ್ನಗ ಶಯನನ್ನ ಪದವನಜ ಭೃಂಗಗೆ, ಅನ್ಯಮತ ಜೀಮೂತಪವಮಾನಗೆ ॥ ಜಯಮಂಗಳಂ ॥ ೧ ॥ ಗುರುಮಧ್ವಮುನಿಮತ ಜಲಧಿ ಪೂರ್ಣಚಂದ್ರಮಗೆ. ಧರಣಿಸುರವಂದ್ಯನಿಗೆ ಸ್ವರ್ಣಾಭಗೆ । ದುರ್ಮತಿಯಕಳೆದು ಸುಜ್ಞಾನ ಪ್ರೇರಿಸುವರಿಗೆ । ಹರಿಯೇ ಪರನೆಂದು ಮೆರಸಿದ ಮುನಿಪಗೆ ॥ ೨ ॥ ಪ್ರಾಣೇಶ ವಿಠಲನ್ನ ತನ್ನನೆನೆವರ ಮನದಿ । ಕಾಣಿಸಿಕೊಡುವ ಕೃಪಾಸಾಗರನಿಗೆ । ಮಾನಾಂಕಜಿತಗೆ, ಅಗಣಿತ ಚರಿತೆ ತೋರ್ದವಂಗೆ । ಕ್ಷೋಣಿಯೊಳಗಪ್ರತಿವದಾನ್ಯಾರ್ಯಗೆ ॥ ಜಯಮಂಗಳಂ ॥ ೩ ॥

೧೬. ರಾಗ–ಭೈರವಿ (ಝಂಪೆತಾಳ).

ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥ ಭುವನೇಂದ್ರ ಗುರುಕರ ಕಮಲದಿಂದ ಪೂಜಿತಗೆ । ಅವನಿಯೊಳ್ಪೆಸರಾದ ವರದೇಂದ್ರಗೆ । ಹವರನ ಮತಿಯಕೊಟ್ಟು ಅಜ್ಞಾನಕಳವರಿಗೆ । ಶಿವನೇ ಪರನೆಂಬುವರ ಶಿಕ್ಷಿಪರಿಗೆ ॥ ಜಯ ॥ ೧ ॥ ವಸುಧೇಂದ್ರತೀರ್ಥರಾಯರ ಪುತ್ರರೆನಿಪರಿಗೆ ಬಿಸಜನಾಭನ ಚರಣ ಕಂಜಾಳಿಗೆ । ಝಷಕೇತುವಿನ ಮೇಳ ತುಚ್ಛಮಾಡಿದವರಿಗೆ । ಅಸದೃಶ ಮಹಿಮ ಪಿಂಗಳತೇಜಗೆ ॥ ಜಯಮಂಗಳಂ ॥ ೨ ॥ ಶಿವುದ ಅಂಧಕಕಂಟರಿಗೆ, ವರಗಳ ಕೊಡುವವಗೆ । ಭವಸಮುದ್ರವ ದಾಂಟಸುವ ಶಕ್ತಗೆ । ದಿವಿಜೇಶ ಪ್ರಾಣೇಶವಿಠಲನ್ನ ದಾಸನಿಗೆ । ಜವನಬಾಧೆಯ ಬಿಡಿಸಿ ಸಲಹುವವಗೇ ॥ ಜಯಮಂಗಳಂ ॥ ೩ ॥

(೬) ಶ್ರೀ ರಾಘವೇಂದ್ರರಾಯರ ಸ್ತುತಿ.

೧೭. ರಾಗ–ವರಾಳಿ (ಅಟತಾಳ).

ರಾಘವೇಂದ್ರ ನಿನ್ನ ಪಾದಸರಸಿಜಕೆ ಬಾಗುವೆ ಮನ್ಮನದರಿಕೆ ಪೂರೈಸೊ ॥ ರಾಘವೇಂದ್ರ ॥ ಪ ॥ ವಾಸುದೇವಾರ್ಚಕ ಭೂಸುರವಂದಿತ । ದೋ

ಷವ ಕಳೆವದು ದೇಶಿಕವರ್ಯ ॥ ೧ ॥ ವಿಷಯಂಗಳೆಲ್ಲ, ದ–ಹಿಸಿ ಯೋಗ ಮಾರ್ಗದಿಂ ॥ ವಸುದೇವಪುತ್ರನೊಲಿಸಿಕೊಂಡ ಶಕ್ತ ॥ ೨ ॥ ಭೂತಪ್ರೇತಗಳ ಬಲಾತುರದಲಿ ಕಳೆವಾ ತುಂಗಮುಹಿಮನೆ ಭೂತಲದೊಳಗೆ ॥ ೩ ॥ ಅಂಗಜ ಶರದೂರ ಮಂಗಳವಿಗ್ರಹ । ತುಂಗತೀರಾವಾಸ । ಪಿಂಗಳತೇಜ ॥ ೪ ॥ ದಂಡ ಕಾಷಾಯ ಕಮಂಡಲಧರ, ಪ್ರಚಂಡಮಹಾತ್ಮ ಸುಪಂಡಿತರೊಡೆಯ ॥ ೫ ॥ ಸಾರುವಶರಣರ, ಘೋರಿಸುತಿಪ್ಪ–ಸಂಸಾರಕಡಲಿಗೆ ಕರೀರ–ಸಂಭವನೇ ॥ ೬ ॥ ಮರೆಹೊಕ್ಕದಾಸರ ಮರಿಯಾದೆಸಲಹಯ್ಯ । ಪರಮುತವುರಗಕ್ಕೆ ಗರುಡನೆನಿಪನೆ ॥ ೭ ॥ ತಂದೆಪಾಲಿಸೊ ದಯಾಸಿಂಧು ಜಗದ್ಗುರು । ಮಂದ ಮತಿಗಳೆಂಬ ಇಂಧನಕ್ಕನಲ ॥ ೮ ॥ ವಟುವಪು ಪ್ರಾಣೇಶ ವಿಠಲನ ನಿಜದಾಸ । ಸಟೆಯಲ್ಲ ಸಂಸಾರ ಕಟಕಟ ಬಿಡಿಸೋ ॥ ೯ ॥

೧೮. ರಾಗ–ಕಾಂಬೋಧಿ (ಅಟ್ಟತಾಳ).

ಸುವ್ವಿ ಸುವ್ವಾಲೆ ॥ ಸುವ್ವೀಸಾಧ್ವಿಯರು, ರಾಘವೇಂದ್ರರ ಪಾಡಿ ॥ ಸುವ್ವಿಸುವ್ವಾಲೆ ॥ ಪ ॥ ಅಂದಿನಕಾಲದ ಮಧ್ವಶಾಸ್ತ್ರವ ಮನಕೆ ತಂದು । ಅಂದದಿ ಟಪ್ಪಣಿ ಮಾಡಿದ ದೇವರಾರು । ಸುವ್ವೀಸುವ್ವಾಲೆ ॥ ಅಂದು ವಾದಿಸುವ ಜನರನ್ನು ಬಾಯಿಮುಚ್ಚಿಸಿದ ಚಂದಿರವದನೆ ಈತನಮ್ಮ ಗುರುವು ॥ ಸುವ್ವೀಸುವ್ವಾಲೆ ॥ ೧ ॥ ಇವರ ಚರಿತೆಯನ್ನು । ತೋರಿದಷ್ಟು ತುತಿಸುವೆ । ಕಿವಿಗೊಟ್ಟು ಕೇಳುವದು ಬುಧಜನರು ॥ ಸುವ್ವಿ ॥ ಪವನಾಂಶರಿವರು ಕವಲಿಲ್ಲ ಖ್ಯಾತರಾಗಿ । ಅವನಿಯು ಸುರರಿಂದರ್ಚನೆಗೊಂಬುವರು ಸುವ್ವಿ ॥ ೨ ॥ ಅಷ್ಟಾಕ್ಷರಮಂತ್ರವನ್ನು ತಪ್ಪದಲೆ ನಿತ್ಯವಾಗಿ । ನಿಷ್ಠೆಯಿಂದ ಜಪಿಸಲು ಭೂತ ಭಯವು ॥ ಸುವ್ವಿ ॥ ಕುಷ್ಠರೋಗ ಕ್ಷಯ ಪಾಂಡುಜ್ವರ ಸನ್ನಿ ಮೊದಲಾದ ಅಷ್ಟುಪದ್ರವಾಕ್ಷಣ ಬಿಟ್ಟುಪೋಡುವವು ॥ ಸುವ್ವಿ ॥ ೩ ॥ ಮೃತ್ತಿಕನಾಲೆ ಅಂಗಾರ ದಿವ್ಯಮಂತ್ರಾಕ್ಷತೆಯು ॥ ಹತ್ತಿಲಿರಾಲು ಕ್ಲೇಶವ ಲೇಶಾ ಕಾಣರು ॥ ಸುವ್ವಿ ॥ ಎತ್ತಹೋದರು ಜನರಿಗೆ ಜಯಪ್ರದ ತೋರುವದು ತತ್ತಲಿಲ್ಲ, ಶತಸ್ಸಿದ್ಧ ಮತ್ತೇನುಕೇಳಿ ॥ ಸುವ್ವಿ ॥ ೪ ॥ ಪಂಡಿತರು ಮೊದಲಾಗಿ ಹಸ್ತಿ ಉಷ್ಟ್ರ ಕುದುರೆಯು ಹಿಂಡುಗಳು ತೃಷೆಯಿಂದ ಬಳಲುತಿರೆ

॥ ಸುಪ್ವಿ ॥ ದಂಡಜಗತಿಗೂರಿತೋಯು ತೆಗಿಸಿಯುವನೀ । ಮಂಡಲದೊಳಗೆ ಪೆಸರಾದರಿವರು ॥ ಸುಪ್ವಿ ॥ ೫ ॥ ಕಟ್ಟಲಿಯ ಭತ್ತದೊಳು ಭೂಪದಳಯುಕ್ತ ಬರಲಿಟ್ಟುಕೊಂಡು ಉಣಿಸಿ ಉತ್ತಮ ವರವ ॥ ಸುಪ್ವಿ ॥ ಕೊಟ್ಟುಕಳಿಸಿದ ಮೇಲೆ । ಆವು ಕೊಂಚಿಯಾಗಲಿಲ್ಲ । ಗಟ್ಟಸಂಕಲ್ಪರಿವರು । ಮುನಿಪರು ॥ ೬ ॥ ವಿಪ್ರರೆಲ್ಲರು ಹೇಳಿಸಿ ಕಟ್ಟಿಸಿದ ಸದನವ । ಥಟ್ಟನೆ ಕೆಡಿಸಿ ಭೂವಮೆಚ್ಚು ವಂದದಿ ॥ ನೆಪ್ಪು ಧರೆಗಾಗಲೆಂದು ಗುರುಸುಧೀಂದ್ರ ಕುಮಾರ । ಸರ್ವನ ತೋರಿಸಿ ಸುಪ್ರಖ್ಯಾತರಾದರು ॥ ಸುಪ್ವಿ ॥ ೭ ॥ ದ್ವಿಜರ ಸ್ತೋಮವು ಬಾಯಿ ಬಿಡುತಿರೆ ದಯದಿಂದ ॥ ನಿಜಕಾಷ್ಟವಿಳೆಗೆ ನಿಲ್ಲಿಸಿ ಮರವ ॥ ಸುಪ್ವಿ ॥ ಸೃಜಿಸಿ ಪಲ್ಲವ ಫಲಯುಕ್ತವಾಗಿ ತೋರಿಸಿದ ॥ ಭಜಿಸಿರಿವರನ್ನು ಮಕ್ಕಳುಬೇಡುವರು ॥ ಸುಪ್ವಿ ॥ ೮ ॥ ಮುತ್ತಿನಮಾಲಿಕೆ ನೃಪಭಕ್ತಿಯಿಂದ ಕೊಡಲಾಗಿ । ಸಪ್ತ ಜಿಹ್ವೆಗುಣಿಸಿದ ಸರ್ವರುನೋಡ ॥ ಸುಪ್ವಿ ॥ ಮತ್ತುಬೇಡಲು ಪಾವಕನಿಗೆ ಪ್ರಾರ್ಥನೆಯುಮಾಡಿ । ಮರ್ತ್ಯಪಗೆ ಇತ್ತರು ಮೊದಲಂತೆಯೆ ತಂದು ॥ ಸುಪ್ವಿ ॥ ೯ ॥ ಹಿಂದೆಮಾಡಿದ ದುಷ್ಕರ್ಮ ತೀರ ಬಂದದನು ನೋಡಿ । ಬಂದಾಕ್ಷಣದಲ್ಲಿ ಆವನ ವಿಚಾರಿಸಿ ॥ ಸುಪ್ವಿ ॥ ಇಂದಿರೇಶನ ಕಾರುಣ್ಯಬಲದಿಂದ ಜನನೋಡ ಸಂದೇಹವಿಲ್ಲದೆ ಸುಲೋಕವನಿತ್ತರು ॥ ಸುಪ್ವಿ ॥ ೧೦ ॥ ತುಂಗಾತೀರಮಂತ್ರಾ ಲಯದಲ್ಲಿ ಶ್ರಾವಣ ಬಹುಳ ಮಂಗಳ ಬಿದಿಗೆಯಲ್ಲಿ ನಿವಾಸರಾದರು ॥ ಸುಪ್ವಿ ॥ ಶೃಂಗರ ವೃಂದಾವನ, ದ್ವಾದಶನಾಮಶ್ರೀಮುದ್ರೆಯು ಕಂಗಳುಸಾಲವುನೋಡ ಹೊದ್ದ ಶಾಠಿಯ ॥ ಸುಪ್ವಿ ॥ ೧೧ ॥ ಅಂಧಕ ಬಧಿರ ಕುಂಟ ನಾನಾರೋಗಿಗಳು ಮತ್ತೆ, ಕಂದನರ್ಜ ಮೊದಲಾದವರಿಗೆ ಕಾಮ್ಯ ॥ ಸುಪ್ವಿ ॥ ತಂದುಕೊಡು ವರು ಬೇಗ ಇತರ ಸಂಶಯವಿಲ್ಲ । ಮಂದಭಾಗ್ಯರಿಗೆ ಇವರ ಸೇವೆದೊರೆ ಯದೊ ॥ ಸುಪ್ವಿ ॥ ೧೨ ॥ ಕೌತುಕವೇನೆನ್ನಲಿ ಮುಂಜಿ ವಿವಾಹ ಮಾಡಿಸು ವರು । ಚಾತುರ್ಮಾಸದೊಳಗೆಗೃಹಗಳಸ್ತವಾಗೆ ॥ ಸುಪ್ವಿ ॥ ಧಾತಾ, ಪಿತ ನಿಲಯ ವಿದೇನೋಯೆಂದು ತೋರುವದು ಪ್ರೀತಿಯುಳ್ಳಭಕ್ತರಿಗೆ, ಅಧಮರಿ ಗಲ್ಲ, ॥ ಸುಪ್ವಿ ॥ ೧೩ ॥ ಪಾಡ್ಯ, ಪೂರ್ವಾರಾಧನೆ ಆರಾಧನೆ ಉತ್ತರಾರಾಧ ನೆಗೆ, ಒಡ್ಡಿ ಬರುವದು ಎಂಟು ದಿಕ್ಕುಗಳಿಂದ ಜನವು ॥ ಸುಪ್ವಿ ॥ ಕಡ್ಡಿ ಹಿಡಿಯ ದಂಥ ಸಂದಣಿಯೊಳು ಸನ್ಮುಹೂರ್ತದಿ । ದೊಡ್ಡ ರಥವೇರಿ ಮಠವ ಸುತ್ತು

ವರು ॥ ಸುವ್ವಿ ॥ ೧೪ ॥ ಇಷ್ಟೇಯೆನ್ನಲು ವಶವಲ್ಲ ಮಹಿಮೆಗಳಿನ್ನೂವುಂಟು । ನಷ್ಟಮಾಡುವರು ದುರ್ಮತದಾರಿದ್ರ್ಯವ ॥ ಸುವ್ವಿ ॥ ಸೃಷ್ಟಿಗೊಡೆಯ ಪ್ರಾಣೇಶ ವಿಟ್ಠಲನೆಂದುಪೇಳ್ದರೂ ಎಷ್ಟು ವೇಳಿದರೂ ಯನ್ನಿಂದಲಿ ತೀರದು ॥ ಸುವ್ವಿ ಸುವ್ವಾಲೆ ॥ ೧೫ ॥

೧೯. ರಾಗ–ಭೈರವಿ (ಝಂಪೆತಾಳ).

ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥ ಯೋಗೀಂದ್ರತೀರ್ಥ ಕರ ರಾಜೀವ ಪೂಜಿತಗೆ । ಭಾಗವತ ಜನ ಪ್ರೀಯರೆನಿಸುವರಿಗೆ ॥ ಯೋಗಿ ಗಳಿಗಧಿಪತಿಸುಧೀಂದ್ರಕರಜಾತರಿಗೆ । ಬಾಗಿವಂದಿಪರ ಸಲಹುವ ಸ್ವಾಮಿಗೆ, ॥ ಜಯಮಂಗಳಂ ॥ ೧ ॥ ವರಹಜಾತೀರ ಮಂತ್ರಾಲಯನಿಕೇತನಗೆ । ಧರಣಿ ಯೊಳಗಪ್ರತಿಮ ಚರಿತರ್ತೋರ್ವನಗೆ । ಕುರುಡುಕಿವುಡಾದಿಗಳ ಬಯಕೆ ಪೂರೈಪರಿಗೆ ॥ ವರಸುವೃಂದಾವನದಿ ಶೋಭಿಪರಿಗೆ ॥ ೨ ॥ ಆರಾಧನೆಯ ಜನರು ಮಾಡುವದು ನೋಡಲ್ಕೆ ವಾರವಾರಕ್ಕಧಿಕವೆನಿಸುವರಿಗೆ ॥ ಮಾರ ಮಣ ಪ್ರಾಣೇಶವಿಠಲನಂಘ್ರಿಜಲಜಕೆ, ಆರುಪದವೆನಿಪಗೆ ಕರುಣಾಜಲಧಿಗೆ ಜಯ ॥ ೩ ॥

೨೦. ರಾಗ–ಭೈರವಿ (ಝಂಪೆತಾಳ).

ಶ್ರೀರಾಮ ಚಂದ್ರಾಂಘ್ರಿ ಸರಸೀರುಹ ಭೃಂಗನಿಗೆ । ಧೀರಸುಧೀಂದ್ರ ಕರಸಂಭೂತಗೆ ॥ ವಾರಾಹಿತೀರ ಮಂತ್ರಾಲಯನಿಕೇತನಿಗೆ । ಶ್ರೀರಾಘ ವೇಂದ್ರರಾಯರ ಚರಣಕೆ ॥ ೧ ॥ ಪರಮ ತಧ್ವಾಂತಭಾಸ್ಕರಗೆ ಸ್ವರ್ಣಾಭಗೆ । ಶರಣರಭಿಲಾಷೆ ಪೂರೈಸುವರಿಗೆ ॥ ದರುಶನಾದಿ ತ್ರಿಭಾಷದರ್ಥ ಬಲ್ಲವರಿಗೆ । ಮರುತ ಮತಕಡಲಿಗುಡುಪತಿಯೆನಿಪಗೆ ॥ ೨ ॥ ಪ್ರಾಣೇಶವಿಟ್ಠಲನವರೊಳು ಪ್ರೀತಿಯುಳ್ಳವಗೆ । ಕ್ಷೋಣಿಯೊಳು ಸರಿಯಿಲ್ಲದ ಮಹಿಮನಿಗೆ ॥ ಧ್ಯಾನಕ್ಕೆ ಬಂದೊದಗುತಿಪ್ಪ ಗುರುರಾಯರಿಗೆ । ಮೀನಾಂಕಜಿತಗೆ ದೇಶಿಕವರ್ಯಗೆ ॥ ೩ ॥ (ಜಯಮಂಗಳಂ ನಿತ್ಯ ಶುಭಮಂಗಳಂ).

(೭) ಸುಬೋಧೇಂದ್ರರ ಸ್ತುತಿ.

೨೧. ರಾಗ–ಪೂರ್ವಿ (ಏಕತಾಳ).

ಅಭಯವೀಗಲೆ ಬೇಡೆ ಗುರು ಸುಬೋಧೇಂದ್ರಾರ್ಯರ ನೋಡೆ ॥ ಸಖಿ ॥ ಪ॥ ಪಾಪ ಕಳೆವಳಾಕಾಶ ಗಂಗೆ । ಬಹು–ತಾಪ ಕಳೆವ ದ್ವಿಜನಾಥ । ಆಪಾದಪ ದೈನ್ಯ ಹರೀಸುಗುಣವು । ಈ ಪುರುಷರಿಗೊಪ್ಪುವದಲ್ಲೇ ಸಖಿ ॥ ೧ ॥ ಮೀನ ಕೂರ್ಮದ್ವಿಜ ನೋಡಿ ಸ್ಮರಿಸಿ ಮುಟ್ಟ । ಸೂನುಗಳನು ಸಲಹುವ ತೆರದಿ ॥ ಸುನೋಟದಿ ನೆನದು ಪಾದಸ್ಪರ್ಶವಿ । ತ್ರಾನತರನು ಪೊರೆವರು ಬಿಡದೆ । ಸಖಿ ॥ ೨ ॥ ಈ ಸಂಯಮಿಗಳ ಕೃಪೆಯೊಂದಿರುತಿರೆ । ಏಸು ಸಾಧನ ಇನ್ನೇತಕೆಲೆ ॥ ನಾಶ ರಹಿತ ವೈಕುಂಠವೇಸರಿ ಪ್ರಾಣೇಶ ವಿಠಲಸಿವರಲ್ಲಿಹದಕೆ ॥ ೩ ॥

೨೨. ರಾಗ–ಕಾಂಬೋಧಿ (ಏಕತಾಳ).

ಪಾಹಿಪಾಹಿ, ಜಿತಮಾರ । ಪಾಹಿಸುಬೋಧೇಂದ್ರ ಸಮೀರ ॥ ಮಹಾಮತಾಬ್ಧೀಂದು, ದೀನಾಮರ ಮಹೀಜ, ಸುಹಿತ, ಮಹಿತ ॥ ಪಾಹಿಮಾಂ ಪಾಹಿ ॥ ಪಲ್ಲ ॥ ನಿರ್ಮಲಾತ್ಮ ಸದ್ಗುರುಧೀರ ಕರ್ಮವಿಷಯಾಪೇಕ್ಷಾದೂರ । ಧರ್ಮಾಸಕ್ತ ಲೋಕೋದ್ಧಾರ । ಶರ್ಮಸುಶರ್ಮಾದಭರ್ಮಾಂಗ ಮರ್ಮಜ್ಞ । ಪಾಹಿ ॥ ೧ ॥ ಅರ್ಕಮಹಿಮನೆ ಧೀಮಂತ, ಅರ್ಕಜನೊಲಿದಾನೀಶಾಂತ ॥ ಮರ್ಕಟದುರ್ವಾದಿಧ್ವಾಂತ–ಅರ್ಕ, ಕುತರ್ಕಸಂಪರ್ಕಾಹ, ಅಕರ್ಾಭ ಪಾಹಿ ॥ ೨ ॥ ತೀರ್ಥಪಾಲಾ ಭಕ್ತಾಧೀನ ತೀರ್ಥಾಂಘ್ರಿ ಪ್ರಾಣೇಶ ವಿಠಲನ ॥ ತೀರ್ಥದೂತ ನೀನಿದ್ದಸ್ಥಾನ–ತೀರ್ಥವು ತೀರ್ಥವ, ತೀರ್ಥವ–ತೀರ್ಥಮಾಂ ಪಾಹಿ ॥ ೩ ॥

(೮) ವ್ಯಾಸರಾಯರ ಸ್ತುತಿ.

೨೩. ರಾಗ–ಕಲ್ಯಾಣಿ (ತ್ರಿಪುಡೆತಾಳ).

ವ್ಯಾಸರಾಯರ ಬೇಸರದೇನೆನದಾಸೆ ಪೂರ್ತಿಸಿಕೊಂಬೆನಾಂ ॥ ಪ ॥ ದಾಸರಾಯರಿಗಾಸು ಮಂತ್ರೋಪದೇಶ ಕರುಣದಿಮಾಡಿದ । ದೇಶದೊಳಗೆ ವಿಶೇಷ ಮೆರೆದು ಅಶೇಷಜನರುದ್ಧರಿಸಿದ ॥ ೧ ॥ ವಾಸುದೇವನ ದ್ವೇಷಿಗಳ

ಅನಾಯಾಸದಿಂ ನೀ ಕರಿಸಿದ ॥ ದಾಸವರ್ಗವ ಪೋಷಿಸಲುನಿ–ರ್ದೋಷ ಗ್ರಂಥವಿರಚಿಸಿದ ॥ ೨ ॥ ಭಾಸುರಚರಿತ ಭೇಶಭಾಸ ಸುಕಾಷಾಯಾಂಬರ ಧರಿಸಿದ ॥ ವೀಶವಾಹನ ಕ್ಲೇಶಹ ಪ್ರಾಣೇಶ ವಿಟ್ಠಲನೊಲಿಸಿದ ॥ ೩ ॥

---

(೯) ಯತಿವೃಂದಸ್ಮರಣೆ.

೨೪. ರಾಗ–ಕಾಂಬೋಧಿ (ಝಂಪೆತಾಳ).

ವಂದಿಸುವೆ ಗುರುಸಂತತಿಗೆ ಪ್ರತಿದಿನಾ–ನಂದತೀರ್ಥರ 'ಮತೋದ್ಧಾರರಿವರಹುದೆಂದು' (ಮತಾಂಬುಧಿಗೆವಿಧುಯೆಂದು) ॥ ಪ ॥ ಶ್ರೀಮದಕ್ಷೋಭ್ಯ ಮುನಿತ್ರೈಲೋಕ್ಯ ಭೂಷಣರ । ಧೀಮಂತಲೋಕವಂದಿತತೀರ್ಥರ ॥ ರಾಮು ಪದಜಲಜಾಳಿ ಸುಲಭ ರಘುಪುಂಗವರ । ಶ್ರೀಮಂತ ರಘುನಾಥ ರಘುವರ್ಯ ರಘುಸುತಗೆ ॥ ೧ ॥ ವಿದ್ಯಾನಿಧಿ ಮುನಿರಘುಪತಿಯ ನಾರಾಯಣರ ॥ ಮಧ್ವ ಭಕ್ತಾಗ್ರಣಿ ಮುಕುಂದ ತೀರ್ಥರ । ಅದ್ವೈತ ಗಿರಿ ಕುಲಿಶ, ರಾಮು ರಘುಪತಿತೀರ್ಥ, ಸದ್ವೈಷ್ಣವರಪಾಲ ರಾಮುಚಂದ್ರಾರ್ಯರಿಗೆ ॥ ೨ ॥ ಶ್ರೀರಘೂತ್ತಮುತೀರ್ಥ ರಘುರಾಜ ರಘುಪತಿಯ ಶ್ರೀರಾಮುಚಂದ್ರುತೀರ್ಥಾರ್ಯರ ಪದ । ವಾರಿಜಯುಗಳವ ಭಕ್ತಿಪೂರ್ವಕದಿ ಸ್ಮರಿಸುವೆನು ಮಾರಮಣ ಪ್ರಾಣೇಶ ವಿಠಲ ಕರುಣಿಸಲೆಂದು ॥ ೩ ॥

---

(೧೦) ಅಕ್ಷೋಭ್ಯತೀರ್ಥರ ಸ್ತುತಿ.

೨೫. ರಾಗ–ಶಂಕರಾಭರಣ (ಅಟ್ಟತಾಳ).

ರಕ್ಷಿಸೆನ್ನನು—ದಯಾಂಬುಧೇ–ರಕ್ಷಿಸೆನ್ನನು ॥ ಪ ॥ ರಕ್ಷಿಸೆನ್ನನು ಪಾಪ ಶಿಕ್ಷಿಸಿಕರುಣದಿ । ಪಕ್ಷಿವಾಹನಪ್ರಿಯ ಅಕ್ಷೋಭ್ಯಮುನಿಪ ॥ ಅನು ॥ ಅನುಮಾನವಿಲ್ಲದೆ ಮಣಿದೆತವಾಂಘ್ರಿಗೆ । ಅನಘ ಶ್ರೀಮಾಧವ, ಮುನಿಕರಜಾತ ॥ ೧ ॥ ಜಯಮುನಿವಂದಿತ ಜಯವಂತನೀನೆವೆ । ದಯಮಾಡದಿರೆ ದುಃಖ ಬಯಲಾಗಲರಿಯೆ ॥ ೨ ॥ ಪ್ರಾಣೇಶವಿಠಲನ ಧ್ಯಾನದೊಳಗೆ ಮನ ತಾನಿರುವಂದದಿ ಪೋಣಿಸು ಜವದಿ ॥ ೩ ॥

(೧೧) ಮಾಧವತೀರ್ಥರ ಸ್ತುತಿ.

೨೬. ರಾಗ–ಸೌರಾಷ್ಟ್ರ (ಏಕ).

ನೋಡಿದೆ । ನಾ ಧನ್ಯನಿಂದಿಗೆ ನೋಡಿದೆ ಗುರುಮಾಧವತೀರ್ಥರ ವೃಂದಾವನವನ್ನು ॥ ಪ ॥ ಗಂಗೆಗೇಸು ಪ್ರಯೋಜನವಿಳೆಯೊಳು ಬಾಹದಕೆ ॥ ಪಿಂಗಳಗೇನು ಜ್ಞಾನಿಗಳಿಗೇನು ॥ ತುಂಗಮಹಿಮೆಯಿಂದೆ ಅಜ್ಞಜನರ ಪಾಪ । ಹಿಂಗಿಸಬೇಕೆಂಬದಲ್ಲದೆ, ಮನವೆ ॥೧॥ ನರಹರಿಗುರುಸುತವರದ ಅಕ್ಷೋಭ್ಯ ಮುನಿಕರಪೂಜಿತಾರವಿಂದನಾಭರಲ್ಲಿ॥ ಧರಾಧರಜತೀರದಿ ಸತ್ಯಮುನಿಗಳಿಂದ । ನಿರುತಾರಾಧನೆಕೊಳುತಿರ್ಪರು ॥ ಮನವೆ ॥ ನಾ ಧನ್ಯ ॥ ೨ ॥ ಏನುಯಿವರ, ಬಂಣಿಸಲಿ ಎನ್ನಿಂದೊಶವಲ್ಲ । ಆನತಜನರಿಗೆ ಕರುಣಿಸಿ । ಪ್ರಾಣೇಶವಿಠಲನ ಧಾಮ ತೋರಿಸುವರು । ಕ್ಷೋಣಿಯೊಳಗಪ್ರತಿಮ ಮಹಿಮರು ॥ ೩ ॥

---

(೧೨) ಪದ್ಮನಾಭತೀರ್ಥರ ಸ್ತುತಿ.

೨೭. ರಾಗ–ವರಾಳಿ (ಅಟ್ಟತಾಳ).

ಒದಗಿಪಾಲಿಸೊ ಭವಾಂಬುಧಿಯ ದಾಟಸೊ ॥ ಪ ॥ ಮದನಜಿತಭೂಸುರ ಶರಣ್ಯ । ಪದುಮನಾಭ ಯತಿವರೇಣ್ಯ ॥ ಅನುಪಲ್ಲ ॥ ಸಧ್ಯದೊಡ್ಡ ಮಾತು ಅಪ್ರಬುದ್ಧನಾನುಡಿಯೆ ಕೇಳು । ಮಧ್ವದ್ವೇಷಿಗಳಲಿ ಯನ್ನ ವಿದ್ಯೆ ತೋರಿ ಬದುಕದಂತೆ ॥ ೧ ॥ ಒಡಲಿನಾಸೆಗಾಗಿ ಕಂಡಕಡೆಗೆ ತಿರುಗಿ ಪ್ರಾಪ್ತಿಯೆಂಬು । ದುಡುಗಿ ಪೋಗಿ ಕೊನೆಗೆ ಮನೆಗೆ । ಮಿಡುಕಿ ಕೊಳುತ ಬರುವ ಧಮನ ॥ ೨ ॥ ಹಾನಿಲಾಭಕ್ಲೇಶವೋದ । ವೇನು ಆವಕ್ಷಣಕೊದಗಲು ॥ ಪ್ರಾಣೇಶವಿಠಲಕರುಣೆಯಿಂದ । ತಾನೆಕೊಟ್ಟನೆಂಬ ಸುಮತಿ ॥ ಒದಗಿಪಾಲಿಸೋ ॥ ೩ ॥

---

(೧೩) ಶ್ರೀಮಧ್ವರಾಯರ ಸುವ್ವಾಲೆ.

೨೮. ಸುವ್ವೀಪದ.

ಸುವ್ವಾಲೆ ಸುವ್ವಿ ಸುವ್ವಾಲೆ ॥ ಪ ॥ ಗುರುಮಧ್ವರಾಯರ ಭಾಗ್ಯ । ಹರಮುಖ್ಯ ನಿರ್ಜರರಿಂದ, ವರ್ಣಿಸಲಸದಳವಮ್ಮ ॥ ಅನು ಪಲ್ಲವಿ ॥ ಇಂದಿರೆ

ಮೂರುರೂಪದಿಂದ ತಾನೆ ಪಡೆದಳು । ಎಂದು ಪೇಳುವದಾ ವೇದ । ಸುವ್ವಿ । ಮಂದಮತಿಗಳಿವರ ಮಂದಿಯಂತೆ ತಿಳಿದು ಅಂಧಃ ಕೂಪದೊಳು ಬೀಳುವರೆ ॥ ಸುವ್ವಿಸುವ್ವಾಲೆ ॥ ೧ ॥ ನೂರಾತೊಂಭತ್ತೆಂಟುಕಲ್ಪ ಘೋರ ತಾಪಸು ಮಾಡಿ ಮೂರುರೂಪವೀಗಾದನೆ ॥ ಸುವ್ವಿ ॥ ಮಾರೆ ಈಕಲ್ಪವನು, ವಾರಿಜಾಸನ ನಾಗಿ । ಈರೇಳು ಲೋಕವಾಳುವನೆ ॥ ಸುವ್ವಿ ॥ ೨ ॥ ಎಪ್ಪತ್ತೊಂದು ಮಹಾ ಯುಗಇಪ್ಪಒಬ್ಬೊಬ್ಬ ಮನು । ಅಪ್ಪಪ್ಪ ಬಹಳಾಯುಷೆಂಬೊರೊ ॥ ಸುಪ್ರಸಿದ್ಧ ವಾದ ದ್ವಿಸಪ್ತಮನುವು ಶೃತಸೋಮನಪ್ಪನಿಗೊಂದೇ ದಿವಸವೆ ॥ ೩ ॥ ಈ ರೀತಿ ನಾಮದಿಂದ ನೂರುವತ್ಸರಬಾಳಿ । ನಾರಾಯಣನಾ ಭಜಿಸುವ ॥ ಘೋರಪ್ರಳಯಕಾಲಕ್ಕು ಮಾರಮಣನದಯದಿಂದ ಬಾರದಜ್ಞಾನವೀತಂಗೆ॥ ಸು ॥ ೪ ॥ ಈತನಾಳಿಕೆಯೊಳು ಮೂತೊಂಭತ್ತು ಕಲ್ಪಕೆ ಭೂತನಾಥಗೆ ಅಪರೋಕ್ಷ ॥ ಆತನಾರಭ್ಯನಾರನಾಗಪರ್ಯಂತ ಪರೋಕ್ಷನೀತಕಲ್ಪಗಳಲ್ಲೆ ಹದೆ ॥ ಸು ॥ ೫ ॥ ಎಲ್ಲ ದೇವರು ನಿತ್ಯದಲ್ಲಿ ಬಂದು ಬಂದೀತನಲ್ಲಿ ಉಪದೇಶ ಕೊಂಡಾರೆ ॥ ಖುಲ್ಲ ಮಾಯಿನಮೂಹಗೆಲ್ದು ವೇದವ್ಯಾಸನಲ್ಲಿ ಅದ್ಯಾಪಿಯಿ ಹರೆ ॥ ಸು ॥ ೬ ॥ ಪಾಸೀಯ ಜಾಜಾಂಡದೊಳು ನಾನಾ ಜೀವರಿಗೆ ಚೇತನೀತ ನಿಂದಲೆಯೋ ॥ ಏನು ಪೇಳಲಮ್ಮಾ ಈ ಪ್ರಾಣಿಯೊಲಿದರೆ ಶ್ರೀಪ್ರಾಣೇಶ ವಿಠಲನೊಲಿದಂತೆ ॥ ಸುವ್ವಾಲೆ ॥

(೧೪) ಪಾರ್ವತೀದೇವಿ ಸ್ತುತಿ.

೨೯. ರಾಗ–ಶಂಕರಾಭರಣ (ಅಟ್ಟತಾಳ).

ಪಾರ್ವತೀ, ದಕ್ಷಕುಮಾರೀ–ನಿನ್ನ–ಸಾರ್ವೆ ಸಂತತಕುಜನಾರೀ ॥ ಆಹಾ ॥ ದೂರ್ವಾಸನಧಾರ್ಂಗಿ ಸರ್ವಜ್ಞೆಯನ್ನಯ ॥ ಚಾರ್ವಾಕಮತಿಕೀಳಿ ತೋರ್ವದು ಸುವಥವ ॥ ಪ ॥ ದುರ್ಗೆ ಭವಾನಿ ರುದ್ರಾಣಿ–ಗೌರಿ–ಸ್ವರ್ಗಜನಾ ರಾಧ್ಯಮಾನಿ ॥ ಸೇರೆ, ದುರ್ಗುಣದವರ ಸುಜ್ಞಾನಿ ॥ ಭಕ್ತವರ್ಗ ಪೋಷಕ ಶುಕವಾಣೀ ॥ ಆಹಾ ॥ ನಿರ್ಗುಣರಾದುತ್ತುಮರ್ಗೆವೊಲಿವ ಅಪವರ್ಗದ ನಾಳೆ ॥ ನರರ್ಗೆ ಮಣಿಸದಿರೆ ॥ ೧ ॥ ಚಂಡಿ ಕಾತ್ಯಾಯಿನಿ ಉಮ್ಮಾ, ನಾಲ್ಕು

ಮುಂಡೆಯುವನ ಸೊನೆಯುನ್ಮಾ ನಾಡೆ । ಕಂಡು ಭಜಿಪೆ ನಿತ್ಯನಿಮ್ಮ । ಪಾದ ಪುಂಡರೀಕದ್ವಯವನ್ಮು ॥ ಆಹಾ ॥ ಉಂಡುವಿಷವ ನಿನ್ನ ಗಂಡಬಳಲಿ ಕೈಕೊಂಡೌಷಧತಂಡತಂಡದಲೆನಗೀಯೆ ॥ ೨ ॥ ಪಾವಕನೊಳು ಪ್ರೊಕ್ಕ ಪತಿ ವ್ರತೆ ॥ ಯಾವಾಗನಮಾನಿಸತ್ಕಥೆಯಲ್ಲಿ ಭಾವನೆಕೊಡೆ ಪ್ರತಿಪ್ರತಿ–ಜಾವಜಾವಕೆ ಷಣ್ಮುಖ ಮಾತೆ ॥ ಆಹಾ ॥ ಕೋವಿದರೊಡತಿ ಕೇಳಾವಾಗ ವೈರಾಗ್ಯವೀ ವದು ದುರಾಪೇಕ್ಷೆ ನಾವೊಲ್ಲೆನಂದೆಂದೂ ॥ ೩ ॥ ಬೇಡಿದಭೀಷ್ಟವಕೊಡುವೆ । ದಯಮಾಡಿ ಭಕ್ತರ ಕರಪಿಡಿವೆ, ದೋಷಕಾಡುಳಿಯದಂತೆ ಸುಡುವೆ, ನಿನಗೀಡೆ ಮುಹದ್ಭಯ ಕಡಿವೆ ॥ ಆಹಾ ॥ ರೂಢೀಶ ಶಿವನೆಂದು ಆಡಿಸದಿರು ಬುದ್ಧಿಗೇಡಿ ದಾನವರಂತೆ ನೀಡು ಶ್ರೀಹರಿಸೇವೆ ॥ ೪ ॥ ಮೇಶ ಪ್ರಾಣೇಶವಿಠಲನೆ, ಜಗ ದೀಶನೆಂಬುವ ದಿವ್ಯಜ್ಞಾನೆ । ಕೊಟ್ಟು ಪೋಷಿಪುದನ್ನ ಸುಜಾಣೆ ॥ ನೀನು ದಾಸಿಸೆನಾನಾರ ಕಾಣೆ ॥ ಆಹಾ ॥ ಈಶ ಪಂಚಮುಹಾದೋಷಿ ಬಿಡದೆ ನಿತ್ಯಾ ಈ ಶರೀರದೊಳಿಹ್ಯ ಘಾಸಿ ಮಾಡುವನನ್ನು ॥ ೫ ॥

---

(೧೫) ರುದ್ರದೇವರ ಸ್ತುತಿ.

೩೦. ರಾಗ–ಕಾಂಬೋಧಿ (ಏಕತಾಳ).

ಬಾಣವದನ ಸಲಹೋ–ನಾನಮಿಸುವೆ । ಬಾಣವರದ ನಿನಗೆ ॥ ಹರ ಹರ ॥ ಪ ॥ ಕುಧ್ರೇಡ್ದ ಮುಖಕಂಜ–ರವಿ, ಅಘ–ಅದ್ರಿಸಮೂಹ ಋಷಿ ಜಾ ॥ ಹರಹರ ॥ ನಿದ್ರುರಹಿತವಿಧಜಾ । ಸತತ, ಅಭದ್ರು, ಭಕ್ತರಿಗೆ ಕುಜ ॥ ೧ ॥ ಗಜಋುಷಿ ಅಂಬಕನೆ (೧೫)–ಪಶುಪತಿ–ತ್ರಿಜಗದಿ ಪೂಜಿತನೆ ॥ ಹರಹರ ॥ ಅಜಿನಾಂಬರಧರನೇ ಕರುಣಿಸೊ-ವಿಜಯೇಕ್ಷಣ ಶಿವನೆ ॥ ಹರಹರ ॥ ೨ ॥ ಕಾಮಾದಿ ಮುಖಜನಕ । ಧೂರ್ಜಟಿ ಭೂಮಿಜವೈರಿ ಸಖಾ ॥ ಹರಹರ ॥ ಸಾಮಜರಿಪು, ಧನಿಕಮಿತ್ರನೆ, ಕಾಮಿತ ಫಲದಾ ಯಕ ॥ ೩ ॥ ಧರಣಿಜೆರಮಣ ನಾಮಾ । ಸರ್ವದಾ ಸ್ಮರಿಸುವೆ ನತಪ್ರೇಮಾ ॥ ಹರಹರ ॥ ಗರಳನಾಶನ ಭೀಮ । ವಿಕ್ರಮ ಸರೋಜಧ್ವಜವಿರಾಮ ॥ ಹರ ಹರ ॥ ೪ ॥ ಘನನಿಭಪ್ರಾಣೇಶ–ವಿಠ್ಠಲ–ನನುಗನೆನಿಪುದನಿಶ ॥ ಹರಹರ ॥ ಘನಮಹಿಮನೆ ಈಶ, ಕುಧರಸದನ ನಾಕಜಪೋಷ ॥ ಹರಹರ ॥ ೫ ॥

೩೧. ರಾಗ–ಸಾರಂಗ (ಅಟತಾಳ).

ಗಂಗಾಧರ, ಸುಮತಿಪಾಲಿಸೋ । ಪಾಂಡು । ರಂಗನ ಚರಣಾಬ್ಜ ಭಜನೆ ಮಾಡಲು ನಿತ್ಯ ॥ ಪ ॥ ವೈಕಾರಿಕಾದಿತ್ಯ ರೂಪ–ದನುಜರಿಗೆ ಶೋಕಕೊಡುವದು ನಿರಂತರದಿ ॥ ಲೌಕಿಕವೆಲ್ಲ ವೈದಿಕವಾಗಲೆನಗೆ ಪೈನಾ ಕೀಹೃತ್ಕಮಲ ಮಾರ್ತಾಂಡ, ಭಕ್ತವತ್ಸಲ ॥ ೧ ॥ ವಾಸವಾದ್ಯಮರ ವಂದಿತನೆ, ಪದ್ಮಜ ಸುತ–। ನೀ ಸಲಹುವದೋ ಕೈಲಾಸವಾಸ ॥ ಕ್ಲೇಶವೋದವು ಸಮತಿಳಿಸೋ ಅಶ್ವತ್ಥಾಮ । ದೋಷರಹಿತನೆ ದಕ್ಷಾಧ್ವರನಾಶಕ ॥ ೨ ॥ ಪವಮಾನತನಯ ನಿನ್ನವರಲ್ಲಿ, ಕೊಡು ಸ್ನೇಹ, ದಿಬ್‌ವಸನಾದಿಯಲ್ಲಿ-ಯನ್ನಿರವ ಬಲ್ಲಿ ॥ ಅವಲೋಕಿಸದೆಯನ್ನನೇಕ ಪಾಪಗಳನ್ನು । ತವಕ ಉದ್ಧರಿಸೋ ವಿಯತ್ಪತಿ ಜನಕನೆ ॥ ೩ ॥ ನಾಮಜಾಜನವಸ್ತ್ರ ಭಸ್ಮಭೂಷಿತದೇವ । ಸೋಮಶೇಖರನ ಬಿನ್ನಪವಕೇಳು ॥ ಪ್ರೇಮದಿಂದಲಿ ಭಾಗವತರಸಂಗತಿ ನಿತ್ಯ । ಶ್ರೀಮನೋರಮನ ಚರಿತಪಾಡಿಸುವದಯ್ಯ ॥ ೪ ॥ ಶ್ರೀಕಂಠ, ನೀವೇಳಿದನ್ಯಶಾಸ್ತ್ರಕೆ ಬುದ್ಧಿ ನೋಕದೆ, ಗುರುಮಧ್ವಮುನಿಮತವೇ ಬೇಕು, ಜನುಮ ಜನ್ಮಕ್ಕನಿಸೋ, ತ್ರಿಯಂಬಕ ನಾ ಕೈಯ್ಯಮುಗಿವೆ ಪ್ರಾಣೇಶ ವಿಠಲ ದಾಸ ॥ ೫ ॥

೩೨ ರಾಗ–ವರಾಳಿ (ಏಕತಾಳ).

ಪಾರ್ವತೀ ಪತಿಪಾಹಿ ॥ ಪಾರ್ವತೀಪತಿ ನೀನೊಲಿದು ಮನಸಿನೊಳು ತೋರ್ವದು ಕೇಶವನ ॥ ಹರಹರ ॥ ವಿಜಯುಸಿನ್ನೊಳಗಂದು–ವಿಜಯಿಸ ಲಸ್ತ್ರವ । ತ್ರಿಜಗವರಿಯೆಕೊಟ್ಟ ॥ ಮಜಭಾಪುರೆ ಅಂಬುಜಸುತನಂದನ–ಗಜ ಚರ್ಮಾಂಬರನೆ ॥ ೧ ॥ ಹರಹರ ॥ ಜಾತವೇದಸ, ಶಶಿತರಣಿನಯನ । ಮಾತರಿಶ್ವತನಯ ॥ ಭೂತಗಣಪ, ಗುಣವ್ರಾತ, ನಿನ್ನವರೊಳು । ಪ್ರೀತಿಯಿಂದಲೆ ಕೂಡಿಸು ॥ ಹರಹರ ॥ ೨ ॥ ಕ್ಷಿತಿಧರಶರ, ಮನ್ಮಥ ಪುರಹರಣ, ಪ್ರಮಥಾಧಿಪ, ಹರಿಣಾಂಕ ॥ ನತಿಸುವೆ ನಿನ್ನನು ಪ್ರತಿದಿನದಲಿ ಸನ್ಮತಿಕರುಣಿಸು ತ್ವರಿಯಾ ॥ ॥ ಹರಹರ ॥ ೩ ॥ ಸುರಸೇವಿತಪದ ಅರವಿಂದ ಅನಘ, ಮುರರಿಪು ಸಖ ಕಪರ್ದಿ ॥ ಚರಣವನಂಬಿದವರ ಭಯವಾರಿದ–ಮರುತಕುಶಂದನನೆ ॥ ಹರಹರ ॥ ೪ ॥ ಖಟವಪಾಣಿ ಖಳ ಆಟವಿವಹ್ನಿ ಧೂರ್ಜಟಿ ಹರ, ಪ್ರಾಣೇಶ–।

ವಿಠಲನ ಭಜನೆಯು ಘಟಕತಪ್ಪದಲೆ ಘಟನೆಮಾಡಿಸುವುದೋ ॥ ಹರ ಹರ ॥ ೫ ॥

೩೩ ರಾಗ-ರೇಗುಪ್ತಿ (ತ್ರಿಪುಡೆತಾಳ).

ಗಂಗಾಧರದೇವ-ಜಯಗೀಷವ್ಯಾನಂಗಾರಿ ಗಿರಿಜಾಧವ ॥ ಮಂಗಳ ಪ್ರದನೆ- ಅಮಂಗಳಶೀಲ ಭುಜಂಗರೂಪದಿ ಪಾಂಡು । ರಂಗಘಾಸಿಗೆ ಯಾದ ॥ ಪ ॥ ವೈಕಾರಿಕಾಹಂಕಾರ- ತತ್ವದೊಡೆಯ- ನಾಕುಮೊಗನ ಕುಮಾರ ॥ ಶ್ರೀಕಂಠ, ಸ್ಥಾಣು, ವಿಶ್ವೋಜನಕ, ಚಂದ್ರ । ಶೇಖರ, ಈಶ ಪಿನಾಕಿ ಭಕ್ತವತ್ಸಲ ॥ ಶೋಕನಾಶನ ಶಂಭು, ಪಶುಪತಿ । ಹೇಕರುಣಿ, ಸದ್ಗುಣ ಸುಖಾರ್ಣವ । ಪಾಕಶಾಸನ ಪ್ರಮುಖವಂದ್ಯ, ವಿಶೋಕ, ಯನ್ನಭಿ ಲಾಷೆ ಪೂರ್ತಿಸು ॥ ೧ ॥ ಪ್ರಾಣನಂದನ, ತೈಜಸಾಹಂಕಾರಾಭಿಮಾನಿ, ಶ್ರೀಶುಕ, ದೂರ್ವಾಸ ॥ ಕ್ಷೋಣಿಸಂಧೃತಧನ್ವಿ, ದಾನವಾಂತಕ, ಶೂಲಪಾಣಿ ಪ್ರಮಥಾಧಿಪ ಬಾಣವರದಯನ್ನ ॥ ಮಾನನಿನ್ನದು ಚಕ್ರಿಪದಕಂಜರೇಣು ತೋರಿಸು ತವಕದಿಂದಲಿ । ದ್ರೌಣಿ, ಶಿವ, ಪ್ರಣತಜನಸುಮನಸಧೇನು, ತವ ಪದನಾರ್ಪೆ ಸತತ ॥ ೨ ॥ ತಾಮಸಾಹಂಕಾರೇಶ, ಸಂಕರ್ಷಣನಾ ಮಗನೇ ಕೊಡುಲೇಸ, ರಾಮನಾಮ ಮಂತ್ರ-ಪ್ರೇಮದಿ ಜಪಿಸುವ । ಸ್ವಾಮಿ, ಅನಲ ವಹ್ನಿ ಸೋಮಲೋಚನ ಹರ ॥ ವಾಮದೇವ, ಕಪರ್ದಿ, ಭವಭಯಭೀಮ, ಶ್ರೀಪ್ರಾಣೇಶವಿಠಲನ ಪ್ರೇಮಪುಟ್ಟನೋ ರೌಪ್ಯಪರ್ವತಧಾಮ ಶ್ರೀವಿರೂ ಪಾಕ್ಷಗುರುವೇ ॥ ೩ ॥

೩೪. ರಾಗ-ಶಂಕರಾಭರಣ (ಅಟತಾಳ).

ಮಹಾದೇವ, ಶಿತಿಕಂಠ, ದಾಸ-ಕಲ್ಪಮಹೀಜ, ಬಿನ್ನಪಿಪೆ ನಿರ್ದೋಷ ॥ ಆಹಾ ॥ ಕುಪಕಾರಿ, ಹರಿಪಾದಮಹಿಮೆ ಕೊಂಡಾಡಿಸೋ । ಗಹನ ವಿಕ್ರಮ ಭೀಮ । ಮಹೀಧರವಜಾಧವ ॥ ಪ ॥ ಸ್ಫಟಕಾಭ, ಶ್ರೀಕಂಠ, ದಕ್ಷ-ಧ್ವಂಸಿ, ನಿಟಲಲೋಚನ ಸುರಪಕ್ಷ ॥ ಹೇ ಧೂರ್ಜಟಿ, ಹೀನ ವಿಷಯಾಖ್ಯ ಕಕ್ಷ-ವಹ್ನಿ, ಕುಟಿಲತ್ವ ಬಿಡಿಸತಿ ದಕ್ಷ ॥ ಆಹಾ ॥ ಕರಿಣಸಂಸಾರದಿ ತ್ರುಟಮಾತ್ರ ಸುಖಕಾಣೆ । ಪಟುರೂಪಿ ಭಕತರ ಕಟಕದೊಳಿರಿಸೆನ್ನ ॥ ಮಹಾ ॥ ೧ ॥

ಇಳಿರಥ, ನಗಶರ, ಸೋಮ-ವಮೌಳಿ, ನಳನಂದಿನಿಪಸುತ, ರಾಮ–ನಾಮಾ ನಲಿದುಪಾಡುವ ಗುಣಧಾಮ । ರೌಪ್ಯಾಚಲಾವಾಸಾನಂಗವಿ ರಾಮಾ ॥ ಆಹಾ ॥ ಹಲವರಾಶ್ರಯಿಸಿ ನಾ ಬಲು ನೊಂದೆನೋರ್ವರು ಕಾಯ್ವ ಸುಳಿವು ಕಾಣೆನೋ ಹೇ ಗರಳಕಂಠ ಪೊರೆಯೆನ್ನ ॥ ೨॥ ಪಂಚಸುಸ್ಮಿತಯುಕ್ತ ವದನಾ-ಸಿಸ್ತ್ರಪಂಚ ಗಜಾಸುರಹನನಾ । ಏಕಪಂಚಾಸ್ಯಜನಕ, ಕೇಶವನಾ । ಪ್ರೀತಿ-ಮಂಚನೀನಾಹೆ ಖಳರನಾ ॥ ಆಹಾ ॥ ಹಿಂಚಾಗಿ ಅಳಿವಂಥ ಹಂಚಿಕೆ ಯಲಿ ವರ ಮುಂಚೆ ಕರೆದುಕೊಟ್ಟು ವಂಚಿಪೆ ಅತ್ರಿಜ ॥ ೩ ॥ ಅಹಂಕಾರಾ ಧೀಶ ನಭೇಶ–ತಾತ, ಮಹಾಮುನಿವಂದ್ಯಾಮರಾಸ್ಯ, ಚಂದ್ರ– । ದಿನಪತೀ ಕ್ಷಣನ ಅಶೇಷಾ ವೋದ–ಬಹುವೋದಸಕ್ತಾಯನ್ನಾಶಾ-ಆಹಾ ॥ ದಹಿಸೊ ಜರರ ಪೋಷ ನಹುಸಿ ಬೆಂಡಾದೆನೊ । ಅಹಿಮಲಾಂಧಕಾಸುರ । ಗುಹಹ ಅಶ್ವ ತ್ಥಾಮ ॥ ೪ ॥ ಶಕ್ರಾನರಜ ಶ್ರೀಪ್ರಾಣೇಶ-ವಿಠಲ, ನಕ್ರಾಹನಂಘ್ರಿಯನಿಶ ದಲ್ಲಿ, ವಕ್ರವಿಲ್ಲದೆ ಸೇವಿಪೀಶ । ಹೇ ತ್ರಿವಿಕ್ರಮ ಶರ ವ್ಯೋಮಕೇಶ, ॥ ಆಹಾ ॥ ಶುಕ್ರಪೂಜಿತಪಾದ ಅಕ್ರೂರ ಯನ್ನೊಳಿದ್ದ ಕ್ರಮಪೇಣಿಸದೆ । ಸುಕೃತವೊದಗಿಸೊ ॥ ೫ ॥

೩೫. ರಾಗ–ಸೌರಾಷ್ಟ್ರ (ಝಂಪೆತಾಳ).

ಎಷ್ಟೊ ಹರಿ ಮರುತರ ಕೃಪಿಸಿನ್ನಲ್ಲಿ । ಕಟ್ಟು ದೇ ಭೂಷಣವಾಗಿಹುದೊ ಪಾರ್ವತೀರಮಣ ॥ ಪ ॥ ವಿಷವನ್ನ ಭೋಜನವಮಾಡಿ ಜೀರ್ಣಿಸಿಕೊಂಡಿ । ವಸನಬಟ್ಟುಜಿನಸ್ಥಿ ಭಸ್ಮ ಧರಿಸಿ । ವೃಷಭವಾಹನನಾಗಿ ಭೂತ ಪ್ರೇತ ಗಳೊಳು ಸ್ಮರಿಸದ ಭೂಮಿಯೊಳಿರಲು ಪೂಜಿಪರು ಸುರರೆಲ್ಲ ॥ ೧ ॥ ತಂದೆತಲೆಕಡಿದವಡಕ ಕುಂದು ಪೊಂದದಲಿದ್ದೆ, ನಿಂದಿತನ ಶಿರದಮೇಲಿರಿಸಿ ಯಿದ್ದೆ । ಒಂದೊಂದೆ ನೀನೆ ಪರದೈವ ಎಂದು ಪೇಳ್ದೆ ಗೋವಿಂದನಿಂದರ್ಚನೆಯ ಕೊಂಡ ಭಳಿಭಳಿರೆ–ಶಿವ ॥ ಎಷ್ಟು ॥ ೨ ॥ ಗುರುವೆನಿಸಿಕೊಂಬೆ ಪ್ರಾಣೇಶ ವಿಠಲನೊಳು ಮತ್ಸರಿಸುತಿಹ ಖಳರಿಗೆ, ಇದಲ್ಪವೇನೊ ॥ ಸರಿವಬ್ಬರಿಗೆ ಆಹೆ ನಂಬುವನು ಕೆಡುವ ನೀ । ಉರುಗನಂತಾಗಬೇಕೆಂದಾಗಿ ಮೆರೆದೆಲವೊ ॥ ೩ ॥

(೧೬) ಹರಿಹರನ ಪರವಾಗಿ.

೩೬. ರಾಗ–ಸಾವೇರಿ (ಅಟತಾಳ).

ಇಂದು ನೋಡಿದೆ ಹರಿಹರನ-ದೈತ್ಯವೃಂದಕಪ್ರಿಯುನ ವರವ ಕೊಡುವನಾ ॥ ಪ ॥ ಶಾಮವರ್ಣನ–ವಿಷಹರನ, । ಪೂರ್ಣಕಾಮುನ–ಶಿವನ, ಕೇಶವನ,–ಶಂಕರನ ॥ ಕಾಮಿನಿಯುರ ಮೋಹಿಸಿದನ । ಚಂದ್ರ-ವ್ಯೋಮನದಿಯು ಮಸ್ತಕದೊಳೂಪ್ಪುವನ ॥ ೧ ॥ ಕರಿಬಾಧೆಯುನು ಕಳೆದವನ-ಭಸ್ಮಧರನ ಪೀತಾಂಬರನಿಭ ಚರ್ಮಾಂಬರನ ॥ ಅರಿಧರನ–ಶೂಲಕರನ । ಲಕ್ಷ್ಮೀವರನ-ಗೌರಿಪನ, ರಕ್ಷಕನ–ಶಿಕ್ಷಕನ ॥ ೨ ॥ ಸ್ವಾಮಿಪ್ರಾಣೇಶವಿಟ್ಠಲನ, ರಾಮನಾಮವೇ ತಾರಕವೆಂದು ಪೇಳುವನ ॥ ಶ್ರೀಮಧ್ವಮುನಿಗೊಲಿದವನ-ಪಾರ್ಥಪ್ರೇಮಕೆ ಮೆಚ್ಚಿ ಬಾಣವನು ಕೊಟ್ಟವನ ॥ ೩ ॥

---

(೧೭) ಭಾರತೀದೇವಿ ಸ್ತುತಿ.

೩೭. ರಾಗ–ನಾಟಿ (ಝಂಪೆತಾಳ).

ಶರಣು ಭಾರತೀತಾಯೆ । ಕರವ ಬಿಡದಲೆ ಕಾಯೆ ॥ ಮರುತ ದೇವನರಮಣಿ– ಸುರನದಿಸುಭಗಿನಿ । ಪ ॥ ಪ್ರದ್ಯುಮ್ನದೇವಸುತೆ । ರುದ್ರಾದಿಸುರವಿನುತೆ । ಭದ್ರವಿಗ್ರಹೆ ದಯಾಸಮುದ್ರೆ, ಕುಲಿಶೆ– ಅದ್ರಿಯೋಪಮದೋಷಕಿದ್ದ ದುರ್ಮತಿ ಕ್ಲೇಶ । ವೊದ್ದು, ನಿನ್ನವನೆನ್ನು–ಬುದ್ಧಿಕೊಡು ಇನ್ನೂ ॥ ೧ ॥ ನೀರಜಾಂಬಕೆಯುನೆಗೆ–ತೋರು ಸಾಧನ, ಕುನಗೆ । ಜಾರಿಸು, ಭಕುತಿಯನ್ನು–ತೋರು, ಕರುಣಾ । ವಾರಿಧಿ ಹರಿಯುಪಾದ ಆರಾಧಿಸಲು ಮೋದ, ವಾರವಾರಕೆ ಈಯೋ–ವಾರಣಗಮನೆಯೇ ॥ ೨ ॥ ಪ್ರಾಣೇಶ ವಿಠಲನ । ಧ್ಯಾನದೊಳಗಿರಿಸು ಮನ । ವಾಣೀವದನ್ವೆದುವಳೇ । ಮಾನ ನಿನ್ನದೆಲೆ ॥ ಹೀನವಿಷಯುಗಳೊಲ್ಲೆ–ನೀನೇ ಸ್ವಾಂತದಿ ನಿಲ್ಲೆ । ಕ್ಷೋಣಿ ಯೊಳಗತಿಮಾನೀ–ಜ್ಞಾನೀ ಅಹಿವೇಣೀ ॥ ೩ ॥

೩೮. ರಾಗ– ಭೈರವಿ (ತ್ರಿಪುಡೆತಾಳ).

ಶರಣು ಶ್ರೀ ಮಾರುತನ ರಾಣಿಯೆ । ಶರಣು ಮಂಗಳ ಶ್ರೋಣಿಯೇ । ಶರಣುಸ್ಮಿತಮುಖ ಉರಗವೇಣಿಯೆ । ಶರಣು ಸರಸಿಜಪಾಣಿಯೇ ॥ ಶರಣು ಶರಣು ॥ ಪ ॥ ಇಂದ್ರುಸೇನೆ ಪುರಂದರಾರ್ಚಿತೆ । ಇಂದಿರಾಪತಿ ಕೃಷ್ಣನಾ ॥ ನಂದದಲಿಸೇವಿಸುವ ಭಕುತಿಯು ಇಂದುಧರನಿಗೆ ಕೊಡುವಳೇ ॥ ೧ ॥ ಗರುಡನುತಪದಸರಸೀರುಹೆ ವೃಕೋ । ದರನ ಪ್ರೀತಿಗೆ ಯೋಗ್ಯಳೇ ॥ ತರುಣೀಶಿರೋಮಣಿ ದುರ್ಮತಿಯುಕಳೆದು । ಕರುಣದಲಿ ಕರಪಿಡಿವುದೇ ॥ ೨ ॥ ವಿದ್ಯುನ್ನಾಮಕೆ ಧಾತಜಾತಳೆ । ಶ್ರದ್ಧೆದಾತೆ ನಿರಂತರ ॥ ತಿದ್ದಿಯನ್ನ ವಕ್ರಮತಿಯು ದ್ರುಹಿಣ ವಿದ್ಯೆ ಪಾಲಿಸಭಾರತೀ ॥ ೩ ॥ ಕಾಳೀ ದ್ರೌಪದಿ ಸ್ಥಾಣುಕನ್ಯಾ–ಶೈಲಜಾದಿ ನಮುಸ್ಕೃತೇ ॥ ಕಾಲಿಗೆರಗುವೆ ಯನ್ನ ಬಿನ್ನಪ । ಕೇಳಿ ಜ್ಞಾನವಪ್ರೇರಿಸೇ ॥ ೪ ॥ ಗಜಗಮನೆ ನಳನಂದಿನಿ ಅನಘೆ–ಸುಜನ ಹೃದಯ ನಿಕೇತನೆ ॥ ತ್ರಿಜಗವತಿಪ್ರಾಣೇಶವಿಠಲನ ಭಜನೆಯೊಳು ಮನನಿಲ್ಲಿಸೇ ॥ ೫ ॥

೩೯. ರಾಗ–ರೇಗುಪ್ತಿ (ತ್ರಿಪುಡೆತಾಳ).

ಕಾಳೀ ದ್ರೌಪದಿ ಭಾರತೀ–ನಿನ್ನ ಪಾದಕೆ ಲಾಲಾಜನುತಿಪೆ ಪ್ರತಿ ॥ ವೇಳೆಯೊಳಗೂ ಲಕ್ಷ್ಮೀಲೋಲನ ಚರಣಾಬ್ಜಪಾಲಗಪೀಯೇ ಸುತೀಲೆ ಸ್ವಯಂಭುಜೆ ॥ ಪ ॥ ಇಂದ್ರುಸೇನಾ ನಳನಂದಿನಿ, ಶಿವಕನ್ಯಾ, ನಂದಪೂರಿತಳೆ, ಚಂದ್ರ ॥ ನಿಂದಾಕರಿ, ಪುಜ್ಞಾನ । ಸಾಂದ್ರೆ, ಸುಪತಿವ್ರತೆ, ಕಂದುಗೊರಳ ಪಾರುಣೀಂದ್ರ ಅಂಡಜಾಧಿಪ–॥ ಇಂದ್ರನಿರ್ಜರವೃಂದ ಮುನಿಗಣ ವಂದಿತ ಪದಾರವಿಂದೆ, ಭವದಲಿ । ನೊಂದೆ, ಭಯುಪಾರೆಂದು (ನಿನ್ನೊಡಿಪೆಂದ ದಲಿ ನಿನ್ನಡಿ ಪೊಂದಿಬೇಡುವೆ ನಂದದಲಿ) ಕೊಡೆ (ಅ) ಮಂದಕರುಣೆ ॥ ೧ ॥ ತರುಣಿಯಾನಂತ ಭಾಸೆ । ಪ್ರದ್ಯುಮ್ನ ದೇವರಸುತೆ ಕ್ಲೇಶಹರಿಸೆ ॥ ಹರಹಿ ಯೆನ್ನಯ ಮೇಲೆ ಕರುಣಾಪಾಂಗದ ದೃಷ್ಟಿ । ದುರುಳಮತಿಯು ಪರಿಹರಿಸಿ ತವಕ ಹರಿ ॥ ಗರಗೊ ಮನಕೊಡು । ಪರಮಧಾರ್ಮಿಕ ಕರೆಪಬಂದೀ, ಗಿರಿಹೃದಾಬ್ಜದಿ । ಉರುಪರಾಕ್ರಮೆ ಪರತರಳೆ ಸದಾಪೊರೆಯೆ ಬಿಡದಲೆ ಕರವಮುಗಿಪೆ ॥ ೨ ॥ ಪಾಣೀ ಸುಂದರಿ, ವರದೆ, ಸಾಧ್ವೀ ವೀಣಾಪಾಣಿ

ಪೇಳುವೆನೆ, ಇದೇ, ॥ ಹೀನವಿಷಯವಲ್ಲಿ? । ಪೋಣಿಸಿಸುಮತಿ ಶ್ರೀ ಪ್ರಾಣೇಶ ವಿಠಲನ । ಧ್ಯಾನದೊಳಿಹ ಮಹಾನುಭಾವರ ಸಂಗಪಾಲಿಸೇ ॥ ಮಾನಿನೀಕುಲಮೌಳಿಮಣಿ ಚಂದ್ರಾನನೆ ಮದಗಜಗಮನೆ ಸುಶ್ರೋಣಿ ಅಷ್ಟಾ ಪದ ಸುಕಾಂತೆ ॥ ಕಾಳೀ ॥ ೩ ॥

೪೦ ರಾಗ–ನಾಟಿ (ಝಂಪೆತಾಳ).

ಕಾಯೆ ಭಾರತೀ ನಿನ್ನ-ಆರಾಧಿಸುವೆಯನ್ನ— ಮಾಯಾಮಂದಿರಸವರ ಕಿಂಕರನುಯನಿನೇ ॥ ಪ ॥ ಯೋಮುಜರಮಣಿ, ನಳಿನಭವಜಾತೆ ಕೃತಿ ಪುತ್ರಿ । ನಾಮಜಗಮನೆ ಉರಗವೇಣಿ ಕಾಳೀ । ಸೋಮಮುಖಿ, ಬೇರೊರಸಿ ಯನ್ನ ದುರ್ಮತಿಯಳಿದು ರಾಮಧ್ಯಾನದಲಿ ಮನಸಿಲ್ಲಿಸುವದನಿಶ ॥ ೧ ॥ ಲೋಕನಾಯಿಕೆ, ಶೈಲಜಾಪತಿ ಸುಖ ಪೂಜಿತಳೆ ನೀಕರುಣದಲಿ ನೋಡಿ ಕರವಪಿಡಿಯೋ ॥ ಕಾಕುಮನುಜರ ಸಂಗವನು ಕೊಡದೆಯೊಂದಿನಕು ಲೌಕಿಕವ ಸಂಪಾದಿಸಿಸಬೇಡವಮ್ಮ ॥ ೨ ॥ ಕೃಷ್ಣೆ, ನಳಸಂದಿನಿ, ದ್ರುಪದ ತನುಜೆ, ಶಿವಕನ್ಯೆ, ದುಷ್ಟಜನಗಿರಿಕುಲಿಶೆ, ಸ್ವರ್ಣಗಾತ್ರೆ ॥ ಕೊಟ್ಟ ಮಾತಿಗೆ ತಪ್ಪದಲೆ ಕಾಯ್ವ ಪ್ರಾಣೇಶವಿಟ್ಠಲನ ಚರಣಯುಗ ಸರಸೀರುಹ ಭೃಂಗೆ ॥ ೩ ॥

೪೧. ರಾಗ-ಕೇದಾರಗೌಳ (ಝಂಪೆತಾಳ).

ಏನು ಮರುಳಾದೆವ್ವ ಎಲೆ ಭಾರತಿ । ನೀನರಿಯೆ ಪವನಸಿಂಧವನೆಂಬುದು ॥ ಪ ॥ ಕಲ್ಲು ಹೊರುವನು ಮತ್ತೆ ಯಾರಿಂದಲಾಗದವು । ಎಲ್ಲರಂತಲ್ಲ ಕಪಿರೂಪ ನೋಡು ॥ ಖುಲ್ಲ ಫಲಪುಷ್ಪಯುಕ್ತ ವನವನು ಕೆಡಿಸಿದನು । ಎಲ್ಲಿಂದ ವದಗಿದನೊ ಈ ಪತಿಯು ನಿನಗೆ ॥ ೧ ॥ ರಕುತವಂ ಪಾನಮಾಡಿದನಂತೆ ಕೇಳಿದೆಯಾ । ರಕ್ಕಸೊಬ್ಬಳು ನಿನಗೆ ಸಂವತಿ, ಇಹಳೂ । ಮಕ್ಕಮಾರೀ ಮಗನುಂಟು, ಗಂಡನು ಓದನಕ್ಕೆ ಗತಿಯಿಲ್ಲದಲೆ ಭಿಕ್ಷಬೇಡುವನು ॥ ೨ ॥ ಹುಟ್ಟು ಬಡವನ ತಾನಾದರೇನಾಗಲಿ ನಿನ್ನ । ಬಿಟ್ಟು ತುರ್ಯಾಶ್ರಮವ ಧರಿಸಿಕೊಂಡು ॥ ದೃಷ್ಟಿಗೋಚರನಾಗದೆ ನರರಿಗೆ ಪ್ರಾಣೇಶವಿಠಲನ ಬಳಿಯಲ್ಲಿ ಬದರಿಯೊಳು ಸೇರಿಹನು ॥ ೩ ॥

೪೨ ರಾಗ-ಶಂಕರಾಭರಣ (ಅಟತಾಳ).

ದ್ರೌಪದಿ ಕೃಷ್ಣಾ ಪಾಂಚಾಲಿ । ದೇವಿ । ಗೋಪತಿಧ್ವಜವಂದ್ಯೆ ಕಾಳಿ । ಆಹಾ । ಪಾಪಗಳೆಣಿಸದಲೇ ಪುನೀತನಮಾಡೆ ಶ್ರೀಪವನನ ಕರುಣಾಪಾತ್ರೆ ಸುಚರಿತ್ರೆ ॥ ಪ ॥ ವಾಣೀ ಭಕ್ತಿಗೆ ಅಭಿಮಾನಿ । ತಾಯಿ । ನೀನೇ ಗತಿ ಯೆಲೆ ಸುಶ್ರೋಣಿ । ಶ್ರೀಶಧ್ಯಾನವ ಮಾಡಲು ಮನವೋಣಿಸುವದೇನ ನೊಲ್ಲೆನು ಪೂರ್ಣ ಜ್ಞಾನಿ ॥ ಆಹಾ ॥ ದೀನರಕ್ಷಕೆ ಮಿಕ್ಕ ಹೀನ ದೇವರ ಪಾದಕ್ಕೆ ನಮಿಸುವ ಮತಿಯನೆಂದು ಕೊಡದಿರೆ । ೧ ॥ ಶಾರದೆ ಹರಿಯ ಕುಮಾರಿ-ನಿನ್ನ-ಸಾರಿದೆ ಕುಜನ ಕುಠಾರಿ । ದಯಾವಾರಿಧೆ ಸುಜನೋಪ ಕಾರಿ। ತೋರೆ। ಸಾರೆಗರೆದು ಮುಕ್ತಿದಾರಿ॥ ಆಹಾ॥ ಶ್ರೀರಮಣ್ಯಾಳಿದೆಲ್ಲ ನಾರೀ ಶಿರೋಮಣಿ ॥ ಅರಾಧಿಸುವೆಯನ್ನ ದೂರನೋಡಲು ಬೇಡ ॥ ೨ ॥ ಹಲ ವರಿಗೆಲ್ಲ ಬಾಯ್ದೆರೆದು-ಬೇಡಿಕೊಳುವದೇನವೆ ದಿನ ಬರಿದು। ಸಾಧು ನೆಲೆಯು ದೋರರು ಪಶ್ಚಾತ್ತಾಗರೆದು । ಬುದ್ಧಿ-ಕಲಿಸೆ ಭಾರತಿಯನ್ನ । ಮರೆದು॥ ಆಹಾ॥ ಇಳೆಯೊಳು ಶ್ರಮ ಪಡಿಸಲು ಸಲ್ಲ, ದಿತಿಜರ ನಳಿದ ಪ್ರಾಣೇಶ ವಿಠಲ ಗಚ್ಚಿನ್ನ ಭಕ್ತಳೆ ॥ ೩ ॥

(೧೮) ಸರಸ್ವತೀ ಸ್ತುತಿ.

೪೩. ರಾಗ-ನಾಟ (ಝಂಪೆತಾಳ).

ಪಾಹಿ ಸರಸ್ವತಿ ಸುಗಾಯಿತ್ರಿ ಶ್ರೀಸಾವಿತ್ರಿ । ಮಹಾದುರಿತಾದ್ರಿಪವಿ ದೀನಸುರಧರಿಜೆ ॥ ಪ ॥ ಶಿಷ್ಟಜನರ ಪಾಲಿಪಳೆ । ದುಷ್ಟ ಜನ ದೂರಳೆ ಸೃಷ್ಟಿಪತಿ ಸೇವೆಯೊಳಗಿಟ್ಟು ದುರುಳ ಬಟ್ಟೆ ಹಿಡಿಸದಲೆ ದಯವಿಟ್ಟು ಪಿಡಿವದು ಕೃಯು, ಕಷ್ಟ ನಾಶನ ಮಾಡೆ, ಕೊಟ್ಟು ಸುಖ, ಪೂಜ್ಯೆ ॥ ೧ ॥ ಮದನ ಸತಿಕೋಟಲಾವಣ್ಯೆ। ಗುಣಸಂಪನ್ನೆ । ಸುದತೀವೃಂದಶಿರೋಮಣಿ ಕರುಣಾ ರ್ಣವೆ ॥ ಮಧುಜಿತ್ಪ್ರಿಯನ ರಾಣಿ ವಾಣೀ ವೀಣಾಪಾಣಿ । ಹೃದಯದೊಳು ಕಮಲನಾಭನ ನಿರುತ ತೋರೇ ॥ ೨ ॥ ಈಶಾದಿಸುಮನಸಾರ್ಚಿತಪಾದ ಸರಸೀರುಹೆ । ಲೇಶತರಾನಂದೆ ಸುಗುಣೆ, ಶ್ರೀಪ್ರಾಣೇಶವಿಟ್ಠಲನ ಕೊಂಡಾ ಡುವರೊಳಗೆ ಸ್ನೇಹ । ಹ್ರಾಸವಾಗದೆಯೀಯೆ । ಇಭರಾಜಗಮನೆ ॥ ೩ ॥

(೧೯) ವಾಯುದೇವರ ಸ್ತುತಿ.

೪೪. ರಾಗ–ಸಾರಂಗ (ತ್ರಿಪುಡೆತಾಳ).

ನಮೋ ನಮೋ ಗುರುವಾತ । ನಿನ್ನ ಚರಣಯುಗಳಕೆ ಕಮಲನೇತ್ರನ ದೂತ ॥ ನೆರೆನಂಬಿದಜನರ ಶ್ರಮವನೀಗುವ ದಾತ । ಮೂಜಗದಿ ನಿನ್ನ ಮಹಿಮೆಯ ಬಲ್ಲರೋ ಖ್ಯಾತ ॥ ಶ್ರೀಕಾಳೀನಾಥ । ತಿಮಿರರಿಪು ನಿಭ । ಅಮರವಂದಿತ, ಡಮರುಧರಪಿತ ಸಮೀರದೇವ ॥ ನಮೋ ನಮೋ ॥ ಪ ॥ ತ್ರೇತಯುಗದಲಿ ಅಂದು ಹನುಮಂತ, ಶ್ರೀರಘುನಾಥನಲ್ಲಿಗೆ ಬಂದು । ಪರಮಾತ್ಮ ನಿನ್ನಯ ಮಾತು ಕೇಳುವೆನೆಂದು ಕೈಕೊಂಡು ಸೇವೆಯಾನಾಥಜನ ಕುಮುದೇಂದು । ಕರಮುಗಿದು ನಿಂದು ॥ ಆತರಣಿಕುಲಜಾತನುಂಗುರ ವಾತುರದಿ ಕೊಂಡಾತವೇಗದಿ । ಸೀತೆಗರ್ಪಿಸಿ ಭೀತಿಯಿಲ್ಲದೆ ಪಾತಕರ ಬಹು ಘಾಸಿಸಿದೆಯಲೊ ॥ ನಮೋ ನಮೋ ಗುರುವಾತ ॥ ೧ ॥ ಕುಂತಿಯಲಿ ಅವತಾರ ಮಾಡಿದೆಯೊ ಕುರುಕುಲಕೆ ಅಂತಕ ಖಳಕುಠಾರಾ । ಸೀಳಿದೆಯೊ ಮಗಧನ ಸಂತರೊಡೆಯವುದಾರ ॥ ವಿಕ್ರಮನೆ ಬಹು ಗುಣವಂತ ಕಲ್ಮಷ ದೂರಾ । ಆಕೀಚಕರಾ ॥ ಸಂತತಿಯ ನಳಿದಂಥ ನಿಜ ಬಲವಂತ, ನಿನ್ನಯ ಪಂಥಗೆಲಿಸಿದೆ, ದಂತಿಪುರದರಸಂತಕಾತ್ಮಜನಂತುನೆಲಸಿದಿ ಚಿಂತಾರಹಿತ ॥ ನಮೊ ನಮೊ ॥ ೨ ॥ ಕಲಿಯುಗದಿ ಮುನಿಯಾಗೀ–ಪ್ರಾಣೇಶವಿಟ್ಠಲನೊಲುಮೆಯನು ಚೆನ್ನಾಗಿ । ಗಳಿಸುತಲಿ, ಸೂತ್ರಗಳೊಲಿಸಿ ಬಹು ಸ್ಪಷ್ಟವಾಗಿ ॥ ಗ್ರಂಥಗಳ ವಿರಚಿಸಿ । ಹಲವು ಮತಗಳ ನೀಗಿದಂಥ ಮುನಿಯೋಗಿ ॥ ಕಳೆದು ಸುಜನರ ಮಲಿನವನು ಈ ಇಳೆಯೊಳಗೆ ಬಹು ಬೆಳದೆ ನಿನ್ನ ಮತ, ಚಲುವ ಯತಿಯನಗೊಲಿದು ಸನ್ಮತಿ ಕಲಿಸುವದು ಕರಗಳನು ಬಿಡದಲೆ ॥ ನಮೋ ನಮೋ ॥ ೩ ॥

೪೫. ರಾಗ–ವರಾಳಿ (ಅಟತಾಳ).

ಶರಣು ನಿನ್ನ ಚರಣಗಳಿಗೆ ಭಾರತೀಶನೆ । ಕರವ ಪಿಡಿದು ಸಲಹೋ ಬಿಡದೆ ಭಾರತೀಶನ ॥ ಪಲ್ಲ ॥ ಎಲ್ಲ ಕಡೆಗೆ ವ್ಯಾಪ್ತನೀನೇ ಭಾರತೀಶನೆ । ಅಲ್ಲಿ ವಿಷವ ಕುಡಿದೆಯೆಂದು ಭಾರತೀಶನ ॥ ಗೆಲ್ಲಿಸಿದೆಯೊ ಸರ್ವಸುರರ ಭಾರತೀಶನೆ । ಬಲ್ಲಿದನು ನಿನಗೆಣೆಯಾರೋ ಭಾರತೀಶನ ॥ ೧ ॥ ಅಂಜನಾ

ಕುಮಾರನಾಗಿ ಭಾರತೀಶನೆ । ಕಂಜನಾಭನಂಘ್ರಿ ಭಜಿಸಿ ಭಾರತೀಶನೆ ॥ ಅಂಜದುದಧಿ ದಾಟ ಪೋಗಿ ಭಾರತೀಶನೆ । ನಂಜಿ ಚರರ ಸಂಹರಿಸಿದಿಯೊ ಭಾರತೀಶನೆ ॥ ೨ ॥ ಕುಂತಿ ಜಠರದಿಂದ ಜನಿಸಿ ಭಾರತೀಶನೆ । ಹಂತ ಕೌರವರನ್ನು ತರಿದಿ ಭಾರತೀಶನೆ ॥ ಕಂತುಪಿತನ ಕರುಣ ಪಡೆದೆ ಭಾರತೀಶನೆ । ಅಂತಗಾಣೆ ನಿನ್ನ ಮಹಿಮೆಗೆ ಭಾರತೀಶನೆ ॥ ೩ ॥ ಯತಿಯರೂಪ ಇಳಿಯೊಳಾಗಿ ಭಾರತೀಶನೆ । ಮತಿಯ ಸರ್ವಬುಧರಿಗಿತ್ತ ಭಾರತೀಶನೆ ॥ ಸತತ ನಿನ್ನ ಪೂಜಿಪರಿಗೆ ಭಾರತೀಶನೆ । ಗತಿಯ ಕೊಡುವೆ ದೋಷ ಕಳೆದು ಭಾರತೀಶನೆ ॥ ೪ ॥ ಘನ್ನ ಪ್ರಾಣೇಶವಿಠಲನಾಳೆ ಭಾರತೀಶನೆ । ಬಿನ್ನಪವನು ಲಾಲಿಸುವದೋ ಭಾರತೀಶನೆ ॥ ನಿನ್ನ ದಾಸನೆನಿಸಬೇಕೋ ಭಾರತೀಶನೆ । ಅನ್ಯ ವಿಷಯವೊಂದನೊಲ್ಲೆ ಭಾರತೀಶನೆ ॥ ೫ ॥

೪೬. ರಾಗ–ಸಾರಂಗ (ಅಟತಾಳ).

ನಮಿಸೋ ಗಂಧವಹಗೆ ಪ್ರತಿದಿನ,–ನಿನ್ನ–ಶ್ರಮವ ಕಳೆದು ಅಭೀಷ್ಟಿಯ ಕೊಡುವ ಮನುಜ ॥ ನಮಿಸೋ ॥ ಪ ॥ ಹರಿ ಕರುಣಿಸದಿರೆ, ಗುರು ಕರುಣಿಸುವನು । ಗುರು ಕರುಣಿಸದಿರೆ, ಹರಿ ಪೊರೆವ ॥ ಧರೆಯೊಳು ವಾತ ಪ್ರಸಾದ ಸಂಪಾದಿಸಿ, ಶ್ರೀವಲ್ಲಭಗೆ ಬೇಕಾದವರ ಕೇಳು, ಮನುಜ ॥ ೧ ॥ ಹನುಮನೊಲಿದನಂದು ಒಲಿದ ಸುಗ್ರೀವಗೆ । ಮನಸಿಜಪಿತನು ತನ್ನಯ ಚರಣ । ಘನವಾಹಸುತ ಭಜಿಸಿದರಿನ್ನ ಪಗೆ ಪ್ರಭಂಜನನೊಲಿಯದಕೆ ಕೊಂದನು ಕೇಳಲೂ ॥ ಮನುಜ ॥ ೨ ॥ ದುರ್ಜನಾಂತಕಗೆ ಬೇಕಾದ ಕಾರಣದಿಂದ ಅರ್ಜುನಾದಿಗಳು ಸುಖಪಟ್ಟರು ॥ ಅಬ್ಜಾಪ್ತಸುತ ಅಸಮರ್ಥನೆ ರಣದೊಳು ನಿರ್ಜಿತನಾಗಲು ತಿಳಕೊಯಿದು ಮನುಜಾ ॥ ೩ ॥ ಸುರರೆಲ್ಲ ಕೂಡಿ ನ್ಯಾಯವ ಮಾಡಿ ನೋಡಲು ಸರಿಯಾಗಲಿಲ್ಲವು ಮಾರುತಗೆ । ಗರಳವುದ್ಭವಿಸಲು ಮಥನ ಕಾಲದಿ ಆದಿತ್ಯರ ಮೊರೆಕೇಳಿ ಪ್ರಾಶನಮಾಡಿದ, ಮನುಜ ॥ ೪ ॥ ಶಮೆಯಲ್ಲಿ ದಮೆಯಲ್ಲಿ ಸರ್ವಗುಣದಲ್ಲಿ । ಪವಮಾನಗೆ ಸರಿಯುಂಟಾವನು ಜಗದಿ ॥ ಅಮಲ ಪ್ರಾಣೇಶವಿಠಲಗಲ್ಲದವನು ಯಮಸದನಕೆ ಯೋಗ್ಯ ಯಮಗಲ್ಲೆಂಬ ಮನುಜ ॥ ೫ ॥

೪೭. ರಾಗ-ನಾಟಿ (ಝುಂಪೆತಾಳ).

ಶ್ರೀಭಾರತೀಶ ನಮೋ ನಮೋ-ಬಿನ್ನವವ ಕೇಳು ॥ ನಾಭಿನಂದನ ಚರಣ ಸರಸೀರುಹಭೃಂಗ ನಮೋ ನಮೋ ॥ ಪ ॥ ಸಂಕರ್ಷಣನ ತನಯ, ಜಡಜಂಗಮದಿ ವ್ಯಾಪ್ತ । ಶಂಕರಾದಿ ಸಮಸ್ತ ಸುರವಂದಿತ । ಕಿಂಕರರ ವನೋನಾನು, ದಯದಿ ಕರಪಿಡಿದು, ಭವಪಂಕದೊಳಗಿಪನ ಕಡೆತೆಗೆಯೊ ಭಯಕಳಿಯೊ ॥ ೧ ॥ ನೀನಲ್ಲದಾರ ಸಲಹುವರ ಕಾಣೆನೋ ಜೀಯ । ಭಾನುನಂದನರಕ್ಷ ದುರುಳತೀಕ್ಷ್ಣ । ಹೀನಮತಗಳ ನೋಲಿಸಿದ ದಕ್ಷ ಸುರವಕ್ಷ । ದೀನಜನಮಂದಾರ ಪವನಸುಕುಮಾರಾ ॥ ಶ್ರೀಭಾರತೀಶ ॥ ೨ ॥ ಪ್ರಾಣೇಶವಿಠಲನಿಚ್ಛಾನುಸಾರ ಧರೆಯೊಳು, ನೀನವತರಿಸಿ ಜಾತಿಧರ್ಮ ವನ್ನು । ಜ್ಞಾನಿಗಳ ಸಮ್ಮತಾಹಂತೆ ಆಚರಿಸಿದೆಯೊ, ಮಾನಿಮೋಕ್ಷದನ ಆರೊಂದು ಸುರವಂದ್ಯ ॥ ೩ ॥

೪೮. ರಾಗ-ನಾಟಿ (ಝುಂಪೆತಾಳ).

ನಮೋನಮೋ ಶ್ರೀಭೀಮ ನಮೋನಮೋ ಜಿತಕಾಮ । ಕಮಲಾಕ್ಷ ದಾಸ, ಪೊರೆ ಯಬ್ರಾಪ್ತ ಭಾಸ ॥ ಪ ॥ ಘನಗಿರಿಯೊಳಗೆ ಕುಂತಿ ನಿನ್ನೆತ್ತಿ ಕೊಂಡಿರಲು । ಧ್ವನಿಮಾಡೆ ಹುಲಿ ತಾಯಿ ನಡುಗಿ ಬಿಸುಟೇ ॥ ತನುವು ನಿನ್ನದು ನೋಂಕೆ, ನಗವೊಡೆದು ಶತಶೃಂಗವೆನಿಸಿಕೊಂಡಿತೋ ದ್ವಾಪರದಿ ಬಲವಂತ ॥ ೧ ॥ ಲೋಕದೊಳು ಮನುಜರಾ ಶಿಶುಗಳಂದದಿ ಬೆಳದು, ಪಾಕ ಶಾಸನಿಯಮಜಯಮರಜನನೀಯಾ ಕೂಡಿಕೊಂಡು, ಇಭಪುರಿಗೈದಿ ಮೋದ ದಲಿ । ಸಾಕಿಸಿಕೊಂಡೆ ಯಂಬಿಕಿಯಮಗನಿಂದಾ ॥ ೨ ॥ ಚಿಕ್ಕವರೊದನೆ ಚಂಡು ಬುಗರಿ ಈಸಿಕಿ ಓಟ ತೆಕ್ಕಮುಷ್ಟಿ ಮರಗಳನೇರುವಲ್ಲಿ । ಸೂಕ್ಕಿದವನಿವನೆಂದು ಆವಾಗಲೆಲ್ಲರಿಗೆ ಬಿಕ್ಕಿ ಬಾಯ್ದುರೆವಂತೆ ಮಾಡಿ ತೋರಿಸಿದೆ ॥ ೩ ॥ ಅಹಿತ ರಾದವರು ನೀರೊಳಗೆ ಕೆಡಹಲು ಎದ್ದೆ । ಅಹಿಗಳಿಂ ಕಚ್ಚಿಸಲು ನೋಯ ದಿದ್ದೆ ॥ ಸಹಿಸದಲೇ ವಿಷ ಹಾಕಿ ಬದುಕಲ್ಕೆ ಹೊರಘಾಕ ॥ ಮಹಮೋಸ ಮಾಡೆಗೆದ್ದು ಧರಿಯೊಳು ಮೆರೆದೆ ॥ ೪ ॥ ಸೋಕಿಯಸುರಿಯ ಮಗನ ಪಡೆದು ಖಲನನು ತರಿದು । ಏಕಚಕ್ರನಗರದಲ್ಲಿದ್ದು ॥ ಬೇಕೆಂದು ನೀನಾಗಿ ಪೋಗಿ ಬಕನನು ಕೊಂದೆ । ಈ ಕುಂಭಿಣೀಯೊಳು ನಿನಗಿದಿರಾರು ದೇವಾ

॥ ೫ ॥ ಪಾಂಚಾಲಿಯನು ಗಳಿಸೆ ಕೋಪದಿಂ ಬಂದಹರಿ । ವಂಚಕರ ದರ್ಪವ ಭಂಗಿಸಿ ಲೀಲೆಯಿಂ ॥ ಮಿಂಚುವಾ ಗದೆಲಿಹೆ ನಿಶ್ಚಿಂತ ಬಲವಂತ, ಮುಂಚಿನಜ ಪ್ರಣತಸುರಭೂಜ ರವಿತೇಜ ॥ ೬ ॥ ಈ ಪರಿಯಿಂದ ಕೆಲಕಾಲ ವಲ್ಲೆಲ್ಲ ಕಾವಾಡಿ ವಜ್ರಿಪ್ರಸ್ಥಕೈತಂದು । ಪಾಪಿ ಜರಿಜನ ಕೊಂದು ರಾಜಸೂಯುವ ಮಾಡಿ । ನೀಂ ಪಾಲಿಸಿದೆಯವನಿ ಸದ್ಧರ್ಮದಿಂದ ॥ ೭ ॥ ದ್ಯೂತವಾಡಿದ ಸಮಯದಲ್ಲಿ ದ್ರೌಪದಿಯಳನು । ಪಾತಕಿ ವಸನೆಳೆಯೆ ಕೋಪದಿಂದ ॥ ಘಾತಿಸುವೆನಂದಬ್ಬರಿಸಿ ಪಲ್ಗಡಿದು ಲಕ್ಷ್ಮೀನಾಥನಿಚ್ಛೆಂಗೆ ಈಗೇಂದು ಕೈಮುರದೇ ॥ ೮ ॥ ತಪೋಯೋಗ್ಯನಾ ಪಾಪಪೂರ್ಣವಾಪದಕ ಬಹು ಮಿತಿಯಿಂದ, ವನವಾಸ ಪತ್ಕರಿಸಿದೆ ॥ ಸಮರಾಂಗಣದೊಳವರ ಹೀಗೆ ಸವರುವೆನಂದು ಸುಮನಸಾರಾಧ್ಯ ಬಾಹುಗಳೆತ್ತಿ ನಡೆದೆ ॥ ನಮೋ ನಮೋ ॥ ೯ ॥ ಕಾನನದಿ ಕಿಮ್ಮಿರ್ಾರನಂ ಕೊಂದು ಮುಷ್ಟಿಯಿಂದ ಮಾನವಂ ಕೈಕೊಂಡು ಮತ್ತೆ ಮುಂದೆ ॥ ಆ ನಗವಿ ಬಹುಕಾಲ ತೇರಿಕೂಂಡಿದ್ದಂಥ । ದಾನವರ ಮಡುಹಿ ಸೌಗಂಧಿಕವ ತಂದೆ ॥ ೧೦ ॥ ಸಿನ್ಯೊಳಗೆ ನೀಂ ಲೀಲೆ ಮಾಡಿದ್ಯಾಸಮಯದಲಿ । ಚಿನ್ನದೋಪನು ಪುಷ್ಪವೊಂದು ಬೀಳೆ । ನಿನ್ನರಸಿಯಿದು ಯನಗೆ ಯಿಷ್ಟವೆನಲವಳ ನುಡಿ ಮನ್ನಿಸುತ ಪೋಗಿ ಮಣಿಮಂತನೊಂಚಿಸಿದೆ ॥ ೧೧ ॥ ದ್ವೈತವನದೊಳು ಬಂದು ಮೃಗಬೇಟೆಯಾಡೆ, ಪುರುಹೂತಪದವಾಳ್ದವನು ಮೆಯ್ಯುಸುತ್ತಲ್ । ನೀ ತವಕಬೀಳದೆ ಅವನ ಪುನೀತನ ಮಾಡಿ । ಖ್ಯಾತಿ ತಂದಿತ್ತೆಯಂತಕನಸುತಗಂದು ॥ ೧೨ ॥ ಮತ್ಸ್ಯದೇಶಾಧಿಪನ ಮನೆಯಲ್ಲಿಯಿದ್ದಾಗ ಹೆಚ್ಚಿನಾಬಲದ ಮಲ್ಲನ ಕಡಹಿದೆ ॥ ಅಚ್ಚಪಾಪಾತ್ಮ ಕೀಚಕನನ್ವಯ ತರಿದೆ । ಅಚ್ಯುತನ ನಿಜದಾಸ ಭಕ್ತರಘನಾಶ ॥ ೧೩ ॥ ಎಂಟೈದು ವರುಷ ಈ ರಿತಿಯಲಿ ಕಳೆದು ವೈಕುಂಠಪತಿ ದಯದಿಂದ ಉಪಪ್ಲಾವ್ಯದಿ ॥ ಗಂಟುಹಾಕಿದಿದುರಾತ್ಮನಕೂಡ ಸಂಗರಕೆ । ಕಂಠೀರವರವದಿಂ ತಲೆದೂಗಿ ನಡೆದೆ ॥ ೧೪ ॥ ಮುತ್ತೆ ಭೀಷ್ಮಗೆ ವಂದ ಸ್ವಲ್ಪ ಮಾತ್ರಕೆ ಮಾನ–ವಿತ್ತಂತೆ ತೋರಿಯೆಲ್ಲರ ರಥವನೂ ॥ ಕತ್ತರಿಸಿ ಹಿಂದಕ್ಕೋಡಿಸಿದೆ ನಿನ್ನಾರ್ಭಟಕೆ ಹತ್ತು ದಿಕ್ಕಿನೊಳೊಬ್ಬರಿದಿರಾಗಲಿಲ್ಲ ॥ ೧೫ ॥ ಪ್ರಹ್ಲಾದನನವತಾರ ಬಾಹ್ಲೀಕನನು ಗೆದ್ದು । ಮಹೀಜಸುತನಾನಿ ಮಸ್ತಕ ಶೀಳಿದೆ ॥ ಬಹು ಖೋದಿ ಧಾರ್ತ

ರಾಷ್ಟ್ರರ ಕೊಂದು ಹರೆಬಿಟ್ಟ ಅಹಿಯಂತೆ ರಣರಂಗದಲ್ಲಿ ಸಂಚರಿಸಿದೆ ॥ ೧೬ ॥ ಕಡುಕೋಪದಿಂದ ಹೂಂಕರಿಸಿಯುರಿಯುಗುಳುತಲಿ ಪೊಡವಿನಡುಗಿಸಿ, ನಭ ಬೇಯಿಸುತ್ತಲಿ ॥ ಪಿಡಿದುದುಶ್ಶಾಸನನ ತೊಡೆಯಲ್ಲಿ ನೆರೆಗೆಡಹಿ ಒಡಲ ಛೇದಿಸಿ ರಕ್ತಮಜ್ಜನವಗೈದೆ ॥ ೧೭ ॥ ಕರುಳದಂಡೆಯಮಾಡಿ, ಅರಸಿ ಮಂಡೆಗೆ ಮುಡಿಸಿ ಖರೆಯಮಾಡಿದೆ ಉಭಯತುರ ಶಪಥವ ॥ ಕರೆದೆ ಕುರು ಪಾಂಡವರ ಬಿಡಿಸಬನ್ನಿರೆಂದು ಮರುಳುಗೊಂಡರೆಲ್ಲ ನಿನ್ನ ರೂಪ ನೋಡು ತಲಿ ॥ ೧೮ ॥ ಸ್ವಾಮಿ ಪ್ರಾಣೇಶವಿಠಲನ ಆಜ್ಞೆಯ ವಹಿಸಿ । ಭೂಮಿಭಾರಿಳು ಹದಕೆ ಅವತರಿಸಿದೆ ॥ ನಾ ಮಾಡುವೆನೆ, ಪೂರ್ತಿ ನಿನ್ನ ಮಹಿಮೆಯ । ಸಮರ ಭೀಮ ಕರಪಿಡಿದು ಸಲಹುವದೋ ಪ್ರತಿದಿನದಿ ॥ ೧೯ ॥

೪೯. ರಾಗ-ವರಾಳಿ (ಅಟ್ಟತಾಳ)

ಅಂಜಿಕ್ಯಾತಕೇ-ಮನವೇ-ಅಂಜಿಕ್ಯಾತಕೆ ॥ ಪ ॥ ಕುಂಜಹರನ ಪಿತನಸಾದ ಕಂಜನಿರತ ಭಜಿಸುತಿರಲು ॥ ಅನು ॥ ಎರಡು ಒಂದು ಕೋಟಿ ರೂಪ । ಧರಿಸಿ ರಕ್ಕಸರೊಳು ಕಾದಿ । ಹರಿಯ ಕರುಣಗಳಿಸಿದವನ । ಚರಿತಗಳನು ಸ್ಮರಿಸುತಿರಲು ॥ ೧ ॥ ತಾಸಿಗೆಂಟು ಒಂದು ನೂರು ಶ್ವಾಸ ಜಪವ ಮಾಡಿ ಜಂತುರಾಶಿಗಳಿಗೆ ಸತತಬೇಟ ದಾನಪೂರ್ತಿಸುವವನಿರಲು ॥ ೨ ॥ ಜಂಗಮರಿಗೆ ಪಾಣಿಚರಣ ಕಂಗಳುಕಿವಿಮಾಡಿಸುತಲಿ । ಪಿಂಗಳ ನಿಭ ಭಾರತೀಶ ಲಿಂಗದನವರತ ಪೊರೆಯಲು ॥ ೩ ॥ ಪರಿಹರಿಸುತಲಗ್ನಿಭಯವ ತ್ವರದಿಹಿಡಿಂಬ, ಕೀಚಕಪ್ರಮುಖರನು ಕುರುಪತಿಯ ಕುಲವ ತರಿದ ಕುಂತೀಕುವರನಿರಲು ॥ ೪ ॥ ಭುಜಕೆ ಗೋಪೀಚಂದನವನು, ವಿಜಯಚಕ್ರಗಳನು ಧರಿಸಿ । ಕುಜನರಿಪು ಪ್ರಾಣೇಶವಿಠಲ ಭಜಕನ ದಯೆ ಪೂರ್ಣವಿರಲು ॥ ೫ ॥

೫೦. ರಾಗ-ವರಾಳಿ (ತ್ರಿಪುಟತಾಳ).

ಮರುತದೇವರ ಹೊಂದಿರೋ-ಮೂಜಗದ ಗುರು-ಮರುತದೇವರ ಹೊಂದಿರೋ ॥ ಪ ॥ ಮರುತ ದೇವರಹೊಂದಿದವರ ಪಾಪವುಪೋಗಿ । ಹರಿಮಂದಿರವನೈದುವದಕೆ ಸಂದೇಹವಿಲ್ಲ ॥ ಪ ॥ ದಶರಥಸುತನಂಗನೆಯ-

ಕದ್ದೊಯ್ದಿರಲಾಗಿ–ದಶಕವಾನರಸ್ತೋಮ । ರವಿಜನಾಜ್ಞಾ–ದೇಶದಿಂದೆಲ್ಲ ರಾಶೆ ಭಯದಲಡಗಿ, ರಕ್ಷಿಸೋ–ಶ್ವಶನಾ ಯೆನಲು ಪೋಗಿ ಶೀಘ್ರವಾರ್ತೆಯ ತಂದ ॥ ೧ ॥ ಕುರುಜನುವಟಳಕೆ ಪಾರ್ಥಾರಳಲಿ, ವನ ಚರಿಸಲು ತವಕಾ ಬೀಳದೆ ಪ್ರಾಂತಕ್ಕ ॥ ದುರುಳರ ಸದೆದು ಭೂಭಾರವ ಕಳೆದು, ಸಹೋದ ರರ ಪ್ರೀತಿಪಡಿಸಿ ಕೃಷ್ಣನ ದಯೆ ಪಡೆದಾ ॥ ೨ ॥ ಗುಣಪೂರ್ಣ ಅನಘ ಶ್ರೀಪ್ರಾಣೇಶ ವಿಠಲನ ನಿರ್ಗುಣನೆಂದು ಅಸುರರು ದುರ್ಮತ ಸ್ಥಾಪಿಸೆ ॥ ಘನಶಾಸ್ತ್ರ ವಿರಚಿಸಿ ಐಕ್ಯವ ಬಿಡಿಸಿ ಸಜ್ಜನರ ಪೊರೆವ ಶ್ರೀಆನಂದಾ ಮುನಿಪರೆಂಬ ॥ ಮರುತ ॥ ೩ ॥

೫೧. ರಾಗ–ಕಲ್ಯಾಣಿ (ತ್ರಿಪುಡೆತಾಳ).

ಮುಖ್ಯಪ್ರಾಣನ ನಮ್ಮ ಮೂಲ ಗುರುವು । ರಕ್ಕಸಾಂತಕ ಶ್ರೀಭಾರ ತಿಯ ರಮಣನೆಂಬ ॥ ಮುಖ್ಯಪ್ರಾಣನೆ ॥ ಪ ॥ ಅಂಜನಾಸುತನಾಗಿ ದಶರಥಸುತನಂಘ್ರಿಕಂಜ ಭಜಿಸಿ ರಾವಣಾದಿ ಖಳರಾ । ಅಂಜಿಸಿ ಕಪಿ ಗಳು ಚೇತನ ಕಡಲಾಗ। ಸಂಜೀವನವ ತಂದು ಪ್ರಾಣವನುಳುಹಿದ ॥ ಮುಖ್ಯ ॥ ೧ ॥ ಹರಿಗೆ ದ್ವೇಷಿಗಳಾದ ಮಗಧಾದಿಕ್ಷಿತಿಪರ । ತರಿದು ದ್ರೌಪದಿಯಳ ಕರವ ಪಿಡಿದು ॥ ದುರುಳ ಕೌರವರನ್ನು ಅಳಿದು ದ್ವಾಪರಕೊಟ್ಟಾ ಗರಳಭೋ ಜನ ಮಾಡಿ ವೃಕೋದರ ನೆನಿಸಿದಾ ॥ ಮುಖ್ಯ ॥ ೨ ॥ ವಿಷಯಂಗಳ ತೊರೆದು ಕಾಷಾಯಾಂಬರ ಧರಿಸಿ । ವಸುಧೆಯೊಳಗೆ ದುರ್ಮತವನೋಲಿಸಿ ॥ ಅಸಮ ಶ್ರೀ ಪ್ರಾಣೇಶವಿಟ್ಠಲ ಪರದೈವವೆಂದು ಹಸನಾಗಿತಿಳಿಸಿದ ಶ್ರೀಮಧ್ವಮುನಿ ಯೆಂಬ ॥ ಮುಖ್ಯ ॥ ೩ ॥

೫೨ ರಾಗ–ಕಾಂಬೋಧಿ (ಝಂಪೆತಾಳ).

ಶ್ರೀವಾಯುದೇವರಿಗೆ ನೀತವಾದ ಮೂವತ್ತೆರಡು ಸುಲಕ್ಷಣಗಳನು ವರ್ಣಿಸುವೆ ॥ ಪ ॥ ತಾಲು ಜಾನುಗಳು ಸ್ತನತುದಿಯು ನಾಶಿಕ ಚಕ್ಷು, ನಾಲಕ್ಕೊಂದು ದೀರ್ಘಜಂಘ, ಗ್ರೀವ । ಆಲಿಂಗ ಪೃಷ್ಠನಾಲ್ಕು ಹ್ರಸ್ವ ಕೇಶರದ ಮೇಲಾಪತ್ವಕು ಬೆರಳು ನಖ ಪಂಚಸೂಕ್ಷ್ಮ ॥ ೧ ॥ ಕಕ್ಷಿ ಕುಕ್ಷಿಯು,

ವಕ್ಷ, ಕರ್ಣ ನಖಸ್ಕಂದಾರು ರಕ್ಷಘ್ನನಿಗೆ ಶೋಭಿಪವು ಉನ್ನತ ॥ ಅಕ್ಷಿ ಚರಣ ಕರನಖ ಅಧರ, ಜಿಹ್ವೇಣು ಜಿಹ್ವೆ । ವೋಕ್ಷದನ ಈಯೇಳು ಅವಯುವವು ರಕ್ತ ॥ ೨ ॥ ಸತ್ವ ನಾಭಿಯು ಸ್ವರವು ಈ ಮೂರು ಗಂಭೀರ । ಉತ್ತಮಲಲಾಟ ಉರ ದ್ವಯವಿಸ್ತಾರಾ ॥ ಸತ್ಯಸಂಕಲ್ಪ ಶ್ರೀಪ್ರಾಣೇಶ ವಿಠಲನ ಭೃತ್ಯೋತ್ತಮಗೆ ತಕ್ಕ ಪವಾರಿಗಿಲ್ಲ ॥ ೩ ॥

೫೩. ಭಾಮಿನಿಷಟ್ಪದಿ.

ತಿಂಗಳಿಗೆ ತಿಂಗಳಿಗೆ ಬರುತಿಹ । ಪಿಂಗಳರ ನಾಮವನು ಬರೆವೆನು ಇಂಗಿತಜ್ಞರು ಕೇಳ್ವುದು ಉದಾಹರನವ ಮಾಡದಲೆ ॥ ಪ ॥ ಧಾತ ಚೈತ್ರಕೆ ಆರ್ಯಮಾಯೆಂಬಾತ ವೈಶಾಖಕೆ, ಸುಜೇಷ್ಠಕ । ಸಾಧಿಸನಿಸುವ ಮಿತ್ರ, ಆಷಾಢಕ್ಕೆ ಬಹವರುಣ ॥ ಖ್ಯಾತನಾಗಿಹ ಶ್ರಾವಣಕ ಪುರುಹೂತ, ಭಾದ್ರಪದಕೆ ವಿವಸ್ವಾನ್, ಭೂಷಿಯುತನಾಗಿರುವ ತ್ವಷ್ಟಾಶ್ವೀನಮಾಸದಲಿ ॥ ೧ ॥ ಪರಿದಿನವ ಕಾರ್ತೀಕಮಾಸದಿ । ಇರುತಿಹನು ಮಾರ್ಗಶಿರದಿನಮಿತ್ರ । ವರದ ಭಗ ಪುಷ್ಯದಲಿ, ಪೂಷಾ ಮಾಘಮಾಸದಲಿ ॥ ಸುರನದಿಯೆ ವೊದಲಾಗಿಹೆ ಐವರಿಗೆ ಸಮುವರ್ಜನ್ಯ ಫಾಲ್ಗುಣ ಕರಿತು, ಇಂತು ಯಥಾವಿಧಿಯೊಳರ್ಘ್ಯವನು ಕೊಟ್ಟು ಜಪವ ॥ ೨ ॥ ಮಾಡುತಿಹ ಧನ್ಯರಿಗೆ ಪಾಪಗಳೋಡಿ ಸುತದಯದಿಂದ ಯೋಸೇನ್-ಬೇಡಿದಿಷ್ಟವ ಕೊಟ್ಟು ಕರ್ಮಕೆ ಸಾಕ್ಷಿತಾನಾಗಿ॥ ಮಾಡುವನು ಸಂರಕ್ಷಣೆಯು, ಒಡನಾಡುವನು ಬಿಡನೊಂದರೆ ಕ್ಷಣ । ಈಡು ಯಿಲ್ಲದ ಮಹಿಮ ಶ್ರೀ ಪ್ರಾಣೇಶವಿಠಲನು ॥ ೩ ॥

೫೪. ರಾಗ-ಸಾರಂಗ (ಏಕತಾಳ).

ರೋಚನ ಪೂರ್ವೇಂದ್ರಾ ಧೀರವರಾಕು । ಖೇಚರ ಸರ್ವಚೇಷ್ಟಕನೆ ವರಾಕು । ಯಾಚಕರಿಗೆ ಕಲ್ಪತರುವೆ ವರಾಕು । ಸುಚಾಮಿಕಾಕರವರ್ಣ ದೇವಪರಾಕೆಂದು । ಸೂಚಿಸಿಯಾರತಿಯು, ಬೆಳಗಿರೆ ॥ ಪ ॥ ಜಾನಕೀಪತಿ ದೂತ ವಾಯು ಪರಾಕು । ದಾನವರಳಿದ ವಿಕ್ರಮನೆ ಪರಾಕು ॥ ಜ್ಞಾನಿಗಳೊಡೆಯ ಕೇಸರಿಜ ಪರಾಕು । ದೀನರಕ್ಷಕ ಹನುಮಂತ ಪರಾಕೆಂದು ॥

ಮಾಣಿಕದಾರತಿಯ ಬೆಳಗಿರೆ ॥ ೧ ॥ ದ್ವಾಪರಾನುಗರಾರೀ ಭೀಮ ಪರಾಕು । ಪಾಪಿಜರಾಸಂಧನವೈರಿ ಪರಾಕು ॥ ಭೂವರ ಸೆರೆ ಬಿಡಿಸಿದನೆ ಪರಾಕು, ದ್ರೌಪದೀಪತಿವೃಕೋದರನೆ ಪರಾಕೆಂದು ॥ ದೀವದಾರತಿಯ ಬೆಳಗಿರೆ ॥ ೨ ॥ ಗುರುಮಧ್ವಮುನಿರಾಯ ಆರ್ಯ ಪರಾಕು । ವರಗ್ರಂಥವಿರಚಿಸಿದವನೆ ಪರಾಕು । ಧರೆಯೊಳು ಬದರೀನಿವಾಸ ಪರಾಕು । ಸಿರಿಪ್ರಾಣೇಶವಿಠಲ ಪ್ರಿಯ ಪರಾಕೆಂದು ॥ ಹರದಿಯರಾರತಿಯ ಬೆಳಗಿರೆ ॥ ೩ ॥

೫೫. ರಾಗ–ಭೈರವಿ (ತ್ರಿಪುಡೆತಾಳ).

ಇಂದ್ರಸೇನನಾಥ ಹೋ, ತ್ರೈಲೋಕ್ಯ ವಿಖ್ಯಾತ ಹೋ ಸವ್ಯಸಾಚಿ ಪ್ರೀತ ಹೋ, ಮಧ್ವಗೇಹಜಾತ ಹೋ ॥ ಇಂದ್ರಸೇನನಾಥ ಹೋ ॥ ಪ ॥ ತರಣಿಬಿಂಬಕೆ ಜಿಗಿದೆ, ಗದೆಯನು ವಗೆದೆ ಅಸುರಗ ಕರವನು ಮುಗಿದೆ ॥ ಹರಿಗೆ ವಾರ್ತೆಯ ತಂದೆ, ಜರಿಜನ ಕೊಂದೆ, ನೀಂಬದರಿಯೊಳ್ನಿಂದೆ ॥ ಖಳ ಕುಲ–ತರಿದೆ ವಜ್ರಶರೀರ । ಧರಣಿಯಭಾರ–ಇಳುಹಿದುದಾರ–ಮತಿ । ಕಪಿನರನೊಳತಿಕೃಪೆಮಾಡಿದೆ, ದಾನವಬೇಡಿದೆ, ಸುಮತಿಯ ನೀಡಿದೆ ॥ ೧ ॥ ದಂಡ ಮೇಖಲಧಾರ-ಕುಜನಕುಠಾರ, ಬ್ರಹ್ಮಶರೀರ, ಜೈಸಿದೆ ಮಂಡೋದರೀ ವಲ್ಲಭನ, ಚರಿಸಿದೆಯೋ ವನ । ತಂದೆ ಮಾಧವನ, ಉಡಿಪಿಲಿ, ಚಂಡ ವಿಕ್ರಮ ರಾಮಸೇವಕಭೀಮ, ಸದಾಚಾರಧಾಮ, ಯತಿ ಮೋಷಾಂಡನ ಮೋರ ಕೇಳ್ದ, ಕೀಚಕನನು ತೀಳ್ದಿ । ದ್ವಿಜಕುಲವಾಳ್ದೆ ॥ ಇಂದ್ರ ॥ ೨ ॥ ಲಕುಮಿಗುಂಗುರವ ಕೊಟ್ಟ । ರಣಕತಿ ಗಟ್ಟ, ಶಾರಿಯನುಟ್ಟ ॥ ಶರಧಿಯ ತವಕದಿ ಕ್ಷಣದೊಳುಹಾರಿದ. ಉಗ್ರವ ತೋರಿದೆ ಜ್ಞಾನವಬೀರಿದೆ ॥ ಲಂಕೆಯ ಸಕಲಸೌಖ್ಯವ ಕಡಿಸಿ, ಪುಷ್ಪವನುಡಿಸಿ, ಐಕ್ಯವಬಿಡಿಸಿ, ವಟುವಪು ಮುಕುತಿ ಪತಿ ಪ್ರಾಣೇಶವಿಠಲನ ದಾಸ ಸಲಹೊ ನಿರ್ದೋಷ ॥ ೩ ॥

೫೬. ರಾಗ–ದ್ವಿಜಾವಂತಿ (ಏಕತಾಳ).

ಸಲಹೋ ಜಡಚೇತನನಿಲಯ ಶ್ರೀಹನುಮಂತ । ಕಲುಷವಿದೂರ ಶಾಂತ ॥ ಪ ॥ ಕುಲಿಶಬಾಧೆಗೆ ನೀನೇಗತಿಯೆಂದು ಮರೆಹೊಕ್ಕ । ಕುಲಜ

ಪಾಲಕ ಹರಿಕುಲಜ ದಯಾಂಬುಧೇ ॥ ಪಲ್ಲ ॥ ಕಂಜ ಚರಣ ಗದಾ ಕಂಜಧರನಪಾದ ಕಂಜಮಧುಪ, ಮುನಿಪ ॥ ಕಂಜವದನ ನಭ ಕಂಜ, ಸುರಪ ರವಿ ಕಂಜವಿನುತ ವಿಜಿತ ॥ ಕಂಜಕೇತನ ಕಂಜಪಕ್ಷ ಖಳಸೂದನ ಕಂಜನಾಶನ ಭಾವೀಕಂಜ ದಯಾಂಬುಧೇ ॥ ೧ ॥ ಕಾಲಸೇಮೀಹ ನಿಚ್ಛೆ ಹೀಗೆಂದು ತಿಳಿದು ಆ ಕಾಲಜನನುಸರಿಸಿ ॥ ಕಾಲಕಳೆದು ವಿಪಿನಾ ಜ್ಞಾತವಾಸದಿ ಕಾಲಾರಿ ಪಾಲಿಸಿದೆ ॥ ಕಾಲುಪಿಡಿದವನ ಶಾಪಕಳೆದೆ, ಆವ ಕಾಲಕು ನೀನೇಗತಿ ಜಗಕ ದಯಾಂಬುಧೆ ॥ ೨ ॥ ಪ್ರಾಣಾಪಾನವ್ಯಾ ನೋದಾನ ಸಮಾನ ಹೇ ಜಗತ್ಪ್ರಾಣ ಸಮೀರ ಜ್ಞಾನ । ಪ್ರಾಣಾಧಿಪೂರ್ಣಾರ್ಧಿ ಪ್ರಾಣ, ನಂದನ ತಿರಸ್ಕೃತ, ಪಾಂಚಾಲಸುತಾ ॥ ಪ್ರಾಣದೊಡೆಯ ನೀನೊಲಿ ಯುದೆ ಎಂದಿಗೂ ಪ್ರಾಣೇಶವಿಠಲನ ಕಾಣೆ ದಯಾಂಬುಧೆ ॥ ೩ ॥

೫೭ ರಾಗ-ತೋಡಿ (ಏಕತಾಳ).

ಭಾರತೀರಮಣಾ-ಪವಮಾನಾ-ಜಗದೊಳು ಸುತ್ರಾಣ । ಘೋರ ದುರಿತಾರಣ್ಯದಹನ । ಮಾರಕದನ ಜಿತ, ವಾರವಾರಕೆ ಶ್ರೀನಾರಾಯಣನ ಪದ ಆರಾಧನೆಕೊಡು ॥ ಭಾರತೀ ॥ ಪ ॥ ವ್ಯೈಗಣ್ಣಪದವಾಳ್ದವಾತ । ಲೋಕವಿಖ್ಯಾತ । ನಾಗಜನಕ, ಭಜಕಪ್ರೀತ ॥ ಯೋಗೇಶ ಜಡಜಂಗಮ ವಿತತ । ಅದ್ಭುತ ಚರಿತ, ಬಾಗುವೆ ಲಾಲಿನೋಮಾತಾ ॥ ಹೋಗುತಲಿದ ಹೊತ್ತೀಗಲ ತವಕದಲಿ ಭಾಗವತರೊಳಗೆ-। ಭಾಗೀರಥೀ ಪಿತನಾಗುಣ ಪೊಗ ಳಿನೊ- । ಜಾಗುಮಾಡದಲೆ, ನಾಗಾದಿರೂಪನೆ ಗರುಡಾರ್ಚಿತ ॥ ೧ ॥ ಗೀರ್ವಾಣವಂದ್ಯ ಹರಿದಶ್ವ। ತೇಜ, ವೃಷದಶ್ವ । ದೂರ್ವಾಸಾರ್ಚಿತ ಮಾತ ರಿಶ್ವ । ಪಾರ್ವತೀಪತಿವಂದ್ಯ ದುಸ್ವಭಾವಗತನಭಸ್ವ – ತ್ಪೂರ್ವಿಕಾದೇವ ಹಂಸಾಶ್ವ, ॥ ತೋರ್ವುದುಜ್ಞಾನವ ಬೀರ್ವುದುಕರುಣವ, ಪೂರ್ವದೇವ । ದೂಷಣ ಸಾರ್ವೆನಿನ್ನನು, ಯನ್ನಚಾರ್ವಾಕಮತಿಯನು ಬೇರೊರೆಶಳಿಯಳು ಊರ್ವಿಯೊಳಗ ಮತ್ತೋರ್ವರ ಕಾಣೇ ॥ ಭಾರತೀ ರಮಣ ॥ ೨॥ ತ್ರಿಗುಣ ವರ್ಜಿತ ಪ್ರಾಣೇಶ। ವಿಠಲನದಾಸಾ ನಗಪಾಲಾ। ಕೊಡುಯನಗೆ ಲೇಸ-ಆಗ ಣಿತ ಮಹಿಮನೆ ಕಾಷಾಯುವಸನ ಭೂಷ । ನಿಗಮವೇದ್ಯನೆ ನಿರ್ದೋಷ ॥

ನಗಸ್ತೋಮಗಳಿಗೆ ಪಗೆಯಾಗಿರ್ಪನ ಮಗನ ಧ್ವಜದಿಸಿಂದಿಗಡ, ಕುರು ಜರೆದೆ ಭುಗಿಲೆಂಬುವತೆರ ಮೃಗಧ್ವನಿಮಾಡಿದನಘ, ಪೊರೆವುದು ಕರಮುಗಿವೆ ಚರಣಕೆ ॥ ೩ ॥

೫೮. ರಾಗ–ಆರಭಿ (ಏಕತಾಳ).

ಹೇ ದಯಾಬ್ಧೇ ಪಾಲಿಸೆನ್ನನು । ಶ್ರೀದ ಹನುಮಂತ ॥ ಪ ॥ ಭೂಧವ ಜನದಿಯಲ್ಲಿ ನಿಂತಾ ಕಾಳೀಕಾಂತ–ವೀತಚಿಂತಾ ॥ ಪಲ್ಲ ॥ ರಾವಣಾನುಜ ನಂತೆ ಮತ್ತಾ ಶೈಲಸುತನಂತೆ ದೇವತಗಳೀಶನಂತೆ ದೇವತೆಗಳಂತ ॥ ಆವ ವಿಕ್ರಮಪಾರ್ಥನಂತೆ ಕಾದಿಬಿದ್ದಾ ಕಪಿಕುಲದಂತೆ ತಾವರೆಯ ಸಖಸೂರ್ಯ ನಂತೆ, ತತ್ಸುತ ಸುಗ್ರೀವನಂತೆ ॥ ೧ ॥ ಭೂವರಾಧಿಪ ಧರ್ಮನಂತೆ, ದ್ರೌಪದಿ ಯಂತೆ । ಭೂವಿಬುಧಸುತನಂತೆ ರಾಕ್ಷಸಿಯಂತೆ ಫಣಿಯಂತೆ ಆ ವಿರಾಟ ರಾಯನಂತೆ, ಪಾರ್ವತಿಯನಾಥನಂತೆ ನೀ ವಿಜಯನಾಗಲು ಸಹಿಸದಲೆ ಕೋಪಿಸಿದ ಧೃತರಾಷ್ಟ್ರನಂತೇ ॥ ೨ ॥ ಮೋದದಿಂದ ನಿನ್ನ ಪಡೆದಾ ಮಧ್ಯಗೃಹನಂತೆ, ಆದರದಿ ಹರಿಪೂಜೆಮಾಳ್ಪಾ ಸೂರಿಜನರಂತ ॥ ಆದಿನ ಕಡಲಲ್ಲಿ ಮುಳುಗಿ ಪೋಗುತ್ತಿದ್ದಾ ನಾವೆಯಂತ, ಪಾದಪಿಡಿದಾ ಕಾಳೀ ಸರ್ಪನ ಕಾಯ್ದ ಪ್ರಾಣೇಶವಿಠ್ಠಲನಂತೆ ॥ ೩ ॥

೫೯. ರಾಗ–ನಾಟಿ (ಝಂಪೆತಾಳ).

ಗುರುವೆ, ಭಾರತಿನಾಥ। ಶರಣು, ಲಾಲಿಸೋಮಾತ। ಹರಿಪದಾರ್ಚನೆ ಕೊಟ್ಟು ಪೊರೆಯೋ, ದಯೆಯಿಟ್ಟು ॥ ಪ ॥ ರಾಮಸೇವಕನಾಗಿ ವಾನರ ಕಟಕನೆರಹಿ । ನೀಂ ಮುದದಿ ಲವಣಾಬ್ಧಿ ದಾಟಪೋಗಿ ॥ ಭೂಮಿ ತನುಜೆಳಿಗೆ ವಾರ್ತೆಯನೆ ಪೇಳಿ, ರಾಗಟಯ–ಸ್ವಾಮಿಗರ್ಪಿಸಿದ ಬಲವಂತ ಹನುಮಂತ ॥ ೧ ॥ ರಾಜಸೂಯುವ ಮಾಡುವದಕೆ ಮಾಗಧನ ಕೊಂದೆ । ಮಾಜಿಸಿದೆ ಕುರುಪತಿಯ ಸಂತತಿಯನು ॥ ಸೋಜಿಗವು ನಿನ್ನಲೀಲೆಯು ಆಯುಜಾತ ಬಿದೌಜರಕ್ಷಕ ದ್ರೌಪದೀಶ ಬಲವಂತ ॥ ೨ ॥ ಬುಧಮಧ್ಯಗೇ ಹನಲಿ ಅವತರಿಸಿ, ಕುಮತಗಳ ಬೆದರಿಸಿ, ತ್ರಿದಶಸಪ್ತಗ್ರಂಥಮಾಡಿ ॥

ಸುದಯದಿಂದುತ್ತಮರಿಗಿತ್ತು ಮತವನು ನಿಲಿಸಿ, ಬದರಿಯೋಳ್ ಪ್ರಾಣೇಶ ವಿಠಲನಲ್ಲಿರುವೆ ॥ ಗುರುವೆ ॥ ೩ ॥

೬೦. ರಾಗ–ಶಂಕರಾಭರಣ (ಅಟತಾಳ).

ಪವಮಾನರಾಯಾ–ಪಾವನಕಾಯಾ–ಕಾಯೋ–ದಿವಿಷತ್ಪೂಜಿತ ಕವಿ ಜನಗೇಯ ॥ ಪ ॥ ಭಕ್ತವತ್ಸಲದೇವ–ರವಿತೇಜ–ಸರ್ವೋದ್ರಿಕ್ತ ಪ್ರಣತ ಜನ ಸುರಭೂಜ ॥ ಶಕ್ರಲೋಕೈಕ ಅನಂತಜ । ಭುಕ್ತಿ ಮುಕ್ತಿದ ದಿತಿ ಜಾಹಿ ದ್ವಿಜರಾಜ ॥ ೧ ॥ ದುರಿತಾಂಬುಧಘಾಗಜ (?) ಕಾಳೀಶ । ಸರ್ವ–ಸುರವಂದ್ಯ ಪದಕಂಜ ನಿರ್ದೋಷಾ ॥ ಪುರರಿಪುಪಿತ, ಪಯೋಧರ ಭಾಸ । ಸಾರೆಗರೆದು ಪೂರ್ತಿ ಸೊಯನ್ನ ಅಭಿಲಾಷಾ ॥ ೨ ॥ ಪೌಲಸ್ತ್ಯಾನುಜ ಮಾರ ರಜರಕ್ಷ ಶ್ರೀಗೋಪಾಲನವನ ನೀಸುವದುಪೇಕ್ಷ ॥ ನೀಲೇಶತಮಾಡದೆ ತಾರಕ್ಷ ವಂದ್ಯ–ಕಾಲಿಗೆರಗುವೆ ದುರ್ಜನಶಿಕ್ಷ ॥ ೩ ॥ ಮಧುಸಖ ಪಾಲಾನುಜ ಪಾದಾರ–ವಿಂದ ಮಧುಕರದಂಡ ಮೇಖಲ–ಧಾರ ॥ ವಿದುರಾಗ್ರಜ ನಂದನ ಸಂಸಾರಾರ । ರಣ್ಯ । ಸುಧನಂಜಯ ವೃಕೋದರ ಸಮಾರ ॥ ೪ ॥ ಕುಟಿಲ ರಹಿತ, ಋಜುಗಣಾಧೀಶ । ಶ್ರೀಧೂರ್ಜಟಿ ವಂದ್ಯ, ಭಕ್ತಿಯಿಂಪ್ರಾಣೇಶ । ವಿಠಲನ್ನ ಭಜಿಸುತ್ತ ಸದ್ಭಾಷ್ಯ । ವನ್ನು ವರಸಮಾಡಿಸೂ ದಯದಿಂದ ನಿಶಾ ॥ ೫ ॥

೬೧ ರಾಗ–ಶಂಕರಾಭರಣ (ಅಟತಾಳ).

ವೃಷವಶ್ಯ ಪಾಲಿಪುದೆನ್ನ–ಈ ದು–ರ್ವಿಷಯ ತ್ಯಜಿಸಿ ಶ್ರೀಕೃಷ್ಣನ್ನ । ಅಸಮಪಾದಾಬ್ಜ ಭಜಿಸುವಂತೆ ಪ್ರತಿದಿನ, ಹಸನಾದ ಜ್ಞಾನಪ್ರೇರಿಸೂ ಭಕ್ತ ಸುರತರು ॥ ಪ ॥ ವರಿಸರ, ಕೃಷ್ಣೇಶ, ಗಂಧ–ವಹ, ಸಿರಿವಲ್ಲಭಪದಾರವಿಂದ । ಭೃಂಗ, ಪುರುಹೂತಮುಖ ಸುರವೃಂದ–ವಂದ್ಯ । ಗಿರಿಜಾಪಾಲಕ ಶತಾನಂದ ॥ ಆಹಾ ॥ ಎರಡುಹತ್ತೊಂದುಸಾಪಿರದಾರುನೂರ್ಜಪಸರುವ ಜೀವರೊಳಗೆ–ಇರಳೂ ಹಗಲೂ ಮಾಳ್ಪ ॥ ೧ ॥ ನಾಗಾದಿ ದಶರೂಪಧರ–ತಲೆ–ಬಾಗುವೆ ನಿನಗೆ ಉದಾರ । ವಿಕ್ರ–ಮಾಘಕಾನನ ವೈಶ್ವಾನರ, ಹೆಸದಾಗತಿ ಕುಜನ ಕುಠಾರ ॥ ಅಹಾ ॥ ಮಾಗಧರಿಪು, ಹೊತ್ತುಹೋಗುತಲಿದೆಈಗ ಭಾಗ ವತರಸಂಗ ಜಾಗುಮಾಡದಲೀಯೋ ॥ ವೃಷ ॥ ೨ ॥ ದೀನವತ್ಸಲ

ಶ್ರೀಮಾರುತ–ಯಾತುಧಾನಸಂಹರನೆ, ಹೇ ಮಾತರಿಶ್ವ–ಪ್ರಾಣೇಶವಿಠಲನ ದೂತ । ಚತುರಾನನಪದಯೋಗ್ಯ, ವಾತ ॥ ಆಹಾ ॥ ಕ್ಷೋಣಿಯೊಳೆನ್ನಂಥ ಹೀನರಿಲ್ಲವೊ ಪಾಪ–ಕ್ಷೀಣಿಸಿ ಸಲಹೋ ಸುಶೇಣಾದಿಸೂದನ ॥ ೩ ॥

೬೨. ರಾಗ–ಭೈರವಿ (ಅಟತಾಳ).

ಸೀನಲ್ಲ ದನ್ಯರೆ ಸಲಹಲು–ಕಾಯೋ–ಜಾನಕೀಪತಿದೂತ ಹನುಮಂತ ॥ ಪ ॥ ಗುರುವೆ ನಿನ್ನಯ ಪಾದ ಭಜಿಸುವರನ್ನ । ಧರೆಯೊಳು ಬನ್ನಪಡಿಸು ವೋರೆ ॥ ಗಿರಿಸುತ ನೀ ಗತಿಯೆನಲಾಗ, ಬೇಗ–ವೊರೆದೆಯಾತನ ಜಲಧಿ ಯೊಳಿಟ್ಟು ॥ ೧ ॥ ರವಿಜ ಶಕ್ರಜನಿಂದ ಬಳಲುತ ಬಂದು ಪವನ, ಪಾಲಿಪು ದೆನ್ನಲಾಕ್ಷಣ ॥ ಭುವನೇಶನಿಂದ ವಾಲಿ ಕೊಲ್ಲಿಸಿ, ಕಾಳೀ । ಧವ ಸುಗ್ರೀ ವನ ಭಯಬಿಡಿಸಿದೆ ॥ ೨ ॥ ತಂದೆ ಪ್ರಾಣೇಶವಿಟ್ಠಲಸಿರಿ-ನಿನಗಂದುಂಟಂದಿಲ್ಲೇ ಈ ಮಹಿಮೆಯು ॥ ಬಂದ ದುರಿತ ನಿವಾರಣಮಾಡಿ–ದಯದಿಂದ ಪಾಲಿಸೋ ನಿನ್ನ ದಾಸರ ॥ ೩ ॥

೬೩. ರಾಗ–ವರಾಳಿ (ಅಟತಾಳ)

ದೂರ ನೋಡುವುದುಚಿತವಲ್ಲವೋ–ವಾರವಾರಕೆ ಬಿಡದೆ ತುತಿಪೆ । ಮೀರಿದವನ ನಾ ನಿನಗೆ ಪವನ ॥ ಪ ॥ ರಾಮಚಂದ್ರನ ಸೇವೆಯ ನಿಷ್ಕಾಮ ದಿಂದ ಮಾಡಿ ಬಹಳ ತಾಮಸಜನಂಗಳ ತರಿದೆ ನೀಂ ಮಹಾಸಮರ್ಥನೆಂದೇ ॥ ಮನೆ, ಯಿಲ್ಲದವನು ಎಂದೆನೆ । ಕೋತಿ ರೂಪ । ಈ ಮುಖಾವು–ಹೀಗೆ ಅಂದಿನ । ನಗವಪೊತ್ತಿ ಭೂಮಿಯೊಳಗೆ ಕರಿಣನೆಂದೆನ ॥ ಹನುಮನೆ ॥ ದೂರ ॥ ೧ ॥ ವೊಕ್ಕು ರಣಕ ಹೆಜ್ಜೆಯ ಹಿಂದಕೆಯಿಕ್ಕದೆ ಭುಜವ ಚಪ್ಪರಿಸಲಾಗ । ನಕ್ಕವರ ಬಲಹುರಿದು ಹೋಯಿತು ಅಕ್ಕಟಕ್ಕಟಾ ನೀ ವೀರನೆಂದೇ ॥ ರಕು ತವಕುಡಿದ ನೀಚನೆಂದೆನ । ತಿರಿದುತಿಂದ, ರಕ್ಕಸಿಯನುಕೂಡಿದನೆಂದೆನೆ । ಒಡಲಬಾಕ ನೊಕ್ಕು ನಿನಗೆ ಬಹಳವೆಂದೆನೇ–ಭೀಮನೇ ॥ ೨ ॥ ತಿಳಿದು ಪ್ರಾಣೇಶವಿಠಲನಿಚ್ಛೆ ಇಳೆಯೊಳುದಿಸಿ ಹಲವುಮತವ ನೆಲಕ ವೊರಿಸಿ । ಮರು ತಮತವ ನಿಲಹಾಕಿದ ಗುರುಗಳೆಂದೇ । ತುಳುವರಲ್ಲಿ ಪುಟ್ಟದೆಯೆಂದೆನ । ಬಹಳ ಗುಗ್ಗರಿಮೆಲಿದ ಭೂತಮಗುವು ಎಂದೆನೇ–ಭಾರತೀಶ । ಸಲಹೋ ಬಿಡ ದಲೆಮ್ಮನೆಂದರೆ–ಮಧ್ವನೆ ॥ ೩ ॥

೬೪. ರಾಗ--ಮಾರವಿ (ಆದಿತಾಳ).

ಭಾರತೀರಮಣ–ನಂಬಿದೆ ಪಾದವಾರಿಜಾ ಕರುಣಾ ವಾರಿಧೆ ಯನ್ನನು । ದೂರ ನೋಡದೆ ನಿನ್ನ ಸಾರೆಗರೆದು ಭಯವಾರಿಸಿ ಸಲಹೋ ॥ ಪ ॥ ನೀಲ ಲೋಹಿತನಾಪಿತನೇ ಗೋಪಾಲನಸುತಾ । ಕಾಳಕೂಟಪಾನಿ ವಿಶಾಲಾಂಬಕಾ ಮಾರರಿಂದ । ವೇಳೆವೇಳೆಗಳಲ್ಲಿ ವೋಲಗವ ಕೈಕೊಂಬುವ ಕಾಳೀವಲ್ಲಭ, ಭೇಶಭಾಸ್ಕರರೋಲು ಸನ್ನಿಭ ॥ ಈಲೌಕಿಕನರರಾಲಯಕಾಯಸದೆ ವಾಲಯ ಸುಮತಿಯ ಪಾಲಿಪುದೊಲಿದು ॥ ೧ ॥ ಜಾನಕೀಪತಿ–ಸೇವೆ ಮಾಡಿದ್ದೈ ಕಾಣೆನೋ ಪ್ರತಿ । ಯಾನಿನಗಾರಾರಾ ಭುವನದೊಳಗೆ ಗಂಧವಹನೆ ॥ ಮು ದ್ರಿಯ ಕೊಂಡು ಕ್ಷಣದೊಳಗೆ ಜಲಧಿಯನ್ನೆ ಹಾರಿದೆ । ಸೀತೆಗುಂಗುರವನ್ನೆ ತೋರಿದೆ । ಆನಗರವನು ದಹಸಗೈಸಿ ಬಹು ದಾನವರ ನಳಿದು ದಶಾನನ ನೊದ್ದೆ ॥ ೨ ॥ ಪಾಪದೂರನೇ–ವೃಕೋದರ–ಶ್ರೀದ್ರೌಪದೀಶನೇ । ವಿಪಿನಚ ರಿಸಿ ಕುರುಪತಿಯ ತರಿದು ಕ್ಷಿತಿಪರನ್ನು ಬಿಡಿಸಿದಯ್ಯೊ ಪಾಂಡವರ (ಪರಿ) ಪಾಲಕ । ಕೋಪನಾಶನ–ಉದ್ಧರಿಸೆನ್ನ–ಚಾಪಭಂಜನ, ಶ್ರೀಪತಿದ್ವಯ ಪದ ಆವಜ ಭಜಿಸುವನೇ ಪರಮೇಷ್ಠಿಯ ರೂಪ ಗುಣಾಢ್ಯ ॥ ೩ ॥ ದೇಶಿಕೋತ್ತಮ–ಮಾರುತಿ, ಇಂದಿರೇಶನ ಪ್ರೇಮ । ಸಂಪಾದಿಸಿಕೊಂಡತಿಶಯ ಭಕುತಿಯಿಂದಾ ಲೀ ಸಮೀಚೀನವಾಗಿ । ತ್ರಿಂಶತಿಸಪ್ತಸಂಖ್ಯಾದರುಶನಗ್ರಂಥ ವಿರಚಿಸಿ, ದುಭಾ೯ಷ್ಯವಸಂತರಾಸಲಹುವರನಾಭಾಸಮಾಡಿದೆ ವ್ಯಾಸಭಜಕ ನಿನ್ನ ದಾಸ ನೆನಿಸಿಕೊಳ್ಳೋ ॥ ೪ ॥ ಅಂಜನಾಸುತ, ಪ್ರಾಣೇಶವಿಠಲನಂಜಲುನೊಯ್ಯುತ । ಭುಂಜಿಸಿದೆಯಲೊ ನಿರಂಜನ ಕಪಿ ಪ್ರಭಂಜನ, ಕೊಡು ಕೃತಾಂಜಲಿಯಿಂ ಬೇಡುವೆ । ಕಂಜನಾಭನ ಸ್ಮರಣೆ ದಿವಾ ಸಂಜೆಯಲಿ ಘನ ಪುಂಜ ಸುಗುಣ ಮಣಿಮಂಜರಿ ಅರ್ಥ ಪರಂಜಳ ತಿಳಿಸೋ ಧನಂಜಯರಕ್ಷ ॥ ೫ ॥

೬೫. ರಾಗ–ಬ್ಯಾಗಡೆ (ಆದಿತಾಳ).

ಎತ್ತಾರೇ ಹಿಂದಿನಾ ಮಾತು । ಭಾರತೀಶ ನಿನ್ನ–ಭೃತ್ಯರು ತಮ್ಮನು ಮರಿತು । ನೀ ಸಲಹದಿದ್ದರೆ ಹೀಗೆಂದು ॥ ಪ ॥ ಮೂಗು ಹಿಡಕೊಂಡು ಕುಳಿತಿದ್ದಿ ನೂರತೊಂಭತ್ತೆಂಟು ಕಲ್ಪ । ಆಗಲೊಬ್ಬರೂ ನಿನ್ನನಾರೆಂದು

ಕೇಳಾರೋ ॥ ಈಗ ದೇವರ ದಯೆಯಿಂದ ಹದಿನಾಲ್ಕು ಲೋಕಕೆ ಮಂತ್ರಿ ಯಾಗಿ ಸಂತೋಷದಿಂದ ಮೇಲು ಮೆರೆವುದಕ್ಕೀ ಗರ್ವವೆಂದು ॥ ೧ ॥ ಊರ ನೀರದಲೆ ಕಂಡಗಿಡದ ತೊಪ್ಪಲುಗಳ ತಿಂದು । ಅರಣ್ಯದೊಳು ಬಹುಕಾಲ ಬದುಕಿದ್ದು ಮತ್ತಾ । ಶ್ರೀರಾಮನಾಳಾಗಿ ಶಿಲೆಯ ಪೊತ್ತುದು ಜಗವೆಲ್ಲಾ ಬಲ್ಲದು ಮುಂದೆ। ವಾರಿಜಾಸನ ಪದವಿಯಾಳೆಂದು ಹರಿ ನುಡಿದುದಕೀ ಗರ್ವ ಯೆಂದು ॥ ೨ ॥ ತಿರಿದುಂಡು ಹನ್ನೆರಡಬ್ದ ವನವಾಸ ಅಜ್ಞಾತಾವೊಂದು— ವರುಷ ಮತ್ಸ್ಯಾಧಿಪನಾಗಾರದಲಿ ಪಾಕಮಾಡಿ ॥ ತರುಣೀ ಮಾನಭಂಗವ ನೋಡಿ ಸುಮ್ಮನಿದ್ದೆಯಾಗ, ಕೃಷ್ಣ । ತರಿದು ದುರ್ಯೋಧನರ, ರಾಜ್ಯನಿವ ಗಿತ್ತುದಕೀ ಗರ್ವವೆಂದು ॥ ೩ ॥ ಎಲ್ಲರೂ ಕಂಡದ್ದು ಹುರಳಿ ಗುಗ್ಗರಿ ತಿಂದು, ಭಿಕ್ಷಾರ್ಥಿಯಾಗಿ । ಮುಳ್ಳುಮರದಡಿಯಲ್ಲಿ ಕುಳಿತದ್ದು ಹಿರಿಬದರಿಯಲ್ಲಿ ॥ ಸುಳ್ಳಲ್ಲ, ವೇದವ್ಯಾಸಾನಂತ ವೇದಾರ್ಥ ತಿಳಿಸಿ ಸಕಲ ಬಲ್ಲವನೆಂದು ಹೆಸರೂ ಕೊಟ್ಟದೆವೇ ಈ ಗರ್ವವೆಂದು ॥ ೪ ॥ ಏನೆಂಬುವ ಸರ್ಪರಲ್ಲಿ ಹೊಕ್ಕು ಬಳಲ ಮಾಡುತಿದ್ದಿ, ಹೀನರು ನಿನಗೀಸು ನೀರಹಾಕರಿದು ಕೇಳಿ ॥ ಪ್ರಾಣೇಶವಿಠಲನ್ನ ಭಜಿಸಿ ಪೂರ್ಣ ದಯೆಕ ಪಾತ್ರನಾಗಿ । ಪ್ರಾಣನಾಂಕಾರಿ ಮುಖಂದರ್ಶನ ಗೊಂಬುದಕ್ಕೀ ಗರ್ವವೆಂದು ॥ ೫ ॥

೬೬ ರಾಗ—ಭೈರವಿ (ಅಟತಾಳ) [ರಾಮಾಂಜನೇಯ ಸಂವಾದ].

ರಾಘವನಾಡಿದ ಮಾತಿಗಾಂಜನೇಯ ಬಿನ್ನವಿಸುವದು । ಈಗ ಹೇಳುವೆ ಸಜ್ಜನರಾಲಿಸುವದು ॥ ಪ ॥ ಆ ರವಿನಂದನನು ತಾ ಮೇರೆ ಮಾಡಿ ಅಟ್ಟಿ ದನು । ವಾನರರುಗಳನು ತಿಂಗಳು ಮೀರಿತಿಂದಿಗೆ ॥ ಮಾರುತಿ ಕೇಳೀಮಾತು ಇನ್ನಾರ ಕಾಣೆನು ಬಲ್ಲಿದರ । ನಾರಿಯೆಲ್ಲಿಹಳೋ ವಾರ್ತೆತಾರೋ ನೀ ಪೋಗೀ ॥ ೧ ॥ ಸ್ವಾಮಿಪಾಲಿಸೊ ಅಪ್ಪಣೆ । ನಾ ಮುಂಚೆ ಪೋಗುವೆ ತಡವ ಮಾಡದೆ ಎಲ್ಲೀಗೆನ್ನ । ಭೂಮಿಜಾರಮಣ ॥ ಈ ಮುದ್ರೆ ಕೊಂಡು ಪೋಗೋ, ಶಾಮಲಾವತಿ ದಿಕ್ಕಿಗೆ । ಸಮುದ್ರದಾಟ ಬೇಗ ಪಾವಮಾನಿ ಕೇಳೊ ॥ ೨ ॥ ಭೂತಲಾಕಾಶ ಲೋಕಾದಿ ಪಾತಾಳದೊಳಗಿರಲಿ । ನಾ ತರು ವೆನು ವಾರ್ತೆ—ಜಗನ್ನಾಥ ಪರಾಕು, । ಹೇ ತರಳ, ತ್ರಿಲೋಕವಿಖ್ಯಾತನಾ ಗಿಹ ರಾವಣಪಾತಕ ಕೊಂಡು ಪೋಗಿಹ । ಸೀತೆಯ ಕೇಳೊ ॥ ೩ ॥

ಬುದ್ಧಿ ದೇವನೀಕೊಟ್ಟಂಥ ಬುದ್ಧಿಯಿಂದಲೇ ಅವನ ಗುದ್ದಿ ಸರ್ವ ಬಲವನ್ನೊ ಒದ್ದು ಬರುವೆನೊ ॥ ಮುದ್ದುಕಂದ ರಕ್ಕಸ ರವಧ್ಯರೋ ವರವಡೆದು ರುದ್ರ ನಿಂದ, ಮಾಡದಿರೊ ಗದ್ದಲ, ಕೇಳೊ ॥ ೪ ॥ ತಂದೆ ರಾಮಾ, ನಿನ್ನ ದಯೆ ಯಿಂದ ಈಡಲ್ಲವೊ ಯನಗೆ । ನಂದಿಧ್ವಜಾ ಈ ರಕ್ಕಸರೊಂದು ತೃಣವೋ ॥ ಕಂದ ಈ ವೇಳೆಯೊಳೇನು ಬಂದುದನುಭೋಗಿಸಿ ನಾನು । ಕೊಂದು ಹಾಕುವ ದಿನವೂ ಮುಂದುಂಟು ಕೇಳೋ ॥ ೫ ॥ ದೇವಿಯು ನೋಡಿ ಬರು ವಾಗ ತಾನಂತು ಕೆಣಕಲು ದಾನವರು, ಸುಮ್ಮನಿರಲೇನು ದೇವದೇವೇಶ ॥ ಕೋಪಿದಾಗ್ರೇಶನೆ ನೀನು ಸಾವಿರಾಳಿಗೆ ಒಬ್ಬನೇ ಆ ವಿಚಾರವ ಮನಕೆ ತರುವದೇ ಕೇಳೊ ॥ ೬ ॥ ಹೇಳಿದ ಮಾತು ಕಟ್ಟದ ಕೂಳು ನಿಲ್ಲವೊ । ಆ ವನದೊಳೇನಹದೊ ಬಲ್ಲೆನೇ ಪ್ರಾಣೇಶವಿಠಲಾ ॥ ಬಾಲಕ ಹನುಮಂತ ನಿನ್ನೊಳಗನ್ನಾ ರಾಣಿಯೆಲ್ಲಿಹಳೋ ನೋಡಿಬರುವುದಕಾಲಸ್ಯ ಕೇಳೋ ॥ ೭ ॥

೬೭. ರಾಗ—ಕಾಂಬೋಧಿ (ಏಕತಾಳ).

ರಾಮರಾಮಾಯೆಂದು ಮಾರುತಿಯು ನಡೆದ— ಸೋಮವದನೆ ಜಾನಕೀ ಯನು ಹುಡುಕಾ ॥ ಪ ॥ ಹರಿಯಿಂದ ಗುರುತುಪಡೆದು ತನ್ನ ಶಿಖದಲಿ । ಧರಿಸಿಕೊಂಡತಿಶಯ ಭಕುತಿಯಲಿ । ತೆರಳಿ ಮುಂದುಮುಂದಕೆ ಕಡಲಸಮೀ ಪದಿ ವಾನರಾಧೀಶ ಮಾಡಿದ ವಾಸವನೂ ॥ ೧ ॥ ರವಿಜನ ಭಯದಿಂದ ಕಪಿ ಗಳೆಲ್ಲವು ಎದೆಯನೊಡೆದು ನಗದೊಳು ಕುಳಿತಿರಲು । ಪವನಜನು ಬಂದು ವಿಚಾರವಮಾಡಲು ಸಾಗರವ ದಾಟಲೊಬ್ಬಗೊಶವಲ್ಲವೆಂದರೆಲ್ಲರಲ್ಲಿ ॥ ೨ ॥ ನಮ್ಮನು ರಕ್ಷಿಸೋ ಕುಲಮಣಿಯೆ ವಾಸುದೇವನಪ್ರೊಮ್ಮಗನ, ಎಂದು ಕಪಿಗಳು ಯಾಚಿಸೆ ॥ ಗಮ್ಮನೆಹಾರಿ ರಕ್ಕಸಿ ಹೊಟ್ಟೆಹೊಕ್ಕು ದಾಟ ಮತ್ತೇ । ಒಮ್ಮೆ ಒಬ್ಬಳನು ಸೀಳಿ ಪುರಪ್ರವೇಶ ಮಾಡಿದ ॥ ೩ ॥ ಗಿಡಗಿಡ ಚರಿಸುತ ಸ್ಥಳಸ್ಥಳದಲಿ ಬಲು, ಹುಡುಕುತ ಮೂಜಗಪೂಜಿತನ—ಮಡದಿಯಾಕೃತಿ ಯನು ಕಾಣಲಾ ಕ್ಷಣದೊಳು । ತಡೆದನಲ್ಲಿಯೇ ಪದಗಳ ಮುಂದಕ್ಕಿಡ ದಲೇ ॥ ೪ ॥ ಋಷಿಗಳಂದದಿ ಪ್ರಾಣೇಶವಿಠಲನನುತಿರೆಶಿತಿಮುಖಿಯಳು ಯೋಂಜನೇಪದಬಿಸಜಾಂಘ್ರಿಗಳಿಗೆರಗಿ ಜಯಜಯವೆಂದು । ಉಸಿರಿದ ರಘು ಪತಿಯ ಸುದ್ದಿ ವಿಸ್ತರದಲಿ ॥ ರಾಮ ॥ ೫ ॥

೬೮. ರಾಗ-ಕಾಂಬೋಧಿ (ಝಂಪೆತಾಳ) [ಸೀತಾಂಜನೇಯ ಸಂವಾದ].

ನಮೋನಮೋ ರಾಮ ಕಳುಹಿಸಿದನಮ್ಮಾ । ಮಮ ಸ್ವಾಮಿ ಬದುಕಿಹನೆ ಪೇಳೊ ತಮ್ಮ ॥ ಪ ॥ ವಾಸುದೇವನು ಜಗವ ಸೃಜಿಸುವನು ಕೆಡಿಸುವನು ನಾಶವೆಲ್ಲಿಹದು ರಘುವರ್ಯಗಮ್ಮಾ ॥ ವಾಸವಾಗಿರೆ ವನದಿ ಮೃಗ ತರಲು ಪೋಗಿ ಜಗದೀಶ ನುಡಿದನು ಕಡೆಯ ಮಾತು ತಮ್ಮ ॥ ೧ ॥ ಖಳ ಮಾಯೆಯಲಿ ಬರಲು ರಾಘವನು ಸಂಹರಿಸೆ । ನೆಲಕುರುಳಿ ಕೂಗಿದನು ಅವನೇ ಅಮ್ಮಾ ॥ ಬಲುವಿಂದ ಲಕ್ಷ್ಮಣನ ಬೈದು ಅಟ್ಟಿದೆ ನಾನು । ಜಲಜಾಕ್ಷನೋರ್ವನಿಹನೇನೋ ತಮ್ಮ ॥ ೨ ॥ ಅನುಜಯುಕ್ತದಿ ದೇವ ಕಪಿದಂಡುನೆರಹಿಹನು । ಹನುಮಂತನಾ ರಾಮದೂತನಮ್ಮಾ ॥ ಇನಿತು ಸತ್ಯವೊ ಅನೃತವೊ-ನಂಬಿಗ್ಯಾಗದು ಮನದ-ಅನುಮಾನ ಬಿಡುವಂತೆ ಮಾಡೋ ತಮ್ಮ ॥ ೩ ॥ ಸಿರಿಕಾಂತ ಶ್ರೀಮಂತ ಕರುಣದಲಿ ಕೊಟ್ಟಹನು । ಗುರುತಿನುಂಗುರವನಿದು ನೋಡಿರಮ್ಮಾ ॥ ಪರಮಾತ್ಮನಿಗೆ ದೂತನಹುದು ಶುಭವಾರ್ತೆಗಳ್, ಇರುವನೆಲ್ಲಿದ್ದುವಿಸ್ತರಿಸೆಲೋ ತಮ್ಮ ॥ ೪ ॥ ಕಾನನದೆ ಚರಿಸುತ ರವಿಸುತಗೊಲಿದು ಶಕ್ರಜನ । ಹಾನಿಮಾಡಿದನಲ್ಲೇಯಿರುವ ನಮ್ಮಾ ॥ ಜಾನಕಿಯೆಂದೆನ್ನನು ನಿತ್ಯದಲಿ ನೆನಸಿ, ಏನು ಮಾಡುವನೊ ಪೇಳುವದೋ ತಮ್ಮ ॥ ೫ ॥ ನಿನ್ನಗಲಿ ವ್ಯಾಕುಲದಿ, ನರರಂತೆ ಕೇಶವನು । ಅನ್ನಉದಕವನ್ನೆಲ್ಲಾ ಜರಿದನಮ್ಮಾ ॥ ಪನ್ನಗಾರಿಧ್ವಜನು ಬಂದು ದನುಜರ ಗೆಲಿದು । ಎನ್ನ ಕೂಡುವುದ ನಾ ಕಾಣೆ ತಮ್ಮ ॥ ೬ ॥ ತಾಯೆ ರಾವಣನಳಿದು ನಾನೊಯ್ವೆ ನಿನ್ನೀಗ-ನೋಯಿಸದೆ, ಹರಿಗೀಡು ಆವನಮ್ಮಾ ॥ ನಾಯಕನು ನೀಂ ಭೃತ್ಯರೊಳು, ತ್ವರಿತ ಬಹದೆಂದು । ಕಾಯಜಪಿತನಿಗೆ ಬಿನ್ನೈಸೋ ತಮ್ಮ ॥ ೭ ॥ ಪೋಗಿ ಬರುವೆನು ನಿಮ್ಮ ಗುರುತು ಏನಿದೆ ಕೊಟ್ಟು । ಬೇಗನಪ್ಪಣೆಯೆನಗೆ ಈವದಮ್ಮಾ ॥ ನಾಗಶಯನಗೆ ರಾಗಟೆಯನಿತ್ತು ಪದಕೆ ತಲೆಬಾಗಿರುವ ಳೀಳದಲಿಯೆನ್ನೋ ತಮ್ಮ ॥ ೮ ॥ ನಳಿನಮುಖಿಯೆ ನಮೋನಮೋ ದಯೆಯಿರಲಿ ಸ್ವಲ್ಪದಿನ-ದೊಳಗೆ ಬರುವೆವು ಚಿಂತೆ ಬೇಡವಮ್ಮ ॥ ಭಳಿ ಭಳಿರೆ ಪ್ರಾಣೇಶವಿಠ್ಠಲನ ಪೂರ್ಣದಯೆ-ಗಳಿಸಿ ಅಜಪಟ್ಟವನು ಆಳೊ ತಮ್ಮ ॥ ೯ ॥

೬೯. ರಾಗ-ವರಾಳಿ (ಅಟತಾಳ).

ಹಾಳುಮಾಡಿದ-ಹನುಮ-ಸಾಲುವನಗಳ । ಧಾಳಿಕೊಟ್ಟನಿತರ ಜನಕ । ಕೇಳಲಿಡನು ದನುಜನೆಂದು ॥ ಪ ॥ ಚರರು ವೇಳಲವನು ಖತಿಯು ಲಿರುವ ದಳವ ಕಳುಹಲದನು । ತರಿದ ಭಯವಬಡದೆ ಮುಂದಕೆ । ಚರಣ ವಿಡದೆ ಬಹುಸಮರ್ಥ ॥ ಹಾಳು ॥ ೧ ॥ ಹರಿಜಿತ ಬಲು ಭರದಿ ಬರಲು । ಧರವು ಸಿಗುವದಿವನ ವಶಕೆ । ಮುರೇಳುಮುಖನ ಕಾಂಬುವೆನೆನುತ । ಕರವ ಮರೆದ ಮರುತಕುವರ ॥ ೨ ॥ ದಾನವಪತಿಯಲ್ಲಿ ಪೋಗಿ-ಏನು ಯೋಚನೆ ಯನ್ನು ಮಾಡದೆ । ತಾನು ಗಂಭೀರಸ್ವರದಿ ಪೇಳ್ದ । ಪ್ರಾಣೇಶ ವಿಟ್ಠಲನ ಮಹತ್ಮಯನು, ॥ ೩ ॥

೭೦. ರಾಗ-ಕಾಂಬೋಧಿ (ಝಂಪೆತಾಳ).

ದಿತಿಜಕುಲ ತರಿಯ ಬಂದೆನೋ-ನಿನ್ನ ವೈರಿ ರಘುಪತಿಯ ನಿಜದೂತ ನಾನೆ ।। ಮತಿಹೀನ ಕಪಿ ನಿನ್ನ ಗುಣವ ತೋರಿದೆ ನಮ್ಮ ಹತವಮಾಡುವನಾ ವನೋ । ಈಗ ॥ ಪ ॥ ಅಬ್ಬರಿಸಿ ಮಾತನಾಡಿದ ನಿಂತು ಹನುಮಂತ । ಕೊಬ್ಬು ಸಲ್ಲದೊ ಅಸುರನೆ ಹಿಂದೆ । ಇಬ್ಬರೂ ಸ್ವರ್ಣನಾಮಕರ । ನೆಲಕೆ ದಬ್ಬಿದವನಾರೋ ಬಹುಮಕರ-ಬುದ್ಧಿ ಹಬ್ಬಿತೇ ನಿನಗೆ । ವಿಧಿಶಿವಕರಾ ॥ ಅಬ್ಜ ಪೂಜಿತನು ನಿನ್ನ ಸೀಳುವಾಗಲಿ ವೀರಬೊಬ್ಬೆಯಿಕ್ಕುವೆ ನಾನಲೋ । ಮರುಳೇ ॥ ೧ ॥ ನಗೆ ಬರುವದಯ್ಯ ಕಪಿ ನಿನ್ನಿಂದ-ಹಗರಣದ ಮಾತುಗಳನು ಕೇಳಿ । ಬಿಗವು ಹೇಳುವನು ನಾನಲ್ಲಾ-ಮೂರು ಜಗದಿಯನ್ನರಿಯದವರಿಲ್ಲಾ-ಭಾಗ್ಯ-ಮಿಗಿಲಾಗಿ ಫಳಿಸಿಹೆನೋ ಬಲ್ಲ್ಯಾ ॥ ನಗಜಾಧಿಪತಿಯಿಂದ ವರವ ಪಡೆದಿಹೆ ಒಬ್ಬರಿಗೆ ಶಿಗಿನ್ಯಾಅರಿಕಯಿರಲೀ-ಕಪಿಯೇ ॥ ೨ ॥ ಪುಸಿ ಯಲ್ಲವಿನಿತು ನೀನಾಡಿದುದು ರಾವಣನೆ । ವಸುಧಿಜೆಯ ಕೊಂಡು ಒರಲು ಬೆಂಕಿ-ವಸನದೊಳಗಿಟ್ಟ ತೆರದಂತೇ ॥ ನೋಡು ಪಶುಪತಿಯು ವರವು ಆದ ರಂತೇ । ನಿನ್ನ ದಶವದನಗಳು ಉಳಿಯದಂತ ॥ ದಶರಥನ ತನಯ ಸವರುವ ತಿಳಿದು ಬಿಟ್ಟುಕೊಡು-ಶಶಿಮುಖಿಯು, ಬದುಕಿಕೊಳ್ಳೋ ಮರುಳೇ ॥ ೩ ॥ ಇನ್ನೊಂದು ಮಾತನಾಡಿದರಾಡೊ ತಾಳುವೆನೊ । ಚನ್ನ ಸೀತೆಯನು ಬಿಡೆ ನೋ ದಂಡು ॥ ಯನ್ನ ಮೇಲೆನಿತಿನ್ನು ಬರಲೀ-ಸ್ವಲ್ಪ-ಖಿನ್ನನಾಗೆನೊ

ತಿಳಿದು ಇರಲೀ । ಇದಕೂ ಘನ್ನತೆಯು ಬರಲೆನ್ನ ಹರಲೆ ॥ ಸಣ್ಣ ಮನುಜರು ಹತ್ತುಕೋಟಿ ಕೂಡಿದರೇನು । ಯನ್ನ ಸಮನಾಹರೇನೋ । ಕಪಿಯೋ ॥ ೪ ॥ ಸೊಕ್ಕಿ ನುಡಿಯಲು ಬೇಡ ತಾಳಲಾರೆನೊ ಬಹಳ । ಕಕ್ಕಸವು ತುಂಬಿತನಗೆ, ಮಣ್ಣು–ಮುಕ್ಕಿಸುವೆ, ಕುಂಭಿಣಿಗೆ ಕೆಡಹೀ । ಬಿಡದೆ ರಕ್ಕುತವ ಸುರಿಸುವೆನೊ ಮಡುಹಿ ॥ ಆಗ ಚಿಕ್ಕ ನರಿಯಂತೆ ಬಾಯ್ದೆರೆವೆ । ಪೊಕ್ಕು ಲವಣಸಮುದ್ರ ಪಾತಳದೊಳಗಡಗೆ । ತೆಕ್ಕೆಯಲಿ ಪಿಡಿದು ತರುವೇ–ಮರುಳೇ ॥ ೫ ॥ ಹತ್ತುತಿರಗಳೂ ವಿಂಶತಿ ಭುಜವು ಮನಯೊಳಗೆ ಕತ್ತಿವಟ್ಟಿಹವು ಒಂದೂ ಗುದ್ದು ॥ ಸುತ್ತ ನೆರೆದಿಹ ಚರರಹಿಂಡಸುರರ । ಸಿತ್ರವಾಳುವೆ ನಾನು ಚಂಡ–ನಮ್ಮ ಪಿತ್ತ ತುಂಬಿಹುದೆಲ್ಲ ಕಂಡ್ಯಾ ॥ ಎತ್ತಹೋಗಲು ಬೇಡ ಯನ್ನ ಬಳಿಯಲಿನೀರು ಉತ್ತಮಾನ್ನವ ಕೂಡುವೆನೋ । ಕಪಿಯೋ ॥ ೬ ॥ ತೈಲವಿಲ್ಲದ ದೀಪದಾ ಬೆಳಕು ನಿಜವಲ್ಲ ಕೇಳು ದನುಜನೆ ನಾರುವೆನು ಕೂಗೀ । ನಾಳೆ ಬರುವುದು ನಮ್ಮ ದಂಡು । ಲಂಕ ಹಾಳುಮಾಡುವದ ನೀ ಕಂಡು ಕಂಡು । ಗೋಳನಾಡುವದು ಬಲು ಭಂಡೂ ॥ ವಾಲಿಯೆಂಬುವನು ಬಲು ಭಂಟ ನೀ ಬಲ್ಲೆ–ಸಿರಿಲೋಲ ಸಂಹರ ಮಾಡಿದಾ । ಮರುಳೇ ॥ ೭ ॥ ಅಡವಿಯೊಳು ಮನೆಮಾಡಿ ತಮ್ಮ ಬಿಲ್ಲ ತಾವ್ ಪೊತ್ತು । ಒಡಲ ಹಸಿವೆ ಈರ್ವರೂ ನಿರುತಾ । ಗಿಡಗಡವ ತಿರುಗುವುದು ಕಂಡೇ–ಯನ್ನ–ಒಡನೆ ವುಸಿಯೇಕವಗೆ ದಂಡೇ । ಇನ್ನು ತದೆಯೆ ರೂಪವ ನಿನ್ನ ತುಂಡೇ–ಕಡಿದು ಶಿಕ್ಷಿಸುವೆ ಯನಗಭಿಮುಖನು ಆಗವಲೆ ನಡೆಯೊ ನಿನ್ನ ಬಂದ ಕಡೆಗೆ । ಕಪಿಯೋ ॥ ೮ ॥ ಕಟ್ಟಜಾತಿಯೆ, ಹೀಗೆನಾಡುವರೆ ಇನಿತೆಂದು । ಮುಷ್ಟಿಯಲಿ ಅವನ ಎದೆಗೇ ಗುದ್ದೆ । ಅಷ್ಟುಮಾತ್ರಕೆ ಧರಣಿಗುರುಳೀ–ರಕ್ತ ಕಟ್ಟು ಇಲ್ಲದೆ ಸುರಿಯೆ ಅರಳಿಯಂತೆ–ನಷ್ಟವಾಗಲು ದೇಹ ಬಳಲಿ ॥ ಸಿಟ್ಟನಿಂದಲ ಯೆದ್ದು, ಏನು ನೋಡುವಿರಿವನ–ಕಟ್ಟ ಕಿಚ್ಚನು ಬಾಲಕೇ । ಎಂದಾ ॥ ೯ ॥ ಪುಚ್ಛವನು ಪಿಡಿದು ಅಸುರರು ಸೀರೆಗಳ ಸುತ್ತೆ । ಹೆಚ್ಚಿಕ ಮುಂದಕ ಬೆಳೆಯಲೂ ಮಿಗಿಲು ॥ ತುಚ್ಛಗೈದರು ತಿಳಿಯಲಿಲ್ಲಾ ಬೆಂಕಿಹಚ್ಚಲಿಕೆ ಪಟ್ಟಣವನೆಲ್ಲಾ । ಉರಿಯು ಮುಚ್ಚಿಕೊಂಡಿತು ಮಡಿದರೆಲ್ಲ ॥ ಎಚ್ಚತ್ತು ಕೆಲವು ಜನ ಹಲವು ಕಡೆಯಲಿ ಪೋಗಿ ಬಚ್ಚಿಟ್ಟುಕೊಂಡುಳಿದರು ಪ್ರಾಣಾ

॥ ೧೦ ॥ ಸ್ವಾಮಿ ಪ್ರಾಣೇಶವಿಠಲನ ಆಜ್ಞೆದಿಂ ಪೋಗಿ । ಭೂಮಿಜೆಯ ಗುರುತು ಕೊಂಡು ಖಳರಾ, ಸ್ತೋಮವಧಿಶ್ಯಬ್ಧಿ ಹಾರಿದನು-ಭಕ್ತಪ್ರೇಮ ನಂಘ್ರಿಗಳಿಗೆರಗಿದನೂ ॥ ಅಲ್ಲಿಯಾವಮಾತನಲ್ಲಪೇಳಿದನು ಭೂಮಿಯೊಳು ಯಂತ್ರವುದ್ಧಾರಕನು ಎನಿಸುವನು ಈ ಮುನಿಪನುಧ್ವಚಾರ್ಯ-ಆರ್ಯಾ ॥ ೧೧ ॥

೭೧. ರಾಗ-ಭೈರವಿ (ಝಂಪೆತಾಳ)

ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥ ಅಂಜನಾಸುತನಿಗೆ ಅಗಣಿತ ದನುಜ ಸಂಹರಗೆ । ಕಂಜನಾಭನ ಭಜನೆ ಮಾಡುವವಗೆ ॥ ಭುಂಜಿಸಿ ವಿಷವ । ಸುರರ ಪಂಥವಗೆಲಿಸಿದ । ವಸಿಗೆ ಸಂಜೀವನವ ತಂದ ಹನುಮಂತಗೆ ॥ ಜಯಮಂಗಳಂ ॥ ೧ ॥ ಕುಂತೀನಂದನ ವೃಕೋದರಗೆ ಅಘದೂರಗೆ । ಸಂತರೊಡೆಯಗೆ । ದ್ರೌಪದಿಯರಸಗೆ । ಅಂತಕಾತ್ಮಜಗೆ ಉಪದೇಶವನು ಮಾಡ್ದವಗೆ । ಚಿಂತರಹಿತಗೆ । ಭಕ್ತಜನಪಾಲಗೆ ॥ ಜಯ ॥ ೨ ॥ ಕಲಿಯುಗದಿ ಮಧ್ವಮುನಿಯಾಗಿ ಅವತರಿಸಿದಗ । ಹಲವು ಮತಗಳ ಸೋಲಿಸಿದ ಧೀರಗೆ ॥ ಸುಲಭ ಜ್ಞಾನವನು ಬುಧರಿಗೂರೆದ ದಯಾಸಾಗರಗೆ । ಕಲಿಹ ಪ್ರಾಣೇಶ ವಿಠಲನ ದಾಸಗೆ ॥ ಜಯಮಂಗಳಂ ॥ ೩ ॥

೭೨ ರಾಗ-ಸಾರಂಗ (ಅಟತಾಳ).

ಮಂಗಳಂ ಜಯ ಮಂಗಳಂ । ಶುಭ ಮಂಗಳ ಶ್ರೀಕೃಷ್ಣವಲ್ಲಭಗೆ । ಪ ॥ ವೈನತೇಯಾಹಂಕಾರ ಪರಿಹರಗೆ । ಭಾನುಪುತ್ರಾರಿಧ್ವಜವೇರಿದಗೆ । ಸ್ಥಾಣುರೂಪಗಳ ಕೋಟಿ ರೋಮದಿ ತೋರಿದಗೆ । ಆನಗಜವಂದ್ಯ ಪದಾಂಬುಜಗೆ ॥ ಮಂಗಳಂ ॥ ೧ ॥ ಪಾದೋದಕದಿ ಬಿದ್ದು ಎದ್ದವಗೆ । ಕಾದ ಬಂದವರ ವಧಿಸಿದವಗೆ ॥ ಹೇ ದಯಾಂಬುಧೆ ಕಾಯೆಂದಂಬೆ ಬಿನ್ನೈಸಲು ಮೋದಪಿತೃಹಿಗಳಿಗೊಲಿದವಗೆ ॥ ೨ ॥ ಗೋಪೀಚಂದನ ತಂದ ಮುನಿವರಗೆ-ಗೋಪೀಕಂದನ ಪ್ರತಿಷ್ಠಿಸಿದವಗೆ ॥ ಗೋಪಾರಿನಗ ಕುಲಿಶಗೆ । ತ್ರಯರೂಪಗೆ ಶ್ರೀ ಪ್ರಾಣೇಶವಿಠಲನ ದೂತಗೆ ॥ ಪ ॥ ೩ ॥

೭೩. ರಾಗ–ಸೌರಾಷ್ಟ್ರ (ಏಕತಾಳ).

ಭಾರತೀರಮಣಗೆ ಮಂಗಳ–ದ್ವಿಜ–ಮಾರಾರಿಮುಖವಿನುತಗೆ ಮಂಗಳ ॥ ಭಾರತೀರಮಣಗೆ ಮಂಗಳ ॥ ಪಲ್ಲ ॥ ದೋಷರಹಿತಗೆ ಆಂಜನೇಯನಿಗೆ–ರಘುಪತಿ–ದಾಸ ಪವಮಾನಿಗೆ ಮಂಗಳ ॥ ಆಶೆಯಿಲ್ಲದೆ ಶ್ರೀಶನಂಘ್ರಿ ಪೂಜಿಸಿದಗೆ । ಶ್ವಾಸ ಸರ್ವರಲ್ಲಿ ಮಾಳ್ಪವಗೆ ॥ ಮಂಗಳ ॥ ೧ ॥ ಆಯುರಾಯುಜ ಅಜಗರಸುತ್ತಿ ಕೊಳಲಾಗಿ । ನೋಯದಲಿದ್ದವಗೆ ಮಂಗಳ ॥ ಆಯೋನಿಜೆಗೆ ಪುಷ್ಪ ತಂದು ಕೊಟ್ಟವನಿಗೆ । ರಾಯಕೌರವರಳಿದವಗೆ ಮಂಗಳ ॥ ೨ ॥ ಲೋಕದೊಳಗೆ ಮಧ್ವರಾಯಗೆ ಸದ್ವೈಷ್ಣವರಾ–ಸಾಕುವ ಮುನಿಪಗೆ ಮಂಗಳ ॥ ಮಾಕಾಂತ ಪ್ರಾಣೇಶ ವಿಟ್ಠಲ ಸರ್ವೋತ್ತಮನೆಂದು ಸಾಕಲ್ಯದಿಂ ಪೇಳಿದವಗೆ ॥ ಮಂಗಳಂ ॥ ೩ ॥

(೨೦) ಲಕ್ಷ್ಮೀ ಸ್ತುತಿ.

೭೪. ರಾಗ–ಶಂಕರಾಭರಣ (ಅಟತಾಳ).

ವಸುಧೀಜೆ ಸೀತೆ ವೈದೇಹಿ–ನಾ ನಮಿಸುವೆ ಪಾದಾಬ್ಜಕೆ ಪಾಹಿ, ಅಹ ದಶಕಾರಿಸತಿ, ವಿಧಿ ವೃಷಭೇಶ ಪೂಜಿತೆ । ಬಿಸಜಮಂದಿರೆ ದೀನ ಆಸುರೇತ ರಾಂಘ್ರಿವೆ? ॥ ಪಲ್ಲ ॥ ಉದಿತಭಾಸ್ಕರ ಸಮಕಾಂತೆ । ದೇವಿ–ಪದುಮೇಶ ಗಮನ ನಿಶ್ಚಿಂತೆ, ಪಯೋದಧಿಜಾತೆ ಅಸುರಕೃತಾಂತೆ,–ಯನ್ನ ಹೃದಯಾರ್ತಿ ಕಳೆಯೋಜಯಂತ ॥ ಆಹಾ ॥ ಮಧುಕೈಟಭಾರಿಯ ಹೃದಯನಿಕೇತನೆ, ಚದುರೆ ಶ್ರೀರೂಪದಿ ಬುಧಜನರ ಪೊರೆವೆ ॥ ೧ ॥ ರಾಜೀವೋಪಮ ಸುನೇತ್ರೆ–ಸುವಿರಾಜಿಸುತಿಹೆ ಶುಭಗಾತ್ರೆ ॥ ಮೃಗರಾಜ ಮಧ್ಯಳೆ ಮುನಿಸ್ತೋತ್ರೆ । ಮುಕ್ತಿಭಾಜಪ್ರಿಯಳೆ ನೃಪಪುತ್ರೆ ॥ ಆಹಾ ಶ್ರೀಜನಾರ್ದನನಾಜ್ಞಾ ವ್ಯಾಜದಿಂ ಭೂದೇವಿ ರಾಜಸರಿಗೆ ದ್ವಂದ್ವ ಭೋಜನಗೈಸುವೆ ॥ ೨ ॥ ಖಚರಾಳು ಬಂಧನ ನಿಟಲನೇತ್ರ ಖಚರವಂಶೋದ್ಭವ ಚಟುಲ । ದೇವ–ಖಚರಾಜ ಪ್ರಾಣೇಶ ವಿಠಲ–ರಾಣಿ, ಖಚರಾಶ್ಯೆ ಕಳೆಯನ್ನ ಕುಟಿಲಾ-ಆಹಾ ಖಚರಾಪಸ್ಯಂದನೆ ಖಚರಸುವಾಣೀ ಹೇ ಖಚರಾಶ ವೇಣಿಯೆ ಖಚರಮರ್ದನೆ ದುರ್ಗೆ ॥ ೩ ॥

೭೫. ರಾಗ—ರೇಗುಪ್ತಿ (ಆದಿತಾಳ).

ಕಾಯೋ ಕಾಯೋ ಇಂದಿರೆ—ತೋಯಜಾಕ್ಷಿ ವೈನತೇಯ ವರೂಥೆ ಈ ಕಾಯುವೇ ನಿನ್ನದು ನೋಯಿಸದೆನ್ನನು ॥ ಕಾಯೆ ಕಾಯೆ ॥ ಪಲ್ಲ ॥ ದೊಡ್ಡಾತ ನರಸಿ ನೀ ನಮ್ಮ—ಕೈಯೊಡ್ಡಿ ಬೇಡುವೆ ನುಡಿಕೇಳಮ್ಮ ॥ ಗುಡ್ಡದಂತಿಹ ದೋಷ ಕಡ್ಡಿಯಂತೋಡಿಸಲಾರೆಯಾ (ಹಾ ಹಾ)—ನಿನ್ನವನೆಂಬದರಿಯಾ (ಹಾ ಹಾ) ॥ ಇತ್ತ ಬಾಯೆನಲಾರೆಯಾ (ಹಾ ಹಾ) ಕೃತಾಂತಗೆನ್ನನಾರೀಯಾ (ಹಾ ಹಾ) ॥ ೧ ॥ ಬೊಮ್ಮಾದಿಗಳ ಪೊರೆವಾಕೆಂದು ಶ್ರುತಿಸಮ್ಮತವಾಗಿರೆ ನೀನಿಂದು ॥ ಯಮ್ಮನು ನೋಡದ ಸುಮ್ಮನಿರೆ ಬಹದೆ ಭೂಷಣಾ (ಹಾ ಹಾ) ಬಿಡದೇತ್ರಯ ಈಷಣಾ (ಹಾ ಹಾ) ಮಾಳ್ಪವು ಬಹು ಶೋಷಣಾ (ಹಾ ಹಾ) ಬಿಡಿಸಿಮಾಡೆಪೋಷಣಾ (ಹಾ ಹಾ) ॥ ೨ ॥ ಸುರಪತಿ ಪ್ರಾಣೇಶವಿಠಲನಾ—ಪದ ಸರಸಿಜ ಪೊಂದಿಸೆ ಶ್ರೀಲಲನಾ ॥ ಅರಗಿನಂತೆ ಜನನಿ— । ಮರದಂತೆ ಮಕ್ಕಳು ಎಂಬರಾಹಾ (ಹಾ ಹಾ) ಆರ್ಯರನ್ನತೆ । ಶಂಬರಾಹಾ । ರಿಮಾತೆ ಹಾಟಕಾಂಬರಾ (ಹಾ ಹಾ) ಧಾರೆ ಮುಚ್ಚಪಿತಾಂಬರಾ (ಹಾ ಹಾ) ॥ ೩ ॥

೭೬. ರಾಗ—ತೋಡಿ (ಆದಿತಾಳ).

ಕ್ಷೀರವಾರಿಧಿ ಸಂಭೂತೆ । ಪ್ರದ್ಯುಮ್ನಮಾತ । ಈರೇಳು ಲೋಕ ವಿಖ್ಯಾತೆ ॥ ಆರಾಧಿಪೆ ವಿಪದೇರೆಮಲೆ ಹೃದ್ವಾರಿಜದೊಳಗೆ ಮುರಾರಿಯ ತೋರೆ ॥ ಪಲ್ಲ ॥ ಧಾತಾದಿ ದಿವಿಷತ್ಪೂಜಿತ ಸಲ್ಲೋಕದಾತೆ । ಜಾತ ಮಧ್ಯಾಂತ ರಹಿತೆ । ಸೀತ, ಸದ್ಗುಣಗಣವ್ರಾತೇ, ಭಜಕರಾಪ್ರೀತೆ । ಭೂತ ತನ್ಮಾತ್ರಾ ಗುಣವೀತೇ ॥ ಪಾತಕಾರಣ್ಯಕ ಜಾತವೇದನೆ, ಪುರುಹೂತಪೂಜಿತ ರಮೆ ॥ ಮಾತುಮಾತಿಗೆ ನಿನ್ನ ಪ್ರೀತಿರಮಣ ರಘುನಾಥನ ಸ್ಮರಣೆಯು ಆತುರದಲಿ ಕೊಡೆ । ಸಿತಾಂಶುಮುಖಿ ॥ ೧ ॥ ಷಡುವಿಕಾರದೂರೆ ವ್ಯಾಪ್ತೆ (?) ಜ್ಞಾನಿಗಳಿಂ ಪ್ರಾಪ್ತೆ । ಬಿಡದ ಭಜಿಸುವವರಿಗಾಪ್ತೆ ॥ ನಡುಮನೆ ಸುತನೇವೆಗೆ ತೃಪ್ತೆ ॥ ದೋಷ ನಿರ್ಲಿಪ್ತೆ ॥ ಕಡು ದಯಾವಂತೆ ಸುಷುಪ್ತೆ ॥ ಪಡೆದು ಕಮಲಭವ ಮೃಡ ಪ್ರಮುಖರ, ವರ । ಕೂಡುವೆ ನಿರಂತರ ಬಡವನು ನಾ ನಿನ್ನೊಡಲಿಗೆ ಭಾರವ । ತಡೆಯದೆ ಶ್ರೀಹರಿಯಡಿಗಳರ್ಚಿಪುದಕೆ । ದೃಢ

ಮನ ಪಾಲಿಸು ॥ ೨ ॥ ಸಿಂಧುರಗಮನೆಅಹಿವೇಣೀ-ಲೋಕೈಕತ್ರಾಣೀ-ಮಂದಹಾಸಾಸ್ಯೆ ಕಲ್ಯಾಣಿ । ನಿಂದಿತಜನಸೂದನಿ-ಸರಸಿಜಪಾಣಿ । ಇಂದಿರಾ ದೇವಿ ಶುಭವಾಣೀ ॥ ನೊಂದೆನೆಜನ್ಮದಿಬಂದು, ಸುಖವನಾನೊಂದರಿಯೆನೆ ಅರವಿಂದಸದನೆ ವಾರೆಂದುಭಯವ ಪ್ರಾಣೇವಿಟ್ಠಲನ । ಚಂದದಿ ತುತಿಸುವಾನಂದವಪಡಿಸೇ ॥ ಕ್ಷೀರ ॥ ೩ ॥

೭೭. ರಾಗ-ಪೂರ್ವಿ (ಏಕತಾಳ).

ಕಾಯೆ, ನಿನ್ನಪದ-ತೋಯಜಕೆರಗುವೆ-ಮಾಯದೇವಿ, ಹರಿಕಾಯನಿವಾಸೇ ॥ ಕಾಯೋ ಕಾಯೋ ॥ ಪಲ್ಲ ॥ ಬುದ್ಧಿಯ ಪ್ರೇರಿಸೆ ಪ್ರದ್ಯುಮ್ನನಸತಿ । ಕರ್ದಮಜಾಲಯೆ । ಭದ್ರಶರೀರೇ ॥ ಕಾಯೆ ॥ ೧ ॥ ಇಂಗಡಲಾತ್ಮಜೆ-ಅಂಗನಾಕುಲಮಣಿ । ರಂಗನ ಪದಕಂಜ-ಭೃಂಗೆ ಕರುಣದಿ ॥ ಕಾಯೆ ॥ ೨ ॥ ಪ್ರಾಣೇಶವಿಠಲನ, ಮಾನಿನೀಯನ್ನಯ । ಹೀನತೆಯೆಣಿಸದೆ, ಪೋಣಿಸಿ ಮತಿಯ ॥ ೩ ॥

೭೮. ರಾಗ-ಸಾವೇರಿ (ಆದಿತಾಳ).

ಸೀತೆ, ಸದ್ಗುಣಗಣವ್ರಾತ ಈರೇಳುಲೋಕಮಾತೆ ಪ್ರಣತಜನ ಪ್ರೀತೆ ಸಾಗರಜಾತೆ ॥ ಮಾತುಮಾತಿಗೆ ರಘುನಾಥನಸ್ಮರಣೆಯ ಆತುರದಲಿ ಕೊಡು ಸಿತಾಂಶುವದನೆ ॥ ಪಲ್ಲ ॥ ಶ್ರೀ ಭೂ ದುರ್ಗಾಂಭ್ರಣೀ ಸ್ವರ್ಣಾಭೆ ರಾಮನ ರಾಣೀ । ಸಾಭಿಮಾನ ನಿನ್ನ ದಮ್ಮಾ ಬಾಲಕನ ಕರವ ಬಿಡದಲೆ ಸರ್ವದಾ ಬಾದರಾಯಣನಂಘ್ರಿ ಬಿಸಜದ್ವಯವನೇ ಭಜಿಸಲು ಜ್ಞಾನವ ಒಲಿಸುವದತಿ ಶೋಭನ ವಿಗ್ರಹೆ, ಹೆ ಒಡವನು ಗೈಯ್ವಾ ಬಿನ್ನಪವನು ನೀ ಬಿಸುಟದ ಬಹಳಾಭಯ ಪರಿಹರಿಸೀ-ಭಕುತ ಜನರೊಳು ಬೆರಸುವದೇ ॥ ಸೀತೆ ॥ ೧ ॥ ಮಾ, ಕಂಜದಳನೇತ್ರೆ ಶ್ರೀಕುಂಭಿಣೀಜೆ ದಾತ ನೀ ಕರುಣದಿ ನೋಡೀ । ಕಕುಲಾತಿ (ಕಕ್ಕುಲಿತೆ) ಹಿಂಗಿಸೆ ॥ ಬೇಕುಸತ್ಸಾಧನವು. ಸಾಕು ದುರ್ವಿಷಯಗಳು, ಲೌಕಿಕಗಳೆಲ್ಲಾ ವೈದಿಕವಾಗಲೆನಗೆ ॥ ನಾಕು ಮೊಗನಜನನೀ ಕರಿಗಮನೆ ಪರಾಕು ದಿವಿಜನುತೆ । ಶೋಕರಹಿತೆದನುಜಾ ಕುಲಸಂಹರೆ ಈ ಕಠಿಣ ಭವದೊಳೀಕೆ ದಣಿಸುತಿಹೆ ನೀ ಕಡೆಗೆತ್ತಲೆ ॥ ಸೀತೆ ॥ ೨ ॥ ದಾತ ಪ್ರಾಣೇಶ

ವಿಠಲ-ನೋೀತೆನೆಂದು ನಗಲು ನೀನಾತನ ದಾಯದಿಂ ಪುರುಹೂತನ ನೋೀ ಲಿಸಿ ಪ್ರಖ್ಯಾತೆಯಾದೆ ಉದರಾಜಾತಸದನೆ ಸತ್ರಾಜಿತೆ ಲಕ್ಷ್ಮೀಯಾದಿ ದೇವತೆ ಭಾಸ್ಕರಕಾಂತೆ ॥ ಭೂತಳದೊಳಗೆ ಅನಾಥರಿಗೆ ವರಪ್ರದಾತೆ ಕೃಪಾ ನಿಧಿಯೇ, ತಡೆ ದುಮತಿ ಧಾತ। ವೃಜನಿ ಧರಿ ಪೋತನಕನಲದೆ, ವಾತ ಪೂಜಿತೆ, ರಮೆ ಪಾತು ಪ್ರತಿಕ್ಷಣದಿ ॥ ೩ ॥

೭೯. ರಾಗ-ಭೈರವಿ (ಅಟತಾಳ) ಉಗಾಭೋಗ.

ಬೊಮ್ಮನಸೊಲ್ಲೆನವ್ವ ವೃದ್ಧನಾಗಿಹನೆ, ಸಮ್ಮಿರನೊಲ್ಲೆನವ್ವನಿಂತು ನುಡಿವನೆ ॥ ಚರ್ಮಾಂಬರ ಶಂಕರನನೊಲ್ಲೆನವ್ವ । ಅಮ್ಮಮ್ಮ ರವಿನೋಡೆ ಉರಿಯುತ ಬರುವ ॥ ಸುಮನಸರವತಿಗೆ ಮೈಯೆಲ್ಲ ರಂಧ್ರ। ಕುಮ್ಮಟ್ಟುವದು ಕಾಂತಿ ದಿನ ದಿನ ಚಂದ್ರಗೆ ॥ ಧರ್ಮನ ಹೊಟ್ಟೆ ಗಣವನೊಲ್ಲನವ್ವ । ಸಮ್ಮಿ ಚೀನಲ್ಲಾ ರುಮೊಗನನೊಲ್ಲೆವ್ವ । ನಮ್ಮ ಪ್ರಾಣೇಶವಿಟ್ಠಲನಲ್ಲ ಸುರರೊಳು । ಸನ್ಮತನಾಗಿಹನೆಂದು ತುಂಬಿದಾನಂದದಿಂ । ರಮ್ಮೆ ನಗುತ ಮಾಲೆ ಹಾಕಿ ನಮಿಸಿದಳೂ ॥ ೧ ॥

೮೦. ರಾಗ-ಕಾಂಬೋಧಿ (ಅಟತಾಳ).

ಏನು ಸ್ನೇಹವನು ಮಾಡಿದಿರಿಯಮ್ಮಾ-ಮುಖ್ಯ ಪ್ರಾಣಸಖನ ಬಗೆ ಹೀಗೆಂದು ತಿಳಿಯದೇ ॥ ಪಲ್ಲ ॥ ಉಣಿಸುವ ಬೇಡಿದುದನಂಬಿರಾ-ಶ್ರೀವಾ ಮನನಾಗಿ ತಿರಿದುಂಡ ಬಲಿಯಲ್ಲಿ । ಘನವಸನವುಟ್ಟೀವೆಂಬಿರಾ-ಅನುದಿನ ದಿಗಂಬರನಾಗಿ ತಿರುಗುವ ॥ ೧ ॥ ಮಣಿಭೂಷಣವನಿಟ್ಟೀವೆಂಬಿರಾ-ಅವ- ಹಣವಿರೆ ಅಡವಿಯೊಳಿರುವಾನೆ ॥ ತನುನೋಡಿ ಮರುಳಾದೆವೆಂದಿರಾ-ನೀಲ ಘನದಂತಿರುವ ದೊಡ್ಡ ಚಲುವಿಕೆ ॥ ೨ ॥ ದುರಿತ ಬಂದರೆ ಕಾಯ್ವನೆಂಬಿರಾ- ತಾನೇ-ಕರೆಕರೆಪಟ್ಟ ದನುಜನಿಂದ ॥ ಪುರುಷನು ಗುಣವಂತನೆಂದಿರಾ- ಪಾಲ್ಮೊಸರ ಕದ್ದು ತಿಂಬುವ ವ್ರಜದೊಳು ॥ ೩ ॥ ಕಡು ದಯಾವಂತನೆಂದ ರಿದಿರ್‍ಯಾ-ಶಿರ-ಕಡಿದ ಮಾತೆಯ ದಯೆ ನೋಡಿರಿ ॥ ನುಡಿಗೇಳಿ ಮರುಳಾದೇ ವೆಂದಿರಾ-ನಭ-ಪೊಡವಿ ನಡುಗುವಂತೆ ಕೂಗುವ ॥ ೪ ॥ ಜ್ಞಾನಿ ಈ ಕೃಷ್ಣ

ಂದರಿದಿರಾ–ನಿತ್ಯ–ಕಾನನದೊಳು ದನಕಾಯ್ವವನು ॥ ತಾನೇಕಾಣದವನು
ುತ್ತೊಬ್ಬರು ಬೇಡಲೇನು ಕೊಡುವನೆಂಬವರು ಜನರು ॥ ೫ ॥ ಯನಗೆ ತಿಳಿ
ಸುದೇನು ಮಾಯವ್ವೋ–ಅವನ–ಮನೆಯು ಪೊಕ್ಕವರೆಂದು ತಿರುಗಾರು ॥
ಸುಗಾಲ ಗೆಳೆತನ ಮಾಡಿದ–ಫಾಲಾಕ್ಷನು ಸುಡುಗಾಡೊಳು ಸೇರಿದ ॥ ೬ ॥
ಂತು ಪೇಳಿದರೆ ತೀರೀತಮ್ಮ–ನಮ್ಮ ಕಂತುಪಿತನ ಮಹಾಮಹಿಮೆಯು ॥
ಂತಕಜ? ಪ್ರಾಣೇಶವಿಟ್ಠಲಾ ನಮ್ಮಚಿಂತೆಯುಕಳೆಯೆಂದೆರಗಿರಮ್ಮ ॥ ೭ ॥

೮೧ ರಾಗ–ಕಾಂಬೋಧಿ (ಝಂಪೆತಾಳ) ಸುಳ್ಳೀಪದ

ದಾತೆ ಇಂದಿರೆ ವಾರಿ-ಜಾತ ಮಂದಿರೆ ಲೋಕ । ನಾಥೆ ಸುಖಪೂರ್ಣೇ
ಿಖ್ಯಾತೆ ॥ ಬಿನ್ನವಿಸುವೆನೆಯನ್ನ ಮಾತು ಮನ್ನಿಪುದೇ ವಿಧಮಾತೆ ॥ ಪಲ್ಲ ॥
ರಾಸೀಂಯುಧಿ, ಹೀಗೆ ಏನು ಕೊಟ್ಟನೊ ನಿನ್ನ ಕಾಣಿಸವೆ-ಕಣ್ಣು ಕುಲವಿಲ್ಲ ।
ಗೋತ್ರವಿಲ್ಲ ಹೆತ್ತವರ ಕ್ಷೋಣಿಯೊಳಗೊಬ್ಬರರಿತಿಲ್ಲ ॥ ೧ ॥ ಏನು ಮರು
ಾದೆವ್ವ ಶ್ರೀನಾರಿಯಿಂಥವಗೆ । ಹೀನಳುಚ್ಛಿಷ್ಟ ಫಲಮೆದ್ದ ॥ ಬಡಬ್ರಾಹ್ಮ
ಕೊದ್ದರೆ–ಮಾನವೇ ಇಲ್ಲ ನಗುತಿದ್ದ ॥ ೨ ॥ ಧವಚೋರ-ಬಹುಜಾರ ಸವ
ತಿಯರೂ ಬಲುಮಂದಿ । ಅವರಿಗಾತ್ಮಜರು ಹತ್ತತ್ತು ॥ ನಿನ್ನೊಗತನದೊಳಿದ್ದ–
ಅವಿವೇಕ ಮೂಲೋಕಕ ಗುರುತು ॥ ೩ ॥ ಅತ್ತಮಾವಗಳಿಲ್ಲ–ವೃತ್ತಿ ಕ್ಷೇತ್ರ
ಗಳಿಲ್ಲ । ಹಸಿದರನ್ನಿಲ್ಲ ಮನೆಯಲ್ಲಿ । ಈ ಗಂಡನೊಡನೆಯೇನರ್ಥ ಪಡು
ತಿಹೆಯೆ ನೀ ಬಲ್ಲೆ ॥ ೪ ॥ ನೇರಿದನು ಪತಿ ನಿನ್ನ–ತೌರುಮನ ನೋಡಲ್ಕೆ
ಧಾರಿಣಿಯೊಳಗೆ ಬಹು ನಿಂದಾ ॥ ಭಕ್ತಿಯಿಂದವನ ಹ್ಯಾಗಾರಾಧಿಸುವದೋ
ಸುರವೃಂದಾ ॥ ೫ ॥ ಶಿಶು ಹಿಂಸಕತಿ ಕರಿಣ । ಹನನ್ಮಖನಲ್ಲಭರ್ಕ ಹೆಂಗಸ
ರಳಿದ ಪುಕ್ಕಾ ಬಹು ರಕ್ಕಾ ॥ ಕಲಹಗಂಟೇನು ಸೇವಿಸಿದ್ಯೊ ವ್ರತಗಳನು
ಇವಸಿಕ್ಕಾ ॥ ೬ ॥ ಎಲ್ಲೆಲ್ಲಿ ನೋಡದರು । ಇಲ್ಲ ಪ್ರಾಣೇಶ ವಿಠಲನಂಥವರೂ
ಎನಂಬೆ ॥ ಮುದದಿಂದ ಬಿಡದೆ ಅವನಲ್ಲಿ ಪೊಂದಿರ್ಪೆ ಜಗದಂಬೆ ॥ ೭ ॥

೮೨. ರಾಗ–ಕಲ್ಯಾಣಿ (ಆದಿತಾಳ).

ಅಂಗನಾಕುಲಶಿರೋಮಣಿ ಶ್ರೀಮಾ ಶೃಂಗಾರ ವನಧಿ ಗರುಡ
ಧ್ವಜೆ ಮಂಗಳಾದೇವಿ । ಹಾಸಿಗೇಳು ॥ ಪ ॥ ಕ್ಷೀರಸಾಗರ ಕನ್ಯಾ, ವಿಧಿ, ।

ಮಾರಾಂತಕ ಶಕ್ರಕರಾರ್ಚಿತೆ, ವಾರಿಜಸದನೆ ಸಿರಿದೇವಿ ॥ ಸಿರಿದೇವಿ ತ್ರೈಲೋಕಕೆ ಜನನೀ ರಕ್ಕಸಾರಿ ॥ ಹಸೆಗೇಳು ॥ ೧ ॥ ಭಾರತಿ, ಪಾರ್ವತಿ ಶಾಮಲ ಮುಖ । ನೂರು ಸುರರರಸಿಯರೆಲ್ಲರು । ಮಾರಿಧರುಷದಲಿ ಪದಪಾಡಿ ॥ ಪದಪಾಡಿ ಹಸೆಯ ಬರೆದಿಹರೆಲೆ ನಾರಾಯಣನ ರಾಣೀ ॥ ಹಸೆಗೇಳು ॥ ೨ ॥ ಋಷಿಗಳು ವೇದಪುರಾಣಗಳುಪನಿಷದ್ವಾಕ್ಯಗಳಿಂದ ತುತಿಸುವರು । ವಸುಧೆ ಗಾನಂದ ಪಡಿಸಲು ॥ ಪಡಿಸಲು ಶುಭಕುಂದರದನೆ ಅಸಿತಕುಂತಲೆಯೇ ಹಸೆಗೇಳು ॥ ೩ ॥ ಕಡೆಗಣ್ಣಿನ ನೋಟದಿ ಲೋಕವ । ತಡೆಯದೆ ಪುಟ್ಟಿಸಿ ಪಾಲಿಸಿ ಪುನಃ । ಕೆಡಿಸುವೆ ಸ್ವೇಚ್ಛೆಯಲಿ ವೈದರ್ಭೆ ಸತ್ರಾಜಿತ ಕೃತಿ । ಯೊಡತಿ ಜಯಾಮಾಯಾ ॥ ಹಸೆಗೇಳು ॥ ೪ ॥ ಪ್ರಾಣೇಶವಿಠಲನೊಳು ದ್ವೇಷಿಪ ಹೀನರಸಂಹರನೋಸುಗ ಧರಸಾಣಿಯಾಗಿಹಳೆ ಶ್ರುತಿವೇದ್ಯೆ ॥ ಶ್ರುತಿವೇದ್ಯೆ ದೇವದೇವಿಕ ಅಹಿವೇಣಿ ಶುಕವಾಣಿ ॥ ಹಸೆಗೇಳು ॥ ೫ ॥

೮೩ ರಾಗ–ಪೂರ್ವಿ (ಆದಿತಾಳ).

ಶೋಭನ ಶ್ರೀಭೂದುರ್ಗೆಗೆ ಶೋಭನ ಜಯ ಮಾಯಾಕೃತಿಗೆ । ಶೋಭನ ಶಾಂತಿ ಜಯಂತಿಗೆ ॥ ಶೋಭನವೆ ॥ ಪಲ್ಲ ॥ ಕಡು ಹರುಷದಿ ದಿವಿಜರು ದನುಜರು । ಕಡಲನು ನಗದಿಂ ಮಥಿಸುತಲಿರೆ । ನಡಗರದಿಂದಲಿ ಪಯೋನಿಧಿ ಯೊಳಗುದ್ಭವಿಸಿದ ॥ ಬಡನಡುವಿನ ಸುಂದರಿಯೆ ರಾಮನ । ಮುಡದಿ ಸೂಸುಕವಾ–ಮುಡಿ ಬಾರೇ ॥ ೧ ॥ ಕಮಲಜ ಈರ ಭವಸುರೇಂದ್ರರ । ರಮಣಿಯರಾನಂದದಿ ಪರಿಪರಿ । ಸುಮನಗಳಿಂ ನಿರ್ಮಿಸಿದ ಪ್ರತಿಯುಂಬಾ ಸೂಸುಕವ ॥ ಸುಮನದಲರ್ಪಿಸಲ್ಕೈತಂದರೆ ರಮೆ, ತ್ವರದಯಮಾಡಿ ಮುಡಿ ಬಾರೆ ॥ ೨ ॥ ಪ್ರಾಣೇಶವಿಟ್ಠಲನ ವಕ್ಷಸ್ಥಳ ನೀನಾಶ್ರಯಿಸಿಹೆ ಅದಕಿನ್ನಾರ । ಕ್ಷೋಣಿಯೊಳಗಿಲ್ಲೆಲೆ ಭೂಷಣಗಳು ಆದರೂ ಸೇವಕರ ಆನಂದಾಭಿವೃದ್ಧಿಗೆ ತಂದ ಪ್ರಸೂನ ಪವಿತ್ರವ ಗ್ರೈಸಲ್ಕೇ–ನೀ ಮುಡಿ ಬಾರೇ ॥ ೩ ॥

೮೪. ರಾಗ–ಶಂಕರಾಭರಣ (ಅಟತಾಳ).

ಜೋ ಜೋ ಇಂದಿರೆ ಲಕುಮಿ ಜಯಂತ । ಜೋ ಜೋ ದಿನಮಣಿ ವಿಧುಕೋಟಿ ಕಾಂತೆ ॥ ಜೋ ಜೋ ಅಕ್ಷರೆ ಅಸುರಕೃತಾಂತೆ । ಜೋ ಜೋ

ಕರುಣಾವಾರಿಧೆ ಜಯವಂತೆ ॥ ಜೋ ಜೋ ॥ ಪಲ್ಲ ॥ ಧಾಮತ್ರಯಾಂಬರಾಲಂಕಾರಯುಧಳಾಗಿ ಸ್ವಾಮಿಸೇವೆಯ ಮಾಡಿ ಸಾಲದೆ ನೀ ಪೂರ್ಣ ॥ ಕಾಮುಳಾದರೂಯಿನ್ನು ಆತನಲ್ಲಿಹೆ ಗುಣ । ಸೀಮೆಯಿಲ್ಲದವು ನೋಡುತಲಿ ಹಿಗ್ಗುವಳೆ ॥ ೧ ॥ ಪ್ರಳಯಕಾಲದೊಳಾರಾರಿಲ್ಲದಾಗಲು ಆಲ । ದಲೆಯಾಗಿ ಸಂತೋಷದಿಂದ ಗಂಡನ ಮೇಲೆ । ಮಲಗಿಸಿಕೊಂಡು ಕೃತಾರ್ಥಳಾದೆಲೆ ತಾಯಿ । ಭಳಿರೆ ನಿನ್ನೆಷ್ಟು ಬಣ್ಣವೆ ಜಗನ್ಮಾತೆ ॥ ೨ ॥ ಎಲ್ಲರ ಗುಣ ವಿಚಾರಿಸಿ, ಮಾಲಿಕೆಯ ಖಳ । ದಲ್ಲಣನಿಗೆ ಹಾಕಿ ಸತಿಯೆನಿಸಿದೆ ದೇವಿ ॥ ಎಲ್ಲೆಲ್ಲಿ ಪತಿಯ ಅಪ್ರತಿರೂಪವಿಹುವೋ ನೀನಲ್ಲೆಲ್ಲ ವಕ್ಷದೊಳಿಹ ಭಾಗ್ಯವಂತೆ ॥ ೩ ॥ ಧನುಕೊಂದು ಶಕ್ರ, ನರಕರೊಳು ಕಾದಿದೆ । ದನುಜನವಂಚಿಸಿ ನಿಜರಮಣನ ಯ್ಯೈದಿದೆ ॥ ವನಜಜಾಂಡವ ಬಸುರೊಳಗಿಟ್ಟು ಪಡೆದೆ ಪವನನಮಾತೆ ವಿಖ್ಯಾತೆ ಶರನಿಧಿಜಾತ ॥ ಜೋ ಜೋ ॥ ೪ ॥ ಮಾನಿ ಜಯಾ ಮಾಯಾಕೃತಿ ಶಾಂತೆ ಶ್ರೀಸೀತೆ । ಜ್ಞಾನಿ ಅಂಭೃಣಿ ದುರ್ಗೆದಕ್ಷಿಣೆ, ನೀ ಯನ್ನ ॥ ಹೀನತಯೆಣಿಸದೆ ಪೋಣಿಸಿ ಸನ್ಮತಿ, ಪ್ರಾಣೇಶವಿಠಲನ ಧ್ಯಾನದೊಳಿರಿಸೆ ॥ ಜೋ ಜೋ ॥ ೫ ॥

---

೨೧ (ಪರಮಾತ್ಮಸ್ತುತಿ).

ಲಜ. ರಾಗ–ಸಾರಂಗ (ತ್ರಿಪುಡೆತಾಳ).

ಶರಣು ಹೊಕ್ಕೆನೊ ನಿನ್ನ–ಜಾತರೂಪಾಂಗದ–ವರದ ಕೈಪಿಡಿಯೆನ್ನ । ಪರಮೇಷ್ಠಿವಂದಿತ । ಚರಣ, ಸುರತಿರೋರನ್ನ । ಸುಖಜ್ಞಾನಪೂರ್ಣಾ ॥ ಪ ॥ ಉರಗಪರ್ವತನಿಲಯ ಭಕತರ ಕರೆದು ವರಗಳ ಕೊಡುವ ವೆಂಕಟ ಗರುಡವಾಹನ ಲಕ್ಷ್ಮೀಪತಿ ಮಂದರಧರಾಧರಧಾರ ದೇವ ॥ ಶರಣು ॥ ಅನು ॥ ಕಾಮಿತಾರ್ಥದ ರಂಗ–ಮಧ್ವಮುನಿಪೂಜಿತ–ರಾಮ ಭವಭಯ ಭಂಗ ॥ ದಶರೂಪಿ ಶರಧಿಜಾಪ್ರೇಮ । ಸುಜನರಸಂಗ । ಕೊಡುಎಂದಿಗೆಂದಿಗೂ ॥ ತಾಮಸರಿಪು ಕುರಂಗಾ ಅಂಕಸಖಸಾಂಗ ॥ ಹೇಮಗರ್ಭನ ನಾಭೀಕಮಲದಿ ನೀ ಮುದದಿ ಪಡೆದೀ ಚರಾಚರ ನೇಮದಿಂದಲಿ ಸೃಜಿಸಪೇಳಿದ । ಸ್ವಾಮಿ ನೀ ಸರ್ವರೊಳುವ್ಯಾಪಿಸಿ ॥ ಭೂಮಿಯೊಳು ಸಾತ್ವಿಕರು ರಾಜಸ

ತಾಮಸರ ನಿರ್ವಾಣ ಮಾಡಿಸುಧಾಮಸಖಗತಿ ದುರ್ಗತಿಗಳನು ॥ ಈ ಮರುಳು ಜನರಿಗೀಯುತ । ನೀಮಡಿವಂತನು ಎನಿಸುವೆಲಾಸು । ತ್ರಾಮಾವರಜ ಬಲು ಸೋಜಿಗವೋ ಇದು । ವ್ಯೋಮನದೀವದ ನೀ ಮಾಡಿದ ಮರ್ಯಾದೆಯೋ ಮರಳ್ಯೊಬ್ಬರು ಹೇಳುವರುಂಟೇ ॥ ೧ ॥ ಪುಂಡರೀಕದಳಾಕ್ಷ–ತನ್ಮಾತ್ರಾದೂರ–ಪಾಂಡುರಂಗಘಕಕ್ಷ । ಗಾಂಗೇಯ ಗೀತ । ಪಾಂಡುನಂದನ ಪಕ್ಷ–ದರಚಕ್ರಪಾಣಿ । ಪುಂಡಕೌರವ ಶಿಕ್ಷ ॥ ಶ್ರೀವತ್ಸವಕ್ಷ ॥ ಕುಂಡಲೀಶ ಶಯನ ವಿದುರಸಖ ಮಾರ್ತಾಂಡಕೋಟಿಪ್ರಕಾಶ ಹರಿವುದ್ದಂಡ ಮಹಿಮನೆ ಕಂಡಕಂಡವರಂಡಲೆದು ಯನ್ನಶರೀರವು ॥ ಬೆಂಡು ಆಯಿತು ಕಾಣೆ ಕಾಯ್ವರಜಾಂಡೋದರ ನಿನ್ನುಳಿದು ಓರ್ವರ । ದಂಡಿಸದೆ ಬರುತಿರ್ಪ ಜನ್ಮವ ಖಂಡಿಸಿ, ನಿನ್ನ ನಾಮವುಣಿಸೊ ॥ ಮಂಡೋದರೀ ವಲ್ಲಭ–ಶಕಟಪ್ರಚಂಡ ಮುರಾದಿ ಖಳಕುಲಾಂತಕ । ದಂಡಾತ್ಮಜರಕ್ಷಕ ಹರಿ ಮೇಷಾಂಡಜ ಸಂಹರ ಕರುಣದಿ ನೋಡೋ ॥ ೨ ॥ ಧರಣಿಯೊಳಗಿನ ರಾಯರೆಂಬುವರು ಸೇವಕಾ ಪುರುಷನಿಗೆ ಬಹು ದ್ರವ್ಯ-ಪಿತ್ತಿನ್ನುಸೇಷವ । ತರಲಿಗೊಡರೆಲೊ ದೇಹ-ಬಹುತಾಳಿ ಬಂಡನೊ । ಕರುಣವಿಲ್ಲವೆ ಜೀಯ । ಸಾಕನ್ನೊ ಮಾಯಾ-॥ ವರನೆ, ಅಟವುಮಾತ್ರ ಹಣಕೂಡದಿರೊ ನಾ ಬಲ್ಲೆನೊ ಕುಡಿದಸ್ತನ–ಪಯಶರಧಿ ದ್ವಿಗುಣವುಯನ್ನ, ಆಸ್ಥಿಯು । ಗಿರಿಗೆ ದ್ವಿಗುಣವಾಗಿಪ್ಯವೊ ಇಂತಿ ॥ ಕರೆಕರೆಯ ನಾನಾರಿಗುಸಿರಲಿ । ಸುರಪತಿ ಪ್ರಾಣೇಶವಿಟ್ಟಲ । ತರುಣಿ, ಸುತ, ಧನ ಪಶು ಎಂಬುವ ಈ ಪರನು ಮೋಹದ ಮಡುವೋಳ್ಬಿದ್ದು ॥ ಹರಿನಿನ್ನೊಂದಿನ ಸ್ಮರಿಸಿಲ್ಲವೋ ನೀನರಿಯೆ । ನಿಂತ್ಯಲ್ಲವೋ ವರತರ ಕರಿವರದಿ ಮ್ಯಾಲೆನರಿದದು ಮಾಡುವದರಿಕರಿಷಂಡವ್ಮೃಗೇಂದ್ರ ವರಾಕು ॥ ಶರಣು ॥ ೩ ॥

೮೬. ರಾಗ–ಭೈರವಿ (ತ್ರಿಪುಡೆತಾಳ).

ಜಯ ಪಾಂಡುರಂಗ ಹೋ ಜಲದನಿಭಾಂಗ ಹೋ ಜಗದಂತರಂಗ ಹೋ । ಜಯಪಾಂಡುರಂಗ ಹೋ ॥ ಪ ॥ ನೀಲಭೂಧರವಾಸ ಕೌಸ್ತುಭ ಭೂಷ–ರಮೆಯಾಧೀಶ ಸುಮನಸಪಾಲ ಗುಣಗಂಭೀರ । ನವನೀತಚೋರ ಕುಜನಕುಠಾರ ॥ ನರಹರಿ ॥ ಫಾಲಲೋಚನಬಂಧು, ದೈತ್ಯನಕೊಂದು,

ವೇದವತಂದು ದ್ರುಹಿಣಗೆಮೇಲುಕರುಣದಲಿತ್ತೆ-ಮಂದರಪೊತ್ತೆ ! ಸುಂದರಮೂರ್ತಿ ॥ ಜಯ ॥ ೧ ॥ ನಿಗಮವಂದಿತರಾಮ ಹರಿ ಪೂರ್ಣಕಾಮ, ಸದ್ಗುಣಧಾಮ, ವಾಮನ, ಮಗನನುಗಿಲಿಪುಟ್ಟಿ । ಹೇಮನಕುಟ್ಟಿ ಅವನಿತಂದಿಟ್ಟೆ, ಈರೇಳು- । ಜಗದಿ ಪೂಜಿತನಾಗಿ ಕೈಟಭಭೇದಿ ಇಭಪನ ಕಾಯ್ದಿ । ಪ್ರಣತರ ಅಘವನೋಡಿಸುತಿಪ್ಪ ಹಲಾಯುಧತಲ್ಪ ಮನ್ಮಥನಪ್ಪ ॥ ಜಯ ಪಾಂಡುರಂಗ ॥ ೨ ॥ ವೇದ ವಿಸ್ತರಮಾಡ್ದೀ ದಾನವಬೇಡ್ದೀ, ದನುಜ ನಿಗ್ರ್ಯೋಡ್ದೀ ಕುರುಕುಲಸೂದನ, ಕಿರೀಟಸೂತ ಪವಮಾನತಾತ, ದುರ್ಬಲನಾಥ ಎನ್ನನು ॥ ಆದರದಿ ಕೃಪಿಡಿಯೋ, ದುರಿತವ ತಡೆಯೊ ದುರ್ಮತಿ ಕಡಿಯೊ ಅಗಣಿತ ವೇದ ಪ್ರಾಣೇಶವಿಠಲ, ನರಮೃಗ ನಿಟಲನೇತ್ರ ಅಕುಟಿಲ ॥ ಜಯ ಪಾಂಡುರಂಗ ॥ ೩ ॥

೮೭. ರಾಗ-ನಾಟ (ಝಂಪೆತಾಳ).

ಯೋಗಧರತಾತಕಭಲೋಕಪತಿ ದೇವ ಸಿರಿ । ಯೋಗ ನಿನ ಪದಕೆ ಶರಣೆಂಬುವೆನೊ ಕಾಯೋ ॥ ಪ ॥ ಯೋಗಾಂಡದೊಳಹೊರಗೆ ವ್ಯಾಪ್ತನ, ಗುಣರಹಿತನ । ಯೋಗಾಂಬರಧರ ಷಣ್ಮುಖ ಜನಕ । ಯೋಗಗಾತ್ರಪ ದೂರ ವರ್ಗದ್ವಯ ಅವತಾರ-ಯೋಗಪಾಣೇಸುತಪ್ರಿಯ ಸುಮತಿ ಕೊಡು ಜೀಯ ॥ ೧ ॥ ಯೋಗರಾಯಗೆ ಅದೇ ಪದವಿ ಕರುಣಿಸಿ ಕೊಟ್ಟೆ । ಯೋಗೇಶಣಾಪ್ತಪಿತ, ದಂತಿವರದ ॥ ಯೋಗದಲ್ಲಿ ಮನಸು ನಿಶ್ಚೈನೂ ಹಾ ಕರ್ತೃತ್ವ ಯೋಗಫಲ ಸ್ವೀಕರಿಸುತಿಹ ಕಂಜನಾಭ ॥ ೨ ॥ ಯೋಗನಾಗೆಯೋ ದುರ್ಮತಿಗಳಿಗೆಂಡಗೂ ನೀನು । ಯೋಗಿಜನವಂದ್ಯ ಹಾ ನಾರೀಪತಿ ನಿನ್ನ । ಯೋಗಸೇವಕರೊಳಿಡೋ ಪ್ರಾಣೇಶವಿಟ್ಠಲನೇ । ಯೋಗಹ್ರಾಸವಿವರ್ಜ ಘಟಜಕರಪೂಜ್ಯ ॥ ೩ ॥

೮೮ ರಾಗ-ಸಾವೇರಿ (ಏಕತಾಳ).

ರಾಮ ಗೋವಿಂದ ಪೂರ್ಣ ಕಾಮ ಸದ್ಗುಣಗಣ । ಧಾಮ, ದಶಾನನವಿರಾಮ ನತಜನಪ್ರೇಮ ॥ ಸೋಮಧರಸಖ ಕಾಮಜನಕ, ಸುರಸ್ತೋಮಕರಾರ್ಚಿತ, ವಾಮನ ಪಾಲಿಸೋ ॥ ಪಲ್ಲ ॥ ಮಂದರಾಚಲಧರ ಇಂದಿರೆ

ಯರಸ ಮುಕುಂದ ಲೋಕೇಶಾ। ಶತಾನಂದ ವಂದಿತ ಪರಮಾನಂದ ಯಶೋದಾನಂದನಂದನ, ಸುದತಿಯರ । ವೃಂದವ ಮೋಹಿಸುವ ವೃಂದಾವನ ಸಂಚಾರಿ ॥ ಮಂದಾಕಿನೀಪಿತ ವೃಂದಾರಕಗುರು ತಂದೆ ನಲಹೋಯೆನಲಂದು ಉದ್ಧರಿಸಿದೆ ಸಿಂಧುರವರನ, ಪುರಂದರಜಪ್ರಿಯ ಅ–ರಿಂದಮ ಹರಿ ದಶಸ್ಯಂದನತನಯನೆ ॥ ೧ ॥ ಪುಂಡರೀಕಾಕ್ಷನೆ ಮಾರ್ತಾಂಡಕೋಟಿ ಪ್ರಕಾಶ, ಪುಂಡಕಂಸಾರಾತಿ ಉದ್ದಂಡವಿಕ್ರಮನೇ । ಭೂಮಂಡಲದೊಳಗೆ ಪ್ರಚಂಡ ಮುಷ್ಟಿಕರನ್ನು । ಹಿಂಡಿಬಿಸುಟು ಬಲುಬಂಡು ಮಾಡಿದೆಯೋ ಆ ॥ ಖಂಡಲನನುಜನೆ ಭಂಡ ಕುರುಪನಿಗೆ ದಂಡಿಸಿ ತೋರಿದೆ ದಂಡ ಧರನ ಪುರವ । ಉಂಡುವಿಷವ ಶಶಿಮಂಡೆಬಳಲೆ ಭಯ–ಖಂಡಿಸಿ ಸಲಹಿದೆ, ಅಂಡಜವಾಹನ ॥ ರಾಮ ಗೋವಿಂದ ॥ ೨ ॥ ಒಡೆಯ ಪ್ರಾಣೇಶವಿಠಲ–ಉಡುಪತಿತೇಜ ಅನುದಿನ– ಬಿಡದೆ ವಂದಿಪರ ಕರಪಿಡಿವೆ ನಿನ್ನ ಮಹಿಮೆ । ಕಡಲಾರಾಜಕನ್ನಿಕೆ ಜಡಜಾಸನಮುಖರು ಕಡೆಗಂಡುದ್ದಲ್ಲವೋ ಮುದಡ ನರನಾಬಲ್ಲೆನೇ ದೃಢಭಕ್ತರಿಗೆ ವರ ತಡೆಯದೆ ಮುದದಿಂ । ಕೊಡುತಿಹ ಮಹಿಮನೆ। ಕಡುಕೃಪಾಮೂರುತಿ ಕಡಿನೆನ್ನ ಕುಮತಿ । ಪಿಡಿಸು ಸುಪಥವನು ಬಿಡಿಸು ಭವಭಯವ ಪೊಡವಿಪ ವರದಾ ॥ ರಾಮ ॥ ೩ ॥

೮೯. ರಾಗ–ನಾಟ (ಝಂಪೆತಾಳ).

* ಪಾಹಿ ನಾರಾಯಣನೆ ಪಾಹಿ ವಾಸುಕಿಶಯನ। ಪಾಹಿ ಗರುಡಧ್ವಜನೆ ಪಾಹಿ ಕಮಲಾಕ್ಷ ॥ ಪ ॥ ೧ ಸಂವತ್ಸರಾಂಬರಧರ–ನತಜನಪಾಲ । ೨ ಸಂವತ್ಸರ ಹರೇ ಕಾರುಣ್ಯನಿಧಿಯೇ ॥ ೩ ಸಂವತ್ಸರಕ ನಿನ್ನ ಸಮರಾರೊ ತ್ರಿಜಗದಿ । ೪ ಸಂವತ್ಸರ ಜಲಜಕ ೫ ಸಂವತ್ಸರುಪಮಾ ॥ ೧ ॥ ೬ ಸಂವತ್ಸ ರಾಕ್ಷನುತ ಗಜವೈರಿಸಂಹರನೆ । ೭ ಸಂವತ್ಸರಾದಿ ೮ ಸಂವತ್ಸರರಿಪು ॥ ೯ ಸಂವತ್ಸರ ಕುವರನೆ ೧೦ ಸಂವತ್ಸರನೆ ಯನ್ನ। ೧೧ ಸಂವತ್ಸರವಳಿದು ಕೊಡು ೧೨ ಸಂವತ್ಸರ

* ಸಂವತ್ಸರಗಳ ಸಂಜ್ಞೆ:– ೧. ಶುಕ್ಲ. ೨. ಪ್ರಜಾಪತಿ. ೩. ವಿಕ್ರಮ. ೪. ಶ್ರೀಮುಖ. ೫. ಪಿಂಗಳ. ೬. ಚಿತ್ರಭಾನು. ೭. ಖರ. ೮ ರಾಕ್ಷಸ. ೯. ನಂದನ. ೧೦. ಈಶ್ವರ. ೧೧. ದುರ್ಮತಿ. ೧೨. ಸೌಮ್ಯ. ೧೩. ಆನಂದ. ೧೪. ಸರ್ವಜಿತು. ೧೫. ಮನ್ಮಥ. ೧೬. ಕ್ಷಯ. ೧೭. ಪರಾಭವ.

ಮತಿ ॥ ೨ ॥ ೧೩ ಸಂವತ್ಸರಸಮುಗ್ರ ಪ್ರಾಣೇಶವಿಠಲನೆ । ೧೪ ಸಂವತ್ಸರಸ್ವಾಮಿ ದೋಷದೂರ । ೧೫ ಸಂವತ್ಸರಪಿತ ಸಿರಿ * ೧೬ ಸಂವತ್ಸರನೇ ಕ್ಲೇಶ ೧೭ಸಂವತ್ಸರ ಮಾಡು ದೀನಕಲ್ಪತರು ॥ ೩ ।

೯೦. ರಾಗ-ರೇಗುಪ್ತಿ (ಮಟ್ಟತಾಳ).

ಗಂಗಾಪಿತ ರಾಘವ । ನಂಬಿದೆ ಶ್ಯಾಮ-ಲಾಂಗ ನಿನ್ನಯ ಪಾದವ ॥ ಮಂಗಳೆರಮಣ ಭುಜಂಗಧರಾರ್ಚಿತಾ ನಂಗಜಜನಕ ಪಾಲಿಸಿಂಗಡಲೊಡೆಯನೆ ॥ ಪ ॥ ಶಫರ, ಕಮಠ, ಕೋಲ । ನೃಹರಿ, ಬಾಲ, ನೃಪಕುಲಪವನವ್ಯಾಲ ॥ ವಿಪಿನಸಂಚರಾ, ಕೃಷ್ಣ-ವಿಪುಳಾ ಬುದ್ಧ ಕಲ್ಕಿ- । ವಪುಧರ, ಅನಿರುದ್ಧ । ಕೃಪಣವತ್ಸಲ ಸ್ವಪರ್ಾ-॥ ದವನೆ, ಹರಿ ಕಾಶ್ಯಪಿಯೊಳಗೆ ಸುರರಿಪುಹ । ಶಿವನಕರಿವನ ನರಪತಿ ದ್ರುಪದನಂದನೆಯು ಪೊರೆದೀಶ್ವರ । ಕಪಟನಾಟಕ ಕಪಿಲರೂಪಿ ॥ ೧ ॥ ಕುರುಕುಲೋತ್ತಮನಾಗಾರದೊಳಗೆ ಕ್ಷೀರ ಸುರಿದೆ ಗೋಕುಲವಿಹಾರ ॥ ವರವಿಪ್ರಜರತಂದೆ ಹರಚಾಪಹನನ ಈ ಶರೀರವೇ ನಿನ್ನದು ಸರಿಬಂದದನು ಮಾಡೋ ॥ ಕರೆಕರೆಯ ಭವಶರಧಿಯೊಳು ಬಾಯ್ದೆರೆವೆ ರಕ್ಷಿಸುವರನು ಕಾಣೆನೊಬ್ಬರ ನಿನ್ನುಳಿದುರಗಶಯನನೇ ಧರಿಜವಲ್ಲಭ ಕರುಣಿಕೇಶವ ॥ ೨ ॥ ಜನನಮರಣದೂರ-ಇಂದ್ರಾನುಜ ಮುನಿಗೇಯಾಚಲಧರ । ವನರುಹಭವ ಸಂಕ್ರಂದನವಂದ್ಯ, ವೀತ ಆವನಿ ಮುಖ ತನ್ಮಾತ್ರಾಗುಣ ಪ್ರಾಣೇಶವಿಠಲ ॥ ಪ್ರನಮಿತಾಘಕಕ್ಶಾನಲ, ಕಂದರ್ಪನ ಪಿತನೆ ನಿನ್ನನುಗರೊಳಗಿಡೋ ಮಣಿಯ ಅನ್ಯರಿಗನಘ ಪಾಲಿಪುದನ ವರತಯನ್ನನು ಬಿಡದಲೆ ॥ ಗಂಗಾಪಿತ ॥ ೩ ॥

೯೧. ರಾಗ-ಸಾರಂಗ (ತ್ರಿಪುಡೆತಾಳ).

ವೆಂಕಟಾಚಲವಾಸ । ವಂದಿಪೆನೋ ತವ ಪದಪಂಕಜವ ನಿರ್ದೋಷ ॥ ವಾ ರಾಶಿಜಾ ದ್ರುಹಿಣ ಶಂಕರ ಪ್ರಮುಖಪೋಷ ಶ್ರೀ ಶ್ರೀನಿವಾಸ ॥ ಪ ॥ ವೆಂಕಟ, ಗದಾಸುದರುಶನ ವಿಜಯ-ಅಂಕಿತನೆ, ಗಾಂಗೇಯಚೈಲತಳಂಕ ಸನುಜ ಪಾಲಿಪುದು ಯನ್ನ ಮಾ । ನಾಂಕಜನಕ, ಶಶಾಂಕ ಭಾಸ ॥ ಅನು

---

* ಅಸುರೀಸಂಪತ್ತು.

ವಲ್ಲ ॥ ಸ್ವಾಮಿ ಹೇ ನಿರಪೇಕ್ಷ–ಝಷಕೂರ್ಮವರಾಹ ॥ ಹೇಮಕಶ್ಯಪು ಶಿಕ್ಷ । ವಟು, ಭೃಗುಕುಲೋದ್ಭವ, ರಾಮ, ಪಾಂಡವಪಕ್ಷ ತ್ರಿಪುರಾರಿ, ಕಲ್ಕಿ । ಭೀಮವಂದಿತ, ತ್ರ್ಯಕ್ಷಸಖ, ವ್ರತತಿಜಾಕ್ಷ ॥ ಕಾಮಿತಪ್ರದ ಕೈರವ ದಳ–ಶ್ಯಾಮ, ಸುಂದರಕೋಟಿಮಾರ, ಸು–ಧಾಮಪ್ರಿಯ । ಭಯವಿಪಿನ ವಹ್ನಿ, ಸು । ತ್ರಾಮನಂದನಪ್ರಾಣರಕ್ಷಕ ॥ ಭೂಮಿಯೊಳು ದುರುಳರಿಪು, ಸಾಲಿ । ಗ್ರಾಮಮಂದಿರ–ಲಕುಮಿಮನೋಹರ, ಸಾಮಜೇಂದ್ರನ ಪೊರೆದ ಸಹಸ್ರ–ನಾಮ, ಕಾಳೀಮದಾಹ ದೇವತ್ರ ॥ ಈಮಾಯಾತೃಣಕಾಷ್ಠಾದಿವ್ಯಾಪ್ತ । ಚಾಮೀಕರಭೂಷಣ ಶೋಭಿತ । ಹೇಮಾಚಲಮಂದಿರ ಮುನಿಗಣಸ್ತೋಮಾರ್ಚಿತ ಕರುಣಿಸು, ತ್ವರ್‍ಯಾ ॥ ವೆಂಕಟಾಚಲವಾಸ ॥ ೧ ॥ ನೀರಚರ ನಗ ಧರ, ಕಿಟಿ, ನೃಹರಿ, ವಾಮನ । ಧರಣಿಪಸಂಹರ । ಕೋದಂಡಕರ, ಸತ್ಯಾ ರಮಣ, ಅಂಬರ–ವರ್ಜಿತ, ತುರಂಗವೇರಿ ಕುಂಭಿಣಿಭಾರ–ಇಳುಹಿದ ಉದಾರ ॥ ಪರಾಶರಸುತ, ಕಪಿಲರೂಪಿ, ಸ–ಮೀರವಂದ್ಯ ಅನಸೂಯ ವರ-ಕುಮಾರ, ಪುಷ್ಕರ-ಕೇಶನನುಜ, ಮಂದಾರನತಜನ, ಐಶ್ವರ್ಯಧರಣಶರೀರ, ವ್ಯೋಮ ಸರಿತ್ಪಿತ ನಘ, ತುಷಾರಗಣವೈದ್ಯವರೊ ನಿನ್ನಯಾ । ಸಾರಮಹಿಮೆಯ ತಿಳಿಯಲಾರರು ನೀರಜಾಕ್ಷ । ಯೇ ಪಿತಾಮಾತಾಮಹನು ವಿ–। ಕಷ್ಟರಿಂದೊಶ ಅಗ್ನಿಭಯನಿವಾರಣ । ನಾರೆಗರೆದು ಪೂರ್ವ್ಯನಭಿಲಾಷೆಯ । ಘೋರಿಸುತಿಹ ತಾಪತ್ರಯಬಿಡಿಸೊ ರ–ಮಾರಮಣನೇ ಪ್ರಣತಾರ್ತಿ ಪರಿಹರ ॥ ವೆಂಕಟಾಚಲವಾಸ ॥ ೨ ॥ ವೇದೋದ್ಧರ, ಕೂರ್ಮ, ಈ ಕ್ಷಿತಿಯ ಮಾಯದಲೊಯ್ದು ದುರ್ಮತಿಭರ್ಮ, ಲೋಚನಹ ತರಳ–ಪ್ರಹ್ಲಾದವರದ, ಸುಕರ್ಮಸ್ಥಿತ, ಮಾತೃಹಿಂಸಕನಾದ ನಿರಶನುಶರ್ಮ ಪ್ರಮುಖರನ ಮರ್ಮ ಭೇದಿಸೇಳಿದ ಭೈಷ್ಮೀವಲ್ಲಭ ಶ್ರೀದ, ಬುದ್ಧ ಖಳಕುಲಭಂಜನ । ಬಾದರಾಯಣ ನಿಗಮವೇದ್ಯನೆ । ಮೋದಮಯಪ್ರಾಣೇಶವಿಟ್ಠಲ । ಕಾದುಕೋ ನಿನ್ನವರವನು ಎಂಪಾದಿಮಧ್ವವಿದೂರ ಯನ್ನ ವಿ । ಷಾದಗುಣಗಳೆಣಿಸದೆ, ಕುಬುಜೆಗೆ । ಮೋದತೋರಿದ ದೀನಬಂಧು ॥ ಶ್ರೀಧರ ಕೌಸ್ತುಭ ವಕ್ಷಸ್ಥಳ, ದ್ವಾದಶವ ಪುಸನ್ನಿಭ ನಿನ್ನಯ ಕ್ರೋಧಿಗಳೊಳು ಸ್ನೇಹವ ಪುನರಪಿ ಮೇದಿನಿಯೊಳು ಜನ್ಮವ ಕೊಡದಿರು ॥ ೩ ॥

K2750

೯೨. ರಾಗ–ತೋಡಿ (ತ್ರಿಪುಡೆತಾಳ).

ಪಕ್ಷಿವಾಹನ ಶ್ರೀನಾಮನ್ನ–ಅಂತರಿಕ್ಷಾಳಕಪ್ರಿಯ ಕಾಯೆನ್ನ । ಋಕ್ಷಪ ನಿಭ ಮಾಯಾಕಕ್ಷಾಗ್ನಿ ಹರೆ ಜಗತ್ಕುಕ್ಷೆ ನಂಬಿದೆನೆನ್ನುಪೇಕ್ಷೆಮಾಡಲಿ ಬೇಡ ॥ ಪಲ್ಲ ॥ ಅಂಜನಾಧರಾಧರಧಾಮ–ಹೇ ನಿರಂಜನ ವನಮಾಲಿ ಭೂಮಾ । ಪುಂಜಸುಗುಣನೆ ಪರಂಜ್ಯೋತಿ ಹರೇ ಕೃತ– । ಅಂಜಲಿಪುಟದಿಂಬಲಂಜಿ ಬೇಡುವೆ ಬಲ ॥ ಭಂಜನಾನುಜ, ವಿತತತ್ರಿಜಗಮುಂಜುಳಾಂಗನೇ ವೀತ ಭೂಪುುಖ । ಕಂಜನಾಭನೆ ತರುಣಿ ಶಿವ ನೃಪ ಕುಂಜರ ನಿವ ಕರವ ಪಿಡಿಯೊ ॥ ೧ ॥ ಪಾಠೀಣ ಕಮಠ ವರಾಹ । ನೀಚಹಾಟಕಾರಿ ವಟು ಭೂಭುಜಹಾ ॥ ಖೇಟಾಹ ಬುದ್ಧ ಕಲ್ಕಿ ಘೋಟಕಾನನ ವಿಶ್ವನಾಟಕ ಭೈಷ್ಮೀ ಮುಖಪಧೂಟನಿಯರವಲ್ಲಭ ॥ ಕೋಟಿಭಾಸ್ಕರತೇಜ ನಿನ್ನಯ ಆಟತಿಳಿಯಲು ಕೋಕನದಶುಭಪೀಠ ಲಕುಮಿ ಆಶಕ್ತರಹರು ಕಿ–ರೀಟಸಖ ನಿನ್ನವರೊಳ ಗಿಡೊ ॥ ೨ ॥ ಶಂತನುವಿನವಂಶ-ರಕ್ಷ, ಮಾತುಲಾಂತಕ ಜಲಜದಳಾಕ್ಷ । ಮುಂಧಾರಿ ಶಿಶುಪಾಲ–ದಂತವಕ್ತ್ರ ಮುರಾದಿ । ಹಂತದಾನವರ ನಿಕೃಂತ ನಾಹಿಮದಹಾ– । ನಂತಿಧುನಿಪಿತ ವೇದವೇದ್ಯ ಅ । ನಂತನುಹಿಮನೆ, ಅತ್ರಿ ಸುತ ನಿಶ್ಚಿಂತ ಶ್ರೀ ಪ್ರಾಣೇಶವಿಠಲ, ದುರಂತಶಕ್ತಿ ಭವಾಬ್ಧಿಘಟಜಾ ॥ ಪಕ್ಷಿ ॥ ೩ ॥

೯೩. ರಾಗ–ಪೂರ್ವಿ (ಆದಿತಾಳ).

ಗಂಗಾಪಿತ ವೆಂಕಟಪರ್ವತನಿಲಯ–ಕೌಸಲ್ಯಾತನಯಾ । ಮಂಗಳೆ ವಲ್ಲಭ ಭವಕರಕರೆಯ–ಪರಿಹರಿಪುದು ತ್ವರಿಯಾ ॥ ಅಂಗಜಜನಕನ ಸಂಗ ರಹಿತ ಸತ್ಸಂಗ ಕೃಪಾಬ್ಧಿ, ವಿಹಂಗವಾಹನನೇ ॥ ಗಂ ॥ ಪಲ್ಲ ॥ ಸ್ವಾಮಿ ಲಾಲಿಸು ಯನ್ನಯ ಮನದುಸರ–ನೀನಲ್ಲದಿತರರ–ಭೂಮಿಯೊಳ್ಕಾಣೆನೋ ಉದ್ಧರಿಸುವರ । ನವನೀತಚೋರ ॥ ಸಾಮಜ, ದ್ರೌಪದಿ, ಆ ಮುಚುಕುಂದ ಸುಧಾಮರಪೊರೆದ ತ್ರಿಧಾಮ ಮಹಾತ್ಮ ॥ ೧ ॥ ವಾಸುಕೀಶಯನ–ದಯಾ ಸಂಪನ್ನ ನಾರಾಯಣ ನಿನ್ನ–ದಾಸರೊಳಗಾಡಿಸೊ–ಸದ್ಗುಣಪೂರ್ಣ, ಸಾರ್ವ ರಿಗೆ ಪ್ರಸನ್ನ ॥ ಈಸಲಾರೆ ಈ ಸಂಸಾರ ಶರಧಿ ಕೃಸೋತಿತೆಲೋ ಪರಾಶರ

ತನಯ ॥ ೨ ॥ ನಿತ್ಯಾನಂದ ನಿಗಮೋದ್ಧಾರ, ಪೂತನೀ ಸಂಹಾರ–ಮೃತ್ಯುಂಜಯಸಖ ರವಿದರ ಗದಧಾರ । ಸುಖಪಾರಾವಾರ ॥ ಭೃತ್ಯವತ್ಸಲ ಸುರೋತ್ತಮ ಪಾರ್ಥನ ತೂತ್ತಿಗನಾದಿ ಸು । ಸತ್ಯಸಂಕಲ್ಪ ॥ ಗಂಗಾ ॥ ೩ ॥ ಮಂದರಾಚಲ ಧರಿಸಿದ ಗೋವಿಂದ । ಶ್ರೀಯಶೋದಾನಂದ–ನಂದನ, ಶ್ರೀಕೇಶವ ಮುಕುಂದ, ವಾಮನ ಸುಖಸಾಂದ್ರ ॥ ತಂದೆ, ಸಲಹೊ ನಿನ್ನ ಬಂಧಕ ಶಕುತಿಯಲಿಂದದಣಿಸದೆ ಅರಿಂದಮ, ಪ್ರಭುವೇ ॥ ೪ ॥ ಅಂತರಂಗವಬಲ್ಲ ಮಧುದ್ವೇಷಿ–ಯನ್ನಯ ಮನದಾಸೀ–ಅಂತು ಪೂರ್ತಿಸಿ ದುಷ್ಕರ್ಮದರಾಶಿ । ಉಳಿಸದ ವರಿಹರಿಸಿ ॥ ಸಂತತ ಹೃದಯದಿನಿಂತು ಪೊಳೆವುದೋ ಅನಂತ, ಮುರಾಂತಕ ಚಿಂತಾರಹಿತನೆ ॥ ಗಂಗಾ ॥ ೫ ॥ ಶಕ್ರ-ವರಜಪೂಜಿತ ಬಲವಂತ-ರುಕ್ಮಿಣೀವತಿ, ದಂತವಕ್ತ್ರಾರಿಬಾಧಿಸದಂತೆ ಕೃತಾಂತ । ಮಾಳ್ಪುದು ಕೆಡದಂಥ ॥ ಸುಕೃತಪಿಡಿಸೋ ತ್ರಿವಿಕ್ರಮ ಮೂರುತಿ ಶುಕ್ರಯುಕ್ತಿಹರ, ಅಕ್ರೂರ ವರದ ॥ ೬ ॥ ಕಂಕಾನುಜ ನುಂದಿರ ಪ್ರಾಣೇಶವಿಠಲ, ಗೋಕುಲ ಗೋಪಾಲ । ಪಂಕಜಾಸನಜನಕ ಶಕಟ ಕಾಲ–ಜಾಂಬವತೀ ಲೋಲ ॥ ಶಂಕರಾದ್ಯಮರರ ಕಳಂಕೆಣಿಸದ ಗರುಡಾಂಕ ಉರಗಪರ್ಯಂಕ ಸುಖಾತ್ಮ ॥ ೭ ॥

೯೪. ರಾಗ–ಕಾಂಬೋಧಿ (ತಾಳ ಅಟ್ಟ) [ಶ್ರೀ ಪಾಂಡುರಂಗ ಸ್ತುತಿ].

ರಕ್ಷಿಸೆನ್ನನು ಶ್ರೀ ಪಂಡರೀನಾಥಾ– ದೀನಜನದಾತ–ವಿಶ್ವ–ಕುಕ್ಷಿ, ವಿಖ್ಯಾತಾ ॥ ಪಲ್ಲ ॥ ಶ್ಲೋಕ ॥ ಧರ್ಮವನನಧರ । ವಿಷ್ಣು ಸೌಂದರ್ಯಸಾರ, ಧರ್ಮ ಪ್ರಮುಖ ವೀರವಂದ್ಯ ಲೋಕೈಕಧೀರ ॥ ಕರ್ಮವಿತತ ನಾರಾಯಣನ ಸುಖಪಾರಾವಾರ । ನಿರ್ಮಲದಧಿಚೋರ । ವಾರಿದನಿಭಾಂಗ ಜಾರಾ ॥ ೧ ॥ ಪದ ॥ ಮಾ-ಕಾ-ವೀ-ಫಣಿ, ಫಣಿಧರನುತ ದಿವ್ಯಚರಿತ । ವೃಂದಾರಕವೃಂದನಾಥಾ– । ನೇಕತಾಪಸರಿಗೆ ಸುಳಿಯೊಯಲ್ಲ–ತ್ವರಿಯ ಈ ಗೊಲ್ಲರಿಗೊಲಿದೆಯೊ ಸತ್ಯಾನಲ್ಲ । ಚೇಕಂದು ಶ್ರೀ ದೇವಕಿಯ ಪೊಟ್ಟೆಯಲ್ಲಿ ನೀ ಪುಟ್ಟಿ । ವೃಂದಾವನಕಾಗಿ ಅಟ್ಟಸಿಕೊಂಡು ನಂದನ ಮನೆಯಲ್ಲಿ । ಕ್ಷೀರಘೃತ ಚೆಲ್ಲಿ–ಮೆದ್ದೆ ಪರಿಪರಿಯಲ್ಲಿ ॥ ೨ ॥ ಶ್ಲೋಕ ॥ ಮೀನ ಕಮಠ ಶೀಲ, ಮರ್ತ್ಯಮೃಗರೂಪ, ಬಾಲ । ಕ್ಷೋಣಿಪಹ, ಸುಶೀಲ-ವೇಣು

ಗಾನವಿಲೋಲ ॥ ಮಾನಹವಿದುಕೂಲ ಹಯವಹನ ಸುಜನಪಾಲ ॥ ಹೀನ ಶಕಟ–ಕಾಲನೇಮಿಮುಖದನುಜಕಾಲ ॥ ೩ ॥ ಪದ ॥ ನದೀಪಿತ ನೀ ಭಾಂಡ ಜಲಧಿಯಿಂದೆ । ಈ ಲೋಕದ ಮಂದಿ–ಯಂತೆ ಫಲವನ್ನು ತಿಂದೆ । ಸದಾತೃಪ್ತ ನಿನ್ನ ಬಂಧಕದೊಳು–ಜಗ, ತ್ರೈಕಾಲು–ನೀ ಕಟ್ಟಿಸಿಕೊಂಬೆ ಮೇಲು ॥ ಬೆದರೊರೊ ನಿನಗೆ ಕನುಲೆ ವಿಧಿ, ಆ ಗುಮ್ಮನ ಬಾಧೆ ತೋರಿಸುವಳೊ ಯಶೋದೆ । ಮದನಪಿತನೆ ಕೌಸ್ತುಭಕಿಂತ ಗುಂಜಿಯತ್ಯಂತ, ಪ್ರೀತೆ–ಶಾರ್ಙ್ಗ ಅನಂತ ॥ ೪ ॥ ಶ್ಲೋಕ ॥ ತವನಸಖಸುನೇತ್ರ–ಪರಿಮಳ ಭೂಷಗಾತ್ರ । ವಿಪಿನನಳಹಗೋತ್ರ । ದ್ವಿಟ್ಸಸಖ ಶೂರಪಾತ್ರ । ಸುಫಲದ ಸ್ತುತಿಮಾತ್ರಾ । ಪಾಪಾಟವೀವೀತಿಹೋತ್ರ ನೃಪತಿಪ ತ್ರಯಿಶಾಸ್ತ್ರವೇದ್ಯ ಕಮಲಾಕಲತ್ರ ॥ ೫ ॥ ಪದ ॥ ಜಲದೂಳಿಹರ ವಸ್ತ್ರವೊಯ್ದುಯೊ । ವೃಕ್ಷಚಿಗಿದೆಯೊ ಎಂಥ ಕರುಣಾಂಬುಧಿಯೋ ಬಲವಿಂದೆರಡು ಕೈಯ್ಯುಮುಗಿಯೆಂದಿ । ಕೊಡು ತಿಪೆನೆಂದಿ । ಸರ್ವರನುಕರತಂದಿ ಮಳಲಿಂದಕೆರೆಗಟ್ಟಿ ನಾರೇರ–ಕೂಡಿ ವಿಹಾರ । ಮಾಡಿದೆಯೊ ವಾರಂ ವಾರಾ । ಫಲಭಕ್ಷಕರ ಕೊಂದಿದ್ರುನ ಗರ್ವ ಬಿಡಿಸಿದೆ ಸರ್ವರುಳಿಸಿದ ಪೂಜಿಗಹಾರ್ ॥ ೬ ॥ ಶ್ಲೋಕ ॥ ಕಲ್ಪಸ್ರುಜ್ಚಂದ್ರಭಾಸ, ಅಣುಮಹತ್ಪೂರ್ಣ, ಶೇಷತಲ್ಪ ವಿಗತದೋಷ । ಭಕ್ತಜನರಾಭಿಲಾಷಾ । ಕಲ್ಪ ತರುವೆ, ಶ್ರೀಶ, ಅಚ್ಯುತ, ಭೀರುವೇಷ ಸ್ವಲ್ಪ ಇತರಕ್ಲೇಶ ನಾಶನಾನಂದಲೇಶ ॥ ೭ ॥ ಪದ ॥ ಕರೆಸಲು ಬಿಲ್ಲು ಹಬ್ಬದ ಬಗೆಯಿಂದ ಮಧುರೆಗೆ । ಅಕ್ರೂರನ ಪ್ರಿಯ ಪೋಗೆ । ಕರಿಯ ಸಂಹರಿಸಿ ಮಲ್ಲರಗುದ್ದಿ ಕುಬುಜೆಯತಿದ್ದಿ, ದುಷ್ಟ ಕಂಸನನವದ್ದಿ । ಹಿರಿಯುಗ್ರಸೇನಗೆ ಅಭಿಷೇಕ–ಮಾಡೆ ನಿಃಶೋಕ । ಪೆಸಿಸಿದಿ, ಭೂಮೀನಾಕ ॥ ವರ ಸಾಂದೀಪಿ ಬಳಿಯೊಳೋದಿದೆ, ತಂದು ತೋರಿದೆ ಪುತ್ರನಾಘಪನೋದಿ ॥ ೮ ॥ ಶ್ಲೋಕ ॥ ಜನನೀಜನಕ ಭಂಗ–ಮೋಚಕ, ಪಾಂಡುರಂಗ । ಅನುಪಮನೆ ಭುಜಂಗ–ದರ್ಪಹಾ ಸಾಧುಸಂಗ ॥ ಅನವರತ ಅಸಂಗವೀತ ಭೂತಾ । ಕೃಪಾಂಗ, ದಿನಪನಿಭ, ವಿಹಂಗ–ವಾಹನ, ಜಗದಂತರಂಗ ॥ ೯ ॥ ಪದ ॥ ಲಾಲಿಸೆನ್ನಯಮಾತ ಭಗವಂತ–ಶ್ರೀ ರುಕ್ಮಿಣೀಕಾಂತ । ನಿತ್ಯಾನಂದ ನಿಶ್ಚಿಂತ । ಬಾಲಕ ಸ್ತ್ರೀ ಪೋಷಣೆಗೆ ಎಂದೂ–ದೇಹ ಬಹುನೊಂದು-ವೇಷ ತಪ್ಪಿಸಿ ತಂದು ನಾಲೇಶಸುಖವನ್

ಬಡಲಿಲ್ಲಾ ಒಂದುದಿವಸಲ್ಲ-ನಿನ್ನ ಪೂಜಿಸಲಿಲ್ಲ ॥ ಕಾಲನವರಿಗೆನ್ನ ಭಿಡೆ ಯವೆ-ನುಡಿ ತಡೆಯುವೆ । ಎಳ್ಳಿನಷ್ಟು ಸಾಧನವೇ ॥ ೧೦ ॥ ಶ್ಲೋಕ ॥ ಕಟ ಸ್ಥಿತಕರಧಾರಿ ಜಲಜದರ ಪೂತನಾರಿ । ಪಟುತರ ಭುಜಶೌರಿ ಚಕ್ರಿ, ಚೈದ್ಯವ ಹಾರಿ ॥ ಕರಿಣಕುಭವವಾರಿನಿಧಿಕರಿರಜ-ಉದಾರಿ ವಿರಲ, ಸುಗತಿದಾರಿ ಕಾಣೆನ್ಯೊ । ಕರೆಯೊ ನಾರಿ ॥ ೧೧ ॥ ಒಡಲಿಗೆರಡು ಕೈಯೂ ಇಕ್ಕುತ-ನುಡಿ ಗುಕ್ಕುತ । ಕಂಠಬಿಗಿದುಬಿಕ್ಕುತ । ಕೊಡುವನ ಮೊಗನೋಡಿನಾಚುತ । ಬಾಯ್ದೆರೆಯುತ । ಮರಳೊಮ್ಮೆ ಮುಚ್ಚುತ । ಅಡಗಿಸಿ ಕಾಯಕಟಕನಲ್ಲಿ । ನಾಯಿ ತೆರದಲ್ಲಿ । ಸುಳಿದಾಡುತಲಲ್ಲಿ । ಕಡೆಗೆ ನಿಷ್ಫಲವಾಗೆ ಸತಿಮುಂದೆ-ಅನ್ನಲೇನಂದೆ । ಇಂಥ ಶ್ರಮಗಳೊಂದೊಂದೇ ॥ ೧೨ ॥ ಶ್ಲೋಕ ॥ ಶಾತ ಮಕುಟವಿಟ್ಟ ಮಧುಕೈಟಭಾರಿ ಕೃಷ್ಣಾ । ಖ್ಯಾತಿಗವನಿಕೊಟ್ಟಾ ಬಲಿಯ ರಸಾ ತಳದೊಳಿಟ್ಟವೀತಭಯವಿಶಿಷ್ಟ ॥ ನಾನು ಮೂರ್ತಿಚತುಷ್ಟ । ವಾತವಿನುತ ದುಷ್ಟದೂರ ಸರ್ವತ್ರಚೇಷ್ಟಾ ॥ ೧೩ ॥ ಪದ ॥ ಯನ್ನದೋಷಕ-ವಂದುನೆಲೆ ಗಾಣೆ-ಪರಮಾತ್ಮನ । ಸ್ನಾನ ಸಂಧ್ಯಾವಂದನೆ । ಯನ್ನ ಗೃಹಸ್ಥಾಶ್ರಮದ ಕರ್ಮ । ಮಾಡಿದೆನ ಧರ್ಮ । ಯಮತೆಗೆಸಾನ ಚರ್ಮ । ಅನ್ಯ ಸ್ತ್ರೀಯರ ಮೆಚ್ಚಿ ಕಟ್ಟಿನೋ ನಿನ್ನ ಬಿಟ್ಟೆನೋ । ಮುಂದುಪಾಯವಿನ್ನೇನೋ ಪನ್ನಗಶಯ ನನ । ಈ ಪರಿ ಮಾಡುವರೆ ಧೊರೆ, ಜನುಮಗಳೇಸುಬಾರಿ ॥ ೧೪ ॥ ಶ್ಲೋಕ ॥ ಶತಕ್ರತು ಅನುಜಾತ, ವಾಮನ ಪಾರ್ಥಸೂತ । ಕ್ಷಿತಿವರ ಯದುನಾಥ । ಧಾತತಾತ ವಿಧಾತಾ । ವೃತಿಮನ ನತಪ್ರೀತ ಅತ್ರಿ-ಅನಸೂಯಾಜಾತ । ಸತೀ ಪತಿವಿಧುಸ ಹಿತ-ಗುಣಪೂರ್ಣ ತ್ರಿಗುಣರಹಿತ ॥ ೧೫ ॥ ಪದ ॥ ಧರೆಯೊಳು ವೇಷಕ ಕಾಪುರುಷರು ಒಂದೆರಡು ಮೂರು ಆಟತೋರಲಳುವರು । ಮರ ಳೊಮ್ಮೆ ತರಿಸದೆ ಸಮ್ಮಾನಮಾಡಿ ಬಹುಧನ । ಕೊಡುವರೊ ಮೂರುಭುವನ । ಧೊರೆ ನಿರ್ಜರಾರಾಧ್ಯ ನಿನ್ನ ಮುಂದೆ, ವೇಷ ಬಹುತಂದೆ । ಕಾಸಕೊಡದಿರೊ ತಂದೆ । 'ನರನಿನ್ನ ವೇಷವು ಸಾಕೆನ್ನ-ಬೇಕೋ' ಪಾವನ್ನ- । ಮೂರ್ತಿ ದಣಿ ಸದಿರೆನ್ನ ॥ ೧೬ ॥ ಶ್ಲೋಕ ॥ ಗಜ ದ್ರುಪತನುಜರಕ್ಷ । ಬಾಲಪಾಲನಾಪೇಕ್ಷ । ದ್ವಿಜಕುಲವರ ತ್ರ್ಯಕ್ಷ ದುರ್ಯೋಧನಾದಿಶಿಕ್ಷ ॥ ವಿಜಯಪ್ರಮುಖಪಕ್ಷ ಸ್ವಾಮಿ ಶ್ರೀವತ್ಸವಕ್ಷ । ಅಜಮಿಳನಿಗೆ ಮೋಕ್ಷವಿತ್ತಪಾಪಾಹಿತಾರ್ಕ್ಷ್ಯ ॥ ೧೭ ॥

॥ ಪದ ॥ ಪುಂಡರೀಕವಗಲೀದಿಲ್ಲಿಗೆ ಬಂದೆಬಹುಬೇಗ, ಭಕ್ತರೆಂಬುದು ಹೀಗೆ ಕಂಡ್ಯಾ ಯನ್ನವರೊಳು ಕೂಡಿಸೋ ನಿನ್ನ ಪಾಡಿಸೋ । ಆಶೆಯೆಂಬುದ ಬಿಡಿಸೋ ॥ ದಂಡಜವರದ ಶ್ರೀ ಪ್ರಾಣೇಶವಿಟ್ಠಲ ನಿರ್ದೋಷ-ನಿನ್ನ ವರಿಗೀ ಯೋ ಲೇಸಾ ಮಂಡಲದೊಳು ನಿನ್ನ ವ್ಯತಿರಿಕ್ತಾರಿಲ್ಲಾಮಿತ ಶಕ್ತಪಾಹಿ ಸರ್ವೋರ್ದ್ರಕ್ತ ॥ ೧೮ ॥

೯೫. ರಾಗ-ಶಂಕರಾಭರಣ (ಅಟತಾಳ).

ಪಾಲಿಸೋ ವೆಂಕಟಗಿರಿರಾಯಾ ಲಕ್ಷ್ಮೀಲೋಲ ನೀಲಾಂಬುದ ಸಮ ಕಾಯಾ ॥ ಪ ॥ ಮಾಕಮಲಾಸನ ವಾಸವ-ಸುರನೀಕಕರಾಧ್ಯ ಕೇಶವ ॥ ಲೋಕೇಶಯನ್ನಲ್ಲಿ ವಾಸವ-ಮಾಡಿನೂಕು ತುಚ್ಛತರಕ್ಲೇಶವ ॥ ೧ ॥ ಹಿಂದಿನ ಜನುಮಗಳೆಣಿಕಿಲ್ಲ-ದಯಾಸಿಂಧು ಸಾಧನವೀಗಲಿಸಿತೆಲ್ಲಾ । ಮುಂದಿನಗತಿ ಯೇನೋ ತಿಳಿದಿಲ್ಲ, ಇದರಿಂದಲಂಜುವೆ ಜಾಂಬವತೀನಲ್ಲ ॥ ೨ ॥ ಬಾಲಕ ನಾದೆ ಕೆಲವುದಿನ । ಪ್ರಾಯಕಾಲವೊದಗಲು ಪರಾಂಗನಾ । ಮೇಲೆ, ಅಭಕ್ಷಣೆ ಯಲಿಮನವಿಟ್ಟೆ ಹೇಳಲೊಂದೆರಡೇ ಯನ್ನವಗುಣ ॥ ೩ ॥ ಉದಯಸ್ನಾನವು ಸಂಧ್ಯಾವಂದನೆ ಅರ್ಘ್ಯವಿಧಿ ಗುರುಹಿರಿಯರ ವಂದನೆ ॥ ಮೊದಲಾಗಿ ಪಿತರಾ ರಾಧನ ಬಿಟ್ಟೆ ಮುದದಿಂದ ಹೀನನೆಂಬುವ ನಾನೇ ॥ ೪ ॥ ಅನ್ಯರಮನೆ ದ್ವಾರ ಕಾಯ್ವೆನೋಸ್ವಾಮಿ ನಿನ್ನ ಸ್ಮರಣೆಯ ಕ್ಷಣಮಾಡೆನೋ ॥ ಅನ್ನಕ್ಕೆಬಹುದೂರ ಪೋಪೆನೋ ಸಾರೆ ಪುಣ್ಯಕ್ಷೇತ್ರಗಳಿರೆ ನೋಡೆನೋ ॥ ೫ ॥ ಧನಹೀನನಾದ ಕಾರಣದಿಂದ । ಸತಿಮನೆಹೊಂದಿಸಳೋ ಪರಮಾನಂದ ॥ ತನುಜರಶನ ವಸನ ಗಳಿಂದ ಕಾಡುವಣುಮಾತ್ರ ಸುಖವಿಲ್ಲ ಇದರಿಂದ ॥ ೬ ॥ ಏಸುಹೇಳಲಿ ಮಾತ ಲಾಲಿಸೋ ಶ್ರೀಪ್ರಾಣೇಶವಿಟ್ಠಲ ನೀನೇ ತಾರಿಸೋ ॥ ಆ ಸತ್ಕರ್ಮಾದಿ ಮನ ಪ್ರೇರಿಸೋ-ನಿನ್ನ ದಾಸವರ್ಗದೊಳೆನ್ನ ಕೂಡಿಸೋ ॥ ೭ ॥

೯೬ ರಾಗ-ಸಾವೇರಿ (ತ್ರಿಪುಡೆತಾಳ).

ಬಣ್ಣಿಸಲಳವೆ ನಿನ್ನ । ಪನ್ನಗಶಯನ ಪ್ರಪನ್ನವತ್ಸಲರಂಗ ॥ ಪ ॥ ಮಧುಕೈಟಭಾಂತಕನೆ ಮಧುರಾಪತಿಜಿತನೆ ॥ ಮಧುಸಖಜನಕನೆ ಮಧು. ಮಾಂತ್ರಿಯಾಂಬಕನೇ ॥ ಬಣ್ಣಿ ॥ ೧ ॥ ಋಷಿಪತ್ನಿಯರ ಮೋಹಕ-ಋಷಿ

ಪತ್ನಿಯುತಾರಕ, । ಋಷಿಪತ್ನಿಯನಾಶಕ ಋಷಿಪತ್ನೀ ಬಾಲಕ ॥ ೨ ॥ ಪದುಮಸಂಭವನಯ್ಯ-ಪದುಮೇಶ ಕವಿಗೇಯ ॥ ಪದುಮಾವರದ ಜೇಯ ಪದುಮಜಾಂಡದೊಡೆಯ ॥ ಬಣ್ಣಿಸ ॥ ೩ ॥ ಭಾನುಕೋಟಿ ಪ್ರಕಾಶ-ಭಾನುಲೋಚನಾಧೀಶ ॥ ಭಾನುಪಸುತಪೋಷ ಭಾನುಪಾಣಿ ನಿರ್ದೋಷ ॥ ಬಣ್ಣಿಸ ॥ ೪ ॥ ಹರಿ ಪ್ರಾಣೇಶ ವಿಠಲಯ್ಯ । ಹರಿಶಯನ ಮಿತ್ರಿಯ ॥ ಹರಿಯಾಸ್ಯ ನರದೇಹ । ಹರಿಸುವದಘತ್ವರಿಯಾ ॥ ಬಣ್ಣಿಸ ॥ ೫ ॥

೯೭. ರಾಗ-ಕೇದಾರಗೌಳ (ತ್ರಿಪುಡೆತಾಳ).

ಉಪಕಾರ ಮರೆವುದುಚಿತವಲ್ಲೋ ॥ ತವನಾಪ್ತಾಕ್ಷನೆ ನಮ್ಮ ಹಿರಿಯರಂದುಮಾಡಿದಾ ॥ ಉಪ ॥ ಪ ॥ ಹರಿಯೆ, ನಿನ್ನವರಿಗಮೃತವ ನೀಡುವೆನೆಂದು ಭರದಿಂದ ಮಥನ ಮಾಡಿಸಿದ ಕಡಲ ॥ ಗರಳವುದ್ಭವಿಸಲು ದಿವಿಜರಂಜಲು ಆಗ । ತ್ವರದಿಂದ ದರಭಯ ಪರಿಹರಿಸಿಪರಾರೊ ॥ ೧ ॥ ಆರಣ್ಯದೊಳಗೆ ನೀನಿರಲು ನಿನ್ನಾಲ್ಲಭೆಯ ಆ ರಾವಣನೊಯ್ಯಲು ಕಪಿಗಳೆಲ್ಲ । ಹಾರಲಾರೆವೊ ಸಮುದ್ರಾ ಎನ್ನಲು ಬೇಗ । ಭಾರತೀರಮಣನೇ ಪೋಗಿವಾರ್ತೆಯ ತಂದ ॥ ೨ ॥ ಶರಧಿಕಟ್ಟುವುದಕ್ಕೆ ರೋಮರೋಮದಿಗುಡ್ಡ ಧರಿಸಿ ತಂದನು ನೊಂದೆನೆನ್ನದಲೆ । ಹರಿಜಿತುಶರದಿಂದ ಬಿಗಿಯೆ ಪ್ಲವಗರೆಲ್ಲಾ ಧರಣಿ ಹೊಂದಲು, ಸಂಜೀವನ ತಂದು ಉಳುಹಿದ ॥ ೩ ॥ ವಸುದೇವಜನಾಗಿ ನೀಂ ಜರಿಜನ ಭಯದಿಂದ ವಸುಧೆಯೊಳಗೆ ನಿಲ್ಲಲಾರದಿದ್ದೆ । ಶಶಿಕುಲದಲ್ಲಿ ಪಾತ ಜನಿಸಿ ಅವನ ಕೊಂದು । ಕುಸುಮನಾಭನ ನಿನ್ನ ಭಯಬಿಡಿಸಿದನಲ್ಲೋ ॥ ಉಪ ॥ ೪ ॥ ಮಣಿಮಂತ ಜಗದೊಳು ನಿನ್ನ ಮಹಿಮೆಯನ್ನು ಮುಣುಗಿಸಿದನು, ತ್ವರಿತ ನಮ್ಮ ಗುರುವು । ಘನಶಾಸ್ತ್ರಂಗಳ ರಚಿಸಿ ದುರ್ಮತವ ಸೋಲಿಸಿ ಮನಸಿಜಪಿತನೇಪರನಂದು ಮೆರೆಸಿದ ॥ ೫ ॥ ಇಷ್ಟು ಸೇವೆಯ ಮಾಡಿ ಮೆಚ್ಚಿಸಿದನು ಗೇಣುಬಟ್ಟೆ ಬೇಡಿದನೇನೋ ಆತ ನಿನ್ನ ॥ ಬಿಟ್ಟಿದ್ದಾನಾದಿತು ನಮ್ಮ ವಂಶಕರಿಗೆಕೊಟ್ಟು ರಕ್ಷಿಸುವನುಸ್ವಾಮಿ ಒಳ್ಳೆವನಂದು ॥ ೬ ॥ ಈಸುಪರಿಯಿಂದ ನಮ್ಮ ಭಾರತೀಕಾಂತ । ತಾ ಸೋತಿರಲು ನಿನಗೆ ನಮ್ಮನೀಗ । ಘಾಸಿಮಾಡದೆ ಸಲಹುವದುಚಿತವೋ ಶ್ರೀಪ್ರಾಣೇಶವಿಟ್ಠಲರೆಯ ಅಪಕೀರ್ತಿಕೊಳಬೇಡ ॥ ೭ ॥

೯೮. ರಾಗ–ಆಹರಿ (ಝಂಪೆತಾಳ).

ಇಂತಿರುವದೇನುಬಗೆ ರಾಮಾ । ಹರಿ ಸ್ವತಂತ್ರ ಶ್ರೀ ನಿಧಿಯೆಂದು ಪೊಗಳುತಿವೆ ವೇದ ॥ ಪ ॥ ವಿಧಿಗೆ ಪದವಿತ್ತವನೇ ವನವ ಚರಿಸುವದೇನೋ । ಪದುಮಸದನೆಯ ರಮಣ ಬಡವನಾಗಿಹದೇನೋ ॥ ಮದನಜನಕನೆ ಋಷಿಗಳಂತೆ ಆಗುವದೇನೋ । ಉದರದೊಳು ಬಹು ಜಗಗಳಿರಲೂ ಪತ್ರಸದನ ವಾಶ್ರಯಿಸಿಕೊಂಡಿರುವಿ ಇದು ಏನೋ ॥ ೧ ॥ ನಿತ್ಯತೃಪ್ತನೆ, ಶಬರಿಯೆಂಜಲುಂಬುವದೇನೋ । ಉತ್ತಮವಿಹಗವಿರಲು ಕಾಲ್ನಡಿಗೆಯಿದೇನೋ । ಭೃತ್ಯರು ದಿವಿಜರು ನೀಂ ಚಾಪವ ಹೊರುವದೇನೋ । ನಿತ್ಯ ಶ್ರೀಹೃದಯದೊಳಗಿರಲು ನಿನ್ನ-ಪತ್ನಿಹೋದಳೆಂದು ಚಿಂತಿಸುವದೇನೋ ॥ ೨ ॥ ಸ್ವಾಮಿ ಅತಿಶಯನ ತೃಣಶಾಯಿಯಾಗುವದೇನೋ । ಭೂಮಿನಿನ್ನೊಂದಪ್ರಿ, ಸೇತು ಕಟ್ಟುವದೇನೋ ॥ ಈ ಮರುಳು ರಕ್ಕಸರು ನಿನಗೊಂದೀಡೇನೋ । ತಾಮಸರ ಪೋಷಿಸುವದಕೆ, ಭಕ್ತಪ್ರೇಮಪ್ರಾಣೇಶವಿಟ್ಠಲನೆ ಲೀಲೆಯೇನೋ ॥ ೩ ॥

೯೯. ರಾಗ–ವಂಸತಭೈರವಿ (ಅಟತಾಳ).

ಹುಚ್ಚು ಹಿಡಿಸಿದೆಯಾ ಮಾಧವ । ನಿಚ್ಚ ನಿನ್ನ ಪಾದಾಂಬುಜವ ಭಜಿಪರಿಗೆ ॥ ಪ ॥ ಮತ್ತಗಜವೆಂಟು ಸೊಕ್ಕಿಲಿ ಕೊಲ್ವವು । ಕುತ್ತಿಗೆ ಮುರಿವರಾರು ಮಂದಿಯೂ । ಎತ್ತಹೋಯಿತೋ ಬುದ್ಧಿ ಕುಳಿತುಕೊಂಡರೆ ಮೇಲೆ । ಹುತ್ತಬೆಳದರೆಚ್ಚರಿಕೆಯಿಲ್ಲದಂಥ ॥ ೧ ॥ ದಾರಾಸುತರನ್ನದಾರೆಂದು ನೋಡರಾಗಾರನಮ್ಮದೆಂದು ಪೋಷಿಸರು । ಆರಣ್ಯದಲಿಮುಸುಕಿಕ್ಕಿಧ್ಯಾನಿಸುವರು । ಶಾರೀರದವರಖಿಯನ್ನು ಬಿಟ್ಟಹರು ॥ ೨ ॥ ಬಿದ್ದುಯದ್ದ ಕಾಳು ಆದುಕೊಂಡುಂಬರು । ಇದ್ದ ಬದುಕುಜೋಕಮಾಡೊಲ್ಲರು ॥ ಪ್ರದ್ಯುಮ್ನ ಪ್ರಾಣೇಶವಿಠಲನೇ ಇಂಥ ಬುದ್ಧಿಯಪ್ರೇರಿಸಿ ನೋಡಿ ಹಿಗ್ಗುವೆನೀ ॥ ೩ ॥

೧೦೦. ರಾಗ–ಭೈರವಿ (ಅಟತಾಳ).

ಈ ವಸುಧೆಯೊಳೆಲ್ಲರಿಗಿಂತ ಕೃಷ್ಣನು ಆವುದರಿಂದಧಿಕಾ ॥ ಪ ॥ ವಾರಿಧಿಮನೆಯಲ್ಲೆ ಈಗಿನರಸರಿಗೆ । ನೀರೊಳಗೇಸೊಂದು ಊರಿಲ್ಲವೇ । ಶಾರ್ಙ್ಗಧನುವಾದರೇನು ದುರ್ಲಭವಲ್ಲ । ಧಾರಿಣಿಯೊಳು ಮನೆಮನೆಯಲ್ಲಿ

ಕಾರ್ಮುಖವು ॥ ೧ ॥ ಲೇಸೇನು ಕೌಸ್ತುಭವೊಂದೆಯೋ ಮಣಿಗಳು । ಏನೊಂದಿಲ್ಲವೆ ಭಾಗ್ಯವಂತರಲ್ಲಿ ॥ ಶೇಷನಹಾಸಿಗೆ, ಹಾವಾಡಿಸಿಹೊಟ್ಟೆ-ಪೋಷಿಸಿಕೊಳ್ಳರೇ ಗಾರುಡಿಗರೆಲ್ಲ ॥ ೨ ॥ ಪೀತಾಂಬರಂತು ಎಲ್ಲರಿಗಿಹದು ದೊಡ್ಡ । ಮಾತಲ್ಲ ವನಮಾಲೆ ವೈಜಯಂತಿ ॥ ಖ್ಯಾತಿಗೆ ಶಂಖಚಕ್ರವು ಹೇಳಿಕೊಳ್ಳಲು ಜಾತಿಕಾರಗಿಲ್ಲೇ ಬಡಿವಾರವೇತಕೆ ॥ ೩ ॥ ಶ್ರೀವತ್ಸ ಶ್ರೀವತ್ಸವೆಂಬರು ಮಂದೆಲ್ಲ । ಆವಹುಣ್ಣಿನ ಕಲೆಯಾಗಿಹದೋ ॥ ಆವಾಸಿಹಯರಥ ಮುದಿಹದ್ದಯೇರುವ ಕೋವಿದರೆಲ್ಲೇನು ನೋಡಿವಂದಿಸುವರೋ ॥ ೪ ॥ ವೈಕುಂಠ ಮೊದಲಾದ ಮೂರೇ ಊರವನಿಗೆ ಲೋಕದೊಳರಸರಿಗೇಸೋವೂರು ॥ ಶ್ರೀಕಾಂತಪ್ರಾಣೇಶವಿಠಲನಂಗಸಂಗ ಬೇಕೆಂದು ಬಯಸುವರೆಲ್ಲರೂ ತಿಳಿಯದೆ ॥ ೫ ॥

೧೦೧. ರಾಗ—ಸೌರಾಷ್ಟ್ರ (ಏಕತಾಳ).

ಧೊರೆತನಮಾಡುವರೀವರಿಯಾಗಲು । ತರವೇ ರುಕ್ಮಿಣೀಪತಿಕೇಳು ॥ ಬಲುಬಲು ಋಷಿಗಳು ತಪವನೆಮಾಡಿ ನಿನ್ನ । ನಿಲುವಗಾಣದೆ ಬಳಲುವರು ॥ ಘಳಿಗೆ ಬೇಸರದಲೆ ಊಳಿಗದವನಂತೆ । ಬಲಿಯ ಬಾಗಿಲು ಕಾಯ್ವುರೇ ॥ ೧ ॥ ಜಲಜಸಂಭವ ಈಶೇಂದ್ರಾದಿದೇವತಗಳು ಬಿಡದೆ ನಿನ್ನ ವಂದಿಸುತಿರಲು । ಬಡವನಂದದಿ ಕರೆದಾಗಲೆ ತಡೆಯದೆ ನಡಿಸುವರೆ ಪಾರ್ಥನರಥವ ॥ ೨ ॥ ಸಚ್ಚಿದಾನಂದ ನಿತ್ಯತೃಪ್ತಪೂರ್ಣಕಾಮನೆಂದು । ಹೆಚ್ಚಾಗಿವೇದ ಕೂಗುತಿರಲು ॥ ಪುಚ್ಚು ಪ್ರಾಣೇಶವಿಟ್ಠಲಯ್ಯನೆ ಶಬರಿಯ । ಉಚ್ಚಿಷ್ಟ ಹಣ್ಣ ಮೆಲ್ಲುವರೆ ॥ ೩ ॥

೧೦೨. ರಾಗ—ಭೈರವಿ (ಏಕತಾಳ).

ಅಂದುಂಟಂದಿಲ್ಲೇ ಮಾಧವ-ನಿನ್ನ-ಹೊಂದಿದವರ, ಭಯಕಳೆದು ಪೊರೆವ ದಯೆ ॥ ಪ ॥ ಶಂತನುಭೂಪನರಸಿಬಳಲಿ, ಕಂತುಜನಕನೀ ಗತಿಯೆನಲೀ । ಅಂತರಿಸದೆ ವಿಧವೆರೆಲಾಕ್ಷಣ । ಸಂತತಿನೆಲಸಿದೆ ಮನ್ನಿಸುತಾ॥ ದಯು ॥ ಅಂದುಂಟಂದಿಲ್ಲೇ ॥ ೧ ॥ ಕಲಿಯಾಳಿಕ ಬಹಳಾಗಿರಲು । ಮಲಿನಯುಕ್ತ ಧರೆಯಾಗಿರಲು । ತಿಳಿದ ಹದಿನೆಂಟು ಪುರಾಣವ ವಿರಚಿಸಿ । ಸಲ

ಹಿದೆಯುತ್ತಮ ಜೀವರನಾ । ದಯೆ ॥ ಅಂದುಂಟಂದಿಲ್ಲೆ ॥ ೨ ॥ ತಿಳಿಯದೆ ನಿನ್ನೊಲುಮೆಯವಗೆಂದು । ನಳಿನಾನುಜ ನೀ ಬೇಕೆಂದು ॥ ಕೊಳಲರಿದರ ಕರದಿತ್ತಾರಣದೊಳು । ಗೆಲಿಸಿದೆ ತೋಂಡನ ಮುಂದದಿಂದಾದಯೆ ॥ ಯಂ ದುಂಟಂದಿಲ್ಲೆ ॥ ೩ ॥ ಪಾದಜಲರಸರ ಬದುಕಿಸಿತು । ಪಾದಪೆಸರೇ ಪತಿತನ ಕಾಯ್ತು ॥ ಪಾದಪಮುರಿದು ಕುಬೇರಜರೀರ್ವರ । ಪಾದವೇ ಸದ್ಗತಿಗೈದಿ ಸಿತಾದಯೆ ॥ ಅಂದುಂಟಂದಿಲ್ಲೆ ॥ ೪ ॥ ಆ ಸೈಂಧವನಳಿದರ್ಜುನನ । ಪೋಷಿಸಿ ದಂತೆ ಮೃತಾತ್ಮಜನಾ ॥ ಭೂಸುರಗಿತ್ತಂತೀ ವಿಪ್ರರ ಪ್ರಾಣೇಶವಿಟ್ಠಲ ರಕ್ಷಿಸ ಬೇಕಾದಯೆ । ಅಂದುಂಟಂದಿಲ್ಲೆ ॥ ೫ ॥

೧೦೩. ರಾಗ–ಕಾಂಬೋಧಿ (ಝಂಪೆತಾಳ).

ಸ್ವಾಮಿತ್ವವವರಿಗೆ ಅಯುಕ್ತವೇ ಯುಕ್ತ । ಶ್ರೀಮನೋರಮನೆ ಹೇಳುವೆ ಕೇಳು ಶಕ್ತ ॥ ಪಲ್ಲ ॥ ಮಾವನಿಗೇ ಮಾವನಾದೆಯಲೊ ಜನ್ಮಾರಭ್ಯ । ನೀವೊ ಡಲಹೊರೆವೆ ಚೋರತನಮಾಡಿ । ಕೋವಿದರಿಗತಿಮುಚ್ಚು ಜಾರತನ ಮಾಡಿ ದುದು । ಆ ವನಿತ ಮುದ್ದ ಫಲ ಮೆದ್ದಿ ನಿದೋಷಿ ॥ ೧ ॥ ನರ ಸೇವಕನುಮಾಡಿ ಪೆಸರಾದಿ ಮಾತೆಯುಕೊಂದೆ । ಧರೆಯೊಳಗೆ ಮಾತುಲನ ಕೊಲ್ಲ ಬಹುದೇ ॥ ತಿರುಕಿ ಬೇಡಿಸುವಳರಸರನ ನಿಸ್ಸಯ ರಾಣಿ । ಪರಿಮಿತಿಯಿಲ್ಲದ ದುರಾಚಾರಿ ನಿನ್ನಯಮಗನು ॥ ೨ ॥ ಮೈದುನನು ಗುರುದ್ರೋಹಿ ನೊಮ್ಮಗನು ಬಹು- ಚಾಡಿ ಮೇದಿನಿಯೊಳಗೆ ಹೇಳುತಲೆ ತಿರುಗುವ ॥ ಶ್ರೀದಪ್ರಾಣೇಶವಿಠ್ಠಲನೇ ನೀನೇದೊರೆಯಾದಕಾರಣ ದಕ್ಕಿತಿದು ಇಲ್ಲದಿರೆ ಸಲ್ಲ ॥ ೩ ॥

೧೦೪. ರಾಗ–ಸೌರಾಷ್ಟ್ರ (ತ್ರಿಪುಡೆತಾಳ).

ಈ ದುರ್ಮಾರ್ಗಗಳನ್ನು ಪಿಡಿಸಬೇಡೈ । ಮಾಧವನೆ, ಇಂದಲ್ಲ ಜನುಮ ಜನುಮದಲೀ ॥ ಪಲ್ಲ ॥ ಮಾತಾಪಿತರರ ಆಜ್ಞಮೀರಿ ನಡೆಯಿಸಬೇಡ । ಜಾತಿಧರ್ಮವ ಬಿಟ್ಟನೆನಿಸಬೇಡ ॥ ಈ ತುಚ್ಛ ವಿಷಯದಾಪೇಕ್ಷೆ ಮಾಡಿಸ ಬೇಡ । ಭೂತೇಶನೇಪರಮಾತ್ಮನೆನಿಸಬೇಡ ॥ ೧ ॥ ಹರಿದಿನದಲಿ ಬಿಂದು ಉದಕ ಕುಡಿಯಿಸಬೇಡ । ಪರದ್ರವ್ಯದಲೀಪ್ಸ ಕೊಡಲು ಬೇಡ ॥ ನಿರುತ ಪರ ರಾನಿಂದಾವನ್ನು ಮಾಡಿಸಬೇಡ । ನರರ ಸೇವಿಸಿ ಬದುಕಿಸಲಿಬೇಡ ॥ ೨ ॥

ಸಣ್ಣ ಮಾನವರ ಸಂಗತಿಯು ಕೊಡಲಿಬೇಡ। ಅನ್ಯ ಶಾಸ್ತ್ರಗಳ ಕೇಳಿಸಲುಬೇಡ॥ ನಿನ್ನ ದಾಸನಾಮುತನಬಿಟ್ಟು ಇರಿಸಬೇಡ। ಯನ್ನದೀಶರೀರಾದಿಯೆನಿಸಬೇಡ ॥ ೩ ॥ ಉತ್ತಮರ ಪೂಜೆಗೆ ಜಾಗು ಮಾಡಿಸಬೇಡ । ವಿತ್ತವಸಜ್ಜನರಿಗೆ ಕೊಡಿಸಬೇಡ ॥ ನಿತ್ಯ ಸತ್ಕಥಾಶ್ರವಣವಿಲ್ಲದಲ್ಲಿಡಬೇಡ । ಸತ್ಯೇಶಯನ್ನಮಾತು ಮರೆಯಬೇಡ ॥ ೪ ॥ ಪ್ರಾಣೇಶವಿಠಲ ನಿನ್ನಲ್ಲದೆ ಎಂದೆಂದು । ಹೀನದೇವತೆಗಳಿಗೆ ಮಣಿಸಬೇಡ ॥ ಮಾನುಷ್ಯೋತ್ತಮಾದಿ । ಬ್ರಹ್ಮಾಂತ ದಿವಿಜರಲ್ಲಿ ನ್ಯೂನಭಕುತಿಯನ್ನು ಕೊಡಲಿಬೇಡ ॥ ೫ ॥

೧೦೫. ರಾಗ-ಭೈರವಿ (ಏಕತಾಳ.)

ನೀನೇಯೆಂದು ಮರೆಹೊಕ್ಕೆನೋ-ರಂಗ-ದೀನಜನರ ಪಾಲಿಪ ದಯಾಸಾಗರ ॥ ಪಲ್ಲ ॥ ಉತ್ತಮದ್ವಿಜರು ಮನೆಗೆ ಬರಲು । ಪ್ರತ್ಯುತ್ಥಾನವ ಕೊಡದಲೆ ಉ ॥ ನ್ಮತ್ತತನದಿಬಹು ಪಾಪವಗಳಿಸಿದೆ ಚಿತ್ತಜಜನಕನ ದೋಷನಗಕುಲಿಶ ॥ ೧ ॥ ಪಾತ್ರರ ಸಂಗಡ ಕ್ಷೇತ್ರಗಳ ಯಾತ್ರೆಚರಿಸದೆ ನಿರರ್ಥಕದಿ ॥ ಗಾತ್ರನ ಬೆಳಸಿದೆ ರುಕ್ಮಿಣೀವರನ ಪಿ ಧಾತ್ರಕರಾರ್ಚಿತ ಕುಂದನೆಣಿಸದಿರು ॥ ೨ ॥ ಸ್ನಾನಸಂಧ್ಯಾವಂದನ ಬಿಟ್ಟು । ಜ್ಞಾನಿಗಳಾದವರನು ಹಳಿವೆ । ಧ್ಯಾನಿಪೆ ಸರ್ವದಾ ಪರರ ಕೇಡನು । ಏನೆಂಥೆಳಲಿ ಯನ್ನಯ ಅವಗುಣ ॥ ೩ ॥ ಮರೆತಾದರೂ ಹರಿಯೆಂದೊಮ್ಮೆ-ಸ್ಮರಿಸಿದವರ ದುರ್ಗುಣಗಳನು ॥ ಪೊರೆವನೆಂಬ ನಿನ ಬಿರುದು ಕೇಳಿ ಪದ। ಸರಸಿಜಕೆರಗಿದೆ ಕರುಣಿನೋ ಮಾಧವ ॥ ೪ ॥ ಪುಸಿಯಲ್ಲವೋ ಇದು ಅಜಾಮಿಳ । ಪೆಸರಾಗಿಹಪಾಪಿಷ್ಠರೊಳು ॥ ವಶವಿಾರಿನುತನ ಕರೆಯಲಾಕ್ಷಣ ಪೋಷಿಸಿದೆ ತ್ವರದಿ ಶ್ರೀ ಪ್ರಾಣೇಶ ವಿಠಲಾ ॥ ೫ ॥

೧೦೬. ರಾಗ-ಕಾಂಬೋಧಿ (ಝಂಪೆತಾಳ.)

ನಿನಗೆ ತಿಳಿದಂತೆ ಮಾಡುವದಯ್ಯ ಬೇಡೆನಲು-ಯನಗೆ ಸ್ವಾತಂತ್ರ್ಯವುಂಟೇ ॥ ಮನಸಿಜಪಿತ ನಿನ್ನ ಮಾರಿ, ಸಿರಿ, ವಿಧಿ, ಶರ್ವ । ತೃಣಮುರಿಯೆ ಶಕ್ತರಲ್ಲಾ-ಹರಿಯೇ ॥ ಪ ॥ ಅವಮಾನಮಾಡಿಸೊ, ಕೋಪವನೆ ಹೆಚ್ಚಿಸೊ । ಕೃಪಣತನದಲ್ಲಿರಿಸೊ-ಅಪಹಾಸಗೈದಿಸೊ,-ಡಾಂಬೀಕದವನೆನಿಸೋ-ಉಪ

ವಾಸದಲ್ಲೇ ಇರಿಸೊ ॥ ಕೃಪೆಯುಳ್ಳನರನೆನಿಸೋ ಮಾನವೆಗ್ಗಳ ಕೊಡಿಸೊ ॥ ಚಪಲಬುದ್ಧಿಯನೆ ಕಲಿಸೊ, ಅಪರಾಧವನೆ ಹೊರಿಸೊ । ಬಲು ಭಯವ ತೋರಿಸೋ ತ್ರಿಪುರಾಂತಕರ್ಚಿತಪದ ಹರಿಯೇ ॥ ೧ ॥ ಬೈನು ಬೈದಾಡಿಸೊ ಬಾಂಧವರನಗಲಿಸೊ । ಹೇಸಿಕೆಯುಲಜ್ಜೆ ತೂರಿಸೊ । ಗ್ರಾಸವನೇಉಣಿಸೊ । ನರರಾಲಯವಕಾಯಿಸೋ । ಕ್ಲೇಶನಿತ್ಯದಲಿ ಬಡಿಸೊ । ಆಶೆಯನು ಜರಿಸು ಕೈಕಾಲುಗಳ ಕುಂರಿಸೊ । ದೋಷಕ್ಕೆ ಮನವಂಜಿಸೋ ॥ ವಾಸುದೇವನೆ ನಿನ್ನ ವ್ರತವಮಾಡಿಸುವಂದು ದೇಶ ಬಹುಕಡೆ ತಿರುಗಿಸೊ । ಹರಿಯೇ ॥ ೨ ॥ ಕವನಗಳ ಪೇಳಿಸೊ ಕರ್ಮಬಾಹಿರನೆನಿಸೊ । ಭುವನದೊಳು ಭಂಡನೆನಿಸೊ-ಕವಿಸು ಅಜ್ಞಾನವನು ಸನ್ಮತಿಯ ಪ್ರೇರಿಸೊ । ಕಿವಿ ಮಾತ್ರ ದೃಢದಲಿರಿಸೋ ॥ ಜವನ ಸದನವಪೊಗಿಸೋ ಬಂಧಾನದೊಳಗಿರಿಸೊ । ತವದಾಸರೊಳು ಕೂಡಿಸೊ ದಿವಿರೊಲ್ಲಭ ನ್ಯಾಯವನ್ಯಾಯವನೆ ಮಾಡು । ಭವಪಂಕದೊಳು ಮುಳುಗಿಸೋ । ಹರಿಯೇ ॥ ೩ ॥ ಹೆತ್ತವರಸೇವೆ ಮಾಡಿಸೊ ನೀಚರಬಳಿಯ ತೊತ್ತುಕಲಸವ ಮಾಡಿಸೋ । ಚಿತ್ತಚಂಚಲಗೊಳಿಸೊ ವೈರಾಗ್ಯ ಪುಟ್ಟಸೊ ಉತ್ತಮರ ನೆರೆಯಲಿರಿಸೊ ॥ ಮುತ್ತಿನಾಭರಣಡಿಸೊ ತಿರುಕೆಯನ ಬೇಡಿಸೊ । ಪಿತ್ತಸಂಗ್ರಹ ಮಾಡಿಸೊ । ಮುತ್ತೆಗೊಲಿದಿಹನೆ ವಿಷಕುಡಿಸೊ ಅಮೃತವುಣಿಸೊ । ಮತ್ತೊಬ್ಬರಾರು ಗತಿಯೋ । ಹರಿಯೇ ॥ ೪ ॥ ಸಾಲಗೊಯ್ಕನ ಮಾಡು ಕಂಡಕುಂದಲಿ ತಿನಿಸು । ಕೀಳು ಮನುಜರ ಪೊಂದಿಸೋ ನಾಲಿಗೆಗೆಡಕನೆನಿಸೋ । ಸತ್ಯವಚನಿಯು ಎನಿಸೊ । ಸ್ಥೂಲಪುಣ್ಯವ ಮಾಡಿಸೋ ॥ ಕೇಳಿಸೋ ಸಚ್ಛಾಸ್ತ್ರನೀತಿಯರಿಯನು ಎನಿಸೋ । ಆಲಯದಿ ಸುಖದಲಿರಿಸೊ ಮೂಲೋಕಪತಿಯೆ ಹರಿ ಕುದುರೆಯೇರಿಸೊ ಮತ್ತೆ ಕಾಲುನಡಿಗೆಯಲೆ ನಡೆಸೋ ॥ ೫ ॥ ಅರಸುವದವಿಯುಕೊಡಿಸು ಕಾಷ್ಠಭಾರವ ಹೊರಿಸೊ । ಪರದೂಷಣೆಯ ಮಾಡಿಸೊ । ಮರ್ಯಾದೆಗಳು ತಿಳಿಸು ಅತಿಮೂಢನೆಂದೆನಿಸೊ । ನಿರುತರೋಗದಲಿ ಇರಿಸೋ । ಕರೆಕರೆಯ ಹಿಂಗಿಸೋ ॥ ದಿವ್ಯವಸನವ ನುಡಿಸೊ । ಸುರಗಂಗಿತಡಿಯೊಳಿರಿಸೊ । ಪರಮಾತ್ಮನೆ ವಂಧ್ಯನೆನಿಸೊ ಸುತರನ್ನ ಕೊಡೊ । ಮರಿಸೋ ದುರ್ವಿಷಯಗಳನೂ ಹರಿಯೆ ॥ ೬ ॥ ಮಾಕಾಂತ ಪ್ರಾಣೇಶವಿಠಲ ನೀನಿತ್ತುದಕೆ । ಶೋಕಿಸಲು ಸಲ್ಲದಯ್ಯ । ಆ ಕುಂಭೀಪಾಕ

ಮೊದಲಾದ ನರಕದೊಳೆನ್ನ ಹಾಕಿದರೂ ಒಳಿತೆ ಜೀಯಾ ॥ ಈ ಕಲಿಯುಗದಿ ಪಂಚಭೇದತಿಳಿಯದ ದೈತ್ಯರಾಕುಲದೊಳಿರಿಸ ಬೇಡ ॥ ಶ್ರೀಕಾಳೀಕಾಂತ ನರ್ಚನ ಸರ್ವಕಾಲದಲಿಬೇಕು ಬಿನ್ನವಲಾಲಿಸೋ ಹರಿಯೇ ॥ ೭ ॥

೧೦೭. ರಾಗ–ಪಾಡಿ (ತಾಳ ತ್ರಿವಿಡಿ).

ಇದಕಿನ್ನಧಿಕ ಸುಖವೊಂದವೊಲ್ಲೆ–ಪದುಮನಾಭನೆ ನಿನ್ನ ಪಾದ ಯುಗ್ಮವೆ ಸಾಕ್ಷಿ ॥ ಪ ॥ ಮಧ್ವಮತದೊಳಗೆ ಜನಿಸಿ–ದ್ವಾದಶನಾಮ–ಮುದ್ರೆ ಶ್ರೀ ತುಲಸಿ ಅಕ್ಷಮಾಲೆ ಧರಿಸಿ ॥ ಶುದ್ಧಗ್ರಂಥವನೋದಿ ಅದ್ವೈತರನು ಹಳಿದು ಸದ್ವೈಷ್ಣವನೆಂದನ್ನಿಸಿಕೊಂಡರೆ ಸಾಕು ॥ ೧ ॥ ಹಿರಿಯರಾದವರಿಗೆ ಬಾಗಿ, ದಾನವಮಾಡಿ ನಿರುತಸತ್ಕಥೆಗಳ ಕೇಳುತಲಿ ॥ ನರಮಂತ್ರ ಜಪಿಸುತ ಪಂಚ ಯಜ್ಞವಮಾಡಿ–ಹರಿದಿನವ್ರತವನು ನಡೆಸುತಿಪ್ಪುದ ಸಾಕು ॥ ೨ ॥ ಪ್ರಾಣೇಶ ವಿಠಲ ನೀನೇ ಸರ್ವೋತ್ತಮ, ಬ್ರಹ್ಮ–ಪ್ರಾಣಾದಿಗಳು ನಿನ್ನ ದಾಸರೆಂಬ ॥ ಜ್ಞಾನವೆ ಗಳಿಸಿ ವೈಷ್ಣವರ ಮನೆಯಬಾಗಿಲನು ನಿರುತ ಕಾಯ್ದು ಜೀವಿಸು ವದೇ ಸಾಕು ॥ ೩ ॥

೧೦೮. ರಾಗ–ಸಾವೇರಿ (ತ್ರಿಪುಡೆತಾಳ).

ಹರಿಯೆ ನೀನಲ್ಲದಾರ–ಕಾಣೆ ಕಾಯ್ವರ ಮರೆಹೊಕ್ಕವರ ಭಯ ಪರಿ ಹಾರವನು ಮಾಡಿ ॥ ಪ ॥ ಶಿವಭಕ್ತಾಗ್ರಣಿ ಬಾಹ್ವರ್ಯದೃಥಗಂಜಾಲೆಮಜಾ ನಿನ್ನವನಿಂದಳಿಸಿದೆ, ಬಾಣನ ಬಾಗಿಲೂ ॥ ಭವ ಕಾಯ್ದಿರಲು ನೀ ತೋಳ್ಗಳನು ಛೇದಿಸುವಾಗ । ಲವಮಾತ್ರ ಪ್ರತಿಕೂಲನಾಗಲಿಲ್ಲ ಶಂಕರನು ॥ ೧ ॥ ಹರಿ ಯೆಂದುದಕೆ ತಾಳದಲೆ ಬಾಧಿಸುತಲಿರೆ । ತರಳನ ಮೊರೆಕೇಳಿ ಕಂಭದಿಂದ ॥ ಉರಿಯುಗುಳುತಬಂದು ಖಳನುದರವ ಬಗೆದು । ಶರಣಪಾಲಕನೆಂಬ ಬಿರುದು ದಕ್ಕಿಸಿಕೊಂಡೆ ॥ ಹರಿಯೆ ॥ ೨ ॥ ಸ್ಥಾಣುವಿನ ವರಬಲದಿಂದಮರರ ಕಾಡೆ ದಾನವಾನ್ವಯ ಕೊಂದೆ । ಭಸ್ಮಾಸುರನು ಪಾಣಿಯ ತಲೆಯೊಳಿಡುವೆನೆಂಬೊ ಭರದಿ ಬರಲು । ಪ್ರಾಣೇಶವಿಠಲ ನೀ ಶಂಕರನನುಳುಹಿದಿ ॥ ೩ ॥

೧೦೯. ರಾಗ–ವರಾಳಿ (ಅಟತಾಳ).

ಮುಂಡೆಬಾಗಿ ಕರವ ಮುಗಿವೆ ಕಾಯೊ, ಹರಿಹರಿ ॥ ಪುಂಡರೀಕ ನಯನ ಮರೆಯಬೇಡವೊ ॥ ಹರಿಹರಿ ॥ ಪ ॥ ಕರಿವರದನೆ ಸರ್ವಾಂತರ್ಯಾಮಿ । ಹರಿಹರಿ । ಕರುಣಾಸಾಂದ್ರ ತರುಣಿ ಮಾನಕಾಯ್ದ–ಹರಿಹರಿ ॥ ಶರಧಿ ಸುತೆಯ ರಮಣ ದೀನಬಂಧು, ಹರಿಹರಿ ॥ ಅರಿಯೆ ನಿನ್ನನುಳಿದು ಕಾಯ್ವ ರನ್ನು, ಹರಿಹರಿ ॥ ೧ ॥ ಮೀನನಾಗಿ ವೇದಗಳನು ತಂದೆ, ಹರಿಹರಿ । ಆ ನಗ ವನು ಪೊತ್ತು ಅಮೃತವೆರೆದೆ, ಹರಿಹರಿ ॥ ನೀನೇ ವರಾಹನಾಗಿಯವನಿಯ ತಂದೆ, ಹರಿಹರಿ । ದಾನವನುದರವ ಬಗೆದು ಅಂದು ಹರಿ ॥ ೨ ॥ ಚಿಕ್ಕ ರೂಪದಿಂದ ಬಲಿಯ ತುಳಿದೆ, ಹರಿಹರಿ । ನೊಕ್ಕಿದರಸುಗಳನು, ಸವರಿ ಬಿಟ್ಟೆ ಹರಿಹರಿ ॥ ರಕ್ಕಸರನುಕೊಂದು ಸತಿಯತಂದೆ, ಹರಿಹರಿ ॥ ಅಕ್ಕರದಲಿ ಪಾರಿ ಜಾತ ತಂದೆ, ಹರಿಹರಿ ॥ ೩ ॥ ಅಂಬರವನು ತೊರೆದೆ ಬೌದ್ಧನಾಗಿ ಹರಿಹರಿ । ಕುಂಭಿಣಿಯೊಳು ಕುದುರೆಯೇರಿ ಮೆರೆದೆ ಹರಿಹರಿ ॥ ಶಂಬರಾರಿ ಜನಕ ಧರ್ಮತನಯ ಹರಿಹರಿ । ಅಂಬುಜಾಸನಾದಿದಿವಿಜವಂದ್ಯ ಹರಿಹರಿ ॥ ೪ ॥ ಶೌರಿ ರಘುಜ ಮುನಿಜ ಪ್ರಾಣೇಶವಿಠಲ ಹರಿಹರಿ । ನಾರದ ಶರಣರಿಗೆ ಕಲ್ಪ ತರುವೆ ಹರಿಹರಿ ॥ ಘೋರದುರಿತವನಕಧನಂಜಯನ ಹರಿಹರಿ । ಭಾರನಿನ್ನ ದೆಪೆ ಹೇಳಲ್ಯಾಕೆ ಹರಿಹರಿ ॥ ೫ ॥

೧೧೦. ರಾಗ–ಪೂರ್ವಿ (ಆದಿತಾಳ).

ಕಾಯೋಕೃಷ್ಣ, ಭವತೋಯಧಿ ಮುಳುಗಿ ಉಪಾಯವ ಕಾಣದೆ ಬಾಯ ಬಿಡುವೆನೋ ॥ ಕಾಯೋ ಕಾಯೋ ॥ ಪ ॥ ಭಾಗವತರ ಪ್ರಿಯ, ನಾಗ ಭೂಷಣಸಖ । ನೀಗಿ ಭಯವ, ಕರ ಬೇಗನೆ ಪಿಡಿಯೊ ॥ ೧ ॥ ಇಂದಿರೆಯ ರಸ ಮುಕುಂದ ಯಶೋದೆಯ ನಂದನ ಕರುಣಿಸೊ–ಇಂದೀವರಾಕ್ಷ ॥ ೨ ॥ ಸಿಂಧುಶಯನ, ಪೊರೆಯೆಂದು ಕರೆಯೆ ಕರಿ, ಬಂದು ಸಲಹಿದೆಯೋ ಮಂದ- ದಯಾಳು ॥ ೩ ॥ ಕುರುಪ ಪಿಡಿಯಲುದ್ಧರಿಸಿದೆ ತರುಣಿಯ । ನರಕಹ ನಿನಗೆ ನಾ ಪರಕೀಯನಲ್ಲೋ ॥ ೪ ॥ ಜಾನಕೀವಲ್ಲಭ ನೀನೇ ಮರೆದುಬಿಡೆ । ಕಾಣೆನೊ ಒಬ್ಬರ ನಾನವನಿಯೊಳು ॥ ೫ ॥ ಭಕತರಗೋಸುಗ ಹತ್ತವ

ತಾರವ । ಅರ್ಥಿಂದಲಿಕೊಂಡುತ್ತಮ ಶ್ಲೋಕ ॥ ೬ ॥ ದ್ವೇಷಿಗಳೆನ್ನನು ಘಾಸಿ ಸದಂದದಿ । ಪೋಷಿಸುವುದು ಪ್ರಾಣೇಶವಿಟ್ಠಲನೇ ॥ ೭ ॥

೧೧೧. ರಾಗ-ಸುರಟ (ಅಟತಾಳ).

ಪಾಹಿಮಾಂ ಪಾಹಿಮಾಂ । ಕುಜ-ನಾಹಿವಿಹಂಗ ಶ್ರೀ । ರಂಗಕೃಪಾಂಗ ॥ ಪ ॥ ಪಂಕಜೋದ್ಭವನಯ್ಯ । ಸಂಕರುಷಣ, ಚಕ್ರ । ಶಂಖವ ಧರಿಸಿದ ಪಂಕಜನಾಭ ॥ ೧ ॥ ನರಕವತ್ಸಬಕಾಹ । ಜರಿಜಾಹನುನೋವಾಸ ॥ ನರ ಸಖ ಪರಮಾತ್ಮ । ಗರುಡವಾಹನನೇ ॥ ೨ ॥ ಪನ್ನಗತಲ್ಪಪ್ರಪನ್ನ ಪೋಷಕ ಹರಿ । ಅನ್ನಾದ ಪ್ರಾಣೇಶವಿಠಲ ನಿಷ್ಕುಟಲ ॥ ೩ ॥

೧೧೨. ರಾಗ-ಕೇದಾರಗೌಳ (ಝಂಪೆತಾಳ).

ಪಾಪಿಯಿಾ ಪರಮಾತ್ಮಗೊಂದೂ ಇಲ್ಲ-ಶ್ರೀವರನೆ ಇದು ಅಲ್ಲವೆಂಬ ರಿಲ್ಲ ॥ ಪ ॥ ಮೊಮ್ಮಕ್ಕಳನ್ನು ವಂಚಿಸಿ ತಾನೆ ಕೊಲ್ಲಿಸಿದ । ಮೊಮ್ಮಗಗೆ ತನ್ನ ತಂಗಿಯನು ಕೊಟ್ಟ ॥ ಮೊಮ್ಮಗನ ನಾದಿನಿಯರಲ್ಲಿ ಮಕ್ಕಳಪಡೆದ । ಮೊಮ್ಮಗನ ವಹಿಸಿ ಪುತ್ರನ್ನ ಅಳಿದ ॥ ೧ ॥ ಒಬ್ಬ ಮಾವನ ನೋಡನೋಡ ಪ್ರಾಣವ ಕೊಂಡ । ಒಬ್ಬ ಮಾವನಕೂಡ ಕದಿದಾಡಿದ ॥ ಒಬ್ಬ ಮಾವನಮೇಲೆ ಬಾಣ ವನ್ನೇರಿಸಿದ ॥ ಒಬ್ಬ ಮಾವನಮಗನ ಮಾನ ಕಳೆದ ॥ ೨ ॥ ಒಬ್ಬ ಅತ್ತೆಗೆ ತಾನ ತಂದೆಯೆನ್ನಿಸಿಕೊಂಬ । ಒಬ್ಬ ಅತ್ತೆಗೆ ಗಂಡನಾದನಿವನು ॥ ಒಬ್ಬ ಅತ್ತೆಗೆ ಮಾವನಾದನೀ ಕೇಶವನು । ಒಬ್ಬ ಅತ್ತೆಯ ಬಹಳ ಶ್ರಮಬಡಿಸಿದ ॥ ೩ ॥ ಒಬ್ಬ ಮಗಳನು ತನ್ನ ಹಿರಿಯಮಗನಿಗೆ ಕೊಟ್ಟ । ಒಬ್ಬ ಮಗಳನು ತಾನೇ ಮದವೆಯಾದ ॥ ಒಬ್ಬ ಮಗಳಿಗೆ ಒಂದು ರೀತಿಯಲಿ ಮಗನಾದ । ಒಬ್ಬ ಮಗಳನು ಹಲವರಲ್ಲಿರಿಸುವ ॥ ೪ ॥ ಇವನ ನಿಜಭಕ್ತನೆಂಬವನು ತನ್ನ ಸತಿಯನು । ಸಮಿಯಾಗಿ ನಾಲ್ವರಿಗೆ ಹಂಚಿಕೊಟ್ಟ ॥ ಭುವನದೊಳಗೆ ಪ್ರಾಣೇಶವಿಠಲನ ಮನೆ ನಡತೆಯಿದು । ಕವಿಗಳೆಲ್ಲರು ತಿಳಿದು ಪೂಜಿಸುತ ಹರು ಮುದದೀ ॥ ೫ ॥

೧೧೩. ರಾಗ–ಸಾವೇರಿ (ಆದಿತಾಳ).

ತ್ವರಿತಾಚಾರಯ್ಯ, ಹೇ ಶ್ರೀ । ಯುರಸ ವೆಂಕಟ, ದೀನ । ಸುರತರುವೆ ದೇವೇಶ । ವರಾಹಭೂಧರ ಧಾಮ ।। ಕರುಣಾಪಯೋದಧೆ ಸರ್ವರಕ್ಷಿ ಕಂಧರದೊಳಗಿರುತಿಹ ನರಗಜವದನನೇ ॥ ಪ ॥ ಇಳಿಪತಿಗಳಕೂಡ ಕಲಹ ಮಾಡಿ ತೋರೆಂದು ಅಂಗಲಾಚಲಾ ಕುಂತೀದೇವಿ । ಗೊಲಿದಾನೆ ಪೂರ್ತಿಸಿ, ಅನಿಲಜನಾಗ ನಿನ್ನ ತೇರೊತ್ತಲು ಹಿಂದಕ್ಕ ನೀನಗುತ್ತಲೆ ಮುಂದಕ್ಕೆ ಬಂದಿ ದೂರಲಾಘವವಾದಿಂದಂದೀಗ ॥ ಹಲವು ಜನರು ಬಹು ಬಲುವಿಂದ ರಥವ ನೆಳೆದರೂ ಬಾರದಿದು ಖಲು ಸೋಜಿಗವೆಲೆ ಹಲಧರನನುಜ, ಕಡಲಮನೆ ಕಾರವಡಲ ರವಿದರಧರ ಖಳವಿಪಿನದ್ವಿದಲ ॥ ೧ ॥ ಬರಬೇಡವೆಲವೊ ನಮ್ಮ ಮಂದಿರಾಕೆಂದು ಬಹಳಾಬೈದರೂ ಮುದದಿಂದ ಗೋಪಿ–ಯುರಸದ್ಮಕೆ ಪೋಗುವೆ । ಜರಿದು ನಿನ್ನನು ತಾನಾ ತರಳನ ಕಾಯ್ವೆನಂದಾ ನರನ ತಪ್ಪೆಣಿ ಸದೆ ಕರೆಯುದಲೆ ಪೋದೆ ನಿ । ನ್ನರಮನೆಯತನಕಲಿ ಎರಡೇ ಘಳಿಗೆಯೊಳು ॥ ಪರಿಪರಿ ಭಕುತ ಜನರುಗಳು ಬಿನ್ನೈವರು ಬೀದಿಗಳೊಳು । ಮೆರೆಯುತಲೀ ಗಲೆ ಸರಸರ ಬರುವದು ಪರವಾಯಾಸವೆ ।। ೨ ॥ ಮೀನಾಕ್ಷಿ ಯಶೋದೆ, ನಿನ್ನನು ಪೊತಾನಂದು ನುಣ್ಣಸೆ ತೊಟ್ಟಿಲೂಳಿಟ್ಟು । ತಾ ನುಡಿಯಲು ಜೋಗು ಳಾನು ಕೇಳ್ವೆಕಿವಿಕೊಟ್ಟು । ನಾನಾಗಮುನಮ್ಮತ, ಗಾನಮಾಳ್ಪುದು ವಿದ್ವಾಂ ಸಾನೀಕವೀಗ ನಿನ್ನ ॥ ಧ್ಯಾನಕ ಬಾರದೆಯೇನು ನಿನ್ನ ಬಗೆ ತಾನರಿಯುಳು ಶ್ರೀಮಾನಿನಿ, ಖಗವಹ, ಶ್ರೀನಿಧೆ, ಮೂರೊಂದುಹಾನಿರಹಿತ ಗದಾಪಾಣಿ ಹರಿಯೆ ಶ್ರೀಪ್ರಾಣೇಶವಿಠಲನ ॥ ೩ ॥

೧೧೪. ರಾಗ–ಕಾಂಬೋಧಿ–ಝುಂಪೆತಾಳ (ಸುಪ್ವೀಪದ).

ಎಲೊ ರಮಾಪತಿ ಹಕ್ಕಿಗಳು ಬಾಯಿಬಿಡುವಂತೆ ಬಳಲುವೆವೊ ಈಗ ನಾವೆಲ್ಲ ॥ (ನಾವೆಲ್ಲ) ಈ ಬ್ರಹ್ಮಕುಲದ ಅಭಿಮಾನ ನಿನದಲ್ಲೆ ॥ ಪ ॥ ಗೌಡ ಪ್ರಬಲಾಗೆ ತಲೆಗೂಡೆನಿಸಿತೆನಗೆ । ನೋಡ ಮನೆಕಡೆಗೆ ಮಡಿವಾಳ ॥ (ಮಡಿ ವಾಳ) ಮರಹಾಳು ಮಾಡುವರು ದ್ವಿಜರೆಂಬನು ಜೀಯ ॥ ೧ ॥ ಗಡಿಗೆ ಗಳು ಒಂದನ್ನ ಕೊಡನು ಗ್ರಹಣಗಳು ಹನ್ನೆರಡೂ ಆದರನ್ನಾ ಕುಂಭಾರ ॥

(ಕುಂಭಾರ) ನಿದಸ್ಮರಿಸಿ ಅಡವಿಯೊಳು ಕುಳಿತು ಆಳಬೇಕು ॥ ೨ ॥ ಭಕ್ತಿ ಯೆಂಬುದು ತುಪ್ಪ ಸಕ್ರಿವಮಾಡಿದ ಬಡಿಗ । ಅಕ್ರೂರವರದ, ದಯಾಸಿಂಧು । (ದಯಾಸಿಂದು) ಎಂದು ಈ ಅಕ್ರಮುವ ನಿನಗೇ ಉಸಿರುವೆ ॥ ೩ ॥ ಕಾಲ ರಕ್ಷೆಯು ಹೊಲಿಯು ಧಾಳಾಯು ಕೊಡುಯೆಂದು *ಗೋಳಾಡಿಸುವನು ಅತಿ ಶೂದ್ರ । (ಅತಿಶೂದ್ರ) ಈ ದುಃಖ ಕೇಳುವರೇ ಇಲ್ಲೋ ಪರಮಾತ್ಮ ॥ ೪ ॥ ಯರಿಬೀಳು ಅದಕೂ ಮತ್ತೇರಿಸುವನೂ ಎಲ್ಲೋ ಎಂದಿರುಳೆಲ್ಲ ನಿದ್ರಿಲ್ಲೋ ಮೇಲ್ವೃತ್ತಿ ॥ (ಮೇಲ್ವೃತ್ತಿ) ಯೆಂಬುವದು ಗುರುತಿಲ್ಲಧೊಯ್ತೋ ಗುರುವರ್ಯ ॥ ೫ ॥ ಇದ್ದ ಜ್ಞಾತಿಗಳಿಂದೆ ಮುದ್ದ್ಯಾಗಬೇಕೆಂಬ ಶ್ರದ್ಧೆಯನೇ ಬಿಟ್ಟು ಅವನನ್ನೇ ॥ (ಅವನನ್ನೇ) ಕೊಂಡಾಡಿ ಹೊದ್ದಿ ದಿನಗಳದೂ ಬದುಕುವರು ॥ ೬ ॥ ಈರೀತಿ ನೋಡಲ್ಕೆ ಮೂರನೆ ಕಾಲವೇಂತೋರುವದೊ ಯಮಗೆ ಪ್ರಾಣೇಶ ॥ ಪ್ರಾಣೇಶವಿಠಲ ಉದ್ಧಾರಮಾಡುವದು ನೀಬಲ್ಲೆ ॥ ೭ ॥

೧೧೫. ರಾಗ–ದೇಶೀ (ಅಟ್ಟತಾಳ)

ವೆಂಕಟವಿಠಲ ನಿಶ್ಶಂಕಿತದವನ ಕಳಂಕ ನೋಡದೆ– ಪಾಲಿಸೋ । ಶಂಖಾರಿಗದಾಪದ್ಮ ಅಂಕ ವಿಪಾಹಿಪ ಶಂಕರವಿನುತಪಾದ, ಹೇ ಶ್ರೀದ ॥ ಪ ॥ ಜ್ಞೇಯು ಜ್ಞಾನಗಮ್ಯಧ್ಯೇಯನೀಲಾಂಬುದಕಾಯ ಗರುತ್ಮಾಂಸಗಾ ॥ ಆಯು ರಾರೋಗ್ಯವಿದ್ಯಾ–ಯುಮನಿಯಮವಿತ್ತೀಯುವನಿಯೊಳ್ ಯಶಸ್ಸು–ಪಸರಿಸು ॥ ೧ ॥ ಮರೆಹೊಕ್ಕವರ ಮನದರಿಕೆ ಪೂರೈಸುವನೆಂಬ ಬಿರಿದೊಂದೆರಡೆನ್ನಲೇ ॥ ಕರಿ, ನಾರಿ, ನೃಪ ಪ್ರಮುಖರಗಣಿತರನು ನೀ ಪೊರೆದುದು ಸ್ವಲ್ಪವೇನು–ಮಹಾಣು ॥ ೨ ॥ ಕಿಟನೀನೇಒಲಿದರೆ ಘಟಣವೇಘಟಣವೋ ವಟಪತ್ರ ಪರ್ಯಂಕನೆ । ತಟದಾನಂತಾಭ ನಿಷ್ಕುಟಲ, ಶ್ರೀಪ್ರಾಣೇಶವಿಠಲ ಭವಾಬ್ಧಿ ಪೋತ–ಸುಚರಿತ ॥ ವೆಂಕಟ ॥ ೩ ॥

೧೧೬. ರಾಗ–(ದೇಶೀ ಅಟ್ಟತಾಳ).

ಕಾಯಯ್ಯ ರೋಗನಿಕಾಯ ಕಳೆದು ನಿನ್ನ ಕಾಯಿಕೊಂಡವರ ಕೂಡ ॥ ಈಯುಣಕವೇ ಮೆಚ್ಚರೋಯತಿಗಳು, ಆದದ್ದಾಯಿತೋ ಶ್ರೀಶ ಗುಣಿ–ಹೇಕರುಣೀ ॥ ಪ ॥ ಮೃತ್ಯುಂಜಯಾರಾಧ್ಯ ಮೃತ್ಯುವಿಗೆಮೃತ್ಯು ಸತ್ಯನೃ

ಸಿಂಹನೆಂದು । ಸತ್ಯವತಿಯು ವರಪುತ್ರಪೇಳಿರೆ। ತಾ ಮತ್ತೂ ಬರೆದಿಹ ಮಧ್ವ ಪ್ರಸಿದ್ಧ ॥ ೧ ॥ ಧನುವಂತ್ರಿ–ಧನುವಂತ್ರಿಯೆನೆ ವ್ಯಾಧಿ ಪರಿಹಾರವೆನುತಿಹ ವಚನಗಳು । ಗಣನೆಗೆ ಬಾರವೋ ಪ್ರಣತಜನರನಿಪ್ಪ ದಣಿಸಲು ತಿಳಿದು ನೋಡು–ದಯೆಮಾಡು ॥ ೨ ॥ ಪ್ರಾಣನುತದೊಳಿಪ್ಪ ಪ್ರಾಣಿಗಳಿಗೆ ಬಲ–ಜ್ಞಾನಾರೋಗ್ಯಪ್ರದರಾ ಕ್ಷೋಣಿಯೊಳಿನ್ನಾರಾ ॥ ಕಾಣೆ ನಿನ್ನುಳಿದು ಶ್ರೀಪ್ರಾಣೇಶವಿಠಲರೆಯು–ಸುಜ್ಞೇಯು ॥ ೩ ॥

೧೧೭. ರಾಗ–ಕಾಂಬೋಧಿ ತಾಳ ಆದಿ.

ವಿಠಲಯ್ಯ ವಿಠಲಯ್ಯ ॥ ವಟಪತ್ರಶಯನ ವಟು ಶ್ರೀಪ್ರಾಣೇಶ ॥ ಪ ॥ ಗಂಗಾಜನಕವಿಹಂಗವಾಹನ ವಿಧು-ಪಿಂಗಳ ಕೋಟನಿಭಾಂಗನ ಪ್ರಾಣೇಶ ॥ ೧ ॥ ನಂದನವನದಿ ಸಂಕ್ರಂದನಮುದಹರ ಇಂದಿರಾ ದಶಮತಿಮಂದಿರ ಶ್ರೀಪ್ರಾಣೇಶ ॥ ವಿಠಲಯ್ಯ ॥ ೨ ॥ ಕಾದುಕೋ ಶರಣರ ವೇದವಿನುತ, ಮಧುಸೂದನ, ನತಸುರಪಾದಪ ಪ್ರಾಣೇಶ ॥ ವಿಠಲಯ್ಯ ॥ ೩ ॥

೧೧೮. ರಾಗ–(ಕೊಳಲನೂದುವನವನ್ಯಾರೆ ಹೇಸುದತಿ).

ಉದ್ಧಾರಮಾಡಿದ ಶ್ರೀರಾಮ, ಅಹಲ್ಯಾ । ಉದ್ಧಾರ ಮಾಡಿದ ॥ ಪದ್ಮಜಾಂಡದೊಳು । ಪ್ರಸಿದ್ಧವಾದ ಮಾತಿದು ॥ ಪ ॥ ಮುನಿಶಾಪದಿಂದಲಿ ವನದಿ ಕಲ್ಲಾಗಿಬಲುದಿನ ಚಿಂತಿಸುತಲಿಹ । ವನಿತೆಯುದಯೆಯಿಂದ ॥ ೧ ॥ ಮಂದಮತಿಮಾಟಕೀ ಇಂದುಮುಖಿಗೆ ಇಂಥ ಕುಂದು ಬಂತಲ್ಲಾ ಎಂದು ಇಂದ್ರ ಪ್ರಾರ್ಥಿಸುತಿರೆ ॥ ೨ ॥ ಮೌನಿಮಾತಿಗೆ ಪಾದರೇಣುಸ್ಪರ್ಶವಿತ್ತು । ಮಾನಿನಿಯುಮಾಡಿದಾ ಪ್ರಾಣೇಶವಿಠಲನು ॥ ಉದ್ಧಾರಮಾಡಿದಾ ಶ್ರೀರಾಮ–ಅಹಲ್ಯಾ ॥ ೩ ॥

೧೧೯. ರಾಗ–ಝಂಪೆತಾಳ (ವಾರ್ಧಿಕ ಷಟ್ಪದಿ).

ವ್ಯಾಸೋಕ್ತಿಯನುಸರಿಸಿ ಹತ್ತು ಅವತಾರವನು । ಶ್ರೀಶಮಾಡಿದ ದಿನದ ಕ್ಲಪ್ತಿಯಂ ಬರೆವೆ ಸಂ । ತೋಷದಿಂ ಕೇಳ್ವುದೆಲ್ಲರು ಪೊರೆವ ಹರಿಯು ಅಭಿಲಾಷೆ ಪೂರೈಸಿ ಬಿಡದೇ ॥ ಪ ॥ ಕೃತಯುಗಪ್ರಭವ ಮಧು ಶುದ್ಧ ಪ್ರತಿಪದ ಜಲಧಿಸುತವಾರ ರೇವತೀ ವಿಷ್ಕಂಭ ಹಗಲು ಸಂಯುತ ಹನ್ನೆರಡು

ಘಳಿಗೆಗನತರಿಸಿ ಶ್ರೀಮತ್ಸ್ಯ । ಹತವಮಾಡಿ ತನುನೆಂಬನಾ ॥ — ಚತುರಾಸ್ಯ ವೈವಸ್ವತರಿಗೊಲಿದು ಮೆರೆದ ನೀ ಕ್ಷಿತಿಯೊಳಗೆ ಮತ್ತಾಯುಗದಿ ಕೂರ್ಮ ರೂಪದಿಂ ಚ್ಯುತರಹಿತನವತಾರ ಮಾಡಿಮಾಡಿದಕಾರ್ಯ–ಮತಿವಂತರಿಗೆ ಪೇಳೂವೆ ॥ ೧ ॥ ವಿಭವಾಬ್ದ ಜ್ಯೇಷ್ಠಶುಕ್ಲ ದ್ವಿತಿಯೆ ಬುಧವಾರ । ಶುಭದ ರೋಹಿಣಿ ಋಕ್ಷಧೃತಿಯೋಗ ದಿನದಲ್ಲಿ ತ್ರಿಭುವನೇಶ್ವರ ನಾಲ್ಕು ಘಳಿಗೆ ಗುದಿಸಿಯಮೃತ ಕ್ರತುಭುಜರಿಗುಣಿಸಿ ಕರುಣದಿಂ ॥ ಅಭಯವಿತ್ತನ್ಯರನು ದಣಿಸಿ, ಧರಿಸಿದನು ಜಲಜಭವಾಂಡ ಮಂದರಾದ್ರಿಯುಬೆನ್ನಮ್ಯಾಲಂಥ ॥ ಸುಭುಜಾಹ್ವಯನ ಚರಿತೆ ಸ್ಮರಿಸೆ ಕ್ಲೇಶಹ ಮತ್ತ್ರ ನಭಗವಹನಾಯುಗದಲಿ ॥ ೨ ॥ ಶುಕ್ಲ ಸಂವತ್ಸರದ ಶುಭಮಾಘಮಾಸದಲಿ ಶುಕ್ಲಪಕ್ಷದ ಸಪ್ತಮಿಾ ಭಾನುವಾರದಲಿ । ಅಕ್ಲೇಶಪ್ರದ ಅಶ್ವಿನೀ ಸಾಧ್ಯಯೋಗದಲಿ । ಶುಕ್ಲ ಶೋಣಿತ ವಿದೂರ ॥ ಶುಕ್ಲಾಂಬರಧರ ಕಿಟರೂಪದಿಂದವತರಿಸಿ । ಹಕ್ಲಾಸುರ ಹಿರಣ್ಯಕನತರಿದು ತ್ವರ ತನ್ನ । ಒಕ್ಲಾದವರ ಪೊರೆದ ಹಗಲೆಂಟು ಘಳಿಗೆ ಯೊಳು ಶುಕ್ಲಾಂಗ ಆ ಯುಗದಲಿ ॥ ೩ ॥ ಆಂಗಿರಸವೆಂಬ ಸಂವತ್ಸರದ ವೈಶಾಖ । ತಿಂಗಳದಿ ಸಿತಪಕ್ಷ ಚತುರ್ದಶೀ ಶನಿವಾರ । ತುಂಗ ಸ್ವಾತಿ ಪರಿಘ ದಿವಾಷ್ಟವಿಂಶತಿ ಘಳಿಗೆ । ಗಾಂಗೇಯ ಗರ್ಭಸೊರವು ॥ ಸಂಘಟನ ವಾಗಲಾಸಮಯದೊಳು ಸ್ತಂಭದಿಂ ಸಂಗರಹಿತ ಹರಿ ಘುಡಿಘುದಿಸುತಲಿ ಉದಿಸಿ ನರ । ಸಿಂಗಾಹ್ವಯದಿ, ಹೇಮಕಶ್ಯಪನತರಿದು ತರಳಂಗೆ ಸನ್ಮುದ ವಿತ್ತನೂ ॥ ೪ ॥ ತ್ರೇತಾಯುಗದಲದಿತಿ ದೇವಿ ಭಕುತಿಗೆ ಮೆಚ್ಚಿ । ಧಾತಾಬ್ದ ಭಾದ್ರಪದ ಸಿತಪಕ್ಷದ್ವಾದಶೀ ಖ್ಯಾತಿವಿಷ್ಕಂಭ ಶುಕ್ರಧೃತಿ ಹತ್ತೈದುಘಟಗೆ ಪೋತಭಾವದಿ ದಿನದಲಿ ॥ ತಾಂತಾಳಿ ಅವತಾರವಂ ತ್ರಿವಿಕ್ರಮನಾಗಿ ಭೂತ ಲಾಗಸವಳೆದು ವೈರೋಚನಿಯ ತುಳಿದು ಪ್ರೀತಿಪಡಿಸುತ ಶಕ್ರನಂ, ಸ್ವರ್ಗ ದಿಯ ಪಡೆದ ಈತಗೆಣೆಯಾರೊ ಜಗದಿ ॥ ೫ ॥ ಅದೆ ಯುಗದಲಿ ಪ್ರಮಾಥಿ ಯೆಂಬ ಸಂವತ್ಸರದಲಿ ವೈಶಾಖಶುದ್ಧ ತೃತೀಯೆ ಸುಕರ್ಮಯೋಗದಲಿ ರೋಹಿಣಿಮಂದ ಹನ್ನೊಂದು ಘಟರಾತ್ರಿಯೊದಗುತಿರೆ, ಭೂಪತಿಗಳಾ ॥ ವಧೆಗೆ, ವಿಪ್ರರ ವೃಂದವನು ಪೋಷಣೆಯಮಾಡುವದಕೆ, ಜಮದಗ್ನಿಯಿಂ ದವತರಿಸಿ ರಾಮನಾಮದಲಿ ಪರಶುವಧರಿಸಿ ಈ ಧಾತ್ರಿಯೊಳು ಬಹು ಮೆರೆದ

ಮತ್ತು ಆ ಯುಗದಲೀ ॥ ೬ ॥ ತಾರಣೆಂಬಬ್ಧಮಧುಮಾಸ ಶುಕ್ಲ ನವಮಿಯು। ಆರನೇತಾಸು ದಿವದಲಿ ಪುನರ್ವಸುಚಂದ್ರವಾರ ಶೂಲೆಂಬಯೋಗದಲಿ ದಶರಥನೃಪತಿ ಹಾರೈಸಿದುದಕೆ ಒಲಿದು ॥ ಶ್ರೀರಾಮನಾಮದಿಂದವತರಿಸಿ ದೈತ್ಯಪರಿವಾರ ರಾವಣನ ಸಂಹರಿಸಿ ವಿಭೀಷಣಗೊಲಿದು। ವಾರಿಜೋದ್ಭವ ಮುಖ, ದಿವೌಕಸರಿಗಾನಂದ ತೋರಿಸಿದ ಸೀತಾಪತಿ ॥ ೭ ॥ ಮೂರನೇಯುಗ ವಿರೋಧೀ ಶ್ರಾವಣವದಿ ಅರ್ಧರಾತ್ರಿಯೊಳಷ್ಟಮೀ ರೋಹಿಣೀ ವಜ್ರ ಬುಧವಾರದಲಿ ಅಜನಬಿನ್ನಹಕೊಪ್ಪಿ ಕೃಷ್ಣಾವತಾರವನು ತಾಳಿ ಧರೆಗೆ ॥ ಭಾರವಾಗಿದ್ದ ಕಂಸಾದಿ ಖಲವೃಂದ ಸಂಹಾರಮಂಗೈದು ಪಾಂಡವರ ಪೋಷಿಸಿ ವಿಪ್ರಗೋರಕ್ಷಣೆಯ ಮಾಡಿ ಧರ್ಮವಂ ಸ್ಥಾಪಿಸಿದ ಶ್ರೀರಮಣ ಮಧ್ವಸದನ ॥ ೮ ॥ ಕಲಿಖರಾಬ್ಧಾಷಾಢಶುದ್ಧದಶಮಿ ವಿಶಾಖ-ನಳಿನಸಖವಾರ ಶುಕ್ಲಾಹ ಯೋಗ ದಿವಾಷ್ಟಘಳಿಗೆಯೊಳು ಜಿನನೆಂಬ ದೈತ್ಯನಲ್ಲವತರಿಸಿ ಬಲು ದುರ್ಮತಿಯ ಪ್ರೇರಿಸಿ ॥ ಕಳೆಗೆಡಿಸಿ ಬುದ್ಧಾವತಾರವೆಂದೆನಿಸಿ ಶಿವಗೊಲಿದು ತ್ರಿಪುರವ ಕೆಡಿಸಿ ಸಜ್ಜನರ ಸಂಶಯವ ಕಳದು ಕರುಣಾಂಬುಧಿಯ ಮಹಿಮೆಯಂ ತಿಳಿಯಲಸದಳವಾವಿಧಿಗೆ ಎಂದಿಗೂ ॥ ೯ ॥ ದನುಜವತಿಯುಗ ದುರ್ಮುಖಾ ಮಾರ್ಗಶಿರ ಶುದ್ಧ ಶನಿವಾರ ದ್ವಿತೀಯೆ ಪೂರ್ವಾಷಾಢ, ವೃದ್ಧಿ ಮೂರನೆ ಘಳಿಗೆ ದಿವದಿ ಕಲ್ಕ್ಯವತಾರದಿಂ ಮ್ಲೇಂಛರನು ಸದೆದು ಭೂದಿವಿಜರಾ ॥ ಘನಮೋದ ವಡಿಸಿ ವಾಜಿಯನೇರಿ ಮೆರೆದಾಡಿ। ಅನಿಮಿಷರ ಕೈಯ್ಯ ಪೂಮಳೆಯಂಗರೆಸಿಕೊಂ। ಡನಘ ಬಲ್ಲವರಿಗಲ್ಲಲ್ಲೆ ಇರುತಿಹನು ಪ್ರಣತಜನ ಕಾಮಧೇನೂ ॥ ೧೦ ॥ ಈ ವರಿಯಲಚ್ಯುತನ ಅವತಾರ ಚರಿತೆ ಸಂ। ಕ್ಷೇಪದಿಂ ವಿರಚಿಸಿದೆ ಸದ್ಭಕ್ತಿಯಿಂದಿದನು ಪಾಪಿಗಳಿಘೇಳದಲೆ ಕಾಲತ್ರಯದಿ ಪಠಿಸೆ ತಾಪತ್ರಗಳ ಕಳೆದು ಈ ಪೊಡವಿಯೊಳಗೆ ಬಹುಮಾನಮಾಡಿಸಿ, ತಂದೆ। ಯೋವಾದಿ ಕ್ಷಣಬಿಡದೆ ಸಲಹಿ ಪ್ರಾಂತಕೆ ತನ್ನ। ಆವರಂಧಾಮ ವೈದಿಸುವನತಿ ಕರುಣಾಳು ಶ್ರೀಪ ಪ್ರಾಣೇಶವಿಠಲಾ ॥ ೧೧ ॥

೧೨೮. ರಾಗ–ಕೇದಾರಗೌಳ (ಝಂಪೆತಾಳ).

ಬಲ್ಲವರಿಗರಿದಲ್ಲ ಪ್ರಮೇಯವಲ್ಲ–ಬೆಳ್ಳಿಭಂಗಾರಲ್ಲ ಮೆಲುವದಲ್ಲ ॥ ಪ॥

ಕಣ್ಣೆವೆಯನಿಕ್ಕದು ಮತ್ಸ್ಯಾವತಾರನಲ್ಲ । ಘನ್ನಕರಿಣವು ಕೂರ್ಮರೂಪಿ

ಯಲ್ಲ ॥ ಮಣ್ಣು ತಿಂಬುವದುಇಟ್ಟಲ್ಲೆ ವರಹನೂ ಅಲ್ಲ, ಇನ್ನು ಬಾಯ್ದೆರೆದಿಹುದು ನರಸಿಂಹನಲ್ಲ ॥ ೧ ॥ ಮದುವೆಯಾಗಿಲ್ಲವು ವಾಮನಾವತಾರಲ್ಲ, ವದಗಿ ಛೇದಿಸುವದು ಭಾರ್ಗವಲ್ಲ ॥ ಮುದದಿಂದ ಅನ್ನವುಣ್ಣದುದಾಶರಥಿಯಲ್ಲ । ತುದಿಮೊದಲು ಕಪ್ಪು ಶ್ರೀಕೃಷ್ಣನಲ್ಲ ॥ ೨ ॥ ಬತ್ತಲೆ ಇರುವದು ಬುದ್ಧಾವತಾರಲ್ಲ । ಕತ್ತರಿಸುವುದು ಬಿಡದೆ ಕಲ್ಕಿಯಲ್ಲ ॥ ಸತ್ಯಸಂಕಲ್ಪ ಶ್ರೀಪ್ರಾಣೇಶವಿಠಲನ ಭೃತ್ಯರೇ ಬಲ್ಲರೀ ಗೋಪ್ಯ ಸೊಲ್ಲ ॥ ೩ ॥

---

(೨೨) ಶ್ರೀ ಕೃಷ್ಣಲೀಲಾ ಕೀರ್ತನಗಳು.

೧೨೧. ರಾಗ–ಆಯರ್ಾಘಾಟ (ಆದಿತಾಳ).

ಯಶೋದೆ ಮಜ್ಜಿಗೆ ಮಾಡುತ ಮುದದಿಂದಶೋಕನಮಲ ಸುಲೀಲೆಯನು ॥ ವಿಶೇಷಭಕ್ತಿಂಧಾಡುವಳಾಕಧಾರಸ, ಯಥಾಮತಿರಚಿಸುವೆನು ॥ ಪ ॥ ಹತ್ತವತಾರದಿ ಮತ್ತರ ಶಿಕ್ಷಿಸಿ ಉತ್ತಮರನು ಸಂತೈಸಿದನು । ಭೃತ್ಯಭವಾರ್ಣವ ಬತ್ತಿಸುವಿವನನು ಎತ್ತುವೆನತಿ ಧನ್ಯಳು ನಾನು ॥ ೧ ॥ ನದಿಜನಕನ ಕೊಡದುದಕದೊಳೆರೆವೆನು ಮದನಪಿತನ ಸಿಂಗರಿಸುವೆನು । ವದನ ತೆರದೆನ್ನ ಬೆದರಿಸಿದನ ಬಲುಹದದಿಂದಿರು ಎಂದಾಡುವೆನು ॥ ೨ ॥ ಅಣುಮಹತ್ತೇ ಕಾಲಕೆ ತಿಳಿಯದೆ ದಣಿದೆನು ಪಾದಗಳನು ಕಟ್ಟಿ ॥ ಜನನಿಗೆ ಸಿಕ್ಕದನೆಂಬಂ ತೋರಿಸಿ, ಧನವಜರಪೂರೆದ ಮರಕುಟ್ಟಿ ॥ ೩ ॥ ಅಗಣಿತ ರೂಪಿವನಂಗದಿಕಂಡಳು ಜಗದಂಬೆಂಬರು ಸಜ್ಜನರು । ಮಗುವೆಂದನುದಿನ ಮುದ್ದಿಸಿ ಕೊಂಕಳೊಳಗಿಡುವೆ ಯನಗೇನೆಂಬುವರೊ ॥ ೪ ॥ ಮೀನಾಂಬಕಿ ಈ ಪರಿಯಿಂದಲಿ ಶ್ರೀಪ್ರಾಣೇಶವಿಠಲನ ಪಾಡುವಳು । ಈ ನುಡಿಯಾದರದಿಂ ಕೇಳಲು ಭವಕಾಣರು ಪರದಲಿ ಸುಖಬಹಳ ॥ ೫ ॥

೧೨೨. ರಾಗ–ಭೈರವೀ (ಅಟತಾಳ).

ಕಣ್ಣು ಮುಚ್ಚೆನ್ನಾ ಆಡಿಸೆ– ಸಣ್ಣವರನ್ನು ಹೊರಗಡಗಿಸೆ ॥ ಪ ॥ ಗಟ್ಟಿಹುಡುಗರು ಅವರೆಲ್ಲ–ಮುಟ್ಟವಮಾಯಾಗಿ ಹೋದರು ॥ ಥಟ್ಟನೆದ್ದು ಯನ್ನ ಕೈಯವರ । ಮುಟ್ಟಸದಿರೆ ಬಿಡೆ ನಿನ್ನ ॥ ೧ ॥ ಪಾಯಿಸ ಹೋಳಿಗೆ ಮಾಡಿ ।

ಬಾಯಿಗೆ ಕೈದೋರೆ ಗೋಪಿ ॥ ನಾಯೆರುವಿನೆ ನಿನ್ನ ತಲೆಗೆ । ನೀಯೆರ ಕೊಳ್ಳಬಲ್ಲೆ ನನ್ನೆ ॥ ೨ ॥ ಅಣ್ಣನರಂಭಿಸಿಕರೆದು ಹಣ್ಣುಗಳವಗೆ ಕೂಡಬೇಡೆ ॥ ಚಿನ್ನದಗೊಂಬೆ ಬಾ ಎಂದು । ಬಣ್ಣಬಣ್ಣದಲೆನ್ನ ಕರೆಯೆ ॥ ೩ ॥ ನೀ ದಾರ ಮಗನೆಂದು ಕೇಳೆ । ಮೇದಿನಿಯೊಳು ನಾ ಹೆಚ್ಚೆನ್ನೆ ॥ ಹೋದ ಬಾರಿ ಹೊಟ್ಟೆಗೆ ಮಾರಿ । ಹೋದಳು ನಿಮ್ಮಮ್ಮನೆನ್ನೆ ॥ ೪ ॥ ಯನಗೆ ಪಾಪ ನೀನಾಗಿ । ತಿನ ಲಿಕ್ಕಪ್ಪಚ್ಚಿ ಬೇಡೇ ॥ ಮಣಿಗುಂಡೆನಗೆ ಕೊಡುಯೆಂದು ಮುನಸುಗುಟ್ಟೆನ್ನನು ಕಾಡೇ ॥ ೫ ॥ ದೃಷ್ಟಿತಾಕಿತು ಮಗಗೆಂದು । ಕಟ್ಟನೆ ಯಂತ್ರ ಇನ್ನೊಮ್ಮೆ । ಕೊಟ್ಟು ಅಮ್ಮಯು ರಂಭಿಸಿ । ತೊಟ್ಟಲೊಳಗಿಟ್ಟು ತೂಗೇ ॥ ೬ ॥ ಏನು ಪುಣ್ಯಮಾಡಿದೆನೋ–ಕ್ಷೋಣಿಗೆ ಹಿತಾರ್ಥವಾಗಿ ॥ ಪ್ರಾಣೇಶವಿಠಲನು ನಿನ್ನ ತಾನೇಕೊಟ್ಟನು ಯನಗೆನ್ನ ॥ ೭ ॥

೧೨೩. ರಾಗ–ಮೋಹನ ಕಲ್ಯಾಣಿ (ಏಕತಾಳ).

ಯಶೋದೆ, ನಿನ್ನ ಮಗಗಿದು ಧರವೇ । ವಸುಧೆಯೊಳಗಿಂಥ ಶಿಶುವಿಲ್ಲವೇ ॥ ಪ ॥ ಪೆಟ್ಟಗೆಯೊಳು ತುಂಬಿ । ರೊಟ್ಟಿಯು, ದೇವರು । ಇಟ್ಟನ ಕಚ್ಚಿನ-ಚಟ್ಟಿಗೆಯೊಳು ॥ ೧ ॥ ಸಡಗರದಿಂದ ಬೆಣ್ಣೆ । ಗಡಿಗೆಕಾಯುಲಿಟ್ಟರೆ ॥ ಬಡಧಾನ ಕೇದಿಗೆಪಡಿಯೊಳಗೆ ॥ ೨ ॥ ಆ ಸಣ್ಣ ಕರು ತೊಟ್ಟಲ ಹಾಸಿಕೆಯೊಳಗಿಟ್ಟು ॥ ಕೂಸು ನೀರಿಯೊಳಿಟ್ಟು ಘಾಸಿಮಾಳ್ಪ ॥ ೩ ॥ ಚಿನ್ನಗುಣಲಿಟ್ಟರೆ ಅನ್ನದೊಳಗಿಟ್ಟನ ॥ ಸುಣ್ಣದಕಲ್ಲು ಎನ್ಮಣ್ಣು ಹೇಳಲಿ ॥ ೪ ॥ ನಿದ್ರೆಯೊಳಿರೆ ಸೀರೆ ಒದ್ದಲ್ಲಿ ಬೆಣ್ಣೆಯ ॥ ಮುದ್ದೀನಿಡುವನಿದು ಮುದ್ದು ಯೇನ ॥ ೫ ॥ ಬೆಕ್ಕಾನಲ್ಲಗೆ ಹಚ್ಚಿ ಇಕ್ಕಿಸಿ ಚಪ್ಪಾಳೆ । ಇಕ್ಕಿಸುವನೆ ಹಿಂಡು ಚಿಕ್ಕವರನ್ನಾ ॥ ೬ ॥ ನಿನ್ನ ಪ್ರಾಣೇಶ ವಿಠಲನ್ನಾಟ ಈ ಊರೊಳು ॥ ಘನ್ನವಾಯಿತು ಬಿಡಿಸಿನ್ನು ಮಾತ್ರ ॥ ೭ ॥

೧೨೪. ರಾಗ–ಮೋಹನ್ನ ಕಲ್ಯಾಣಿ (ಅಟ್ಟತಾಳ).

ಗೋಪಿ ಹೇಳೆ ರಂಗಗೆ ಬುದ್ಧಿ ॥ ಪ ॥ ಗೋಪಿ ಹೇಳೆ ರಂಗಯ್ಯಗೆ ಬುದ್ಧಿ ಪುರದೊಳು ರಾಪು ಮಾಡುವದು ವೆಗ್ಗಳವಮ್ಮ ॥ ಗೋಪಿ ॥ ಅನು ॥ ಪೋರರ ಒಡಗೂಡಿ–ಬಂದು ಎಲ್ಲರು ನೋಡ–ಸೀರೆಯ ಸೆರಗು ಪಿಡಿವರೇನೇ ॥ ಜಾರೆಹೆಂಗಳೆರಾದರೊಳ್ಳಿತು ತಾಂ ತಡವಲು । ಈ ರೀತಿಯೆ ಪತಿಯಿದ್ದವರ

ಕೂಡ ॥ ೧ ॥ ಹಿರಿಯಣ್ಣಗಿಟ್ಟದ್ದ ವಿಾಸಲ ತುಪ್ಪವ । ಸುರಿದುಗಡಿಗೆವಡ ದೋಡಿದ ॥ ಗೋಪಿ ॥ ಧರವೆ ನಿಮ್ಮಮ್ಮನಲ್ಲಿಗೆ ಬಾರೋ ಎಂದರೆ । ಸೆರಗ ಕೊಸರಿ ಮಾನ ಕೊಂಬನೆ ॥ ಗೋಪಿ ॥ ಹೇಳೆ ರಂಗಗೆ ಬುದ್ಧಿ ॥ ೨ ॥ ಕತ್ತಲೊಳಗೆ ಮಕ್ಕಳಂತೆ ಸಣ್ಣವನಾಗಿ । ಹತ್ತಿಲಿಬಂದೊರಗುವನಮ್ಮ । ಗೋಪಿ ॥ ಇತ್ತತ್ತಬಾ ಕಂದಯೆಂದಪ್ಪಿಕೊಳಲವ- ॥ ಕೃತ್ಯವಮಾಡಿ ಓಡುವನಮ್ಮ ॥ ಗೋಪಿ ॥ ೩ ॥ ಆಕಳ ಮೊಲೆಯುಂಡು ತರುವಾಯ ಕರುಬಿಟ್ಟು । ತಾ ಕೂಗುವನೆ ಕರಕೊಳಿರೆಂದು ॥ ಗೋಪಿ ॥ ಗೋಕುಲದೊಳು ಬಹು ದಿವಸವಾಯಿತು ದುಷ್ಟ ತೂಕ ಕ್ಷೀರವ ಮಾರಕಾಣೆವೇ ॥ ಗೋಪಿ ॥ ೪ ॥ ಬಚ್ಚಲೊಳಗೆ ಪ್ರಾಯುದನಳು ಕುಳಿತು ಎಣ್ಣೆ ॥ ಹಚ್ಚಿಕೊಂಡೆರಕೊಳ್ಳುತಿದ್ದವೆ ॥ ಗೋಪಿ ॥ ಎಷ್ಟರಿನವ ಬಂದು ಎದುರಿಗೆ ನಿಲ್ಲುವ ಹುಚ್ಚನೆ ಬಹುಜಾಲಗಾರನು ॥ ಗೋಪಿ ॥ ೫ ॥ ಪುರುಷಗೆ ಸಂಶಯ ನಮ್ಮ ಮನೆಗೆ ಕೃಷ್ಣ । ಬರುವನೆಂಬುದು ಮುಷ್ಕರಕೆ ಜಲ ॥ ಗೋಪಿ ॥ ಬೆರಸಿಟ್ಟರೆಲ್ಲವು ಚಲ್ಲಿ ಪೋಗುವ ಗಂಡ । ಕರೆಕರೆ ಮಾಡುವ ಪರಿಪರಿ ॥ ಗೋಪಿ ॥ ೬ ॥ ಪೋಗಲಿ ನಿತೂ ಮುಂದೆ ಪ್ರಾಣೇಶವಿಠಲಗೆ । ಹೀಗಿರುಯೆಂದು ನೀ ಪೇಳಮ್ಮಾ ॥ ಗೋಪಿ ॥ ಈಗುಸರಿದ ಮಾತು ಸರಿಬಾರದಿದ್ದರೆ । ಸಾಗರೆಂವಪ್ಪಣೆ ಕೊಡಿರಮ್ಮ ॥ ಗೋಪಿ ॥ ೭ ॥

೧೨೫ ರಾಗ–ಭೈರವಿ (ಏಕತಾಳ).

ಇಂಥ ಬುದ್ಧಿಯೆಲ್ಲಿ ನೇರಿತೊ–ಕೃಷ್ಣ–ಗೋಕುಲದೊಳು ಎಂಥವರೂ ನಿನ್ನ ದೂರು ಹೇಳುತಿಪ್ಪರೊ– । ಹೀಗಾದರೆ ನಿಲ್ಲರೋ ॥ ಪ ॥ ಗಂಡನುಳ್ಳ ನಾರಿಯರಾ ಮಂದಿಯಲ್ಲಿ ನೋಡನೋಡ ಬಲು ಉದ್ದಂಡತನದಲ್ಲಿ ಸೀರೆ ಸೆರಗಪಿಡಿವರೇ– ಇಂಥ ದುಡುಕುಮಾಡುವರೇ ॥ ಚಂಡಾದುವಾಗೆನ್ನವಸನಮರೆತೆ, ಕೊಂಡುಪೋಗಲವಳು– । ಕಂಡುಕೊಸರಿಕೂಂಡರಿಂಥ ಸುದ್ದಿ ಹುಟ್ಟಿಸಿ–ಪೇಳುವಳಮ್ಮ ಹೊಂದಿಸಿ ॥ ೧ ॥ ಹಿರಿಯರುಳ್ಳಾ ಸೊಸೆಯ ಕೂಡ ಒಗೆತನವ ಕೆಡಿಸುವಂತ । ಸರಸವಾಡುವದು ನಿನಗೆ–ಸಲ್ಲುವದೇನೋ–ಯಸಗೆ ಭೂಷಣವೇನೋ ॥ ನಿರುತ ಆವಳ ತಾಯಿ, ನಂದಗೋಪಗಣ್ಣಾಯೆಂದು ಕರೆ

ಯಲರಿತೆನತ್ತೆ ಮಗಳು ನಾದಿನಿಯೆಂದು ಮನಸಿಗೆ-ಚರ್ಚೆಮಾಡಿದೆನೀಬಗೆ ॥ ೨ ॥ ಕುಲದೇವತೆಯು ಮಾಸಲುತುಪ್ಪ ನೆಲವಿನ ಮೇಲಿಟ್ಟಿರಲು ಮೆದ್ದು ಕಲಶವ ಒಡೆದು ಬಾಹುವದೆಲ್ಲ ಚಿನ್ನಾಟವೇನೋ, ಅವರು ಮುದ್ದಿಸುವರೇನೋ ॥ ತಿಳಿಯದೆ ನೆಳಲಿದುಯೆಂದು ಕಳ್ಳನ ಒಳಗಿರಿಸಿಹಳೇಕೆಂದು ವಡದೆ, ನೆಲಖರಿಧೋಗುವ ಘೃತನೋಡಲೆ ತಿಂದೆನಮ್ಮಯ್ಯ-- ತಪ್ಪಿರೆ ಕರ್‍ಯಾಕು ಕಯ್ಯ ॥ ೩ ॥ ಚಿನ್ನನಂತೆಯಾಗಿಯುವರ ಮಗ್ಗುಲೊಳು ಮಲಗಿಯೆಂಥ । ಸಣ್ಣ ಕೃತ್ಯಮಾಡಿ ಬಾಹುವೆಂತಲ್ಲೋ ಕಂದ-ಕೇಳುವರಿಗೇನುಭಂದ ॥ ನಿನ್ನ ಸಲಿಗೆ ಬಹಳ ಕಂಡು ಇಲ್ಲದ್ದೊಂದೆ ಹುಟ್ಟಿಸುವರು । ಯನ್ನ ದಿವಸಕ್ಕೀ ಜಾರತ್ವ ಕಲಿತಿದ್ದೇನೇನೇ-ಸನಗೇನೂ ತಿಳಿಯದೇನೇ ॥ ೪ ॥ ಕದ್ದು ಪೋಲೆಯುಂಡು ಕರುಬಿಟ್ಟು ಹರಕೊಂಡಿತು ನೋಡಿರಿ ಎಂಬೆಯಂತೆ । ದುಗ್ಧವೆ ಮಾರಿ ಬಾಳಿವೆ ಮಾಡುವರೆಂತು ತಾಳುವರೋ-ಹೀಗಾದರೆ ನಿಲ್ಲರೋ ॥ ಇದ್ದಾಮನೆಯವರಿಗೆ ನಂಬವು ಅಂಧಾಲಾಳ ಮೊಲೆಯ ನಾಸುಂಡರೆ ಪೋರೆಗೆ । ಒದ್ದರೆ ರೋದನಮಾಡುತ ನಿನ್ನ ಬಳಿಗೊಂದಿನ ಬಾರೆನೇ-ಹುಡುಗರಿಗಂಬುವ ಮಾತೇನೇ ॥ ೫ ॥ ಇಡಲುದಕವ ಬೆರಸಿ ಮಜ್ಜನಕೆ ಛಲದಿಂದಲಿ ಚಲ್ಲಿಬಾಹುವರೇ । ಬಡಿವೆನೊ ನಾತಾಳದೆ, ಮುದ್ದಾದರೆ ಮತ್ತೊಮ್ಮೆಯುಣಬೇಕು-ಆಡುತ ಮನೆಯೊಳಗಿರಬೇಕು ॥ ಹುಡುಗರಸಂಗಡ ಅಣ್ಣನೂ ನಾನೂ ಇದ್ದವೆ, ಅಲ್ಲಾಕೆಯ ಪೊಮ್ಮಗನು । ಗಡಿಗೆಯ ಉರುಳಿಸೆ ನಾಕಂಡವರಿಗೆ ಹೇಳಿದೆನೆಇಷ್ಟಾ । ಯನ್ನನು ಕಾಡುವದದೃಷ್ಟಾ ॥ ೬ ॥ ಎದೆಗಳ ಮುಟ್ಟುವದೇಕೋ ಎರಕೊಂಬುವರಲ್ಲಿಗೆ ಪೋಗಿಯಿನ್ನನ್ನಾ ॥ ಹದದಿಂದಲಿಯಿರು ಶಿಕ್ಷೆಯಮಾಳ್ಪೆ ಎಚ್ಚರಿಕೆಯಿರಲಿ-ಕಾಲ್ಪಿಡಿದರೆ ಬಿಡೆನೋಮುರಳಿ ॥ ಮುದದಿಂದಲಿ ಚಂಡೊಗೆಯಲು ಅವಳಾ ಬಚ್ಚಲಿಯೊಳು ಬಿತ್ತು ತಕ್ಕೊಂಡೇ । ಹದತಪ್ಪಿದರೀ ಹೆಂಗಸರೆಲ್ಲಾ ಪ್ರಾಣೇಶವಿಠಲನಾಣೇ ಸುಳ್ಳಲ್ಲವುಕಾಣೇ ॥ ೭ ॥

೧೨೬. ರಾಗ-ಸೌರಾಷ್ಟ್ರ (ಏಕತಾಳ)

ವನಜನಾಭನಧಾಳಿ ಘನವಾಯಿತಿಂದಿಲಿಂದ-ಮನೆಯೊಳು ನಿಲ್ಲಲಾರೆವಮ್ಮ ॥ ಪ ॥ ಚಿನ್ನನಸುದ್ದಿ ನಿತ್ಯ ಹೇಳುವರು ಹತ್ತರಗೂಡಾಹನ್ನೊಂದೆನ್ನ

ಬೇಡವಮ್ಮ ॥ ಅನ್ಯಾಯದ ಮಾತು ಹುಸಿಹುಟ್ಟಿಸಿಯಾಡಿದರೆ, ನಮ್ಮ । ಸಣ್ಣವರಾಣೆ, ಗೋಪೆಮ್ಮ ॥ ೧ ॥ ಪೋರರಾಟಕೆಯಾದರೆ ಜನನೋಡೆ ನಿರ್ಭಯದಿ । ಕ್ಷೀರವಕುಡಿಯ ಬೇಕಮ್ಮ ॥ ಆರೂ ಮನೆಯೊಳಿಲ್ಲದ ಸಮಯದಲ್ಲಿ ಪಾಲು, ಮೋರೆ ಕದ್ದೊಯ್ಯುತಿದ್ದನಮ್ಮ ॥ ೨ ॥ ಚಿಕ್ಕವರನ್ನು ರಂಬಿಸಿ ಸಕ್ಕರೆ ಕೊಟ್ಟು, ಕದ್ದು ರೊಕ್ಕವತನ್ನಿರೆಂಬುವನಮ್ಮ ॥ ಮಕ್ಕಳಾಟಕೆ ಆದರಾಯಿತೆ ನಿಸ್ನ ಕಂದ । ರೊಕ್ಕವನೇನುಮಾಡ್ಯಾನಮ್ಮ ॥ ೩ ॥ ಏಕಾಂತಮನೆಯೊಳು ಸರುಹೊತ್ತಿನಲ್ಲಿ ಬಂದು ಶ್ರೀ ಕಾಂತನಡಗಿದ್ದನಮ್ಮ ॥ ಹೇ ಕಾಂತ ನಿನ್ನ ಸಲಿಗಿಲ್ಲದೆಂತು ಬಂದನೆಂದು । ಆ ಕಾಂತ ಸಂಗಬಿಟ್ಟನಮ್ಮ ॥ ೪ ॥ ನೀರೊಳು ನೆರಳೆಂದು ತಿಳಿಯದ ಮಗುವಿಗೆ ಪೋರನೆಳೆದು ತಾಯೆಂಬೊನಮ್ಮ ॥ ಹಾರುತಿರಲು ಸ್ವಾಮಿಯ ದಯೆಯಿಂದ ಕಂಡು ಒಬ್ಬ । ನಾರಿ ಕರಕೊಂಡು ಬಂದಳಮ್ಮ ॥ ೫ ॥ ತರಳರಿಗೆಲ್ಲ ಇದರಂತೆ ಹತ್ತಿರೆಂದು ಹೇಳಿ । ಹರಿವಂದು ಪತ್ತಿಕೊಂಬೊನಮ್ಮ ॥ ಕರುಗಳಲ್ಲಿವು ಹೀಗೆ ಹತವಾಗಿ ಪೋವವು । ತುರುಗಳ ಗಡಹವಮ್ಮ ॥ ೬ ॥ ಬಾಲನ ಮನೆಯೊಳಗಿರ ಹೇಳಿ ಉದಕವ–ವಾಲಯಕ ತರುಹೋದೆನಮ್ಮ ॥ ಮೂಲೇಶ ಹುಡುಗನ ಕೈಯ ಕಟ್ಟಿ ಮನೆಯೆಲ್ಲ ಹಾಳು ಮಾಡಿಯೇನೋ ತಂದನಮ್ಮ॥ ೭ ॥ ಹುಡುಗರ ಅಂಬೆಯಾಗಿಯೇರಿಸಿ ಕೊಂಡಾಡಿಸಿ, ಕೆಡಹಿ ಕೈಕಾಲು ಮುರಿದನಮ್ಮ ॥ ಬಡವರೆಂದರೆ ಪುನಃ ಬಿಡದಲೆ ತಾ ಹತ್ತಿ । ನಡುವನೋಯಿಸೀಹ ನೋಡಮ್ಮ ॥ ೮ ॥ ಬಾಲೆ ಅದೇನು ಕಾರಣವೋ ತಿಳಿಯದು ನಮ್ಮ । ಮೂಲೆಯುಲಗಡಗಿದ್ದ ನಮ್ಮ ॥ ಛೀಲಕುಮಾಶ ನಡೆಯೊಂದೆ ಕೈಸಂಧಿಸದಾಕಳ ಮೊಲೆ ಉಂಡಿದ್ದ ನಮ್ಮ ॥ ೯ ॥ ಗಂಡ ಅತ್ತೆಯು ಮನೆಘೋಗಿ ನಡುವ ಹೆಣ್ಣಾ ಪುಂಡ ಬಂದಪ್ಪಿಕೊಂಡನಮ್ಮ ॥ ಕಂಡು ನಾನಿದು ತರವೇನೆಲೆರಂಗಾಯೆನ್ನಲು ಭಂಡುಮಾಡಿದನು ನೋಡಮ್ಮ ॥ ೧೦ ॥ ಭ್ರಷ್ಟ ಮಾತಲ್ಲವೆ ಬಾಣಂತಿ ಮುಂಚದಡಿಕೆಂಡವಿಟ್ಟರೆ ಕಾಸಿಕೊಂಡನಮ್ಮ ॥ ಥಟ್ಟನೆ ಕಂಡಂಜಿ ಪ್ರಾಣಾಂತಿಕ ಆಯಿತು, ಪ್ರಾಣೇಶವಿಠಲನಿಂಥವ ಕಾಣೆಮ್ಮ॥ ೧೧ ॥

೧೨೭. ರಾಗ–ಪೂರ್ವಿ (ಏಕತಾಳ).

ಇಂಥಾ ದೂರುವುದೊಳಿತಲ್ಲವರೆಮ್ಮ–ರಂಗಯ್ಯನು, ಹಾವಳಿ-ಅಂಥಾದು ಏನು ಮಾಡಿದನಮ್ಮ ॥ ಎಂದೆಂದಿಗು ನಮ್ಮ ಸಂತತಿಯೊಳು ಗುಣವಂತರೇ

ಕೃಷ್ಣ ನಿರಂತರ ಬಡವರನೆಂತು ದಣಿಸುವ ॥ ಪಲ್ಲ ॥ ಕಣ್ಣೀಬಿಡುವನು ಬೆದ ರಿಸೆ ಮಾತರಿಯ । ವನದೊಳಗಡಗಿಹ ಮಣ್ಣು ತಿಂಬುವ ಬಾಯ್ದ್ರೆವನಾರ್ಯ ॥ ಹಿತಕರ್ಮಗಳರಿಯ–ಅನ್ನತಿನ್ನಲರಿಯ, ಬೆಣ್ಣೆಮೆಲುವ ಬಲುಹೆಣ್ಣು ನೆರೆದು ಮತ್ತನ್ಯರೊಳು ಕಲಹೆ ॥ ಇಂಥಾ ॥ ೧ ॥ ಎಲ್ಲ್ಯಾಡೊದು ದುರ್ಗಂಧವು ಕರಿ ಣಾಂಗ–ನೆಲಗೆದರುವ ಶ್ರಿಂಗ । ರಿಲ್ಲದೆ ರದದೆರೆನರ್ಭಕ ರಂಗ । ಪಾವವ ರಿಯ, ಮಂಗರೊಲ್ಲಭ ಅಹಿಫಣೆಯಲ್ಲಿ ಕುಣಿದು ವಸನಿಲ್ಲದೆ ತಿರುಗುವಗೆಲ್ಲಿದೊ ವಾಜಿ ॥ ೨ ॥ ಮೀನಕೂರ್ಮದಂತ್ಯುದಕದೊಳಗೆ । ಆಡುವ ಕೆಸರೊಳಗೆ ಶ್ರೀನಾ ರಸಿಂಹ ಸಣ್ಣವರೊಳಗೆ । ಆಡುವ ತನ್ನೊಳಗೆ, ತಾನೇ ಅಗ್ನಿಯ ನುಂಗಿ, ನಭಕೇಶಗೆ ಮಾನವಕೊಟ್ಟಾನೆ ಪ್ರಾಣೇಶವಿಠಲನ ॥ ಇಂಥಾ ದೂರುವ್ರು ॥ ೩ ॥

೧೨೮. ರಾಗ–ತಿಲಕಕಾಂಬೋಧಿ (ಅಟ್ಟತಾಳ).

ಮಧ್ಯರಾತ್ರಿಯೊಳೀಗ ನಾ ನಿದ್ದೆಯೊಳಿರೆ ಬಾಗಿಲು । ಸದ್ದುಮಾಡಿ ಪ್ರೊತ್ತಿದವರಾರ್ರೆ । ಬಾಳ್ವರಿಗಿದು-ಬುದ್ಧೆ ಹೆಣ್ಣೋ ಗಂಡೋ ಪೇಳಿರ್ರೆ ॥ ಪಲ್ಲ ॥ ಮೇದಿನಿಯೊಳು ಪ್ರಸಿದ್ಧವಾದ ತುಂಗಮುಹಿಮ ಶ್ರೀ । ಮಾಧವ ಬಂದಿಹೆ ಕೇಳಲ । ಆದರೊಳ್ಳಿತು ಮದನನೂಳಾಡಲಿಹೋಗೆ ॥ ೧ ॥ ಹೇಸಖಿ ವಿಚಾರ ಮಾಡೆ ವಸಂತನಲ್ಲವೆ ಸರ್ವದೇಶ ಬಲ್ಲದು ನಾಚಕ್ರಿಯೆ । ಇಲ್ಲಿ ಬೇಕಿಲ್ಲ ಆ ಸಂಧಿಯೊಳಿಟ್ಟು ಮಾರೊದ್ಯೆ ॥ ೨ ॥ ಉತ್ತಮಗಂಬುವದಲ್ಲೆ ಮೃತ್ತಿಕತುಳಿವ ನೆಂದು ಧರೆಹೊತ್ತವ ಕೇಳೆಲೆ ಸುಂದರಿ । ಒಳ್ಳೆದು ನಿನ್ನ ಹುತ್ತಿನೊಳು ವಾಸ ಮಾಡೊದ್ಯೆ ॥ ೩ ॥ ಸರ್ಪನಲ್ಲವೆ ಅಖಂಡಲ ದರ್ಪತಗ್ಗಿಸಿದವ ಸಮರ್ಪಕ ವಾಯಿತೇನೆ ಮನಕೆ ॥ ಮರದಗೂಡೊಳು । ತೆಪ್ಪನೆ ಸೇರುವದೇ ಬಹುಲೇಸ್ಸೈ ॥ ೪ ॥ ಸೂರಿಗಳೆಲ್ಲರು ಯನ್ನ ಕೀರುತಿ ಬಲ್ಲರುಹುದಲ್ಲ । ನಾರೀಮಣಿ ಹರಿ ಬಂಧಿನಿ, ಕೇಳೆ ॥ ವನಗಳಲ್ಲಿ ವಿಹಾರಮಾಡುವದೇ ಲೇಸ್ಸೈ ॥ ೫ ॥ ತರುಗಳಲ್ಲಿ ಹೊದಕ್ಕ ವಾನರನಲ್ಲೆ ಜನನಾದಿ ದೋಷ ವಿರಹಿತ ನಾರಾಯಣ ಬಂಧಿನೆ ॥ ಈ ನಾಮಕ್ಕಿನ್ನುತ್ತರವೇನು ಇದ್ದರೆ ಪೇಳೆ ಗುಣಧೀ ॥ ೬ ॥ ನಾನರಿತೆನೀಗ ದೇವ ಪ್ರಾಣೇಶವಿಠಲನೆಂಬೊದು ಏನಾಡಿದಾಪದ್ಧವನು ಕ್ಷಮಿಸ್ಸೈ ॥ ತನುವೆ ನಿನ್ನದು ಮಾನದಿಂದೆನ್ನನು ರಕ್ಷಿಸ್ಸೈ ॥ ೭ ॥

೧೨೯. ರಾಗ-ಸಾವೇರಿ (ಏಕತಾಳ).

ಹರಿನಮ್ಮೊಗತನ ಮಾಡಲೀಸನೆ ಕೇಳಮ್ಮ-ಇವನ-ಚರಿಯವಾರ ಮುಂಧೇಳುವನೆ ಗೋಪ್ಯಮ್ಮ || ಪಲ್ಲ || ತನ್ನೊಳು ತಾನೇ ರುದಿಸುತ ಬಂದ ಕಾಣಮ್ಮ | ಯಾಕೆನೆ-ಕಣ್ಣಿನ ಬೇನೆ ಅತಿ ಕಠಿಣೆಂದಾ ಅವನಮ್ಮ || ಸಣ್ಣ ನಳುವಳೆ ಮೊಲೆಹಾಲ್ತಾ ಎಂದನಮ್ಮ | ನಿನ ಕಯ್ಯನ್ನು ಮುಟ್ಟದಿರೆಂದು ಮಾನ ಕೊಂಡನಮ್ಮ || ೧ || ತರುಗಳ ಬಾಲಕೆ ತರಳರ ಕೈಕಟ್ಟುವನಮ್ಮ | ಯನ್ನ ಕರದಲ್ಲಿ ಹಿಡಿಹಿಡಿಯೆಂದು ತೇಳಿಕ್ಕುವನಮ್ಮ || ವರಗುವುದೆಲ್ಲಿ ನೀವೆಂದು ಕೇಳುವನಮ್ಮ | ನಿಮ್ಮ ಪುರುಷರು ಕಾಂಬುವಯಿಲ್ಲ ಎಲ್ಲೆಂಬುವನಮ್ಮ || ೨ || ಜೋಗೀರೂಪವತಾಳಿ ಮನೆಗೆ ಬಂದನಮ್ಮ | ನಾನು-ಬಾಗಿ ಸುತರಿಲ್ಲೆಂದವನ ಕೇಳಿದೆನಮ್ಮ || ಹೋಗಲಿ ಎಲ್ಲರೂ ಮಂತ್ರವಕೊಡುವೆನೆಂದನ್ಮಾ ಕೃಷ್ಣ-ನಾಗಿ ಇದುರಿಗೆ ನಿಂತ ಭಂಡು ಕೇಳಮ್ಮ || ೩ || ನಾಕುಬೆರಳ ತೋರಿ ತಲೆ ದೂಗುವನಮ್ಮ-ಇಂಥದ್ಯಾಕೊ ಎಂದರೆ ಯೀನೆ ಹಾಲ್ಕೊಡೆಂದನಮ್ಮ | ಕಾಕು ಬುದ್ಧಿಯೊಂದೆರಡೆ ಮೂರೇ ನಮ್ಮ | ಶ್ರೀಪಿನಾಕಿಯಾಣೆ ಕರೆದು ಕೇಳೆ ಗೋಪ್ಯಮ್ಮ || ೪ || ಮತಿಗೆರ್ರೆಣ್ಡುಡುಗರ ಕರೆದೊಯ್ದೋಣ್ಯೊಳಗನ್ಮಾ-ನಾವು-ಸತಿ ಪುರುಷಾಗ್ಯಾಡುವ ಬಾ ಎಂಬೊನಲ್ಲಮ್ಮ || ಪೃಥಿವಿಯ ಹುಡುಗರ ತೆರದರೆ ಚಿಂತಿಲ್ಲಮ್ಮ-ಇವನು-ಸುತರನು ಪಡೆವದು ಬಲ್ಲನೇ-ಸುಳ್ಳಮ್ಮ || ೫ || ನವನೀತವ ಕೂಳ್ಳೆಂದೊದರುತ ಬಂದನಮ್ಮ-ನಾನು-ಹವರನ ಕಾತಿಗೆ ಎಷ್ಟೆಂದು ಕೇಳಿದೆನಮ್ಮ || ಖವಖವ ನಗುತಲಿ ಬದಿಬದಿಗೆ ಬಂದನಮ್ಮ ತಕ್ಕೊ-ಯುವತಿ ಇದರಷ್ಟೆಂದು ಕುಚಮುಟ್ಟುವನಮ್ಮ || ೬ || ಹಿತ್ತಲ ಕದಕ ಕೀಲ್ಯಂಟೋ ಇಲ್ಲೆಂಬುವನಮ್ಮ | ನಮ್ಮ ಅತ್ತೆಯ ಕಣ್ಣು ಹೋಗಲಿ ಎನಬೇಕೇನಮ್ಮ || ಉತ್ತರಕೊಡದಿರೆ ಒಪ್ಪಿದೆ ಇದಕಂಬುವನಮ್ಮ ಇಷ್ಟೊಂದರ್ಥೆ ಪ್ರಾಣೇಶವಿಠಲಗೆ ಯಶೋದೆಯಮ್ಮ || ೭ ||

೧೩೦. ರಾಗ-ಶಂಕರಾಭರಣ (ಆದಿತಾಳ).

ಕೇಳೆ ಯಶೋದೆ ನಿನ್ನ ಬಾಲಕನಾಟಗಳೂ | ಹೇಳಿಕೊಂಡರೆ ಸುಳ್ಳೇ ಕಾಣಿಸಿತಮ್ಮ || ಪಲ್ಲ || ನೀರೊಳಾಡುವನಲ್ಲೆ, ಪೋರರ ಕೂಡಿಕೊಂಡು

ಮಾರಿಯೆಂಬೊದೇನು ಸಾರಿಬಾಹೊದೆ ॥ ಕೇಳೆ ॥ ೧ ॥ ಎಲ್ಲರಂತುಂಡು ಮನೆ ಯುಲ್ಲಾಡಬಾರದೆ । ಕಲ್ಲೆತ್ತುವನೆಯಂಥ ಬಲ್ಲಿದನಂತೆ ॥ ಕೇಳೆ ॥ ೨ ॥ ನಿಮ್ಮ ಹಿತಾರ್ಥನಾಗಿ, ಸವಿಮ್ಮಾಸಿ ಪೇಳಿದರೆ ಬೊಮ್ಮನ ಮಗನಂತೆ ನಮ್ಮನ್ನೀ ಬೈವ ॥ ೩ ॥ ಮೂರು ಕಣ್ಣವರ । ನಾರೆರ ಮುಟ್ಟಲಾರ । ಊರೊಳಗಿನ ಬಲು ಮಾರಿದನಮ್ಮ ॥ ೪ ॥ ಸಣ್ಣವನನಬೇಡ, ನಿನ್ನ ಮಗನಗೋಪಿ ॥ ಅನ್ನಿಥವಾ ಡೆವೆಮ್ಮ ಚಿನ್ನಗಳಾಣೆ ॥ ೫ ॥ ಬೆಂಕಿಗಂಜದೆ ಸಿರಾತಂಕದರೊಳಗಿಹ । ಮಂಕು ತನವ ನೋಡೆ । ಪಂಕಜನೇತ್ರೆ ॥ ೬ ॥ ಇನ್ನೊಂದು ಮಾತು ಕೇಳೆ । ಪೊನ್ನೆ ಪೊನ್ನೆ ಒಬ್ಬ ॥ ಹೆಣ್ಣಿನ ಕೊಂದನಲ್ಲೆ, ಅನ್ಯಾಯ ನೋಡೆ ॥ ೭ ॥ ಕಿತ್ತಿದ ನೊಂದುಮರ ಮತ್ತೆರಡು ಮುರಿದ । ಮತ್ತ ಗಜವಕೊಂದುನ್ಮತ್ತನನೋಡೆ ॥ ೮ ॥ ಸದ್ಯ ಹೋಗಲೀನಿತು । ಇದ್ದೊಬ್ಬವನು-ಅಪ್ರಬುದ್ಧನಾಗಬಾರದು ಬುದ್ಧಿಯ ಹೇಳೆ ॥ ೯ ॥ ಅಧಮರೊಡನೆ ನಿತ್ಯ ಕದನ ಮಾಡುವದೇಕೆ । ಮಧು ಸೂದನನ್ನ ಒಳ್ಳೆ ಹದನದಲ್ಲೀಡೆ ॥ ೧೦ ॥ ಕಾಣಬಂದದ್ದಾಡಲು, ಪ್ರಾಣೇಶ ವಿಠಲಗೆ ॥ ಹೀನತೋರುವದಮ್ಮಾ ಏನನ್ನಬೇಕ ॥ ೧೧ ॥

೧೩೧. ರಾಗ-ತೋಡಿ (ಏಕತಾಳ).

ಇಕ್ಕೊಳ್ಳಕ್ಕೊ ಸಿಕ್ಕರಂಗ ನೋಡು ಈ ರಕ್ಕಮಾಡಿಹ ಬಹು ಕೇಡು ॥ ಪ॥ ಪೆಟ್ಟಿಗೆಯೊಳು ದೇವರುಗಳು, ಗಂಪಸ । ರಿಟ್ಟರಲವ ಅಂಜದಾಲೆ । ಮುಟ್ಟಿ ಮನೆಗೊಂದೊಂದೊಗೆದು ಮುರುಬಟ್ಟಮಾಡಿ ಬಿಟ್ಟನಲ್ಲೆ ॥ ೧ ॥ ತಾ ಕೆಡಿಸಿ ಒಡೆದಡಕಲಿಗಡಿಗೆಗಳನು, ಆಕಳ ಒಳಘೊಗಿಸಿಹ್ಯನೂ । ಈ ಕರಕರೆಯರಿ ಯಳು ನಮ್ಮತ್ತೆಯೆಂಬಾಕೆನ್ನನು ಕೊಲ್ಲುವಳಲ್ಲೆ ॥ ೨ ॥ ಅಡಕಲಿಯೊಳು ದೇವರ ತಾಳಿಯ ಸರ-ತುಡುಗುಮಾಡಿ ತಕ್ಕೊಂಡು । ಗಡಬಿಡಿ ಮಾಡೆಲ್ಲೊ ಗೆದನೊನಾ ಎಷ್ಟುಡುಕಿದರೂ ಸಿಗವಲ್ಲೆ ॥ ೩ ॥ ನೆಲವಿಗೇರಿಸಿದ ಚಟ್ಟಿಗಿಗಳು ಒಂದಳುಕದೆ ಮೊದಲಂತಿಹವೆ । ಇಳುಹಲು ಒಂದಕ್ಕೊಂದಕೆ ತೂತು ಪಾಲ್ಗಳು ಈಸನಿಲ್ಲವಲ್ಲೆ ॥ ೪ ॥ ಅಡವಿಯ ದೇವರ ಹೆಸರಿಲಿ ತುಪ್ಪವ ಮುಡಿಯುಮಾಡಿ ತುಂಬಿರಲು । ಕುಡಿದು ಮುಚ್ಚಿ ಮೊದಲಪ್ಪಂದಿಟ್ಟಿಹ ಕೊಡದೊಳು ಬರಿನೀ ರಲ್ಲೇ ॥ ೫ ॥ ಅಂಡಜವಾಹನ ಓಕಳಿ ಚಲ್ಲಿಹ ಪುಂಡತನದಿ ಮಂಚದಮೇಲೆ ।

ಭಂಡಿದು ಏನೆಂಥೇಳಲಿ ಮನೆಯೊಳು ಗಂಡನ ಸಿಟ್ಟು ನೀ ಬಲ್ಲೆಲ್ಲೆ ॥ ೬ ॥ ಏನೆನರಿಯದವಳಿಗಿದು ಬಂದಿತು ಕ್ಷೋಣಿಯೊಳಗೆ ಒಣಹರಲೆ । ಮಾನನೀಯಳೆ ಈಪರಿಮಾಡಿದನಿಕೋ ಪ್ರಾಣೇಶ ವಿಠಲನೀಗ ॥ ೭ ॥

೧೩೨. ರಾಗ–ಕಾಂಬೋಧಿ (ಅಟತಾಳ).

ಕೂಡು–ಸೀರಿ–ಸೀರಿ ಹರಿ, ಕೊಡುಸೀರಿ–ಸೀರಿ ಹರಿ ॥ ಪಲ್ಲ ॥ ಮಾಧವ ನೀ ನಮ್ಮ ಹಾದಿಹೋಗಲು ವಾರಿಗ್ಯಾದರೆ ಈಗ ಸರಿ ॥ ಕೊಡು ॥ ೧ ॥ ಅಕ್ಕರವಲ್ಲಿದು ಫಕ್ಕನೆ ಕಂಡರು । ಚಿಕ್ಕವ ನೀನು, ಅರಿ । ಕೊಡು ॥ ೨ ॥ ಬೇಡಲು ಪಾಲು ನೀಡದೆ ನಾವು । ಆಡಿದ್ದದೆಲ್ಲ ಮರಿ ॥ ೩ ॥ ನಲ್ಲರು ಹುಡುಕುತ ಇಲ್ಲಿಗೆ ಬಂದರೆ, ಕೊಲ್ಲರೇ, ಕಂಡ ಪರಿ ॥ ೪ ॥ ಪ್ರಾಣೇಶವಿಠಲ ನಮ್ಮಾನವ ಕಾಯ್ವರ ಕಾಣೆವೋ ಹತ್ತಿಗರಿ ॥ ೫ ॥

೧೩೩. ರಾಗ–ಪೂರ್ವಿ (ಏಕತಾಳ).

ಕೊಡುವೆನು–ಕೂದುವೆನು ॥ ಕಡೆಗೆ ಬಂದು ಕೈಮುಗಿದರೆ, ಶೀರೆಯ ॥ ಕೊಡುವೆನು ॥ ಪಲ್ಲ ॥ ಒಂದೇ ಮಾತು ಇನ್ನೊಂದುನಾಡೆನಾ । ಮುಂದಗ ಮನೆಯರೆ ಬಂದು ನಿಲ್ಲುವುದು ॥ ಕೊಡುವೆನು ॥ ೧ ॥ ವತ್ಸರವಾದರು ಮುಚ್ಛಲಗೆಲಿಸುವೆ । ತುಚ್ಛವಮಾಡೆನು, ಮತ್ಸಾಂಬಕಿಯರೇ ॥ ಕೊ ॥ ೨ ॥ ನಾ ನರ್ವೋತ್ತಮನೇ ಸುಳ್ಳಾಡಿದರೇ ಸಖಿಯರೆ ಪ್ರಾಣೇಶವಿಠಲನೇ ॥ ಕೊಡುವೆನು ॥ ೩ ॥

೧೩೪. ರಾಗ–ಸೌರಾಷ್ಟ್ರ (ಏಕತಾಳ).

ಬೇಡಬೇಡೆಲಾ–ಕೊಡಬೇಡೆಲಾ–ಸೀರೆ–ಬೇಡಿದರೆ ದೇವರಾಣೆಲಾ ॥ ಬೇಡ ॥ ಪಲ್ಲ ॥ ಇನ್ನೆರಡು ಗಳಿಗೆಗೆ, ನಿನ್ನ ಉಂಬುವ ಹೊತ್ತು ಅನ್ನದ ಕಾಂಕ್ಷೆ ಹುಟ್ಟದೇನಲಾ । ಮನ್ನಿಸಿ ಬೇಡಿದರೆ, ಉನ್ನತಾಹಂಕಾರವನ್ನು ತೋರುವೆ ಇಟ್ಟುಕೊಳ್ಳೆಲಾ ॥ ೧ ॥ ವ್ಯಾಳೆವಾಗಲು ಯಮ್ಮನ್ನಾಳುವವರೇ ಬಹರು । ಹೇಳಿ, ನಿನ್ನನೇ ಕೊಲ್ಲಿಸುವೆವೇವಲಾ ॥ ಖೂಳ ಪೂತನಿಕೊಂದ ಧಾಳಿ ಬಲ್ಲರವರು । ಬಾಲಕನೆನ್ನರು ನಿನ್ನಗೆಲಾ ॥ ಬೇಡ ॥ ೨ ॥ ಬತ್ತಲರಾಗಿ

ಜಲ ವ್ಯರ್ಥಸೇರಿದಿರೆಂದು, ವತ್ತಿ ನಮ್ಮನು ಕೊಲ್ಲರವರೆಲಾ ॥ ಹತ್ತೆಂಟು ತಲೆಯಿಂದ ವಸ್ತ್ರ ರಹಿತ ಸ್ನಾನ, ನಿತ್ಯ ನಮ್ಮೊಳು ನಡತೆಲಾ ॥ ೩ ॥ ಕರಕರಿಗಾರದೆ ಮೈಮರೆದು ಊರಿಗೆ ಹೋಗಿ, ಭರದಿಂದೆಶೋದೆಗೆ ದೂರೆವೆಲಾ ॥ ತರುಣಿಯರೆಲ್ಲ ಹಿಂದೆ ಮೊರೆಯಿಡೆ ಲಾಲಿಸಿ, ವರಳಿಗೆ ಕಟ್ಟಸಿದ್ದೆವೆಲಾ ॥ ೪ ॥ ಲಲನೆಯರೆಲ್ಲಕೂಡಿ ಜಲಬಿಟ್ಟು ಬಂದರೆ, ಕೊಳಿವೆ ನಿನ್ನಯ ಪ್ರಾಣಾ–ತಿಳಿಯೆಲೊ ॥ ಗಳಿಸಿ ಸಂಸಾರವ ಸಲಹುತಿಹರು ನಾವೇ ಕಳವೇನೊ ಪ್ರಾಣೇಶ ವಿಠಲ ॥ ೫ ॥

೧೩೫. ರಾಗ–ಮೋಹನಕಲ್ಯಾಣಿ (ಏಕತಾಳ).

ಆರಮುಂಥೆಳಲೀ–ಕರಕರಿಯು–ಈ ಪೋರನು ಕೊಡವಲ್ಲನಲ್ಲೇ–ಸೀರೆಯು ॥ ಆರ ॥ ಪಲ್ಲ ॥ ದಾರಿಯೊಳ್ಹೋಗಿಬಹರ್‍ಯಾರೆನ್ನ ಕಂಡರೆ, ಊರೆಲ್ಲ ಹೋಗಿ ದೂರರೇನೆ ॥ ೧ ॥ ಶಂತಿಗೆ ಹೋಗ್ಯಾಕೆ ನಿಂತರೆಂಧುಡುಃಕುತ, ಕಾಂತನೇ ಬಂದರೇನಂತ ಹೇಳುವಾ ॥ ೨ ॥ ಬತ್ತಲಾರಾಗಿ ಜಲ ಮತ್ತೀಗ ಸೇರುವಾಗಿ, ಮೃತ್ಯು ಬಂದನಂಬುದರ್ಶಿವೇನೆ ॥ ೩ ॥ ನೀರಹಾವುಗಳೆಲ್ಲ । ಶರೀರವ ಸುತ್ತುತಿವೆ । ಗಾರಾದೆವಲ್ಲೆ, ವಾರಿಜಾಸ್ಯೆ ॥ ೪ ॥ ಮುಳ್ಳು ತೆಪ್ಪವು ಮೋರೆಗೆಲ್ಲ ಮುಚ್ಚುತಲಿವೆ, ಖುಲ್ಲ ಪೋರಗೆ ದಯೆವಿಲ್ಲವಲ್ಲೇ ॥ ೫ ॥ ಜಲಜಂತುಗಳೆಲ್ಲ ಗುಳುಗುಳುಮಾಡುಧವೆ । ಜಲಜಾಕ್ಷಗ್ಯೇತಕೆ ತಿಳಿಯುದಮ್ಮ ॥ ೬ ॥ ಮೀನಾಗಳಲ್ಲಿ ಘುತ್ತಿ ಏನೇನೋಮಾಡುಧವೆ । ಏಣಾಕ್ಷಿ ನಮಗೇ । ಎನು ಬಂತೇ ॥ ೭ ॥ ಹಿಂದತ್ತಹೋದರೆ ಕಂಥರದುದ್ದ ನೀರು । ಮುಂದತ್ತಬರೆ ಎದೆಗಿಂದ ಕೆಳಗೆ ॥ ೮ ॥ ಏಡಿಗಳೆಲ್ಲ ಕಾಲುನೋಡಿ ಕಚ್ಚುತಲಿವೆ, ಮಾಡಲಿನೆ ಮೋರೆ ಬಾಡಿತಲ್ಲೆ ॥ ೯ ॥ ಮೂಗುತಿಮಣಿಯೆಲ್ಲ ಹೇಗೋ ಎಲ್ಲ್ಯೋ ಎನಲು । ಈ ಗತಿಯಾಗೆ ಮನೆಗೆ ಹೊಗೊಧ್ಯಾಂಗೆ ॥ ೧೦ ॥ ಏನಾದರಾಗಲಿ ಪ್ರಾಣೇಶವಿಠಲಗೆ, ನೀನೇ ಗತಿಯೋ–ಕಾಯೊ–ಎನ್ನಬೇಕೇ ॥ ೧೧ ॥

೧೩೬. ರಾಗ–ತೋಡಿ (ಏಕತಾಳ).

ಸಿಕ್ಕಿರೆನ್ನ ಕೈಗೀಗ–ಇನ್ ತಕ್ಕೊಳ್ಳಿಸೀರೆಯ ಬೇಗ ॥ ಎಲೆ–ಸಿಕ್ಕಿ ॥ ಪಲ್ಲ ॥ ಬೀದಿಯೊಳಗೆ ನಿಮ್ಮ ಮೈಗೆ ಸರಿಸಿನಾ–ಹೋದರೆ ಮುಟ್ಟಿದನೆಂದು ।

ಬೈದು ಯಶೋದೆಗೆಪೇಳಿ ಕೊಲ್ಲಿಸಿದ್ದಕ್ಕ್ಯಾದುದು ನೋಡಿರಿ ಇಂದು ॥ ೧ ॥ ಹುಡುಗರೊಡನೆ ನಾನಾಡುತ ಬಂದರೆ, ಬಡಿಯಲಿ ಹವಣಿಸಲಿಲ್ಲೇ । ಕುಡಿಯಲು ಪಾಲ್ ಬಾಯ್ತ್ತೆರೆದು ಬೇಡಿದರೆ । ಕೊಡದಲೆ ನೂಕಿಸಲಿಲ್ಲೆ ॥ ೨ ॥ ಬಚ್ಚಲೊಳಗೆ ಮೈದೊಳೆವಲ್ಲಿಗೆ ಬಂದನಚ್ಯುತನೆಂಬುವಿರಲ್ಲೇ । ಬಚ್ಚಡೆ ಬತ್ತಲೆ ಅಡವಿಯೊಳಿರುವದು ಹೆಚ್ಚಿದು ಅಹ ಅಲ್ಲಲ್ಲೇ ॥ ೩ ॥ ಬೆಳ್ಳಕೆ ರಾರೋ ಕಾಣಿಸುತಿಹರು-ಇಲ್ಲಿಗೆ ಬಂದರೆ ಹೇಗೆ । ಸುಳ್ಳಲ್ಲವೆ ನಿಮ್ಮಂಣರಾಣೆ ಇನ್ನೆಲ್ಲಿಗೆ ಹೋಗುವಿರೀಗೆ ॥ ೪ ॥ ಒಂದೊಂದೇ ನಿಮ್ಮಾಟವು ಮನಸಿಗೆತಂದರೆ ಕೋಪವು ಘನ್ನ । ಇಂದಿರೇಶ ಪ್ರಾಣೇಶವಿಠಲ ಗತಿಯೆಂದಿರೆ ವಂದಿನ ಕನ್ನಾ ॥ ೫ ॥

೧೩೭. ರಾಗ-ಭೈರವಿ (ಅಟತಾಳ).

ಗೋಕುಲದೊಳಗೆಲ್ಲ ಕೊಳಲೂದಲು-ಗೋಕುಲದೊಳಗೆಲ್ಲ ಕೊಳಲೂದಲು ॥ ಬೇಕಾದ ಧ್ವನಿಗಳುಕೂಡಿ ಕೃಷ್ಣ-ಗೋಪಿಕಾಸ್ತ್ರೀಯರು ತವಕದಿಂದ ನೋಡಬೇಕಂದು ನಡೆಯೆ ನೂಕ್ಯಾಡುತ ॥ ಪ ॥ ಎಂತೆಂತು ಪೊರಟರಂತುನಾರಿಯರು । ಇಂಥ ವಿಪರೀತ, ಯಿಂತಿಲ್ಲ ಮುಂದಿಲ್ಲ । ಸಂತೋಷವಹದು ಚಿಂತೆಪೋಗುವುದು । ಸಂತರು ಕೇಳಲು ತಂತುಮಾತ್ರಾ ॥ ಭ್ರಾಂತರಾಗಿಯೇನು-ಎಂತು ತಿಳಿಯದೆ-ನಿಂತುನಿಲ್ಲಲಾರ-ದಂತರದಲೆವೆ । ಧ್ವಾಂತಕಿರಣನಂತಾನ ಮುತ್ತೊರು । ಅಂತರವಿಲ್ಲದೆ ಸಂಧೆಯಂತೆ ॥ ೧ ॥ ಚಿಕ್ಕಟುಯೆಂದು ಒಬ್ಬಕ್ಕನು ಗಂಡನ ತೆಕ್ಕೆಲಿಪಿಡಿದು । ಕಕ್ಕಸಬಡುತ । ಪೊಕ್ಕಳಿಗೆ ಬಟ್ಟನಿಕ್ಕಿ, ಒಬ್ಬವಳು । ಅಕ್ಕಿಯನುಚ್ಚನೆ ಸಕ್ಕರೆಂದು ॥ ಮಕ್ಕಳಿಗೀವುತ ಮಿಕ್ಕವರೆಲ್ಲರು । ನಕ್ಕು ತಂತಮ್ಮೊಳಗೆಗುಕ್ಕುತ ತಲೆಯ ಹಿಕ್ಕುತ ಬಂದರು । ಫಕ್ಕನೆ ಈಕ್ಷಿಸ ರಕ್ಕಸದಲ್ಲಣನಕ್ಕರದಿ ॥ ೨ ॥ ತತ್ತರಿಸಿ ಕರವೆತ್ತಿಗೆ ಬಿಟ್ಟರು, ಮುತ್ತಿನಕಟ್ಟಾಣಿ-ಪೊತ್ತಿ ಮುಡಿಗಟ್ಟು ॥ ನೆತ್ತಿಗೆ ಸೀರೆಯ ಸುತ್ತಿಕೊಂಡು ಬರೆ । ಸುತ್ತಲಂಗನೆರು ಬತ್ತಲಾಗಿ ॥ ತುತ್ತುಮಾಡಿಮಾಡಿ ಹತ್ತಿನ ಎದೆಗೆ, ಹೊಸ್ತಲಿ ದಾಟಲಿ-ಗತ್ತಿಡಲಾರದೆ ಹತ್ತೆಂಟು ಮಂದಿಯು ಚಿತ್ತಪಲ್ಲಟಾಗಿ । ಉತ್ತಮಾಂಗನಿಗೆ ಸುತ್ತಿದರೊ ॥ ೩ ॥ ಹಾಲಿಗೆ ಪಿಲ್ಲೆಯು, ಫಾಲವಿದೇಯೆಂದು । ಕಾಲಿಗೆಕುಂಕುಮವಾಲಿಟ್ಟು ಮೂಗಿಗೆ । ಮೇಲಾದ ಹೂವಿನಮಾಲಿಕೆ ಕಟಗೆ । ತೋಲಾದಸರಿಗೆ

ಬಾಳಿಗಿಟ್ಟು || ಹೇಳುವ ಮಾತನು ಕೇಳಿಕೇಳದಂತೆ | ಇಳೆಗೆ ಅಗಾಧಧೂಳಿಯ ಮುಚ್ಚುತ | ಜಾಲಸಂಭ್ರಮದಿ ಪಾಲಯ ಬಂದರು | ಜಾಲಜಾನಾಭನ ಪಾಲಗಕ್ಕ || ೪ || ಭೋರೆಂಬ ಶಬ್ದವ ಮರೆತಳೆಮುನೆ| ಗಿರಿಯು ಬ್ಯಾವಿಯೆ? ತುರುವು ಮೇವನು | ತೊರೆಯೆ ಫಣಿಯು, ಶಿರವ ತೂಗಿತು | ತೆರೆಯ ಕಟ್ಟಿತು ಶರಧಿಯು || ಸುರರು ನಭದಿ ನೆರೆದು ಪೂಮಳೆ | ಗರೆಯೆ ದುಂದುಭಿ ಮೊರೆಯೆ ಸುಖವ | ಸುರಿಯೆ ಪ್ರಾಣೇಶವಿಠಲ ಕೊಳಲ ಧ್ವರಸುಡಿಸುವ ಸ್ವರಗೇಳಿ || ೫ ||

೧೩೮. ರಾಗ–ಶಂಕರಾಭರಣ (ಅಟತಾಳ).

ರಂಗ ಕೊಳಲನೂದುವ–ಮಂಗಳಸ್ವರಕೆ ಮೂಜಗಂಗಳೂ ಮೋಹಿಸುತಿಹವಲ್ಲೇ–ನೋಡೆ ಏಸಖಿ || ರಂಗ || ಪ || ಗೋಕುಲದಂಗನೆಯರು ಮೈಮರೆದು ತಮ್ಮ ಮನೆಕದ | ಹಾಕದೇ ಹರಿಯೆಲ್ಲಿಹನೆಂದರಸುತ ಬಂದರು || ಗೋಕರುವೇನೆಂದೊಬ್ಬಳು ಹಾಕುವಳೆತ್ತಿಗೆ ದಾಳಿ | ನೂಕುನೂಕಾಗುತ್ತ ಹಲವಂಗನೆರೋಡಿದರು || ೧ || ಕಣ್ಣಿಗೆ ಕುಂಕುಮ ಫಣೆಯಲ್ಲಿ ಕಾಡಿಗೆ ಕೆಲವರು | ಬಣ್ಣದ ಸೀರೆಯ ಮಂಡೆಗೆ ಸುತ್ತುತ್ತ ಕೆಲವರು | ಚಿನ್ನಗೆಹಾಲೆರುವೆವೆಂದು ಗಂಡರ ಪಿಡಿದು, ಒಲ್ಲೆ | ನೆನ್ನೆ ಕೇಳದಲೆ ನೆಲಕಿಕ್ಕುವರು ಕೆಲವರು || ೨ || ಹರಿಯನೋಡುವ ಭರದಿಂದ ಆಕಳಿವೇಯೆಂದು | ಹರದೆರು ಅತ್ತೇರಿಗೆ ಕುಟ್ಟಿ ಕಣ್ಣಿಯಿಕ್ಕೊರು | ಒರಲಿದರೆ ನಾವಾಕಳಲ್ಲವೆಂದು ಕೇಳದಲೆ | ತ್ವರದಿ ಮಾಧವನ ನೋಡಬೇಕೆಂದೋಡಿದರು || ೩ || ಕಾಲಿಗೆ ಕಟ್ಟಾಣಿ ಆಣಿಮೆಂಟು ಪಿಲ್ಯಾಸರಮಾಡಿ | ಮಾಲೆಯೆಂದು ಹಾಕುವರು ಕೊರಳಿಗೆ ಕಲವರು | ಹಾಲಿಗೆ ಮೂಗುತಿ ಕಾನಬಾವುಲಿ ಮೂಗಿಗೆ ತಮ್ಮ | ಬಾಲೆರೆಂದಾಕಳ ಕರುವೆತ್ತಿಕೊಂಡೋಡುವರು || ೪ || ಹೇಳಿದರೆ ಮಾತುಕೇಳಿ–ಕಳ್ಳ ಕೃಷ್ಣಾ ಸಿಕ್ಕೆಂದು ಮೈಘಾಳಿಗೊಂಡಾಳುವರಾ ಕೈ ಕಂಭಕೆ ಕಟ್ಟುವರು || ಕೀಲಕಂಕಣ ಬಾಗಿಲ ಬೀಗವೆಂಜೋಡಿಸಿ ಲಕ್ಷ್ಮೀಲೋಲನಂಘ್ರಿಯ ಕಾಣಬೇಕೆಂದೆಲ್ಲರು ಓಡಿದರು || ೫ || ಎಲೆ ಯಶೋದೆಯಮ್ಮ ನಿನ್ನ ಮಗ ಮೊನ್ನೆ ನಿಶಿಯಲ್ಲಿ-ಮಲಗಂಟು ಬಿಚ್ಚಿ ಒಲ್ಲೆನೆನ್ನೆ ಕೇಳಾಥರವೆ || ಬಲುಶಬ್ದೆನೆಂದು ಕೇಳಲತ್ತೆಗೊಂದು ಪರಿಯಿಂದ | ತಿಳಿಸಿದೆನೆಂದೊಬ್ಬಳು ಅತ್ತೆಯ ಮುಂದೆ ಹೇಳುವಳು

॥ ೬ ॥ ಬೀದಿಯೊಳ್ ಹೇಳಿದಂತೆ ನಮ್ಮನಿಗೆ ಬಾಯೆಂದೊಬ್ಬಳು-ಮಾಧವನಿ ವನೆಂದು ತನ್ನ ಪುರುಷಘೇಳುವಳು । ಆದಿನ ನಾವೇ ಕತ್ರದಲ್ಲಿರೆ ಗಂಡ ಬರಲು ಸ್ತ್ರೀಯಾದಿ ಸೈಸ್ಯೆಯೆಂದೊಬ್ಬಳು ಪತಿಗೇ ಪೇಳುವಳು ॥ ೭ ॥ ಬತ್ತಲೆ ಕೆಲವರು ಸೀರ್ಯುಟ್ಟವರ್ಕೆಲವರು ಉನ್ಮತ್ತರು ಕೆಲವರು । ಪಾಡುತ್ತಲಿ ಕೆಲ ವರು ॥ ನೆತ್ತಿ ಹಿಕ್ಕುವರು ಕೆಲವರು ಹೂಸಿಕೊಂಡವರು । ತುತ್ತು ಬಾಯೊ ಳಿಟ್ಟವರೂ ತ್ವರದಿ ಓಡಿದರು ॥ ೮ ॥ ಒಂದಾಡುತೊಂದಾಡುವರು ನಿಂದು ನಿಂದಾಲಿಸುವರು ॥ ಮುಂದಿಗಂಜದಲೆ ಹರಿದು ಹರಿದು ಹೋಗುವರು ॥ ಕಂದ ಗಳೆತ್ತಿದವರು ಕರುಗಳೆತ್ತಿದವರು ಚಂದಿರವದನೆಯರು ತವಕದಿ ಓಡುವರು ॥ ೯ ॥ ಹೆಂಣುಗಳಾಆವಾವ ಕೆಲಸದೊಳಿದ್ಧರ್ಯಾ ಹಾಂಗೆ ಬನ್ನಿರೆನ್ನಬಳಿಗೆಂಬಂತೆ ವೇಣು ಕೇಳಿಸುವುದು ॥ ಪನ್ನಗಶಯನ ನಾಜ್ಞೆಯಂತೆ ಪ್ರವರ್ತಿಸಿದ ಮೇಲೆ । ಅನ್ಯಾಯವೇ ಸತಿಯರದು ಕೇಳಿರಿ ಕವಿಗಳು ॥ ೧೦ ॥ ಕರಿಸಿಂಹಗಳು ಹುಲಿ-ತುರು, ತುರುಗ ಮಹಿಷಿ-ಮರೆದು ವೈರತ್ವ ಹರಿಸ್ವರ ಕೇಳುತಿಹವು ॥ ಕರಗು ತಿಹವು ಕಲ್ಲು । ಸುರರಾಕಾಶದಿ ಪುಷ್ಪ । ಸುರಿಸುತಿಹರು, ಗಂಧರ್ವರು ಪಾಡು ತಿಹರು ॥ ೧೧ ॥ ಅಂಬುಜಾಕ್ಷಗೆ ಕೆಲವಂಗನೆರು ಆಲಿಂಗಿಸುವರು ಚುಂಬಿಸು ವರು । ಕೆಲವರು ನಿಂದು ಪ್ರಾರ್ಥಿಸುವರು ॥ ಕಂಬುಪಾಣಿ ಕರುಣಿಸಿ, ಇಬ್ಬರಿ ಗೊಬ್ಬೊಬ್ಬನಾಗಿ ಹಂಬಲ ಪೂರೈಸುವಂತೆ ರಾಸಕ್ರೀಡೆಯಾಡಲು ॥ ೧೨ ॥ ಕಾಮನಾಪೂರ್ತಿ ಮಾಡುತಿರೆ ಹೆಂಗಳೆರು ಇಂಥ ಸ್ವಾಮಿಯೆಮ್ಮ ಕೈಸೇರಿದ ನೋಡಿರೆಂದ್ಯೋಚಿಸಲು । ಭಾಮಿನಿಯರಹಂಕಾರ ತಿಳಿದಾಕ್ಷಣವೊಬ್ಬಳ । ಪ್ರೇಮದಿ ಕೊಂಡೊಯ್ದು ಎಲ್ಲರಿಗೆ ಮಾಯವಾದನು ॥ ೧೩ ॥ ಬಹುರೂಪ ದೊಳೊಮ್ಮಿಂದ ಒಮ್ಮೆ, ಒಂದೂ ರೂಪವಿಲ್ಲ, ಮಹೀಪಾಲನೇನಾದನೋ ಆವಳನ ಕೊಂಡೊಯ್ದನು ॥ ಅಹಿವೇಣಿಯರೇ ನಿಮ್ಮ ನಿಮ್ಮ ಗುಂಪಿನೊಳಗೆ ಎಷ್ಟಿಹಿರೊ ನಾರೆರು ಎಣಿಸಿರೆ ಯಂದಾಳೊಬ್ಬಳು ॥ ೧೪ ॥ ಒಂದೆರಡು ನೂರಿನ್ನೂರೈನೂರು ಸಾವಿರೆಂದೆಣಿಸಿ ಮುಂದಗಮನೆಯೊಬ್ಬಳಿಲ್ಲವಮ್ಮನಮ್ಮೊ ಳೆಂದರು ॥ ಇಂದ್ರ ಜಾಲದವಳೇ ಆವನು ಅಂಥ ವಂಚಕನೆ । ಸಂಧಿಸಿತಿಬ್ಬ ರಿಗೆ ಮುಂದೇನುಪಾಯವೆಂದರು ॥ ೧೫ ॥ ಹರಿಹೋದಕಷ್ಟೊಂದು, ಅವಳ ನಾವೈದ ದುಃಖೊಂದು, ಸ್ಮರಣೆದಪ್ಪಿ ಗಂಡರೊಡನೆ ಆಡಿದ್ದೊಂದು ॥ ಸ್ಮರನ

ಬಾಣ ಬಾಧೆಯ್ಯೊಂದು । ಬೆರದಿತಿನಿತುಕ್ಲೇಶ । ಹರದೆರಚ್ಯುತನರಸುತ ವನ ಹೊಕ್ಕರು ॥ ೧೬ ॥ ಹರಿ ಒಬ್ಬಳ ಒಯ್ದನು ಕಂಡಿರಾ ಯಿದ್ಧಿರ್‍ಯಾ ಎಂದು । ನರ ರೆಂಬೊ ಭ್ರಾಂತಿಯಿಂದ ಮರನ ಕೇಳುವರು ॥ ಸ್ಮರಣೆಬಂದಾಗವಮ್ಮೆ ಗಿಡ ಕೇಳುತಿಹವೆಲ್ಲೆ, ಹರಿಹರಿ! ಜೀವಿಸುವದೆಂತು ಹೇಳಿರೆಂಬೊರು ॥ ೧೭ ॥ ಅತ್ತ ಎಲ್ಲರ ವಂಚಿಸಿ ಯನ್ನ ರೂಪಾಧಿಕ ನೋಡಿ । ಎತ್ತಿಕೊಂಡು ಬಂದ ರಂಗ ನೆಂಬೊಳಾಕಿ ಮುದದಿ॥ ಸತ್ಯಸಂಕಲ್ಪವಳ ಮನತಿಳಿದು ತಿಳಿಯದಂತೆ,ತೊತ್ತಿಗ ನಂದದಿ ಹೆಗಲೊಳಗಿಟ್ಟು ಪೋಗಲು ॥ ೧೮ ॥ ದಣಿದೆ, ಹಸಿದೆ, ನೀರಡಸಿ ದೆನೆಂದರವಳ-ಅನುಗನಂದದಿಂದಿಳಿಸೇರಿಸಿಕೊಂಬುವನು ॥ ಗೊನೆಹಣ್ಣು ನಿಲ ಕದೆಂದರೆ ನೀಡಿಕೊಡುತಲಿ । ಘನಸುಖ ಬಡಿಸುತ ದಕ್ಕಿದಂತಿರುವನು ॥ ೧೯ ॥ ಸಾವಿರ ಪ್ರಕಾರಾಘೋರಿಸಿದರೂ ನಗುತಲೆ ಇಹ ಕೇವಲ ದಕ್ಕಿದ ನೆಂದು ನಿಶ್ಚಯ ತಿಳಿದಳು ॥ ವ್ಮಾ-ವಿರಿಂಚೇಶ ಜಂಭಾರಿಗಳನು ವಂಚಿಸು ವಂಥ । ದೇವನು ಈ ನಾರಿಅಹಂಕಾರವ ತಾಳುವನೆ ॥ ೨೦ ॥ ಸೊಕ್ಕು ಬಂತಿ ವಳಿಗಿನ್ನು ಶೀಘ್ರ ತಗ್ಗಿಸಬೇಕೆಂದು, ಚೊಕ್ಕ ಮಾವುಪಿಡಿಸಿ ಅಪ್ರತ್ಯಕ್ಷವಾಗ ಲಿತ್ತಲು ॥ ತುಕ್ಕಿತುಕ್ಕ್ಯಾರಂಣ್ಯಾ ಹೆಜ್ಜೆಪಿಡಿದಿಲ್ಲಿಹಅಲ್ಲಿಹರಕ್ಕಸಾರೆನುತ ಬಂದೆ ಲ್ಲರವಳನು ಕಂಡರು ॥ ೨೧ ॥ ಜಾರೆ ಚೋರೆ ಕುಲ್ಲೆ ಖೂಳೆ ಕುಲ ಕಂಟಕೆ ನವನೀತ ಚೋರನೆಲ್ಲಡಗಿಸಿದ್ದೆ, ತೋರೆಲೆತೋರೆಂದರು ॥ ಘೋರ ಪಾತಕಿಯ ಕುಟ್ಟರೆಂದು ಕೆನ್ನಿಕುಟ್ಟುವರು ಗಾರುಮಾಡಿದರೆ ಬಟ್ಟಭವಣೆ ಹೇಳಿದಳು ॥ ೨೨ ॥ ಸಮದುಃಖಿಗಳಾಗಿ ಹರಿಹರಿಯೆಂದೊದರಲು ಈ ಶ್ರಮ ನೋಡಿ ಪ್ರಾಣೇಶವಿಠಲಬಂದಾಲಿಂಗಿಸಿ । ಸುಮನಗಂಧಿಯರೆ ನಿಮ್ಮಹಂಕಾರ ಬಿಡಿರೆಂದು ಅಮರೇಶ ಮುಂಚಿನಂತೆಲ್ಲರೊಳಾಡಿದನು ॥ ೨೩ ॥

೧೩೯. ರಾಗ-ಪೂರ್ವಿ (ಅಟತಾಳ)

ಸಂಜೆಯೊಳಿಂತು ಬರುವರೆ । ಶಬ್ದ ಹೊರುವರೆ । ಜನಕಂಜದಲಿಹರೆ ॥ ಪ ॥ ಸಂಧ್ಯಾಕಾಲವು ಗೋವುಬಾರವೆ, ವತ್ಸ ಬಳಲವೆ । ಹೀಗೆ ಬರುವದು ಥರವೇ । ಅಂದಾರು ಅತ್ತಿಅತ್ತಿಗೆಯರು-ಇಷ್ಟು ಸಹಿಸಾರು । ಪತಿಗಳು ಸುಮ್ಮ ನಿರರು ॥ ಕಂದಗಳೆರೆವಸಮಯುವಿದು-ಬಿಟ್ಟು ಬರುವದು ಚರ್ಯೆನೋಡ

ಲ್ಕರಿದು ‖ ಒಂದೊಂಧೆಳಲೆ ಮನೆಯೊಳು ದೀಪ-ಹಚ್ಚದಿರೆ ಪಾಪ । ಮಾಡ ಬೇಡಿರಿ ಕೋಪ ‖ ೧ ‖ ಗಂಡನೇ ದೈವ ಹೆಂಗಸರಿಗೆ । ತಿಳಿಯದೆ, ಹೀಗೆ- ಬರುವರೆ ಯನ್ನಬಳಿಗೆ ‖ ಬಂಡು ಇದೇನಿರೆ ಬತ್ತಲೆ-ಬಂದಿರೆಲ್ಲೆಲೆ-ಆಭರಣ ವೆಲ್ಲಿವಲ್ಲೆ । ಕಂಡಕಂಡಲ್ಲೆ ಹುಡುಕುವರು-ನಿಮ್ಮನ್ನಾಳ್ವರು-ಕಾಣದಲೆ ಮಿಡು ಕುವರು । ತುಂಡಾಟ ಕಲಿಯಬಾರದು ಇಷ್ಟು-ಪೇಳುವಿನ ಒಟ್ಟು-ಕೇಳಿರೆ ಮನವಿಟ್ಟು ‖ ೨ ‖ ಆಯಿತು ನಾ ಗಂಡನಾದೇನೆ-ತಿಳಿಯದರೇನ । ಕಂಡ ವರು ನಗರೇನ । ಕಾಯೋ ಪ್ರಾಣೇಶವಿಠಲ ಎಂದು-ಯನ್ನಪದಕಿಂದು-ನಮ ಸ್ಕರಿಸಿರೆ ಬಂದು ‖ ಈ ಯಾಟಸಲ್ಲ ನಿಮ್ಮನೆಗೀಗ-ಸಾಗಿರೆ ಬೇಗ-ಪತಿಗಳ ಕೂಡ ಭೋಗ ‖ ಆಯಾಸವಿಲ್ಲದೆ ಮಾಡಿರೆ, ಮಾತುಕೇಳಿರೆ-ಭ್ರಾಂತರಾಗ ಬೇಡಿರೆ ‖ ೩ ‖

೧೪೦. ರಾಗ-ಭೈರವಿ (ಅಟತಾಳ).

ಪದುಮನಾಭನೆ ಏನೆಂತಾಡಿದ್ಯೋ । ವದಗಿಬಂದವರಿಗೆ, ಎದೆಗಲ್ಲಿನಂತೆ ‖ ಪ ‖ ಸ್ವರಕೇಳಿದಾಕ್ಷಣ ಸ್ಮರಬಾಧೆ ಹೆಚ್ಚಿ ಜರ್ಝರಿತರಾದೆವೊ-ಕೇಳೊ ತರುಣಿಯರೆಲ್ಲ ‖ ೧ ‖ ಯೋಗೇಶ ನಿನ ನೋಡ, ವೇಗದಿಂ ಬಂದೆವೊ । ಹೋಗೆಂದು ನಿನ್ನನಾಲಿಗೀಗೆಂತು ಬಂತೋ ‖ ೨ ‖ ನಾರೆರಲಂಕಾರ ಸೀರಿ ಹಂಬಲ ಬಿಟ್ಟು । ಸಾರಿದರೆಂದು ವಿಚಾರಿಸಲಿಲ್ಲೆ ‖ ೩ ‖ ಪತಿಗಳು ಹುಡುಕೂ ರೆಂದ । ತಿ ಕರುಣವರಲ್ಲೆಚ್ಯುತನಾವೆನಿನಗೆ ಅಹಿತರಾದೆವೇನೋ ‖ ೪ ‖ ಆಗಾರ ತೊರೆದು ಸುಭೋಗವಿತ್ತವೊ ನಿನಗೀಗ ಮರದಿ ನಮ್ಮ ಕೈಗುಣವೇನೋ ‖ ೫ ‖ ವಾರಿಜಬಾಣಕ್ಕೆ ಆರಲಾರಿವೊ ದಯಾ । ವಾರಿಧಿ, ಕಾಮನಾಪೂರತಿ ಮಾಡೋ ‖ ೬ ‖ ಪ್ರಾಣೇಶವಿಠಲ ನೀ ಮಾನವರಂತಲ್ಲ । ಪ್ರಾಣದಪದಕ ಇಗೇನು ಕಲ್ಲಾದ್ಯೋ ‖ ೭ ‖

೧೪೧. ರಾಗ-ಶಂಕರಾಭರಣ (ಏಕತಾಳ).

ಎಂದಿಗೆ ಬಹನೆ ಕೃಷ್ಣ-ಮಂದಸ್ಮಿತಾನನ ‖ ಅಂದದಿಂದಿರುವ ತನ್ನಯ ವೃಂದಾವನ ಬಿಟ್ಟಲ್ಲಿಗೆ ತವಕದಿ ‖ ಎಂದಿಗೆ ‖ ಪ ‖ ತರುಣೀ, ಗೋಕುಲ ದೊಳಗಿಹ ಸಖಿಯರು ಎಂಥಾ ಧನ್ಯರೆ । ಪರಮಾತ್ಮನ ಪೊಂದಿ ಇತರ ಕರಕರಿ

ಅರಿಯಳೆ ॥ ಹರಿಯಿಂತೊಲಿದಿರಲವರೇನು ಸುರಲೋಕದ ಸ್ತ್ರೀಯರೇ ॥ ಪರಿಪರಿ ಸುಖಸಾಗರದೊಳಗಿರುವರು ಜರಿದು ಮಧುರೆಯಲ್ಲಿಹದೆಂದು ॥ ೧ ॥ ಅವ್ಮ್ಮ ಎನೊಳ್ಳೆವರವರಾಳ್ವರು–ಸಮ್ಮಾತಾಂತಲ್ಲವೆ । ನಮ್ಮನೆಯುವರವರಂತೆ ಸುಮ್ಮನೆ ಇರುವರೆ ॥ ಭೊಮ್ಮನಜನಕೆಮ್ಮೊಲಿದಸಿರೆ ಒಮ್ಮೆಗೆ ಪೇಳಿರೆ ॥ ಸಮ್ಮ ಸಿಕೊಳ್ಳಲು ಮನದಿ ಸುಕರ್ಮದಪ್ರಬಲಿರೆ ಘಮ್ಮನೆ ಬಹ ಸಖಿ ॥ ೨ ॥ ಅಲ್ಲೀ ಸ್ತ್ರೀಯರಕಿಂತಿತಿಶಯ-ಚಲ್ವೆನ್ನರ್ಾವಲ್ಲವೆ । ಸುಳ್ಳಲ್ಲಿಂತಾಭರಣಾಂಬರಪಲ್ಲಿ ಕಂಡಿಹರೆ ॥ ಗೊಲ್ಲಿತಿಯರು ನಮ್ಮಂದದಿ ಸೊಲ್ಲಿಸಬಲ್ಲರೆ ॥ ಮಲ್ಲಮರ್ದನ ಪ್ರಾಣೇಶವಿಠಲೆಮ್ಮನು ಬಿಟ್ಟೆಲ್ಲಿ ಪೋಗನು ॥ ೩ ॥

೧೪೨. ರಾಗ–ಭೈರವಿ ಏಕತಾಳ (ಲಾವಣಿಧಾಟಿ).

ಧಟ್ಟನೆ ನಡೆಗೋಕುಲಕಕ್ರೂರ–ಅಸುರಾವೇಶವತಾಳು । ಕೃಷ್ಣನ ಕರತಾ ಈ ಬಗೆಯಿಂದಲಿ ಪೇಳ್ವೆ ಉಪಾಯವ ಕೇಳು ॥ ಪ ॥ ಮಲ್ಲರ ಕುವಲ ಯಪೀಡಾ ಪಥದೊಳು ನಿಲ್ಲಿಸಿಹನು ಎನಬೇಡ । ಬಿಲ್ಲು ಹಬ್ಬಕೆ ಕರೆಸಿಹನೆನ್ನು–ಕೊಲ್ಲುವದು ಸರಲಿಬೇಡ ॥ ೧ ॥ ನಿಮ್ಮಾವನು ನಿನ್ನ ಕಾಣದೆ ಬಳಲುವ–ವಮ್ಮಿವ್ಮಲ್ಲವು ಎನ್ನು ॥ ಸುಮ್ಮನೆ ಆಲಶ್ಯಾತಕೆ ಹೋಗುವ ಘಮ್ಮನ ಬಾಬಾ ಎನ್ನು ॥ ೨ ॥ ಪುಷ್ಟಿಮಾಡಿ ಮಾತುಗಳಿಂಮುಚ್ಚಿಸಿ ನೆಟ್ಟನೆಬಹಪರಿಮಾಡು ॥ ಬಿಟ್ಟರೆ ನಿನ್ನ ಶ್ರಮಬಲ್ಲನು ಪ್ರಾಣೇಶವಿಠಲನವೇ ನೋಡು ॥ ೩ ॥

೧೪೩. ರಾಗ–ಭೈರವಿ (ಅಟತಾಳ).

ಬಂದನಕ್ರೂರ–ವ್ರಜಕೆ ಗೋಪೀ–ಕಂದನಚರಣಾರವಿಂದಕಾಂಬುವೆ ನಿಂದಿನದಿನ ಸುದಿನೆಂದು ॥ ಪ ॥ ಎಷ್ಟು ಜನ್ಮದ ಸುಕೃತ–ವದಗೀತೋ ಈ ದುಷ್ಟನ ಸಂಗದಿಂದ ॥ ಬಿಟ್ಟು ಇಚ್ಛಾನುಸಾರದಿಗೋಕುಲದಮಾರ್ಗಮೆಟ್ಟದೆ ಹರಿ ದಯೆವಾವದ್ದು ನೋಡೆಂದು ॥ ಬಂದನಕ್ರೂರ ॥ ೧ ॥ ಒಂದೊಂದು ಹೆಜ್ಜೆಗಳ ಬರುತ ಕ್ರಮದಿಂದ ಯಮುನೆಯ ದಾಟ । ವೃಂದಾವನದ ಭೂಮಿ ಕಾಣುತ ಬಹುಮುದದಿಂಧರಿ ಹರಿಯೆಂದು ನಯನೋದ ಸುರಿಸುತ್ತ ॥ ೨ ॥ ಇಲ್ಲೆಲ್ಲ ಸಂಚಾರವ ಮಾಡಿಹ ಖಳದಲ್ಲಣನೆಂದು ಧೂಳೀಯಲ್ಲುರುಳುತ ಪೊಗಳುತ ಶ್ರೀಪ್ರಾಣೇಶವಿಠಲಗೆರಗಿ ಕೈಮುಗಿದು ನಿಂದ ತುತಿಸುತ ॥ ಬಂದನಕ್ರೂರ ॥ ೩ ॥

೧೪೪. ರಾಗ–ಸೌರಾಷ್ಟ್ರ (ಅಟತಾಳ).

ವೃಂದಾವನಕೆ ಹೋದಕ್ರೂರ–ನಂದಜನ ಕರತಾರದೆ ಬಾರ ॥ ಇಂದಿರೇಶನ ಕಾಣುಧಿವೆಲ್ಲಾ–ಇಂದಿನಾದಿನ ಶುಭದಿನವಮ್ಮ ॥ ಪ ॥ ಹುಟ್ಟಿದಾರಭ್ಯ ಗೋಕುಲದಲ್ಲ್ಯಾ–ಗುಷ್ಟು ಗೊಲ್ಲಿತಿಯರ ನೋಡಿಬಲ್ಲ । ಪಟ್ಟಣದ ಹೆಂಗಳೆರು ನಮ್ಮನ್ನೆಲ್ಲಾ-ಬಿಟ್ಟು ಹೋಗ ಶ್ರೀಹರಿ ಪುಸಿಯಲ್ಲ ॥ ೧ ॥ ಬಾಚಿಬೈತಲೆ ಸೂರುತಿ ಉಡರಿ । ಊಚು ಕುಪ್ಪಸಬಿಗವಮಾಡಿ ತೊಡಿರಿ । ಸುಚಾವಿಮಾಕರದೊಸ್ತಗಳಿಡಿರಿ । ನಾಚದಲೆ ಬಹಗೆದುರಿಗೆ ನಿಲಿರಿ ॥ ೨ ॥ ತನ್ನವರೆಂದೆಮ್ಮಿಂಗಿತವರಿವ–ಘನ್ನ ಪ್ರಾಣೇಶವಿಠಲಾನು ಕರೆವ ॥ ಚೆನ್ನಾಗಿ ಪಿಡಿದು ಉದ್ಧರಿಸುವ-ಅನ್ಯಾಲೋಚನಗಳನು ಮರಸುವ ॥ ೩ ॥

೧೪೫. ರಾಗ–ವರಾಳಿ (ಏಕತಾಳ).

ಬರಬೇಡ–ಬರಬೇಡೆ ॥ ದುರುಮತಿಯೊಳಗಿಹ ಕಂಸನು, ಶ್ರೀಹರಿ ॥ ಪಲ್ಲ ॥ ಮದಗಜವಿರಿಸಿಹನಂತೆ–ಕೃಷ್ಣನ-ಎದುರಿಗೆ ಬಿಡಬೇಕಂತೆ ॥ ಕೆಡಹಿ ಎದೆಯಲಿ ತುಳಿಸುವನಂತೆ । ಖಳತಾ ಮುದದಿಂದಿರುಬೇಕಂತೆ ॥ ಶ್ರೀಹರಿ ॥ ಬರಬೇಡ ॥ ೧ ॥ ಹೀನ ಕೆಲಸ ಬಹಳಂತೇ–ಕೇಳಿದೆ ಕಾಣದ ಮಾತುಗಳಂತೇ ॥ ದುರ್ಜನ–ಚಾಣೂರ ಮುಷ್ಟಿಕರಂತೆ । ಯುದ್ಧದಿ ಪ್ರಾಣವಕೊಳಬೇಕಂತೆ । ಶ್ರೀಹರಿ ॥ ೨ ॥ ಕಟ್ಟಲಿಗಳು ಹೀಗಂತೆ–ಪಾಳತಿಯಿಟ್ಟಿಹನಲ್ಲೆಲ್ಲಂತೆ ॥ ಈ ಪರಿ-ಗುಟ್ಟನಕಾರ್ಯಗಳಂತೆ–ಪ್ರಾಣೇಶವಿಟ್ಠಲಗಿದು ಹಬ್ಬವಂತೆ ॥ ಶ್ರೀಹರಿ ॥ ಬರಬೇಡ-ಬರಬೇಡ ॥ ೩ ॥

೧೪೬. ರಾಗ–ಕಾಂಬೋಧಿ (ಅಟತಾಳ).

ಎಲ್ಲಿ ಈ ಹಬ್ಬ ಬಂತಮ್ಮಗಳಿರಾ-ಲಕ್ಷ್ಮೀನಲ್ಲ ಹೋಗುವ ನೀವು ಕೇಳಿದಿರಾ ॥ ಪ ॥ ತಂಗಿ ಒಬ್ಬ ಅಕ್ರೂರನೆಂಬುವನೆ- ನಮ್ಮ ರಂಗಯ್ಯನ ಕೂಡಿಕೊಂಡು ಪೋಪನೆ ॥ ಭಂಗಾರಬೆಳ್ಳಿಯಾಸಿ ನಮಗಿತ್ತೇನೆ ॥ ದೇವೋತ್ತುಂಗನೇಸಾಕೆಂದಿದ್ದವೆ ಸುಮ್ಮನೆ ॥ ೧ ॥ ಅಕ್ಕ, ಆರು ಹೇಳಿದರೀಮಾತನು–

ನಮ್ಮ-ಅಕ್ಕರ ಬರಿದಾಯಿತು ಇನ್ನೇನು ॥ ಮಿಕ್ಕ ನಾರೀಯರೂ ಕೇಳಿರಿ ದನು-ಪೋಗಿ-ತೆಕ್ಕಿಲಿಪಿಡಿದು ನಿಲ್ಲಿಸುವನು ॥ ೨ ॥ ಅಂದೇ ಹೇಳಿದ್ದೆನವ್ವ ನಾ ಇವನಾ-ಗುಣ-ಇಂದಿರೇಶ ವಂಚಕನೆಂಬುದನಾ ॥ ಮುಂದಿಯೊಳು ನಗಿ ಮಾಡಿ ಈಗೆಮ್ಮನಾ ಬಿಟ್ಟಾನಂದದಿಂ ಹೋಗುವ ನೋಡೀಮಾತನ್ನಾ ॥ ೩ ॥ ನಾವೇನು ಬಲ್ಲೆವಮ್ಮಾ ಈ ಗತಿಯೂ-ಆಗಿ ನೋವು ತೋರುವದು ನಮ್ಮ ವಿಧಿಯೂ ॥ ಶ್ರೀವಲ್ಲಭನ ಕಾಣದೇಯೆದೆಯು । ನಿಲ್ಲದೀವ್ರೊರೊಳು ಬೀಳು ವೊನೆಂತುರಿಯೂ ॥ ೪ ॥ ನದಿಯೊಳು ಮುಳಲಿಲಿ ಕೆರೆಯು-ಕಟ್ಟ ಚದುರಕೃಷ್ಣನು ನಮ್ಮ ತ್ವರಿಯಾ ॥ ಉದಕದೊಳದ್ದಿ ಅಪ್ಸಿಯೆದೆಯಾ । ಪಿಡಿವುದು ಎಂತು ಮರೆವೆನೀನುಡಿಯ ॥ ೫ ॥ ಒಂದು ಮಾತುಹೆಳಲೇನೆ ಜಲದಾ । ಮಧ್ಯೆ ನಿಂದು ಆಡುತೀರೆ ಭಕ್ತಾವರದ ॥ ಬಂದು ಸೀರೆಕೊಂಡು ಮರ ಚಿಗಿದ । ಇದು ಎಂದೆಂದಿಗೆರವಾಯಿತು ನೋಡಿದ್ಯಾ ॥ ೬ ॥ ತಾ ಕೊಳಲು ನೊಗಸಿಲಿಂದೂ ದುವ-ಧ್ವನಿ-ಯಾ ಕೇಳಿ ತತ್ತರಿಸಿಹೋದೆವವ್ವ ॥ ಯಾಕೆಂದು ನಮ್ಮವರೆಲ್ಲ ಕೇಳುವ-ದಾನು ನೂಕಿ ಘಾಸಣಿಗೆ ತಾರಲಿಲ್ಲವ್ವ ॥ ೭ ॥ ಎಲ್ಲಿಗಿಕ್ಕಿವಾಲಂಕಾರ ವೆಲ್ಲಿಗೆ-ಯಿಕ್ಕಿ ಪಿಲ್ಲಿವಣುಮೆಂಟುಗಳು ಹಾಲಿಗೆ ॥ ಮಲ್ಲಿಗೆ ಮಾಲಿಕೆಗಳು ಕಟಗೆ । ಸುತ್ತಿ ವಲ್ಲಭರೆಳತಂದೆವೇ ಬೀದಿಗೆ ॥ ೮ ॥ ಸುಳ್ಳೋ ಸತ್ಯವೊ ಕೃಷ್ಣ ಪೋಗುವದು-ನೀವು-ಇಲ್ಲದ ಮಾತ್ಯಾಕೆ ಕಲ್ಪಿಸುವದು ॥ ಬಲ್ಲವಳೊಬ್ಬಳು ಹೋಗಿ ಕೇಳುವುದು । ಬೇಡ, ನಿಲ್ಲೆಂದು ಬಿನ್ನಹವಮಾಡುವದು ॥ ೯ ॥ ಹೋದರೇನು ಚಿಂತೆ ಮತ್ತೆ ಬಾಹುವ । ಸ್ವಲ್ಪ-ಶೋಧಿಸಿವ್ನಂದೆಂಟು ದಿನ ನೋಡುವ ॥ ಮಾಧವನು ನಮ್ಮನೆಲ್ಲಿ ಮರೆವ-ಬಾರದಾದಕಾಲಕ್ಕೆ ನಾವೇವೆ ಹೋಗುವ ॥ ೧೦ ॥ ಹುಚ್ಚಿ ಈ ಮಾತು ನೀ ಎನು ಆಡಿದೆ । ನಮ್ಮ, ಅಚ್ಯುತನ ಕಾಣಲಲ್ಲಿ ಬಿಡದೆ ॥ ಮೆಚ್ಚಿಸುವರು ನಾರೇರು ಕೂಡದೆ,-ಹೇಳಲಿಚ್ಛೆಯೊಳಾದ ಮೇಲೆ ಇಲ್ಲೇನದೆ ॥ ೧೧ ॥ ಅಂಥಾ ಸೀತಿವಂತ ಬಿಟ್ಟ ಬಾಹೊನೆ-ಇವ ಎಂಥ ವನೆಂಬುವದ ಅರಿವೇನೆ ॥ ಸಂತತ ಮನಸ್ಯಾರಡುಳ್ಳವನೇ ಅವನಂತೆ ಇದ್ಧೀವೆಂತೆ ಎಮ್ಮೊಳಿಹನೆ ॥ ೧೨ ॥ ಈನೊಂದು ಮಾತುಗಳ್ಯೇತಕ್ಯಾಡುವ । ಕೃಷ್ಣ-ಘಾಸಿಮಾಡಬೇಡವೆಂದು ಸಾರುವ ॥ ಮಿಾಸಲ ಪಾದಕಂಜಕೆರಗುವ ಶ್ರೀಪ್ರಾಣೇಶವಿಠಲ ಹೋಗದೆಯಿರುವ ॥ ೧೩ ॥

೧೪೭. ರಾಗ–ರೇಗುಪ್ತಿ (ಝಂಪೆತಾಳ).

ಚಿತ್ತಜನಪಿತನೆ ಯಮ್ಮ ಬಿಟ್ಟು ನೀ ಎತ್ತ ಹೋಗಲಿಬೇಡವೋ ॥ ಪಲ್ಲ ॥ ಬಾಲತನದಿಂದೇ ನಾವು ಶ್ರೀಶ ಗೋಪಾಲ ನಿನ್ನ ಹೊಂದಿದವರೋ ॥ ನೀಲ ವರ್ಣನೆ ನಿನ್ನೊಳು ಒಂದಿನಕೆ, ಕೀಳುನುಡಿಯಾಡಿದ್ದೆವೇ ॥ ೧ ॥ ಯಾಕೆ ಒಮ್ಮಿಂದವಮ್ಮೆ । ಶ್ರೀಕೃಷ್ಣ–ಗೋಕುಲವ ಬಿಡುವೆ ಹೇಳೋ । ಶೋಕ ರಹಿತನೆ ಮುರಾರೆ । ಇಂದಿಗೆ ಸಾಕಲಾರಿಯ ನಮ್ಮನು ॥ ೨ ॥ ಗಂಡರುಳ್ಳ ವರೆಲ್ಲರೂ, ಮನಸು ಎಳಕೊಂಡಾಗ ವ್ಯೆಮುರಸಿದೀ ॥ ಭಂಡೀಗಮಾಡಿ ನೀನು ವೋಗೆ ಜನ ಕಂಡು ನಗರೇನೋ ನಮಗೆ ॥ ೩ ॥ ನಿನ್ನ ಸ್ನೇಹಬೇಕು ಎಂದು, ಅತ್ತೆ ಗಂಡನ್ನ ಬಹಳ ವಂಚಿಸಿದೆವ್ಯೊ ॥ ಮನಸಿಗರಿಕಿಲ್ಲವೇನೋ ಬಹು ಉತ್ತಮನೊ ನೀನು ಸ್ವೆಸ್ನೆಯೆಲಾ ॥ ೪ ॥ ತುಪ್ಪವನು ನೆಲವಿಲಿಂದ ಇಳಿಸು ವಾಗಪ್ಪಿ ನೀಒಡೆಯೆ ಹರಿವಿ । ಸಪ್ಪಳ ಕೇಳಿ ಅತ್ತಿಕೂಗಲು ತಪ್ಪಿ ಕೈ ಜಾರಿ ತೆಂದೇ ॥ ೫ ॥ ಹಾಲ ಹರಿವೆಯನು ಎತ್ತಿ–ಅಟ್ಟದ--ಮೇಲೆ ನಾ ಇಡಲು ನೀನು ॥ ಶಾಲಿಹಾರಿಸಿ ಕೆಡಹಿದೀ । ಬೇಡೆಂದು ಬಹಳ ಗುಲ್ಲೆಬ್ಬಿಸಿದೆನೇ ॥ ೬ ॥ ಸರುಹೊತ್ತಿನೊಳು ವಂದಿನ ನೀ ಬಂದು-ನೆರಗಪಿಡಿದೆಳೆಯುಯನ್ನ ॥ ಹಿರಿಯರಿ ದು ಏನು ಎನಲು–ಆಕಳಾಕಳಾಕರುವೆಂದು ಮಾಜಲಿಲ್ಲೇ ॥ ೭ ॥ ಈನೊಂದು ಮಾತ್ಯಾತಕೆ ಆಡುವಿರಿ–ಬೇಸರವೆ ನಮ್ಮ ನಿಮ್ಮೊಳು ॥ ಕಂಸ ಕರಸಿಹ ಹಬ್ಬಕೆ ಪೋಗದಿರೆ–ಹಿಂಸಿಮಾಳ್ಪನು ನಮ್ಮನು ॥ ೮ ॥ ನಾ ಹೋಗಿ ತಡಮಾಡದೇ–ಸಂಗ ಡಲೇ ಬಾಹುವಿನ್ಯು ನಿಮ್ಮನಗಲಿ ॥ ಇಹೆನೇನಾವೂರೊಳು–ತಿಳಿಯುದೇನು ಹಲವು ಚಿಂತೆಬ್ಯಾಡೀ ॥ ೯ ॥ ನಾರಿಯರು ಇವರಿಗೇನೂ–ತಿಳಿಯುದೆಂ ತೋರಿಸುವೆಯುಪಚಾರವ । ಜಾರೆಯರು ಬಹಳವಲ್ಲಿ ನಿನ ಕಂಡು । ದಾರಿ ಕೊಡುವರೇ ಇತ್ತಲಿ ॥ ೧೦ ॥ ಜನನೀಜನಕನು ಮಾತುಳ–ಮಗುವೆಂದು–ಘನ ಸುಖಬಡಿಪರಲ್ಲಿ ॥ ಇನಿತಾದಮೇಲೆ ಬರುವ್ಯಾ–ಸುರವಂದ್ಯ–ಇನಕೋಟಿ ಸುಪ್ರಕಾಶ ॥ ೧೧ ॥ ಇಲ್ಲಿ ನಿನ್ನ ಬಿಟ್ಟು ನಾವು ಅರಗಳಿಗೆ ನಿಲ್ಲಲಾರೆವ್ಯೋ ಅಚ್ಯುತ ॥ ಅಲ್ಲಿಗೆಲ್ಲರು ಬರುವೆವೋ । ಬಿಡುವುದುಚಿತಲ್ಲವೊಂದಾಣೆ ನಿನಗೆ ॥ ೧೨ ॥ ಯನಕೂಡ ಬರಲು ನಿಮ್ಮ ಗಂಡಮ್ಯೆದುನರು ಸುಮ್ಮನೆ ಇರುವರೇ । ನಿನ್ನ ಸಂಗವಾದರಭ್ಯ ಅವರು ನಮ್ಮನು ಹೆಸರುಗೊಳದಲಿಹರೋ ॥ ೧೩ ॥

ಈ ಮಾತುಗಳು ಸಲ್ಲವು-ಇನಿತ್ಯಾಕೆ ಕಾಮು-ಕಮಲಜರ-ಆಣೆ || ನಾ ಮರಳಿ ಬಾರದಿರಲು, ಅತ್ಯಂತ-ಪ್ರೇಮ ನಿಮ್ಮೊಳು ನಿಲ್ವೆನೇ || ೧೪ || ಸೃಷ್ಟಿಸಿ ಪೊರೆದು ಜಗವನು-ಮರಳಿ ಅದನಷ್ಟೂ ಸಂಹರವಮಾಡುತ | ತುಷ್ಟಿಬಡು ವೆಲೊಬಕಾರಿ, ಈಗ ನೀನಿಟ್ಟುಕೊಂಡಾಣೆ ನಿಜವೋ || ೧೫ || ಪಾದನೇ ವಕರೋ ನಾವು-ಇನ್ನೊಂದು ಭೇದ ಬೆರೆಸಲಿಬೇಡವೋ | ಶ್ರೀದ ಪ್ರಾಣೇಶ ವಿಠಲ-ಕೈಯ ಬಿಡ-ದಾದರದಿ ಎಮ್ಮ ಸಲಹೋ || ೧೬ ||

೧೪೮. ರಾಗ-ಸುರಟ (ಅಟತಾಳ).

ಹೀಗೇವೇ ಪ್ರೀತಿ ಹೀಗೇವೇ || ಆಗ ಬಹುಬಗೆಯಲಿ ಒಲಿಸಿ | ಈಗೆ ಲ್ಲರನು ಜರಿದುವೋವೆ || ಪಲ್ಲ || ಚಕ್ರಿಯೆಮ್ಮ ಕೂಡಿಹ್ಯದಕೆ | ವಕ್ರನಾಗಿ ಅಗಲಿಸಿ ವೊಯ್ಯ | ಶುಕ್ರಶಿಷ್ಯ ಧಿಟವೋ ಇವನ-ಅಕ್ರೂರನೆಂದು ನಂಬಿದ ಲ್ಲೊ || ೧ || ಧನ ಮನೆ ಪತಿಸುತರ ಬಿಟ್ಟು, ಮನಸು ನಿನ್ನ ಪದದಲಿಟ್ಟು | ಕ್ಷಣವಗಲದ ಸುದತಿಯರೊಳು | ಘನತೆ ಬಹಳ ಕಂಡಿಕಂಡಿ || ೨ || ಒಲ್ಲೆ ನೆಂದರೆ ಪೋವನವನು | ಸೊಲ್ಲಿಸದಲೆ ನಡೆದೆಯಲ್ಲೊ || ಅಲ್ಲಿಹ ಸ್ತ್ರೀಯರ-ಮಾಟವೇನೋ-ಬಲ್ಲೆವೆ ಇದು ಪ್ರಾಣೇಶವಿಠಲ || ೩ ||

೧೪೯. ರಾಗ-ಮೋಹನಕಲ್ಯಾಣಿ (ಅಟತಾಳ).

ಪಾಹಿ ಕೃಷ್ಣಾ ನಮ್ಮನ್ನೀವೂರೊಳಗೆ ಬಿಟ್ಟು ನೀ ಹೋಗದಿರು ಕಂಡ್ಯಾ ಮಧುರೆಗೆ || ಪಾಹಿ ಕೃಷ್ಣ ರಮಾಪತೇ || ಪಲ್ಲ || ಬಾಲತನದಂಲಿದ ನಿನ್ನ ಹೊಂದಿದ್ದೆವೊ | ಕೀಳನುಡಿಗಳೊಂದಾಡಿದ್ದವೇ || ಪಾಹಿ || ತಾಳಲಾರಿವೊ ಕಾಮುನಟ್ಟುಳಿ ನೀ ಹೋದಮೇಲೆ, ದಯುವಮಾಡಿ ನಿಲ್ಲದೊ || ಪಾಹಿ || ೧ || ಏನು ಕಾರಣವುಂಟು ಪೋಗಲಿಕ್ಕಲ್ಲಿಗೆ | ಶ್ರೀನಿವಾಸನೆ ಹೇಳೋ ಮಾಜದೇ || ಪಾಹಿ || ದಾನವಾಂತಕ ನಿಮ್ಮ ತಂದೆತಾಯಿಯಣ್ಣ-ಹೀನಮಾತುಗಳು ಆಡಿದರೇನೋ || ಪಾಹಿ || ೨ || ಆಕಳ ಕಾಯ್ವದು ಬೇಸರವಾಯಿತೊ, ಸಾಕ ಲಾರೆಯೋ ನಮ್ಮನೆಲ್ಲರೊ || ಪಾಹಿ || ಗೋಕುಲದೊಳು ಪರರಾಯರಂಜಿಕೆ ಯಿಲ್ಲ ಯಾಕೆ ಇಲ್ಲಿಂದ ನೀ ತೆರಳುವೀ || ಪಾಹಿ || ೩ || ಜಾರತನವಮಾಡು

ತಿಹನು ಕೇಶವನೆಂದು । ದೂರುವರಾರೋ ಈ ಪುರದೊಳು ॥ ಪಾಹಿ ॥ ತೋರು ಅವರ ಈಕ್ಷಣಕೆ ಪೋಗಿ ಗಂಟಲಿಘಾರಿ ಕಲಹಮಾಡಿ ಬರುವೆವೋ ॥ ೪ ॥ ನಮ್ಮ ಮನೆಯೊಳು ಪಾಲು ಬೆಣ್ಣೆಯು ಕದಿಯಲು ನಿಮ್ಮೊಮ್ಮನಲ್ಲಿ ದೂರಿದೆವೇನೋ ॥ ಪಾಹಿ ॥ ಸುಮ್ಮನೊಂದಿವಸ, ಪೇಳಿದ್ದೆವೊ– । ಇಲ್ಲವೋ ಯಮ್ಮಪರಾಧಕ್ಷಮೆಯು ಮಾಡೋ ॥ ಪಾಹಿ ॥ ೫ ॥ ನಿನ್ನ ಸಂಗವಮಾಡಿ ದಿವ್ಯವಸನ ವಸ್ತ್ರವನ್ನು ಅಪೇಕ್ಷಮಾಡಿದೆವೇನೋ ॥ ಪಾಹಿ ॥ ಹೆಣ್ಣುಕುಲವು ಪುರುಷರ ಕಾಡುತಿಹರಂತೆ ಅನಂತ ನಾವು ಅಂಥವರಲ್ಲೋ ॥ ಪಾಹಿ ॥ ೬ ॥ ಜಗದೀಶ ನಿನ್ನಲ್ಲಿ ಮನವಿಟ್ಟು ಮನೆಯಲ್ಲಿ ಮಗುವು ಗಳಳುತಿರೆ ಕರೆಯೆವೊ ॥ ಪಾಹಿ ॥ ಒಗತನವನುಬಿಟ್ಟು ಗಂಡರಿಗಂಜದೆ ನಗಲುಜನರು ನಾಚ ದಿದ್ದೆವೊ ॥ ೭ ॥ ಚಿತ್ತಜಜನಕನ ಸಂಪಾದಿಸಿದರೆಂದು ಅತ್ತೆಅತ್ತಿಗೆ ಯೆಮ್ಮ ಬೈಯ್ಯುರೋ ॥ ಪಾಹಿ ॥ ಹೆತ್ತವರೂರಿಗೆ ಪೋದವೀಸುದ್ದಿಯು ಉತ್ತಮತನ ಹೀಗೆ ಕಡಿಸೋದು ॥ ಪಾಹಿ ॥ ೮ ॥ ಆರಂದು ಯೇನುಮಾಡುವರು– ಯಮಗೆ ಬಲ–ಮಾರಮಣನ ಹಾನೆಎಂಬುವ್ಯೊ ॥ ಪಾಹಿ ॥ ನೀರಜಾಂಬಕ ಈಗ ನೀ ಬಿಟ್ಟು ಪೋಗಲು । ಪೋರೆದೋರುವಹ್ಯಾಂಗ ಜನರಿಗೆ ॥ ಪಾಹಿ ॥ ೯ ॥ ಆಳುವ ಪುರುಷರು ಯಮ್ಮ ಗುಣವಕಂಡು ಕಾಲಿಗ ನೀರನೇ ಕೊಳ್ಳರೋ ॥ ಪಾಹಿ ॥ ನೀಲಮೇಘಃ ಶ್ಯಾಮನ ಕರುಣವೇ ಸಾಕು ಕೇಳೆವು ನಿಮ್ಮ ಸಿಟ್ಟುಎಂಬೆವೊ ॥ ಪಾಹಿ ॥ ೧೦ ॥ ಹಾಸಿಕಿಯಲಿ ಮಲಗಲು ನಿದ್ರಿಬಾರದು । ಶ್ರೀಶ ನಿನ್ನನ್ನೇ ನೆನಸುತಿಹೆವೊ ॥ ಪಾಹಿ ॥ ವಾಸುಕಿಶಯನ ಪೋಗಬೇಕಾದರೆ ನಮ್ಮ ದೋಷವುಡಿಗೇಗಟ್ಟ ನೀ ನಡಿ ॥ ಪಾಹಿ ॥ ೧೧ ॥ ವನದೊಳಗಂದು ನೀ ಕೊಳಲನೂದಲು ಕೇಳಿ, ತನುವಮರೆದು ಓಡಿಬಂದೆವೋ ॥ ಪಾಹಿ ॥ ವನಿತೆಯರೆಲ್ಲ ಸೀರೆಗಳ ತಲೆಗೆ ಸುತ್ತಿ ಮಣಿಹಾರಾವಳಿಯು ಕಾಲಗೆ ಕಟ್ಟ ॥ ಪಾಹಿ ॥ ೧೨ ॥ ಎಣ್ಣೆಯು ಹಚ್ಚಿಕೊಂಡವರು ಉಂಬುವರೆಲ್ಲ ಉಣ್ಣದೆಂಜಲಗೈಲೆ ಎದ್ದೆವೋ ॥ ಪಾಹಿ ॥ ಸಣ್ಣವರೆಂದು ವತ್ಸಗಳನೆತ್ತಿದೆವೋ ಪ್ರಪನ್ನವತ್ಸಲ ನಗೆಗೇಡಿದು ॥ ಪಾಹಿ ॥ ೧೩ ॥ ಶೋಕನಾಶನ ಇಲ್ಲೇ ಇದ್ದರೆ ಈ ಮಾತು ಯಾಕೆ ನೆನಿಸಿಕೊಂಡು ಬಳಲೆವೊ ॥ ಪಾಹಿ ॥ ಬೇಕು ಇಂದಿರೆಯರಸನ ಸ್ನೇಹಯಮಗೆಂದು । ಕಾಕುಲಾತಿಯಲಿ ಮಾಡಿದೆವೆಲ್ಲೊ

|| ಪಾಹಿ || ೧೪ || ಎಂದಿಗಾದರು ನಮ್ಮ ಕರವಬಿಟ್ಟಗಲ ಗೋವಿಂದನೆಂದರಿದಿದ್ದೆವನಿರುದ್ಧಾ || ಪಾಹಿ || ಸಿಂಧುಬತ್ತಲು ಜಲಜಂತುಬಳಲುವಂತೆ, ಇಂದಿಗೆಮಗೆ ತೋರುತಿಹದೋ || ಪಾಹಿ || ೧೫ || ಎಲ್ಲಿಂದ ಬಂದನು ಅಕ್ರೂರನೆಂಬವ ಫುಲ್ಲನಾಭನೆ ನಿನ್ನ ಕರೆಯಲು || ಪಾಹಿ || ಇಲ್ಲಿಂತು ಸ್ತ್ರೀಯರ ಬಿಟ್ಟು ಬಾಹುವದೆಂತು ಅಲ್ಲಿಗೆಂದಿವನು ತಿಳಿಯಲಿಲ್ಲೇ || ಪಾಹಿ || ೧೬ || ಕ್ರೂರನೇಸರಿ ಈ ವ್ಯಾಲಿನಾಮವಿವನಿಗೆ ಆರು ಕೊಟ್ಟರೋ ಕಾಣ್ಯೊ ತಿಳಿಯದೂ || ಪಾಹಿ || ನಾರಾಯಣನೆ ಅಪ್ಪಣೆಯಕೊಡು ಪೋಗಲಿ ದಾರಿಹಿಡದು ತಮ್ಮ ಊರಿಗೆ || ಪಾಹಿ || ೧೭ || ಒಂದು ದಿವಸ ನಕ್ಕು ನಡಿದವರಿಳೆಯೊಳು ಇಂದುಮುಖಿಯರ ಜರಿವದಿಲ್ಲ || ಪಾಹಿ || ಮಂದರಧರ ಬಹುಕಾಲ ನಿನ್ನಯ ಪಾದ ಹೊಂದಿಕೊಂಡವರೋ ಮರೆಯಬೇಡೋ || ಪಾ || ೧೮ || ಮಥುರಾಪುರಕೆ ಹೋದಬಳಿಕ ಬಾಹುವದೆಂತು, ಚದುರಸ್ತ್ರೀಯರು ಅಲ್ಲಿ ಬಹುಮಂದಿ || ಪಾಹಿ || ಮದನಬಾಣದಲಿ ಜರ್ಝರಿತರಾಗುತ ನಿನ್ನ ಬದಿಯಲ್ಲಿ ಬಂದು ರಮಿಸುವರೋ || ಪಾಹಿ || ೧೯ || ಪರಿಮಳವಸ್ತ್ರವನೇಕ ಭೂಷಣದಿಂದ | ಪರಮಾತ್ಮ ನಿನ್ನಾರಾಧಿಸುವರೋ || ಪಾಹಿ || ಸುರನದೀ ಪಿತನೆ ಆ ಸುಖದ ಸಾಗರದೊಳು | ಪರವೆ ಗೊಲ್ಲರ ಹೆಂಗಸರದೆಲ್ಲ || ಪಾಹಿ || ೨೦ || ಚಿಂತೆಬ್ಯೇಡಿರಿ ಬರುತಿಹೆನೆಂದು ಹೇಳಿಯೊ-ಇಂತಿದ್ದ ಬಳಿಕ ನೀ ಬಾಹುವ್ಯಾ || ಪಾಹಿ || ಎಂತೆಂತು ಶೃಂಗಾರಮಾಡಿ ತೋರಿಸುವರೊ | ಅಂಥ ಜಾಣೆಯರು ಇಲ್ಲ್ಯಾರುಂಟು || ಪಾಹಿ || ೨೧ || ನಂಬಿದವರ ಭ್ರಷ್ಟಮಾಡುವದುಚಿತವೆ ಅಂಬುಧಿಶಯನ ಅಧೋಕ್ಷಜಾ || ಪಾಹಿ || ಕಂಭದಿಂದುದ್ಭವಿಸಿದ ನರಹರಿ ನಿನ್ನ ಹಂಬಲದಲಿ ಹೊತ್ತು ಹೋಗದೊ || ಪಾಹಿ || ೨೨ || ಧರೆಯೊಳು ಸಣ್ಣ ಧೊರೆತನಮಾಡುವರು ದೀನರ ಪೋಷಣೆಯ ಮಾಡುತಿಹರಲ್ಲೊ || ಪಾಹಿ || ಸುರವಂದ್ಯ ಈರೇಳು ಭುವನವಾಳುವದ್ಯಾಕೋ ಮೊರೆಯಿಡುವರನ ರಕ್ಷಿಸದಲೆ || ಪಾಹಿ || ೨೩ || ಬದುಕುವದೆಂತು, ನೀ ಪೋದಬಳಿಕ ಇಲ್ಲೀ-ಸುದತಿಯರೆಂದು ತಿಳಿಯದೇನೋ || ಪಾಹಿ || ಮಧುರಿಪು ಕರುಣಾಸಾಗರನೆಂದು ಬಹುವೇದವೊದರುತಿಹ್ಯವು ಸತ್ಯವಲ್ಲೇನೋ || ಪಾಹಿ || ೨೪ || ನೊಣವೊರಸಲುಪಾಪ, ಹೊಂದಿಕೊಂಡಗಣಿತ | ಂಗನಿಯರ ಕೊಂದರೆ ಒಳಿ

ತೇನೋ ‖ ಪಾಹಿ ‖ ದಿನಕರ ಶತತೇಜ ನಿನ್ನಗಲಿದಮೇಲೆ । ಕ್ಷಣಜೀವಿಸುವರೆಂದು ತಿಳದಿದ್ದ್ಯಾ ‖ ಪಾಹಿ ‖ ೨೫ ‖ ರಕ್ಕುಭಕ್ತಿಯ ಮಾಡುತಿದ್ದವೆ ನಿನ್ನೊಳು–ರಕ್ಕಸರಿಪು ಮನಸರಿಯೆನೋ ‖ ಪಾಹಿ ‖ ಇಕ್ಕೊಳ್ಳೊ ಈ ದೇಹ ನಿನಗೇ ಒಪ್ಪಿತೂ ದೇವ । ಮುಕ್ಕಳಾಣೆಯೊ ಎರವಿಲ್ಲವೋ ‖ ಪಾಹಿ ‖ ೨೬ ‖ ವಾಸುದೇವನೆ ಹೀಗೆ ಮುಖಭಂಗಮಾಡೊದು । ಏಸು ಜನ್ಮದ ಹರಕೆಯು ಯಿತ್ತೋ ‖ ಪಾಹಿ ‖ ಲೇಸು ಮೊದಲಿಗೆ ಸ್ನೇಹವ ಮಾಡದಿದ್ದರಾಭಾಸಕಂಜಿಲೋ ನಂದನಂದನ ‖ ಪಾಹಿ ‖ ೨೭ ‖ ಕೂಳು ಹುಟ್ಟದೆ ಹೋಗಿ ನಿನ್ನ ಸೇರಿದವೇ । ಗೋಪಾಲ, ಅಂದಿಷ್ಟು ಬೆಳ್ಳಿಸುವೆಲ್ಲ್ಯೋ ‖ ಪಾಹಿ ‖ ಆಲಯದೊಳಗಿರೆ ಬೀದಿಯೊಳ್ ಬರುತಿರೆ ವಾಲಯ ಬೆನ್‌ಬಿಡದಿರುವೆಲ್ಲೋ ‖ ಪಾಹಿ ‖ ‖ ೨೮ ‖ ಈಸೊಂದು ಮಾತುಗಳ್ಯಾತಕಾಡುವ ಶ್ರೀಪ್ರಾಣೇಶವಿಠಲ ಕೃಪಾಸಾಗರ ‖ ಪಾಹಿ ‖ ದಾಸೆರೊಯುನ್ಮನುದಾಸೀನಮಾಡದೆ ದೋಷರಹಿತ ವೈಣ ನಿಲ್ಲಿನೋ ‖ ಪಾಹಿ ‖ ೨೯ ‖

೧೫೦. ರಾಗ–ಪೂರ್ವಿ (ಏಕತಾಳ).

ಇಲ್ಲೇ ಇದ್ದೇನೆಂದು ತಿಳದಿರಲಿ–ನಾ ಎಲ್ಲಿಗೆ ಹೋದರದೆಲ್ಲ ಬಯಲ ಮಾತೆ ‖ ಪಲ್ಲ ‖ ಸಿರಿಯಿಂದಲತಿಶಯ ಬೆರೆದಿಹೆ ನಿಮ್ಮೊಳು । ಎರವಿಲ್ಲ ಲೇಶತ ಸ್ಮರನಾಣೆ ನಾ ‖ ಸಿಲ್ಲೇ ‖ ೧ ‖ ಮಧುರಾ ಪಟ್ಟಣದೊಳು ಚದುರೆರಿದ್ದರವರ । ಬದಿಯಲ್ಲಿ ಹೋದರೆ ವಿಧಿಯಾಣೆ, ನಾ । ನಿಲ್ಲೇ ಇದ್ದೇನೆಂದು ‖ ೨ ‖ ಇಂದುಮುಖಿಯರೆ ನಿಮ್ಮಂದವಕೆಡಿಸಿ ನಾ ತಂದೆತಾಯಿಗಳನು, ಹೊಂದಿಹೆನೇನಾ ‖ ೩ ‖ ನಂಬಿದವರ ಮನದ ಹಂಬಲರಿಯೆ ದಯ ಅಂಬುಧಿ ಹರಿ ಎನಗಂಬುವರೆ ‖ ೪ ‖ ಕ್ರೂರನಕಾಟಕೆ ಆರಾದೆ ಪೋಗುವೆ, ಗಾರಾಗಬೇಡಿರೆ ನಾರಿಯರೇ ನಾ ‖ ೫ ‖ ಬಿಟ್ಟರೆ ನಿಮ್ಮನು ಹುಟ್ಟೊ ಜನ್ಮಕೆ ಗೇಣು । ಬಟ್ಟೆಯೆಂಬುದೆನಘುಟ್ಟಬೇಡ ನಾ ‖ ೬ ‖ ತನುಮನಸಿಸುತ ಪತಿಯನು ಬಿಟ್ಟುಯನ್ನಲ್ಲಿ। ಘನಸ್ನೇಹವೆಂಬದೀ ಮನಕಿಲ್ಲೇ ನಾ ‖ ೭ ‖ ತ್ವರಿತೆನ್ನ ನಿಮ್ಮಲ್ಲೆರ ಗಾದೆಯಿದ್ದರೆ, । ತರುಣೆರೆ ನಿಮ್ಮನಸೆರಗುವದೆ ‖ ೮ ‖ ಮಾನಿನೀಯರೆ ನಿಮ್ಮ ನಾನಗಲಿದರೆ, ಪ್ರಾಣೇಶವಿಠಲನೆಂಬೀ ನಾಮ್ಯಾಕೆ ‖ ನಾ ಇಲ್ಲೇ ಇದ್ದೇ ‖ ೯ ‖

೧೫೧. ರಾಗ—ಪಂತುವರಾಳಿ (ಅಟತಾಳ).

ಹೆಂಡತಿಕಿಂತೆನ್ನ ಹೆಚ್ಚು ನೋಡಿದೆನೆಂದು, ಕಂಡಂತೆಯಾಡಿದ್ದೆಲ್ಲ್ಯೊ ॥ ಪುಂಡರೀಕಾಕ್ಷ ಒಂದಾಣೆಲ ನಿನಗೆ ಇತ್ತಂಡ ವಿಚಾರವಮಾಡೋ ಮಾತಾಡೋ ॥ ಪಲ್ಲ ॥ ಅಧಮರು ಸೇವಿಸಿ ಬದುಕುವೆವೆಂದರೆ ಪಾದ । ಪದುಮವು ದೊರಕವಲ್ಲೊ । ಉದಧಿಜೆ ಸ್ವಲ್ಪ ನಡೆದರೆ ಸೋಲುವಳೆಂದು ಎದೆಯಲ್ಲಿ ಪೊತ್ತೆಯಲ್ಲೊ—ಒಂದಲ್ಲೊ ॥ ೧ ॥ ಕಳೆಯುಗುಂದಿಸಿದ್ಯೊ ತೆರಳುವೆ ಮಧುರೆಗೆಂದು ಜಲಪಾನ ತೂರಿಸಿದ್ಯೆಲ್ಲೋ ॥ ಚಲುವಿಕೆ ಪ್ರಾಯ ಶ್ರೀಲಲನೆಗಿಹ್ಯದಕೆ ಮಕ್ಕಳ ನೀನೇ ಪಡದೆಯಲ್ಲೊ—ಸುಳ್ಳಲ್ಲೋ ॥ ೨ ॥ ಗಂಡೊಲ್ಲದವಳನ ಗುಂಡೊಲ್ಲದಂತೆ ಭೂ—ಮಂಡಲದೊಳಗೀವರಿ ॥ ಭಂಡು ನೀ ಮಾಡಲು ಕಂಡರೆ ನಮ್ಮನು ಪಂಡಿತಪಾಮರರೂ—ನಗುವರು ॥ ೩ ॥ ಹಲವು ಬಗೆಯಲಿ ನೀವಲಿದ ಕಾರಣದಿಂದ ಬಲು ಭಕುತಿಯಲಿ ಸಿತ್ಯಾ । ತಿಲಮಾತ್ರ ಬಿಡದೆ ಕಮಲೆಪಾದ ವಿಧಿ ಶಿವ ಕುಲಿಶಧರಾಮರರೂ ಸೇವಿಪರು ॥ ೪ ॥ ನೀನಗಲಿದರೆ ಇನ್ನೇನು ನಿರ್ಭಾಗ್ಯರು । ದೀನಾರು ಯಮಗಾವೀಗೆ ॥ ಎಣೆಸಿನೋಡಲು ಕಾಣೆವ್ಯೋ ಸಮಸುಖ ಪ್ರಾಣೇಶವಿಠಲ ಕೇಳು ॥ ದಯಾಳು ॥ ೫ ॥

೧೫೨. ರಾಗ—ಪೂರ್ವಿ (ಏಕತಾಳ).

ಪಾಲಿಸಿರೆಪ್ಪಣೆ ಮಧುರಿಗೀಗಲು । ತಿಲಾಂಶ ಚಿಂತಿಸಬೇಡಿರೆಲೆ ॥ ಪಲ್ಲ ॥ ನಾರಿಯರೆ ನಾನೆಲ್ಲಿ ಪೋಗುವೆ ಕೋಮಲ ॥ ಮೋರಿಯ ಬಾಡಿಸಬೇಡಿರೆಲೆ ॥ ೧ ॥ ಯಾತರಗೋಸುಗ ಖಿನ್ನರಾಗುವಿರೆನ್ನ ॥ ಮಾತು ಮನಸಿಗ ತನ್ನಿರೆಲೆ ॥ ೨ ॥ ಕಂಧರ ಉಬ್ಬಿ ದ್ವಯಕಂಗಳುದಕ ಪೊತ್ತಿ ॥ ಮಂದಮತಿಗಳ್ಯಾಕಾದಿರೆಲೆ ॥ ೩ ॥ ದೊಡ್ಡ ಕಾರ್ಯಕ್ಕೆ ಹೋಗುವೆನೀಗ ಈ ಪರಿ ॥ ಅಡ್ಡಾಗಬಾರದು ಕೇಳಿರೆಲೆ ॥ ೪ ॥ ಬಲುದೂರ ಬಂದರೆ ಜವ ಬಾಹೋಣಾಗದು ॥ ತಿಳಿದು ಮನೆಗೆ ದಯಮಾಡಿರೆಲೆ ॥ ೫ ॥ ತ್ವರದಿಂದ ವೈರಿಯುಗೆಲಿದಿಲ್ಲಿ ಬಹದೆಂದು ॥ ತಿಳಿದು ಮನೆಗೆ ದಯಮಾಡಿರೆಲೆ ॥ ೬ ॥ ಪ್ರಾಣೇಶವಿಠಲನೆಂದಾಕ್ಷಣ ತಡಿಯದೆ ॥ ನಾನಿಮ್ಮಲ್ಲಿಹನೆಂದು ತಿಳಿಯಿರೆಲೇ ॥ ೭ ॥

೧೫೩. ಪದ, ರಾಗ–ಶಂಕರಾಭರಣ (ಅಟತಾಳ).

ಏನೂಘೇಸಿಸಿದ್ದೇನಕ್ಕಾ । ನಾ ನನ್ನ ಮನದೊಳೀಗಾ ॥ ಮಾನಿನಿ ತಿಳಿದು ಪೇಳೆಲೆ । ಹೀಗಾದರೀಕೊ । ಜಾಣೇನೀನೆಯೆ ಅಹುದೆಲೆ ॥ ಪಲ್ಲ ॥ ಅಂಬುಜಾಕ್ಷಿ ಕೇಳಿದ್ಯಾಪೀ । ತುಂಬರಾ ಬಂದಾನೆ ಎಂಬೋ । ಹಂಬಾಲಲ್ಲಾದೆ ಬ್ಯಾರ್‍ಯ್ಯಂಟನೇ ॥ ತೋರುವದಿಂತು । ಜಂಭಾದ ಮಾತಲ್ಲೆ ಸುಳ್ಳೇನೇ ॥ ೧ ॥ ಸತ್ಯ ಹೇಳಿದ್ದಲ್ಲೆ ಎಂಥಾ । ಉತ್ತ್ಮಾಮುಳೆ ಬಂದಾನೇನೆ । ಸತ್ಯಾ ಭಾಮಿರಮಣ ಇಲ್ಲಿಗೇ ॥ ನಿಮಿಷಾಯುಗ । ಹತ್ತಾಗಿ ತೋರುವದೆಮಗೆ ॥ ೨ ॥ ಎಲ್ಲಾರಾಪೇಕ್ಷವು ಆವಾ । ನಲ್ಲೇ ಅಂಬೋದಕ್ಕೆ ಅಂದೀ । ನಲ್ಲಾದೆ ನೋಟಾಗಾರತೇನೇ ॥ ಬಂದಾನೊಬರದೆ ಅಲ್ಲೆ ಈಹನೂ ಬಲ್ಲೀನೇನೇ ॥ ೩ ॥ ಜೋಗಿಣಿ ಮನೆ ತನಕಾ, । ಹೋಗಿ ಕೇಳುವ ಬಾರೆಲೇ । ನಾಗಾರಿ ವಾಹನ ಬಾಹೋದೂ । ಲಕ್ಕೀಶಾನವಿಯೋಗಾದಿ ಮನಸು ನಿಲ್ಲಾದೂ ॥ ೪ ॥ ಮಳೆನೀರೂ ಬಿಟ್ಟು ಮುಂಜುಗಳಿಗೆ ಕೈನಿಡ್ಡುವಂತೆ । ನೀಲಾಂಗನ ಬಿಟ್ಟು ಯೋಚನೇ ॥ ಮಾಡುವೆವೇನು । ಬಾಳೀವ್ಯಾಯಿತೇ ಕೀರವಾಣೀ ॥ ೫ ॥ ಹೋಗದಾ ಮುಂದೇಯೆ ಪ್ರೀತಿ ನೀಗದ ಮುಂದೆಯೆ ಜೋಕಿ । ಈಗಳಲೀದರೆ ನಾಹದೇ ॥ ತಕ್ಕಸಾಧನಾ । ನಾಗ ಗಮನೆವಂದೂ ತೋರದೇ ॥ ೬ ॥ ವಕ್ರನಾಗೀ ಬಂದೂ ನಮ್ಮಾ । ಚಕ್ರೀಯುಗಲೀಸಿದನು । ಶುಕ್ರಶಿಷ್ಯನೇ ಧಿಟನಮ್ಮಾ ॥ ತಿಳಿಯುಡಲೆ । ಅಕ್ರೂರನಂಬೊರಲ್ಲೆ ಕರ್ಮಾ ॥ ೭ ॥ ಆನರೀಗಂಬೂವದ್ಯಾಕೆ । ಆನಾರಿಯುರಾ ಮಾಡಿದ್ದೂ । ಗೋಣು ಮುರಿದಾರೆ ನಮ್ಮನೂ ॥ ಸುಲಭದಿಂದೆ ಶ್ರೀನಿವಾನಾಕ್ಕೈನೇರಿದನೂ ॥ ೮ ॥ ತುಂಡಾಶಟ ನೇರಿಗೆ ತಮ್ಮಾ । ಗಂಡಸರಿದ್ದಿಲ್ಲವೇನೆ । ಪುಂಡರೀಕಾಕ್ಷನಾ ಬಯಸಲೂ ॥ ಈವನು ಅಂಥಾ ಭಂಡಾನೆ ಅಲ್ಲೀಗೆ ಹೋಗಲೂ ॥ ೯ ॥ ಅನ್ನಾಲಂಕಾರ ಅಂಬರ । ವನ್ನು ನಾವೆಂತೂ ಜರಿದೆವೊ । ಘನ್ನಘಾತಕೇರು ನಮ್ಮಂತೆ ॥ ಆಗಲೇ ಸುಖವನ್ನು ಕಾಣಬೇಡವೆ ಕಾಂತೇ ॥ ೧೦ ॥ ಮೀನಾಕ್ಷೀರಾ ಕೂಡದಂತೆ । ತಾನು ಭ್ರಾಂತನಾಗಿ ನಮ್ಮಾ । ಧ್ಯಾನದಿಂಥೋಗಾದೆಯಲ್ಲೀಗೇ ॥ ಬಾರಲೆ ನಮ್ಮಾ । ಪ್ರಾಣೇಶ ವಿಠ್ಠಾಲನು ಇಲ್ಲಿಗೇ ॥ ೧೧ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೫೪. ಪದ, ರಾಗ–ವರಾಳಿ (ಅಟತಾಳ).

ತಾಳಲಾರಿನೆನೀರೆ ಕರತಾರೇ । ತಾಳಲಾರಿನೆನೀರೆ ಕರತಾರೆ ಹರಿಯಾ। ಕೇಳಿ ಯನ್ನಯ ಮಾತು, ನಡಿ ಈಗ ತ್ವರಿಯಾ ॥ ನಾಳೆ ಬಾಹುವೆನೆಂದು ಬಹು ಬಹುಪರಿಯಾ । ಹೇಳೂವಬಿಡದಿರು ಮೂಲೋಕ ಧೊರಿಯಾ ॥ ಪಲ್ಲ ॥ ನಾಕು ಮೊಗನ ಪಿತ ಶ್ರಿದೇವಿ ವರನಾ । ನಾಕಾರು ಕಂಧರ ದಸುರ ಸಂಹರನಾ ॥ ನಾಕು ಹತ್ತು ಭೂವನುಳ್ಳ ಉದರನಾ । ನಾಕು ವೇದವ ಮಂದರವನಿ ಉದ್ಧರನಾ ॥ ೧ ॥ ಕುಸುಮ ಬಾಣನವೈರಿ ಶುಕಮುನಿ ಪಿತನಾ । ಕುಸುಮ ತಂದವನ, ತಮ್ಮಗೆ ಬಲುಹಿತನಾ ॥ ಕುಸುಮಲೋಚನ ನಂದಗೋಪನ ಸುತನಾ । ಕುಸುಮದ ತರುಸತಿಗಿತ್ತ ಅಚ್ಯುತನಾ ॥ ೨ ॥ ನಗ ಮುರಿದೆ ಮಳರ ಶಾಪ ಕಳದನಾ । ನಗ ರಕ್ಷಿಸಿದವಗೆ ಬಹಳೊಲಿದವನಾ ॥ ನಗ ಪೊತ್ತು ಗೋಕುಲ ಉಳಸಿಕೊಂಡವನಾ । ನಗ ಶತ್ರು ಅನುಜ ಪ್ರಾಣೇಶವಿಠ್ಠಲನಾ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೫೫. ಪದ, ರಾಗ–ಪೂರ್ವಿ (ಅಟತಾಳ).

ಎಷ್ಟು ಹೇಳಿದರು ರಂಗಾ । ಬಿಟ್ಟುಹೋದಾ ನೋಡಿರೆಮ್ಮಾ । ಮೊಟ್ಟ ಮೊದಲಿಗೇ ತಿಳಿಯಾದೆ । ಕೃಷ್ಣನ ಸಂಗಮಾಡಿದೇವೆಮ್ಮಾ ॥ ಪಲ್ಲ ॥ ಅನ್ನಾ ಉದಕಾನಡಿಯೂವಮ್ಮಾ । ಕಣ್ಣುಮುಚ್ಚಾವು ಶಯನಾದೀ ॥ ಬಣ್ಣಾದೊಸ್ತ್ರಾ ಭೂಷಣಗಾ । ಳನ್ನು ದೇಹಾಬಯುಸಾವಮ್ಮಾ ॥ ೧ ॥ ಗಂಧಲೇಪನ್ಯಾತಕಮ್ಮಾ । ಮಂದರ ಧರನಗಲೀದಾ ॥ ವಂದು ನಿಮಿಷವು ಯುಗದಂತೆ । ಇಂದಿಲಿಂದಾ ತೋರುವದೆಮಗೇ ॥ ೨ ॥ ಗಂಡರೂ ಬೈದಾರಲ್ಲವ್ವ । ಕಂಡವರೇ ನಂಬುವರೋ ॥ ಪುಂಡರೀಕಾಕ್ಷನಾನೆಚ್ಚೀ । ಕೊಂಡು ಬೈಲಿಗೆ ಬಿದ್ದೆವಮ್ಮಾ ॥ ೩ ॥ ಆರೂ ಕಂಡಿದ್ದಾರೊ ಆವಾ । ದಾರಿಲೇ ಹೋದಾನೊ ಕೃಷ್ಣಾ ॥ ನಾರೇರು ನಾವೆಲ್ಲರು ಕೂಡೀ । ದೂರ ಹುಡುಕಿ ಬಾಹುವನಮ್ಮಾ ॥ ೪ ॥ ಶ್ರೀಶಪ್ರಾಣೇಶವಿಠ್ಠಲ್ಲಾ । ಎಸೂಗಾವದವೂ ಹೋದಾರೂ ॥ ಲೇಸೆ ಬೆನ್ನುಹತ್ತಿ ಹೋಗುವ । ದೋಷಾರಹಿತಾ ತಾನೇ ದೊರೆವಾ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೫೬. ಪದ, ರಾಗ–ಸುರಟ (ಅಟತಾಳ).

ರಂಗ ಹೋದಾನಲ್ಲೆ ನಮ್ಮ । ನೊಂಚಿಸೀ ಮಾರಗೊಪ್ಪಿಸೀ । ಅಂಗನೆ ನಾವೆಂತು ಬದುಕೂವಾ ॥ ರಂಗ ಹೋದನಲ್ಲೆ ॥ ಪಲ್ಲ ॥ ಸಖಿನಮ್ಮಾ ಹಿರಿಯರೆಷ್ಟೊ, ಪುಣ್ಯ ಸಂಪಾದಿಸಿದ್ದಾರೊ । ಸುಖಬಟ್ಟೇವೆ ಇಷ್ಟು ದಿಂವಸಾಗಿ ಹೋದನಲ್ಲೆ ॥ ಧಿಕು ನಮ್ಮ ಪಾಪದಿಂದಾ ಶೋಕ ಬಡುವದು ಸದ್ಯಾ । ಲಕುಮೀಶನಗಲಿ ಈಗಾ ॥ ೧ ॥ ಹಿಂದಿನ ಜನ್ಮದೊಳಾರಾ । ಕ್ರೀಡಿ ನಿಗ್ರಹಿಸಿದ್ದೆವೊ । ಮಂದರಾದ್ರಿಧರಯರವಾದಾ ॥ ಮುಂದೆ ನಂದುಪಾಯಾವಿಲ್ಲಾ ಹರಿಯಂದಾರನಕರವಾ । ಮಂದಿಗೆಂತು ಪೊಗದೋರೂವಾ ॥ ೨ ॥ ಅಕ್ಕ ಕೇಳೆ ಅಚ್ಯುತಾನು ನಿಮ್ಮೊಳಗೆಂತು ಯಿದ್ದಾನೊ । ಮಕ್ಕಳಾಣೆನಲ್ಲಿ ಮಾತ್ರಾ ॥ ದಕ್ಕಿದಂತಿದ್ದಾನಾನೊಂದಪೇಕ್ಷ ಮಾಡಿದವಳಲ್ಲಾ । ರಕ್ಷ್ಯಾ ಮಾಡುಬಹುದೇನೆ ಹೀಗೆ ॥ ೩ ॥ ತಂಗಿ ಕೇಳಿದ್ಯಾ ನಿನ್ನಂತೆಲ್ಲರಿಗೆ ವಿಶ್ವಾಸವಿತ್ತೊ । ಮಂಗಳೇಶಾನಲ್ಲಿ ಪ್ರತಿದಿನಾ ॥ ಲಿಂಗವಿಲ್ಲದಾಗುಡಿ ಎಂತಿಲ್ಲೀಹ್ಯದೇನೂ ಹೋಗೂವಾಕು । ರಂಗಾ ನೇತ್ರಿಯರ್‍ಯಾ ಹುಡುಕುತಾ ॥ ೪ ॥ ಅಮ್ಮಾ ನಾವು ಮೊದಲೀಗೆ । ಅಬಲೀಯರು ಒಮ್ಮಿಂದಾ । ವಮ್ಮೆ ಅಲ್ಲಿಗೆಂತೂ ಪೋದೆವೇ ॥ ಸುಮ್ಮನೆ ಸಹವಾಸಕೊಬ್ಬಾಪುರುಷಾರಿಲ್ಲಾದೆ ಇದು । ಸಮ್ಮತಾವೆ ನಮ್ಮನ್ತೋಮುಕ್ಕೇ ॥ ೫ ॥ ಘಟ್ಟಯುದೀ ಸಿನ್ನದವ್ವಾ । ಪ್ರಾಣದಾಸೀ ಮಾಡುವದೂ । ಕೃಷ್ಣ ಹೋದವ್ಯಾಲೆ ಬಾಳೀನೆ ॥ ಮುಟ್ಟಲರೀಯುವು ಹುಲಿ ಸಿಂಹಾಗಳರಣ್ಯದಿ ಪಾ । ಪಿಷ್ಟನಾರೆರಂದೂ ನಮ್ಮನೂ ॥ ೬ ॥ ಪುತ್ರಾರಿಶೋಕತಾಳದೆ ವಶಿಷ್ಟಪಾವಕ ಜಲಪೊಕ್ಕ್ಯಾ । ಗೋತ್ರದಿಂದ ಪತನವಾಗ್ಯುಳಿದಾ ॥ ಮಿತ್ರಿ ಆವಾವಕಾಲಕ್ಕೆ ಬಂದದ್ದನೂ ಭೋಗೀಸದೆ । ಗಾತ್ರ ನಾಶವಾಗುವದುಂಟೇ ॥ ೭ ॥ ಹೆಣ್ಣು ನ್ತೋಮುಗಳಿರ್‍ಯಾ ಕೇಳಿ ನಿಮ್ಮನಿಮ್ಮಾ ಗಂಡರೇನು । ಅನ್ನದೀರೆ ಮನಿಯಾ ಹೊಂದೀರಿ ॥ ಪನ್ನಗಶಯನನ ಪಾದಕಾಣದೀರೆ ನಮ್ಮ ಪ್ರಾಣವನ್ನು ತ್ಯಾಗಮಾಡೊದೆ ಸತ್ಯಾ ॥ ೮ ॥ ಎಂಥ ಮಾತಿದೂ ಪ್ರಾಣೇಶವಿಠಲನ ಕಾಣದಾಲೆ । ನಿಂತೆವೆಂಬೋರಾರೀ ಊರೊಳು ॥ ಕಂತುಪಿತ ಹೋದ ದಾರಿಯಾವದೊ ಹುಡುಕೂತಾಹೋಗು । ವಂತೆ ಮಾಡಿರೆಮ್ಮ ಈ ಕ್ಷಣ ॥ ೯ ॥

ಶ್ರೀ ಮಧ್ವೇಶಾರ್ಪಣಮಸ್ತು ॥

೧೫೭. ಪದ, ರಾಗ–ಪೂರ್ವಿ (ಆದಿತಾಳ).

ಹ್ಯಾಂಗೆ ಮಾಡಲೆಮ್ಮ ರಂಗಾ ಹೋಗಿ ಬರಲಿಲ್ಲಾ ॥ ಈಗ ಬರುಧೀನೆಂದು ಹೇಳಿ । ಬ್ಯಾಗ ಹೋದಾ ಹೇಳೆ ಬುದ್ಧೀ ॥ ಪಲ್ಲ ॥ ಮಂದಿರವೆಂಬೊದುಬ್ಯಾನರಿಟ್ಟ ತನ್ನುದಕಾ । ವೆಂದರೊಲ್ಲಾದಮ್ಮ ಜೀವಾ ನಿನ್ನೆ ಬೆಳತನಕಾ ॥ ಇಂದಿರೇಶನ ಪಾದ ಧ್ಯಾನಾ । ದಿಂದ ಮೊಗ್ಗಾಲೋಳು ಮೊಲಿಯಾ । ಕಂದನ್ಹಂಬಲ ಜರಿದೇ ಆರೆನಂದರೂ ಆನವಲ್ಲರ್‍ಯಾಕೇ ॥ ೧ ॥ ಇದ್ದ ಕಾಲಕೆ ಅತ್ತಿಅತ್ತಿಗಿ ಗಂಡಮೈದುನರಾ । ಸದ್ದು ತಪ್ಪಿಸೋದರೊಳಗೆ ಬಟ್ಟವೇ ಘೋರಾ ॥ ಮುದ್ಧ್ಯದಲ್ಲೊಮ್ಮಿಂದಲೊಮ್ಮೆ ಯುದ್ಧ ಮಧುರಾಪುರದಸ್ತ್ರೀಯರು। ಬುದ್ಧಿವಂತಾರಾದರು ನಾವೆ । ಕದ್ದ ಕಳ್ಳೇರಾದಿವೆಲ್ಲೆ ॥ ೨ ॥ ಮಾರ ಬ್ರಹ್ಮಾರಾಣಿಯಿಟ್ಟದು ಜ್ಞಾಪಕಿರದೇನೇ । ಧೀರ ಶ್ರೀ ಪ್ರಾಣೇಶವಿಠಲಗೆ ದಾರಿಕೊಡರೇನೇ ॥ ನಾರಿಯರ ವಶವಾದನೇನೊ । ತೋರದು ಮತಿ ಜಾಣೆ ಯಮುನಾ । ತೀರಕನ್ನಾ ಹೋಗುವನಲ್ಲಿಂ । ದಾರಿಯಲಿ ಬಾಹೋರ ಕೇಳುವ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೫೮. ಪದ, ರಾಗ–ಪೂರ್ವಿ (ಅಟತಾಳ).

ಕೃಷ್ಣ ಹೋಗಿಹ ದಾರೀದಾಧೀತೇ । ಹ್ಯಾಂಗೆ ಸಿಕ್ಕಿತೇ । ಮಧುರಿ ಎಷ್ಟು ಯಿದ್ಧೀತೇ ॥ ಪಲ್ಲ ॥ ಶ್ಲೋಕ ॥ ದುಗ್ಧ ತರುವ ಗೋಪಾಲಕನೆ ಆವಲ್ಲಿ ಪೋಪ । ಕೃದ್ಧ ಖಳಹ ಶ್ರೀಪಾ। ಕೇಳು ಎಮ್ಮಯ ಪ್ರಳಾಪಾ ॥ ಸದ್ಯಮದನ ಬನ್ನಾಬಡಿಸುವಾ ಶಳದು ಚಾಪಾ । ಮಧ್ವಪತಿಯು ಹೋದಾಕಾರಣಾ ವಿರಹ ತಾಪಾ ॥ ೧ ॥ ಪದ ॥ ತಂಗಿ ನೋಡಿರೆ ಮುಂದೆ ವಾಯುಸಾ । ಎರಳಿಯು ಯೇಸಾ । ಮಿಕ್ಕ ಶಕುನದಲೇಸಾ । ಹಂಗಗಳೆಡಬಲ ಪೋಪದೂ । ಜನ ಬಾಹದು । ಕರದಲಿ ಪಿಡಿದಿಹದೂ ॥ ರಂಗ ಹೋದನೆ ಎಂದು ಕೇಳೀರೆ ನಾಚಬ್ಯಾಡೀರೆ, । ನಗವೇರಿ ನೋಡಿರೆ । ಭಂಗವಾಯಿತು ನಮ್ಮ ಸುಖವೆಲ್ಲಾ। ಇಂದಿರಾನಲ್ಲಾ । ಘಾತಮಾಡೀದಕುಲ್ಲಾ ॥ ೨ ॥ ಶ್ಲೋಕ ॥ ಅಕ್ಕ ಹರಿಯು ಪಾದಾ । ಅಹುದೆ ನೋಡಿವನು ಆದಾ । ರಕ್ಕರವೆಮಗೀಗಾ । ನಿಲ್ಲಧೋಗುವದು ಮೋದಾ ॥ ಫಕ್ಕನೆ ರಥದಿಂದಾ ಇಳದು ಇದ್ಧಾನೆ ಮಾಧವ ಕ್ರೂರ

ಸತಿಸೂದಾ ನನ್ನ ಪುಟ್ಟಿಸಿದವೇಧಾ ॥ ೩ ॥ ಪದ ॥ ಅವನ ಹೆಸರು ಮತ್ತೆ ಕೊಳಬೇಕೆ । ಪಾಪಿಯನಬೇಕೆ । ಹೆಣ್ಣುಜನ್ಮವು ಸಾಕೇ । ತವಕದಿ ಅನಿರುದ್ಧನೊಳು ನಾವು । ಸ್ನೇಹ ಬೆರದೆವೂ । ಈಗ ಬಯಲ ಬಿದ್ದೇವೂ ॥ ಭುವನೇಶನಂಘ್ರಿ ಪ್ರಮಾಣವಾ । ಬಲ್ಲಿರೇನವ್ವಾ । ಈ ಮಾರ್ಗದೊಳಗೆ ಆವಾ । ಕವಿಮೂಢಜನ ಪೋಗಿ ಬರುನದೋ । ಹೆಜ್ಜೆ ಆರದೋ । ದುರ್ಲಭವು ದೊರಕುವದೂ ॥ ೪ ॥ ಶ್ಲೋಕ ॥ ಮುಂದೆ ಕಾಣಿನೊ ಬಿಳುಪು ಏನಾಧಿತವ್ವಾ । ಇಂದಿರೇಶಾ ಪಾಮುನನೆ ಆಧಾನೆಯುವ್ವಾ ॥ ಚಂದ್ರಾವದನೆ ಒಬ್ಬವಳು ಪೋಗುವದು ಧಾವಾ । ತೆಂದು ಜರಿಯದೇ ಹಿಂದೆ ನಾವೆಲ್ಲ ಬರುವಾ ॥ ೫ ॥ ಪದ ॥ ಸ್ವಾಮಿಾಯು ತೇರಿನ ಕಲಸೀದೆ ನಿಜವಾಗಿದೇ । ನಮ್ಮ ಸುದತಿಯು ಹೋದೆ । ನೇ ಮುಂದಕ್ಕೆಂದರೆ ಬಿಡಳಲ್ಲಾ । ನಿಂತಿದ್ಧಾನಲ್ಲಾ । ಈ ಕ್ಷಣಕೆ ಕಂಡೆವಲ್ಲಾ ॥ ಭಾಮಿನಿಯರೆ ನಾವು ವಂದಾಗೀ । ಆ ಪಾಪಿಯ ನೀಗಿ । ನಾವು ಅಚ್ಯುತ ಸಾಗೀ । ಶ್ರೀಮದಗೋಕುಲಕಿಂದು ಹೋಗೋಣಾ । ಕ್ರೀಡಿ ಮಾಡೋಣಾ । ಆನಂದಾಬ್ಧಿ ಈಸೋಣಾ ॥ ೬ ॥ ಶ್ಲೋಕ ॥ ಧರಿಯಾಕೆ ಕ್ಷೀಣಿಸಿಹದು ವೆಗ್ಗಳವಾಗೀ ಸ್ಥಳದಲೀ । ಸುರಪತಿ ಕುಳತಿದ್ದಾ ಶಂದನಾ ಹೋದಗಾಲೀ ॥ ಭರವಿದು ನಿಜವವ್ಮಾ ಈಗ ರವಿಜಾತಟಯುಲೀ । ಯರ ಕೊಳುತಿಹ ಬ್ಯಾಗಾ ಕಾಲುಮಾಡೊನೆ ಕೇಳೀ ॥ ೭ ॥ ಪದ ॥ ಚೂತವೃಕ್ಷವೆ ಸಂಕರಷಣನ್ನಾ ಕಂಡ್ಯಾ ಪೋಪನ್ನಾ । ಹೇಳಿಕೊಟ್ಟಾರೆ ನಿನ್ನಾ । ಖ್ಯಾತಿಯಾಗುವದೆಮಗನುಗಾಲಾ । ಅಶ್ವತ್ಥತಾಳಾ । ವಟುರಂಭಗೋಪಾಲಾ ॥ ನಾಥನ ಪಥದೊಳು ಕಂಡೀರ್ಯಾ । ಆಗ ಯಿದ್ಧಿರ್ಯಾ । ನಮ್ಮ ಕುರುಹು ಬಲ್ಲೀರ್ಯಾ । ವಾತೇಶನಂಗಾಸಂಗದವರೂ । ನಾವು ಹದಿನಾರು ಹತ್ತುನೂರು ನಾರಿಯರೂ ॥ ೮ ॥ ಶ್ಲೋಕ ॥ ಎಲ ಮರುಳೆ ಅಬಲಿಗಳಿರ್ಯಾ । ಮರಗಳಾಡುವವೆ ಮಾತಾ । ನಳಿನನಯನ ಯಿಂಥಾ ಹುಚ್ಚು ಹಿಡಿಸಿದನೆ ಧಾತಾ ॥ ತಿಳಿದು ಬರಿಯುಲಿಲ್ಲಾವೇನು ಫಣಿಯುಲ್ಲಿ ಲಿಖಿತಾ । ಘಳಿಗಿ ಅಗಲದಂಥಾ । ರಮಣ ಆರಲ್ಲಿ ಬೆರತಾ ॥ ೯ ॥ ಪದ ॥ ಲೋಕದೊಳಗೆ ಜಾರತನವನ್ನೂ ಮಾಡಧಾರೇನೂ । ಬಿಡುವರೆ ವಲ್ಲಭರನೂ । ಕೂಕ ಬುದ್ಧಿಯುವರು ನಾವೆಲ್ಲಾ । ಇದು ಥರವಲ್ಲಾ । ವಗತನ ಬಿಟ್ಟುನಲ್ಲಾ ॥ ರ್‍ಯಾಕೆ ಕೋಪಿಸುವಂತೆ ಈ ಪರೀ ।

ಮಾಡಿದಿವೆನಾರೀ । ಈಗ ಬಂತಲ್ಲೆ ಸೂರೀ । ಮಾಕಾಂತ ಹೋದಲ್ಲಿ ಜಲ ಹುಟ್ಟಾ । ಬ್ಯಾಡವಕ್ಕಾಟಾ । ಮಾಡಿದನು ನಮ್ಮ ಭ್ರಷ್ಟಾ ॥ ೧೦ ॥ ಶ್ಲೋಕ ॥ ಈಗಿನ ಬುದ್ಧಿ ಮುಂಚೆ ವಬ್ಬಳೀಘುಟ್ಟಲಿಲ್ಲಾ । ಆಗ ಪಾಲಾಜ್ಯದಧಿಯೂ । ಕದ್ದರೂ ಕದಿಯಲಿಲ್ಲಾ ॥ ನಾಗವರದನೆಂದೂ । ಮುಚ್ಚಿಕೊಂಬುವಿರಿ ಎಲ್ಲಾ । ಭಾಗೀರಥಿಪಿತಾ ಎಲ್ಲಿಹಾನೀಗ ಕಳ್ಳಾ ॥ ೧೧ ॥ ಪದ ॥ ತಿಳಿದು ತಿಳಿದಾ ರಣ್ಯ ಬಿದ್ದೀವೆ । ಹ್ಯಾಗೆ ಹೋದೆವೆ । ಮೊಗವೆಂತು ತೋರೆವೇ । ಬಲು ಮಂದಿ ಮುಂದೆ ಬಾಳಿವಿಗೇಡೂ । ನಮ್ಮನು ಕಾಡೂ । ತಿಹರವಿಜಾನು ನೋಡೂ ॥ ಬಲಿಧ್ವಂಸಿ ಹೋದರೆ ತುಚ್ಛವಾ । ಮಾಡಿ ಸ್ನೇಹವಾ । ಸಂಪಾದಿಸಲಿಲ್ಲೆ ಧಾವಾ । ರೊಳಗೆ ಇಲ್ಲೀಗ ಬರಬಹುದೇ । ಕೇಡು ವಂದೊಂದೆ । ಪರಿಪರಿ ಉಂಟು ಬಾಧೇ ॥ ೧೨ ॥ ಶ್ಲೋಕ ॥ ಬೊಮ್ಮಾಕಾಮನ ಆಣೆಕೊಟ್ಟದ್ದ ಮಾತ್ರಾ । ಅಮ್ಮಾ ಬಾರದೆ । ನಿಲ್ಲನೆ ಪಾರ್ಥಮಿತ್ರಾ ॥ ಕರ್ಮಾವೀಗಲೆ ಪೋಪವಲ್ಲಾ ಪತತ್ರಾ । ಜನ್ಮಾವಾದರೆ ಅಯ್ಯೊ ಕಮಲಾಕಳತ್ರಾ ॥ ೧೩ ॥ ಪದ ॥ ಆಣೆಲ್ಲೆದಮ್ಮ ಗೋವಿಂದಗೆ । ಕೇಶವನ ಬಗೆ । ಬಲ್ಲಿವೆಲ್ಲಾರು ಈಗೆ । ನಾನಿರ್ವಾಣೇಶಗೆ ಹೊಸ ಗುಣಾ । ಬಂತೆಗೀರ್ವಾಣಾ । ವಂದ್ಯ ಎಂದಿಗೂ ಹೀನಾ ॥ ಆ ನಗರವಿಲ್ಲಿಗೆ ದೂರವೋ । ಸಮೀಪವೊ । ನದಿಯೊಳಗೆ ದಾಟವ್ಯೋ । ಭಾನುಸಖಾನನೆ ಕೂಗಿದಾ । ರಾರು ಕೇಳಿದ್ಯಾ । ಪ್ರಾಯ ಆದಾನು ಶ್ರೀದಾ ॥ ೧೪ ॥ ಶ್ಲೋಕ ॥ ಸಖೀ ವೋಡಿಹೋಗಲ್ಕೆಕೂಗಳತಿ ಮಾತ್ರಾ । ಶಕಟಾಂತಕಾನಂದ ಗೋಪನ್ನಪುತ್ರಾ ॥ ಮುಖಾ ಕಾಣಿಸಿಕೊಂಬುವಾ । ಈ ಚರಿತ್ರಾ । ಸುಖದಿಂದಲಿ ಕೇಳುವಾನೀಲಗಾತ್ರಾ ॥ ೧೫ ॥ ॥ ಪದ ॥ ನಿಲ್ಲಾದೆ ಹೋಗಿದ್ದರೆ ಸಿಗುವಾ । ದೇವರದೇವಾ । ಹೊತ್ತು ಹೋಯಿತಲ್ಲವ್ವಾ । ಇಲ್ಲೇ ವ್ಯರ್ಥವಾಗಿ ಬಿಸಲೊಳೂ । ದಣಿದೆವು ಕಾಲು । ನೋವುಗೊಂದಾವು ಬಲೂ ॥ ಮಲ್ಲಾರಿ ಹೆಜ್ಜೆ ಇಲ್ಲಿವೆ ನೋಡಿ । ವಂದನಿಯು ಮಾಡಿ । ಊರು ಸ್ಥಳವನ್ನು ಕೂಡಿ । ಅಲ್ಲಂಗನಿಯ ಕೊಟ್ಟ ಪರಿಯಲ್ಲೀ । ಪಾದರಜದಲ್ಲೀ । ದೇಹ ಹೊರಳಿಸಿರಿಲ್ಲೀ ॥ ೧೬ ॥ ಶ್ಲೋಕ ॥ ಮಾರನಾಕಾಟ ಶಾಂತೀ । ಆಗುವಾದಾರಿ ಕಾಣಾ । ಬಾರದೆಮಗೆ ಇನ್ನೆಂತು ಉಳಧೀತು ಪ್ರಾಣಾ ॥ ಭಾರೀಭಾರಿಗೆ ಮರಿಯದೂ ಹರಿಯ ಧ್ಯಾನಾ । ನಾರಾಯಣನು

ಮುರಿದನು ನಮ್ಮ ಗೋಣಾ ॥ ೧೭ ॥ ಮುಟ್ಟಮಧ್ಯಾನ್ಹವು ಆಯಿತು ದೇಹ ಬಳಲೀತೂ । ಕತ್ತಲಿಲ್ಲೇ ಆಧೀತೂ । ಮುಟ್ಟುವನಡಿರೆ ಗೋಕುಲಕನ್ನಾ । ನಮ್ಮವರನ್ನಾ । ಸಂವದಿಸುವನೆ ಅನ್ನ್ಯಾ ॥ ದುಷ್ಟ ಬುದ್ಧಿಯು ಮಂದುತಿಲಾಂಶಾ । ನೆನಿಸದೆ ಕ್ಲೇಶಾ । ನಮ್ಮ ಕಳೆವ ಪ್ರಾಣೇಶಾ । ವಿಠ್ಠಲ ತಾನೇವೆ ಬಂಧಾನು । ನಮ್ಮ ಕೂಡ್ಯಾನು । ಅಲ್ಲೆ ತಡದು ನಿಲ್ಲಾನೂ ॥ ೧೮ ॥ ಶ್ರೀ ಮಧ್ವೇಶಾರ್ಪಣ ಮಸ್ತು ॥

೧೫೯. ರಾಗ–ಸಾವೇರಿ (ಏಕತಾಳ).

ರಂಗ ಬಂದನಂತಲ್ಲೇ । ಸಖಿ–ರಂಗ ಬಂದನಂತಲ್ಲೆ ॥ ಖಳನಿಂಗಿತ ತಿಳಿದಿಲ್ಲಲ್ಲೆ ॥ ಪಲ್ಲ ॥ ಶ್ರೀರಮಣನ ಪಾದಾಬ್ಜದಲಿ । ಅ । ಕ್ರೂರಗೆ ಅತಿಭಕುತೆಲ್ಲೆ ॥ ಕ್ರೂರನ ಮತಿ ಹೀಗೆಂದನಿರುದ್ಧಗೆ । ಪೂರುತಿ ತಿಳಸಿಲ್ಲಲ್ಲೇ ॥ ಸಖಿ ॥ ೧ ॥ ಅತಿಹಿತರು ಬೇಡೆನದಲೆ । ಗೋಪಿಕ । ಸತಿಯರು ಕಳಸಿಹರಲ್ಲೇ ॥ ಪತಿತೋದ್ಧಾರನ ಬಿಟ್ಟು ಬದುಕುವರು । ಕ್ಷಿತಿಯೊಳು ಬಹುಧಿಟ್ಟರಲ್ಲೆ ॥ ಸಖಿ ॥ ೨ ॥ ವಾರಿಜ ಬೈಲಿಗೆ ಬಿದ್ದಂತಿಂದಾ । ನಾರಿಯರಿಗಾಗಿಹದಲ್ಲೆ ॥ ಜಾರತನವ ಮಾಡಿದರೆಂದಾಡುವ । ಧೀರರು ಕೊಲ್ಲುತಿಹರಲ್ಲೇ ॥ ೩ ॥ ಇಂದಿರೆ ಅರಸನ ಎಂದಿಗೆ ಕಂಡೆವ್ವೋ । ಎಂದು ದೇವೆ ಆಯಿತಲ್ಲೇ ॥ ಇಂದುವದನ ಇಂದೀ ಊರಿಗೆ ಹರಿ । ಬಂದರು ಬರದಂತಲ್ಲೇ ॥ ೪ ॥ ಅನುದಿನ ಶ್ರೀಹರಿ ಸಂಗವು ಬೇಕೆಂದು । ನೆನೆನೆನಸುತಿದ್ದೇವಲ್ಲೆ ॥ ಮನಸಿಜ ಜನಕಾಲಿಂಗಿಸಿದಂದದಿ । ಕನಸಿಂದು ಕಂಡೆನಲ್ಲೇ ॥ ೫ ॥ ಆ ಗರತಿ ಯಶೋದೆಗೆ ಎರಗಲು ಜಯ । ವಾಗೆಂಧರಸಿಹಳಲ್ಲೇ ॥ ನಾಗಗಮನೆ ಹೆತ್ತವರ ಹರಕೆಸುತ । ಗಾಗುವದು ನಿಜವಲ್ಲೇ ॥ ೬ ॥ ಸೃಷ್ಟ್ಯಾದಿಗಳಿಗೆ ಕರ್ತೃನೆಂದು ಶೃತಿ । ಕೃಷ್ಣನ ಪೊಗಳುವದಿಲ್ಲೇ ॥ ದೃಷ್ಟಿಸೆ ಕಂಸನತರಿವುದು ಪ್ರಾಣೇಶವಿಠ್ಠಲನೇ ಗರಿದಲ್ಲೆ ॥ ಸಖಿ ॥ ೭ ॥

೧೬೦. ಪದ, ರಾಗ–ಲಾವಣಿಧಾಟಿ (ಏಕತಾಳ).

ಇಕ್ಕೊಳ್ಳಿ ಬೀಳ್ಳೂ । ತಕ್ಕೊಳ್ಳಿ ಕಲ್ಲೂ । ಹಾಕೆಲ್ಲಿಗ್ಯೋಡಧಿರೆಲಾ ॥ ಲೋಕೆಲ್ಲ ನಡುಗೋದು । ಈ ಕೆಲಸೆಲ್ಲಿದು । ಯಾಕೆಮ್ಮ ಕೊಲ್ಲಧಿಯಲಾ ॥ ೧ ॥ ನಾರದಮುನಿ ವಿಸ್ತಾರಿಸಿದಂದದಿ । ಪೋರನ ಕೊಲ್ಲಬೇಕ್ರೆಲಾ ॥

ನಾರದಮುನಿ ಬಲು ಶೂರನೇ, ತಿಳಿಯದೆ । ಈ ರೀತಿ ಮಾಡಿಕೊಂಡೆಲಾ ॥ ೨ ॥ ಶಿವನಾರಾಧನಿ । ಜವದಿಂದ ಮಾಡಿಹೆ । ಭುವನದಿ ಸೋಲಿಲ್ಲೆಲಾ ॥ ಭವ ನೊರವೆಲ್ಲಾ । ಸವಿಗೆಡಿಸಿದನೂ । ಇವಗ್ಯಾರೆದಿರಿಲ್ಲೆಲಾ ॥ ೩ ॥ ಮಿಂಚುವ ಮುತ್ತಿನ । ಗೊಂಚಲ ಕೊಡುವೆನು । ವಂಚನೆ ಮಾಡಬೆಡ್ರೆಲಾ ॥ ಚಂಚಲ ರಾದೆವು । ಮಿಂಚುವ ಮುತ್ತಿನ । ಗೊಂಚಲ ಸುಡಬೇಕೆಲಾ ॥ ೪ ॥ ಸೃಷ್ಟಿ ಯೊಳಗೆ ಬಹು । ದಿಟ್ಟ ಬಂಟರೆಂ । ದಿಟ್ಟಹೆ ನಿಮ್ಮನೆಲಾ ॥ ಬೆಟ್ಟದಂಥ ಗಜ । ಕುಟ್ಟೇದ ಮಲ್ಲರ । ದೃಷ್ಟಿಸಲಿಲ್ಲೆನೆಲಾ ॥ ೫ ॥ ಉಮ್ಮಳೀಗ್ರಾಮವ । ಸಮ್ಮಾಸಿ ಕೊಡುವೆನು । ಹಮ್ಮಾಲಿ ಕೊಲ್ಲಬೇಕ್ರೆಲಾ ॥ ಉಮ್ಮಳಿಯಲ್ಲದು । ಮುಮ್ಮಳಿ ಜೀವಕೆ । ನಮ್ನೇನ್ನೋಡಗಾಣೆಲಾ ॥ ೬ ॥ ಮಾತು ಬಿಟ್ಟು ಬ । ಲ್ ಭೀತಿ ಗೊಂಡು ಹೀಗ್ಯಾತಕೆ ನಿಂತೀರೆಲಾ ॥ ಜೋತಿರೂಪನಾ । ಯೀತೆಜಾಕ್ಷಿಯ । ನೀತೆರದು ನೋಡೆಲಾ ॥ ೭ ॥ ಕಟ್ಟ ರೂಪದಿಂ ದೃಷ್ಟಿಗೆ ತೋರುವ । ಕೃಷ್ಣನು ಇವನ್ಯಾರೆಲಾ ॥ ತ್ರಿಷ್ಟಿಪ ಪ್ರಾಣೇಶವಿಠ್ಠಲನಿವನೂ । ಕುಟ್ಟೂವ ನಿನ್ನೀಗೆಲಾ ॥ ೮ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೬೧. ರಾಗ–ಕಾಂಬೋಧಿ (ಅಟತಾಳ).

ಮಾರಿ ಬಂದ ಕೃಷ್ಣ ಎಲ್ಲನೇ । ಕೂಗಿ । ಮಾರಿಕರಕೊಂಡ ಕಂಸನು ತಾನೇ ॥ ಪಲ್ಲ ॥ ನಾಗಸಿಂದಾನೆಯ ಮೇಲೆ ಇರಸಿ ವೈತಿರಲುವ । ಸ್ತ್ರಗಳ ಕಂಡೆ ಮಗುವು ಕೂಡು ಎನಲೂ ॥ ಜಗದೇಶನೆಂದು ತಿಳಿಯದೆ ಮನ್ನಿಸ ದಿರೆ । ಅಗಸಾನಿಭವ ಕೊಂದರಿವೆ ಸೂರಿ ಮಾಡುತ ॥ ೧ ॥ ಗೋಪಾಲ ರಾಮರ ಸಹಿತ ಮುದದಿ ಮಧು । ರಾಪುರ ಪೊಗಲು ಅಲ್ಲಿಹ ಜನರೂ ॥ ಶ್ರೀ ಪತಿಯನು ನೋಡಲ್ಯಾರಾರ ಮನಸೆಂತೊ । ಆ ಪರಿ ತೋರುತ ರಾಜಪಂಥಾ ನಾದಿ ॥ ೨ ॥ ಉಬ್ಬುಬ್ಬಿಲಿಂದ ಕೃಷ್ಣನ ಕೊಲ್ಲಬೇಕೆಂದು । ಕೊಬ್ಬಿದ ಗಜ ವನ್ನು ಮೇಲ್ಬಿಡಲೂ ॥ ಅಬ್ಬರಿಸುತ ಸೀಳಿ, ದಂತ, ರಾಮನು ತಾನು । ಇಬ್ಬರು ಹೊತ್ತು ರಕ್ತಾಂಕಿತರಾಗುತ ॥ ೩ ॥ ಕಂಡರು ಚಾಣೂರ ಮುಷ್ಟಿಕಮಲ್ಲಿದು । ಭಂಡೆಲೆ ನಮಗೇನು ಗತಿ ಎನ್ನುತಾ ॥ ಮಂಡಲದೊಳು ಮಾರಿದವರೆಂಬ ಹಮ್ಮಾಗೆ । ಪುಂಡರಿಕಾಕ್ಷನ ಎದುರಿಗೆ ನಿಂತರೂ ॥ ೪ ॥ ಬಲ್ಲಷ್ಟು ಯುದ್ಧವ

ಬಡದಾಡಕೊಳಲೆಂದು । ಕಲ್ಲಂತೆ ನಿಂತನು ನೋಯದಲೆ ॥ ಬಲ್ಲಿದಕ್ಷಣ ಮಾತ್ರಕಿಬ್ಬರ ಕೊಂದ್ಯಮು । ನಲ್ಲಿಗೆ ಕಳುಹಿದ ದುರ್ಜೀವಿಗಳನು ॥ ೫ ॥ ಆರಾರಿಗೆಂದಿಗೊಳಗಾಗ ಬೇಡೆಂದು ದ್ವಾರದೊಳಿಟ್ಟದ್ದ ಶಿವನ ಬಿಲ್ಲೂ ॥ ಆರಾಧಿಸುತಲಿರೆ ಕಂಡು ಲೀಲೆಯಲಿಂದ । ಚೂರು ಚೂರು ಮಾಡಿ ನಡೆತರುತಿದ್ದನು ॥ ೬ ॥ ಗಂಧವ ಹಚ್ಚಿ ಕುಬುಜೆ ತಿದ್ದಲಾಕ್ಷಣ । ತಂದುಕೊಟ್ಟರು ಮಾಲೆ ಕನ್ನಡಿಯಾ ॥ ಛಂದಾದಿ ವಸ್ತ್ರಗಳನ್ನು ಹೊದ್ದಿಸುವರು । ಮುಂದೆಲ್ಲ ನಮೊನಮೊ ಸ್ವಾಮಿ ಎಂಬುವರೂ ॥ ೭ ॥ ಚಂಡಂತೆ ಕುಣಿಕುಣಿದಾಡುತ ಊರೊಳು । ದಿಂಡಿಕ್ಕಿ ಹುಡುಕುತ ಬಹು ಖಳರಾ ॥ ಚಂಡಿಕಿಗಳ ಹಿಡಿಧಿಡಿದು ಸರ್ವರ ಪ್ರಾಣ । ಕೊಂಡು ಹಾರುತ ಪೋಗಿ ಮಾವನ ಮನಿ ಪೊಕ್ಕ ॥ ೮ ॥ ಕೆಟ್ಟೆ ಕೆಟ್ಟೆ ಎಂದು ಮಂಚಿಕಿ ಏರಾಲು । ಬಿಟ್ಟೆನೇ ನಿನ್ನಾಡಗಿದರೆನುತಾ ॥ ಮುಷ್ಟಿಲಿ ಗುದ್ದಿ ಕಂಸನ ಕೊಂದು ಪ್ರಾಣೇಶಾ । ವಿಠ್ಠಲ ದೇವಕಿಯರ ಬಂದಿ ಬಿಡಿಸೀದ ॥ ೯ ॥

---

(೨೩). ಶ್ರೀ ದೇವರ ವಿವಾಹಮಹೋತ್ಸವ ಪದಗಳು.

೧೬೨. ಪದ, ರಾಗ–ಕಾಂಬೋಧಿ (ಝಂಪೆತಾಳ).

ಏನು ನೋಡಿತ್ತ ನೀ ವರಕೆ ಮಗಳಾ ॥ ಹೀನವಳಿತೆನ್ನದಲೆ ತ್ವರದಿ ಜಲನಿಧಿಯೂ ॥ ಪಲ್ಲ ॥ ಕಪ್ಪು ರೂಪವು ಇವನ ನೆಲಿ ಒಬ್ಬರರಿಯರೂ । ಸರ್ವಶಯುನನು ತಿರಿದುಕೊಂಡು ತಿಂಬಾ ॥ ಮುಪ್ಪಿನವ ಇವ ಹುಟ್ಟಿದದುನಾರು ಬಲ್ಲವರು । ತಪ್ಪಿಕೊಟ್ಟನೆ ಎಲ್ಲರನು ಜರಿದು ಹೀಂಗೇ ॥ ೧ ॥ ಕದ್ದು ಪೊಟ್ಟೆಯ ಪೊರವ । ಯಂಜಲೆನ್ನದೆ ತಿಂಬ । ಹದ್ದನೇರುವ ಅಡವಿಯೊಳು ಚರಿಸುವಾ ॥ ಬುದ್ಧಿಹೀನರ ತೆರದಿ ಹಡದವಳ ಶಿರ ಕಡಿದ । ಸಧ್ಯ ವಸನವ ಕಳದು ಬತ್ತಲಿರುವವನಗೇ ॥ ೨ ॥ ಹೇಸಿಕಿಲ್ಲದೆ ಕರಳ ಮಾಲಿಕಿಯ ಹಾಕಿಹನು । ದೋಷ ಕಂಜನು ಜಾರತನವ ಮಾಳ್ಪಾ ॥ ದಾಸನಂದದಿ ಬಲಿಯ ಮನಿಯ ಬಾಗಿಲ ಕಾಯ್ದು । ಆ ಸವ್ಯಸಾಚಿ ತೇರಿಗೆ ಸೂತನಾದವಗೆ ॥ ೩ ॥ ಹೆಣ್ಣುಗಳ ಅಂಬರವ ಕೊಂಡು ಮರನೇರುವನು । ತನ್ನ ಮಕ್ಕಳ ತಾನೆ ಹತಗೈಸುವಾ ॥ ಮುಂಣನೂ

ಬೆಂಕಿಯನು ತಿಂಬ ವಾವಿಯನರಿಯ, । ತನ್ನ ಪುತ್ರರಿಗೆ, ತನ್ನಯ ಮಕ್ಕಳಿತ್ತ ವಗೆ ॥ ೪ ॥ ಪ್ರಾಣೇಶವಿಠಲನಲ್ಲಿಹವಿಂಥ ಸುಗುಣಗಳು । ತಾನೊಂದು ಪೂರ್ತಿ ತಿಳಿಯನು ಸಮುದ್ರಾ ॥ ಶ್ರೀ ನಾರಿಯನು ಕೊಟ್ಟ ಅವನ ಬುದ್ಧಿಯೊ ಅಥವ । ಏನು ವ್ರತ ಸೇವಿಸಿದ್ದಳೊ ಕಮಲಮಂದಿರಿಯು ॥ ೫ ॥ ಶ್ರೀ ಮಧ್ವೇಶಾರ್ಪಣ ಮಸ್ತು ॥

೧೬೩. ಪದ, ರಾಗ--ಕಾಂಬೋಧಿ (ಏಕತಾಳ).

ವರುಣಗೂ ನಾರಾಯಣಗು ನೆಂಟತನ ಮಾಡುವದಕೆ । ಸರಿಯೆ ಸಂದೇಹವೇನು ಸಮ್ಮಿ್ಮಸಿ ನೋಡೀ ॥ ಪಲ್ಲ ॥ ಹೆಂಡಾರು ಬಹು ಮಂದಿ ಜಾರಾ ಪುತ್ರನು ಒಬ್ಬ ॥ ಪಂಡೀತ ಮಗನೊಬ್ಬ ಸಮನೆಲ್ಲಿ ನೋಡಿ ॥ ೧ ॥ ವಂಶಾ ವಂದೆ ಇಬ್ಬರದು ಛಲದಿಂದ ಕೊಲ್ಲುವಂಥಾ ॥ ಕೂಸು ಪಾಲಿಸಿದಾರು ಸಮ ನೆಲ್ಲಿ ನೋಡಿ ॥ ೨ ॥ ಸ್ಥೂಲಾವಿಗ್ರಹದವರು ಜಡಚೇತನಗಳಿಗೆ ॥ ಆಲಯ ವಾಗಿಹರು ಸಮನೆಲ್ಲಿ ನೋಡಿ ॥ ೩ ॥ ಕನಕಾಭೂಮಿ ವಜ್ರದಾಹಾರಾ ಒಬ್ಬಾ ಗೊಬ್ಬಾಗೆ ॥ ವನಮಾಲಿ ವೈಜಯಂತಿ ಸಮನಲ್ಲಿ ನೋಡಿ ॥ ೪ ॥ ತುಳಿಸೀ ಕೊಂಡೂ, ಕೋಪಿಸದಲೆವೇ ಹಿಗ್ಗಿದಾರು ॥ ಕಲುಷಾ ವಿದೂರ ರೂಪ ಸಮಂ ॥ ೫ ॥ ದ್ವಾರಕ ಪಟ್ಟಣವ ಪ್ರೀತಿಂದ ಪಾಲೀಸೀ ॥ ಹಾರಾವ ಮಾಡಿದಾರು ಸಮಂ ॥ ೬ ॥ ವೃದ್ಧಿಹ್ರಾಸಗಳಿಲ್ಲಾ ಅನ್ನಾದಾಪೇಕ್ಷವಿಲ್ಲ ॥ ಸಿದ್ರಾಶೂನ್ಯ ರಾಗಿಹರು ಸಮಂ ॥ ೭ ॥ ಸರಸೀಜಾ ರೂಪ ಉಳ್ಳವರು ಪೂರ್ತಿ ಮಾಡಿ ದಾರು ॥ ಸುರರಾ ಮನೊಭಿಷ್ಟಿಯಾ ಸಮನಲ್ಲಿ ನೋಡಿ ॥ ೮ ॥ ವಿಧಿಯಿಂದ ಜನಿಸಿದಾರು ಜನರೀಗಸಂಹ್ಯವಾಗಿ ॥ ವದರುವರು ಇದರಿಂದ ಸಮನಲ್ಲಿ ನೋಡಿ ॥ ೯ ॥ ನೂತನ ಯಜ್ಞೋಪವಿತಾವ ಧರಿಸುವರು ಪ್ರ ॥ ಖ್ಯಾತಿ ವಸ್ತು ಕೊಟ್ಟಾರು ಸಮನೆಲ್ಲಿ ನೋಡಿ ॥ ೧೦ ॥ ದಾರಿ ತೋರಿದಾರು ವಾನರಾಗಳಿಗೆ ಗುಂಜಿ ॥ ಹಾರಾಯೀಸೂವರಿದು ಸಮನೆಲ್ಲಿ ನೋಡಿ ॥ ೧೧ ॥ ವಾಸಾವಿ ವರ್ಜಿತಾರು ದ್ವೇಷಿಗಳ ಶರೀರ ॥ ನಾಶಾಗೈಸಿದರಿದು ಸಮವೆಲ್ಲಿ ನೋಡಿ ॥ ೧೨ ॥ ಶೋಧಿಸೀ ನೋಡಿದಾರೆ ಕರ್ದಾಮ ಜಾಲಯಳ ॥ ಭ್ಯೋದಯಕ್ಕೆ ಕಾರಣರು ಸಮವೆಲ್ಲಿ ನೋಡಿ ॥ ೧೩ ॥ ಧರಿಗಾನಂದಾವಿತ್ತಾರಾಲಂಕಾರವಾಗಿ ಖಳರಾ ॥ ತರಿದು ಭಾರವ ಕಳದು, ಸಮವೆಲ್ಲಿ ನೋಡಿ ॥ ೧೪ ॥ ಶ್ರೀನಿವಾಸಾಗೆ

ಮಾವನೀತಾನೀತಾಗುಹಾಗೆ ॥ ಪ್ರಾಣೇಶವಿಠ್ಠಲನು ಸಮವೆಲ್ಲಿ ನೋಡಿ ॥ ೧೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೬೪. ಪದ, ರಾಗ–ಕಾಂಬೋಧಿ (ಝಂಪೆತಾಳ).

ಜಲಧಿ ತಕ್ಕದೊ ನಿನ್ನಳಿಯಗೂ ನಿನಗೂ । ಹಲವು ಬಗೆಯಿಂದಲಿ ಪರಿಕ್ಷಿಯನು ಮಾಡಿದರೆ ॥ ಜಲಧಿ ತಕ್ಕದೊ ॥ ಪಲ್ಲ ॥ ಮೊದಲೆ ತಿಳದಷ್ಟು ನಿನ್ನ ಮಹತ್ಮಿ ವರ್ಣಿಸುವೆ । ತುದಿಗಂಡು ಬಲ್ಲಿನೇ ಅಧಮ ನಾನೂ ॥ ಎದುರಿಗಂಬುವದಾಡಿಕೊಂಡಬಗೆ ಬ್ಯಾರೆಲ್ಲೀ ಮುದದಿಂದ ದಯಮಾಡಿ ಕೇಳೊ ರತ್ನಾಕರನೇ ॥ ೧ ॥ ನಿನ್ನಿಂದ ಹುಟ್ಟಹದು, ವಿಷವು, ಗುರುವಿನ ಪತ್ನಿ । ಯನ್ನು ಸ್ವೀಕರಿಸಿದನು ನಿನ್ನ ಮಗನೂ ॥ ಘನ್ನತರಮಕರಾದಿಗಳು ನಿನ್ನ ಪರಿವಾರ । ಇನ್ನೆಷ್ಟು ಪೇಳಲಿ ಚರಿತ್ರ ಪಾರಾವಾರ ॥ ೨ ॥ ನಿನ ಒಡಲಿಗೆಷ್ಟಾದ ರನ್ನ ಸಾಕನಿನದೂ । ದಣಿದು ಬಂದವರಿಗಾಶ್ರಯವು ಕಾಣೇ ॥ ಉಣಲಿಕ್ಕೆ ಅನ್ನಂಬದೆಂಟನ ರಸದಂತ । ಘನಖ್ಯಾತಿ ದೂರದಲಿ ಬಳಿಗೆ ಬರಲಿಂತಿಹದು ॥ ೩ ॥ ಪ್ರೀತಿಯಿಂ ಬಂದವರು, ಗ್ರಹಣ ವೈಧೃತಿ ವೇತೀ । ಪಾತದಲಿ ನಿನ ದರುಶನಾಗಬೇಕೂ ॥ ಭೂತ ಬಡದವರಂತ ನಿನ್ನ ಕಲ್ಲುಗಳಿಂದ । ಘಾತಿಸಲಿಬೇಕು ನೋಡಲ್ಕೆ ಬಹು ಸೋಜಿಗವು ॥ ೪ ॥ ತುಳಿದದಕೆ ಹಿಗ್ಗಿದಿಯೋ ಬಹುಮಾನಿ ನೀನೆಲವೊ । ಲಲನಿ ಹಡದೇಳು ಶಿಶುಗಳ ಕೊಂದಳೂ ॥ ಬಲುಭಂಟ ಹಿರಿಯ ಮಗಗರಸುತನ ಕೊಡಲಿಲ್ಲ । ಇಳಿಯೊಳಗೆ ನೀ ಮಾಡಿದನ್ಯಾಯ ಕೆಣಿಯುಂಟೆ ॥ ೫ ॥ ಸತಿಸಂಗ ಬಿಡಲೊಲ್ಲಿ ಪರ್ವಕಾಲಗಳಲ್ಲಿ । ಸುತಗೆ ಕಡಿಮೆದರಿಂದೆ ಆದಿ ಹ್ಯಾಗೊ ॥ ಪತಿವ್ರತಾಮಗಳಾದಳೊಂದೆ ಸುಗುಣದರಿಂದೆ । ಕ್ಷಿತಿಯೊಳನವರತ ಪೂಜಿಸಿಕೊಂಬಿ ಜನರಿಂದ ॥ ೬ ॥ ಜಾಮಾತನಿಗೆ ಇಹವು ಮುಖವು ಹತ್ತೊಂಭತ್ತು । ಆ ಮಧ್ಯ ಗಜಲವನದಂತೆ ವಂದೂ ॥ ಭೂಮಿಯೊಳಗಾಶ್ಚರ್ಯ, ತಾನೆ ಮಕ್ಕಳ ಪಡವ । ಈ ಮಗಳು ಬಹು ಸುಖವ ಬಡುವಳಿವನಿಂದಲ್ಲಿ ॥ ೭ ॥ ಬೆರಳುಚೀಪುವನೋಡು ಸುಳ್ಳಲ್ಲ ದಾನ । ಪುರುಷ ಬದುಕುವ ಚೋರತನದಿ ಜಾರಾ ॥ ತರುಣಿಯಾಗಿದ್ದ ನಿನ ಬಳಿಯಲ್ಲಿ ನೀ ಬಲ್ಲಿ । ತುರುಗಾಟವ ಕೊಡಲಿ ಕೊಂಡಡವಿಯೊಳಗಿರುವ ॥ ೮ ॥ ಗುರುಸ್ವಾಮಿ

ಪಿತಬ್ರಹ್ಮ ವಂಶದ್ರೋಹಿಗಳವನ । ಪರಿವಾರ ಮಕ್ಕಳಿಗೆ ಮಾವನಾದಾ ॥ ಉರುಗಶಯನಂಡಜಾಧಿಪವಹನನೀಲಾಂಗ । ಅರಿತ ನೃಪ ಋಷಿಗಳೊಳ ಗೊಬ್ಬರಿಗ್ಯು ಮಗನಲ್ಲ ॥ ೯ ॥ ಕುಲಸೂತ್ರವಿಲ್ಲ ವಂದೇ ರೂಪನಲ್ಲ ನಿ । ಶ್ಚಲ ನಲ್ಲವತಿ ಕರಿಣ ವಕ್ರವದನಾ ॥ ಬಲುಕೋಪಿ ತಿರದುಂಬ ಸ್ತ್ರೀಯರಿಬ್ಬರ ಕೊಂದ । ಅಲವ ಜಾರನು, ಬತ್ತಲಿರುವ, ಕಲಹಕೆ ಪ್ರೀಯ ॥ ೧೦ ॥ ಕೊ ಟ್ಟೆಲ್ಲ ಅವನಿಗೀ ಕನ್ನಿಕಿಯ ಸವತಿಯರು । ಎಷ್ಟೋ ಮಲಸುತರಿಹರದಕೆ ದಶ ಮಡೀ ॥ ಸಿಟ್ಟಾಗ ಬ್ಯಾಡವನ ವಾರ್ತೆ ಕೇಳಲು ಜನರು । ಬಿಟ್ಟು ಸಂಸಾರ ವೆಂದಿಂದಗೊಲ್ಲದಿಹರೂ ॥ ೧೧ ॥ ನಿನ್ನ ಮಗಳವಗಿತ್ತವನ ಮಗಳ ಮದಿ ವ್ಯಾದಿ । ಕನ್ಯವಿಕ್ರಯ ಪರಸ್ಪರವೆನಿಸಿತೂ ॥ ಇನ್ನೇಸೊ ನಿಮ್ಮನಿಮ್ಮಲ್ಲಿದ್ದ ನಡತಿಗಳು । ಅನ್ಯರಿದು ಕೇಳಿ ಭಜಿಸರೂ ಶುದ್ಧ ಭಕುತಿಯಲೀ ॥ ೧೨ ॥ ಏನಾದರೇನು ಶ್ರೀ ಪ್ರಾಣೇಶವಿಠಲನಿಗೆ । ನೀನೆ ಗತಿ ನಿರ್ದೋಷ ವಸ್ತುವೆಂದೂ ॥ ಶ್ರೀನಳಿನ ಭವಮುಖರು ನಿತ್ಯ ವಂದಿಸುತಿಹರೊ । ನೀನವನ ಮಾವನಾದಿನ್ನು ಪೂಜಿತನಲ್ಲೆ ॥ ೧೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೬೫. ಸುವ್ವಿಪದ. ಪದ, ರಾಗ—ಕಾಂಬೋಧಿ (ಝಂಪೆತಾಳ).

(ಶ್ರೀ ದೇವರ ಮದುವೆಯ ಒರಳು ಕಲ್ಲು ಪೂಜೆಯ ಪದ.)

ಜಯಹನುಮಂತ ಭೀಮ । ಜಯಸರ್ವಜ್ಞಾಚಾರ್ಯ । ಜಯಭಾರ ತೀಶಾನಿರ್ದೋಷಾ ॥ ನಿರ್ದೋಷ ಶ್ರೀವ್ಯಾಸ । ಲಯನೆ ನಿನ್ನಂಘ್ರೀಗೆರ ಗೂವೇ ॥ ಸುವ್ವಿಸುವ್ವೀಸುವ್ವಾಲಾಲೆ ॥ ಪಲ್ಲ ॥ ಮುದದಿಂದಾ ಶ್ರೀಹರಿಯಾ । ಮದಿವಿಹಮ್ಮಿಕೊಂಡು ! ಪದುಮಾಕ್ಷಿಯರೆಲ್ಲಾ । ವರಳೀಗೇ ॥ ವರಳಿಗೆಕ್ಕಿ ಹಾಕಿ । ಪದ ಪಾಡಿದದನೂ ಬಣ್ಣೀಪೇ ॥ ೧ ॥ ದೇವಕಿ ಯಶೋದೆ ಶ್ರೀ । ದೇವಭೂತೀ ಕೌಸಲ್ಯ ಸ । ತ್ಯವತಿ ನೀವೆಂಥ ಧನ್ಯರೇ ॥ ಧನ್ಯಾರೆ ಪಡದು ಶ್ರೀ । ದೇವಶಗೆ ಮೊಲಿಯಾ ಕೊಡುವೀರಿ ॥ ೨ ॥ ಅಕ್ಷರಳೆ ಪರಮಾತ್ಮನ । ವಕ್ಷಸ್ಥಳ ಮಂದಿರೆ । ಲಕ್ಷ್ಮಿಮಿದೇವಿ ಜಯಶಿಲೇ ॥ ಜಯತೀಲೆ ಎಮ್ಮನೂ ಪೇಕ್ಷಿಸದೆ ಕಾಯೇ ವರವೀಯೇ ॥ ೩ ॥ ಅಚ್ಛಿನ್ನಭಕ್ತರು ನೀವಚ್ಯುತಗೆ

ಮುಕ್ತಿಯಾ । ತುಚ್ಛವೆಂಬುವಿರೆ ಸರಸ್ವತೀ ॥ ಸರಸ್ವತಿ ಭಾರತಿ । ನಿಶ್ಶೈಸಿ ವರಳೀಗೊದಗೀರೆ ॥ ೪ ॥ ಅಕ್ಕಿ ಥಳಿಸಲಿಬಾರೆ । ಅಕ್ಕ ಸೌವರಣಿ ಶ್ರೀ । ರಕ್ಕಸಾವೈರೀ ಮದುವೀಗೇ ॥ ಮದುವೀಗೆ ವಾರುಣಿ । ತಕ್ಕೊಳ್ಳಿ ಕೈಲಿ ಒನಕೀಯಾ ॥ ೫ ॥ ಕೂಸಾಗಿ ಇದ್ದಾಗ ಆ ಶಿವನೆ ಬರಲೆಂದು । ಪೋಷಿಸಿದೆ ದೇಹಾತಪಸೀದೆ ॥ ತಪಸೀದೆ ಪಾರ್ವತಿ । ನೀ ಶೀಘ್ರ ಬಾರೇ ಒರಳೀಗೇ ॥ ೬ ॥ ಇಂದ್ರಕಾಮನಸತಿಯಾರಿಂದು ಬನ್ನಿರಿ ನಮ್ಮ । ಮಂದರೋದ್ಧರನಾ ಮದಿವೀಗೇ ॥ ಮದುವೀಗೆ ವರಳಕ್ಕಿ । ಛಂದದಿಂದಲಿ ಪಾಡಿ ಥಳಿಸೀರೇ ॥ ೭ ॥ ಶತರೂಪಿನೀ ಪ್ರೀಯು ವೃತ ಮೊದಲಾದವರನ್ನ । ಪತಿಯಿಂದ ಪಡದೂ ಅವನೀಯಾ ॥ ಅವನೀಯು ಪಾಲಿಸಿದ । ಪತಿವೃತೀ ಒನಕೀ ಕೈಕೊಳ್ಳೀ ॥ ೮ ॥ ದೇವರಂಗನಿಯರಿಗೆ ಸಾವಧಾನದಿ ಜ್ಞಾನ । ನೀವರದೆ ಎಂಥಾ ಗುಣವಂತೇ ॥ ಗುಣವಂತೆ ಕರುಣಾಳೆ । ಪ್ರಾವಹೀ ಪಿಡಿಯೋ ಒನಕೀಯಾ ॥ ೯ ॥ ಅರುವತ್ತು ಮಕ್ಕಳನಾ ಹರುಷದಿಂದಲಿ ಪಡದು । ವರನೋಡಿ ಕೊಟ್ಟೀ ಪ್ರಸೂತೀ ॥ ಪ್ರಸೂತಿ ನೀನು ಹಂದರದಮನಿಯೊಳೂ ಇರಬೇಕೂ ॥ ೧೦ ॥ ಗಂಗಾದೇವಿಯಂಥ ಇಂಗಿತಜ್ಞಳೆ ನೀನು । ಹಿಂಗಿಸಿದೆ ವಸುಗಳಪವಾದಾ ॥ ಅಪವಾದತ್ರಯು ಜಗ । ನ್ಮಂಗಳೇ ಪಿಡಿಯೋ ಒನಕೀಯಾ ॥ ೧೧ ॥ ಅನಿರುದ್ಧಾಕ್ಷಿನಿ ಚಂದ್ರ । ಇನಕಾಲಾಸುರಗುರು । ವನತಿಯರೆ ಉಳಿದಾನವಕೋಟೀ ॥ ನವಕೋಟಿ ಸುರರ ಮಾನಿನಿಯೋರು ಬಂದೂ ಥಳಿಸೀರೇ ॥ ೧೨ ॥ ಅನ್ಯರನ ಪಾಡಿದರೆ ಬನ್ನಬಡಿಸುವ ಯಮನು । ವನ್ನಜಾಂಬಕನಾಶುಭನಾವಾ ॥ ಶುಭನಾಮ ಪಾಡಿದರೆ । ಧನ್ಯರಿವರೆಂದೂ ಮೊಗಳೂವಾ ॥ ೧೩ ॥ ಈ ವ್ಯಾಳ್ಯದಲಿ ನೋಡಿ । ನಾವು ಥಳಿಸೀದಕ್ಕಿ ಪಾವನ್ನವಾಗೀ ತ್ವರದಿಂದಾ ॥ ತ್ವರದಿಂದ ನಮ್ಮ ಶ್ರೀ । ಗೋವಿಂದನಶಾಸೀಗೊದಗಲೀ ॥ ೧೪ ॥ ಹೆಚ್ಚಿನಂಬರ ಉಟ್ಟು ಅಚ್ಚಿನಕುಪ್ಪಸ ತೊಟ್ಟು । ಪಚ್ಚಾದಿರತ್ನಾಭರಣಿಟ್ಟೂ ॥ ಇಟ್ಟು ಸುಸ್ವರಗೈದು । ಅಚ್ಯುತನ ಪಾಡೋರಿನಿತೆಂದೂ ॥ ೧೫ ॥ ಲಕ್ಷ್ಮೀಪತಿಯಾಗಿ ಬಹು । ಮಕ್ಕಳನ ಪಡದಿದ್ದಿ । ಇಕ್ಕೊಳ್ಳಿ ಈಗಾ ಮದುವ್ಯಾಕೇ ॥ ಯಾಕೊನತತಾನಂದ । ಉಕ್ಕೀಸುವದಕೆ ರಚಿಸೀದ್ಯಾ ॥ ೧೬ ॥ ಎಂದಾಗೆದೊ ಶ್ರೀ ಮುಕುಂದ ನಿನ್ನಾ ಮದುವಿ । ಹಿಂದಿನಾ ಬ್ರಹ್ಮರರಿತಿಲ್ಲಾ ॥ ರರಿತಿಲ್ಲ ಅವಿಯೋಗಿ । ಎಂದು

ಕರಸುವಳು ಶೃತಿಯೋಳೂ ॥ ೧೭ ॥ ಶೀಲಿಸುಂದರಿ ನಿನ್ನ ಆಳಾಗಿ ಇರುವಳು । ಶ್ರೀ ಲಕ್ಷ್ಮಿ ನೀನು ಸ್ವರಮಣಾ ॥ ಸ್ವರಮಣನಾಗೆವಳ । ವ್ಯಾಲೆ ಮದುವ್ಯಾಕೊ ಭಗವಂತಾ ॥ ೧೮ ॥ ಆರು ಮಹಿಷಿಯರು ಹದಿ । ನಾರು ಸಾವಿರ ವ್ಯಾಲೆ। ನೂರು ನಾರಿಯರೂ ಬಹುಕಾಲಾ ॥ ಬಹುಕಾಲ ಬಯಸಿದ್ದು ಪೂರೈಸಿ ಕೊಟ್ಟ್ಯೋದಯಸಿಂಧೂ ॥ ೧೯ ॥ ವೇಧನೆಂಧಾಪುತ್ರ ವೇದನಂತಾಬಲ್ಲ । ವೋದುವಾನಿರುತಾನಿನ ಪೌತ್ರಾ ॥ ಪೌತ್ರ ನಿಮ್ಮಣ್ಣ । ಸ್ವರ್ಗಾಧಿಪತಿ ಎಂದೂ ಕರಸೂವ ॥ ೨೦ ॥ ಜಗವ ಪಾವನ ಮಾಳ್ಪ ಮಗಳೆಂಥ ಗುಣವಂತಿ । ಅಗಣಿತ ಜ್ಞಾನವಂತಾರೋ ॥ ಜ್ಞಾನನಂತರೊ ನಿನ್ನ । ಯುಗಳ ಸೊಸಿಯರೂ ವರ ಮಾತ್ಮಾ ॥ ೨೧ ॥ ಈ ವಸುಧಿಯೊಳಗೆಲ್ಲಾ । ಆವ ಶುಭಕಾರ್ಯಕ್ಕೂ । ದೇವೇಶ ನಿನ್ನಾ ಸ್ಮರಿಸೋರೋ ॥ ಸ್ಮರಿಸುವರೊ ನಿನ ಮದುವೀ । ಗಾಂವೀಗ ನಿನ್ನೇ ನೆನವೇವೋ ॥ ೨೨ ॥ ಅಕ್ಲೇಶಾ ಅಸಮುಂಧಾ ಶುಕ್ಲಶೋಣಿತದೂರಾ । ಹಕ್ಲಾ ಸುರಾರೀ ದುರಿತಾರೀ ॥ ದುರಿತಾರಿ ಅಸಮನಿ । ನ್ನೊಕ್ಲಾದ ವರಗಲೀ । ಇರಲಾರೀ ॥ ೨೩ ॥ ವೇದಪೆಂಬದು ಬಿಟ್ಟು । ಭೂದಿವಿಜಾರಮರಾರು । ಮಾಧವನ ಗುಣವಾ ಪೊಗಳೂವಾ ॥ ಪೊಗಳುವಾ ಸುಸ್ವರವಾ । ಶೋಧಿಸೀ ಕೆಳೂತಿರುವಾರೂ ॥ ೨೪ ॥ ಕಾಮಾದಿಗಳ ಬಿಟ್ಟು ಸೋಮವರ ರಾಣಿಯರು । ಸ್ವಾಮಿಯ ವಿವಹಾನಾಳೆಂದೂ ॥ ನಾಳೆಂದರಿಷಿಣದಕ್ಕೀ । ಹೇಮಾಧರಿವಾಣಾಕ್ಕಿರಿಸೋರೂ ॥ ೨೫ ॥ ಜಯು ಮತ್ಸ್ಯಕೂರ್ಮಾಕಿಟ, ಜಯನರಸಿಂಹಾಖುಷಿಜ । ಜಯು ರಾಮಕೃಷ್ಣಾ ಶ್ರೀ ಬುದ್ಧಾ । ಶ್ರೀ ಬುದ್ಧ ಕಲ್ಕಿ ಜಯು । ಜಯು ದತ್ತಾತ್ರಯಾ ಶುಭಕಾಯಾ ॥ ೨೬ ॥ ಆನಂದಾದಿಂದ ಸುರಮಾನಿನಿಯಾರಾಡೀದ । ಈ ನುಡಿಯಾ ಪಾಡೀದವರಿಗೇ ॥ ಅವರಿಗಿಹಪರದಲ್ಲಿ । ಪ್ರಾಣೇಶವಿಠಲಾ ಒಲಿವೋನೂ ॥ ೨೭ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೬೬. ಪದ, ರಾಗ–ಸಾರಂಗ (ಆದಿತಾಳ).

(ದೇವರನ್ನು ಹಾಸಿಗೆ ಕರದ ಪದಗಳು.)

ವೇದ ಉದ್ಧರಿಸೀದಾ ಮತ್ಸ್ಯಾವತಾರನೇ । ಆದಿತ್ಯಾರಿಗೊಲಿದಮೃತ ನೀಡಿದನೇ ॥ ಮೇದಿನಿಯಾನುಪೊತ್ತ ವರಹನತಾರನೆ । ಆ ದೈತ್ಯನಳಿದು

ಪ್ರಲ್ಹಾದಗೊಲಿದನೇ । ಭೂದೇವಾರೂಪೀ ಹಾಸಿಗೇಳೂ ॥ ೧ ॥ ಭೃಗು ಕುಲೋದ್ಭವನೇ ಭೀಷ್ಮನ ಬೆಳಸಿದನೇ । ನಗಜರಮಣನ ಕಾರ್ಮುಕ ಮುರಿದವನೇ ॥ ಹಗೆಯುನಳಿದು ಪಾಂಚಜನ್ಯ ಘೌಳಿಸಿದನೆ । ಇಗಡದೈತ್ಯರ ಬುದ್ಧಿ ಭೇದವಮಾಡಿದನೇ ॥ ಅಗಣಿತ ಮುಹಿಮಾ ಹಾಸಿಗೇಳೂ ॥ ೨ ॥ ಕುದರೀ ಯೇರಿ ಕುಜನರಾಕುಲತರಿದವನೇ । ಬುಧರಗೋಸುಗ ಹತ್ತಾವತಾರವಾದವನೇ ॥ ಸುದರೂಶನ ಶಂಖಗದಜಲಜಧರನೇ । ವಿಧಿಪಿತ ಶ್ರೀರಮಣ ಪ್ರಾಣೇಶವಿಠ್ಠಲನೆ । ಸುಧಿಗಡಲಾಲಯನೆ ಹಾಸೀಗೇಳು ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೬೭. ಪದ, ರಾಗ–ಕಲ್ಯಾಣಿ (ಆದಿತಾಳ).

ವಾಸುಕಿ ಶಯನನೆ ವೆಂಕಟಗಿರಿ । ವಾಸನೆ ಯಜ್ಞಾದ್ಯವತಾರನೆ । ಮೋಶಾನರಸಿಂಹಾ ಹಾಸೀಗೇಳೂ ॥ ಪಲ್ಲ ॥ ಬೊಮ್ಮಾಶಂಕರ ಮುಖವಂದಿತ । ಸಮ್ಮಾರವಾಹನ ಗರುಡಧ್ವಜ । ಅಮ್ಮರೇಶಾನುಜ ಶ್ರೀ ಉಪೇಂದ್ರಾ ॥ ಉಪೇಂದ್ರ ದಾಮೋದರ ಹರಿ । ತಮ್ಮನಾತಮ್ಮ ಹಾಸೀಗೇಳೂ ॥ ೧ ॥ ವಾಮನ ನಾರಾಯಣ ಅಚ್ಯುತ । ತಾಮಸಗುಣ ಜನಸಂಹಾರಕ । ಶ್ಯಾಮಾಂಗಕೋಟಿ ರವಿತೇಜಾ ॥ ರವಿತೇಜಾ ತ್ರೈಲೋಕದ ಗುರು । ಹೇಮಾಂಗದ ವರದಾ ॥ ೨ ॥ ಜಲಜಾಕ್ಷನ ಕೌಂಸ್ತುಭಶೋಭಿತ । ಜಲನಿಧಿಶಯನನೆ ನರಕಾಂತಕಾ । ಬಲಿಬಂಧಿಸೀದನ ವರತತ್ವಾ ॥ ವರತತ್ವ ರವಿದರ ಗದಧರ । ಫಲುಗುಣನಾ ಸಖನೇ ಹಾಸೀಗೇಳೂ ॥ ೩ ॥ ಕನಕಾಂಬಕ ಕಶ್ಯಪುರಿಪುಹರಿ । ಧನವತಿಮಿತ್ರನ ಭಯಬಿಡಿಸಿದ । ಇನಪುತ್ರಗೊಲಿದಾರಘುವತೀ ॥ ರಘುವತಿ ಭಕ್ತಸುರತರೂ । ಮುನಿಜಾಪಿತನೆ ಹಾಸಿಗೇಳೂ ॥ ೪ ॥ ಶತಯಾಗನ ಗರ್ವವಿಭಂಜನ । ಕ್ಷಿತಿವಂದಡ ಮಾಡಿದವನೇ । ಸುತನಲ್ಲ ಪಾಲು ಕುಡಿದಾನೆ ॥ ಕುಡಿದಾನೆ ರುಗ್ಮಿಣಿವಲ್ಲಭ । ಪತಿ ತಾಪಾವನ್ನಾ ಹಾಸೀಗೇಳೂ ॥ ೫ ॥ ಝುಗಝುಗಿಸುವ ಪೀತಾಂಬರ ದುಡಿ । ಗಿಗಳಿಂದಲಿ ಹೊನ್ನುಡಧಾರದಿ । ಮಿಗಿಲಾದ ವೈಜಯಂತೀ ವನಮಾಲೀ ॥ ವನಮಾಲಿ ಕೊರಲೊಳಗೊಪ್ಪುವ । ಜಗದೇಶ ಕೃಷ್ಣಾ ಹಾಸೀಗೇಳೂ ॥ ೬ ॥ ಗಂಗೆಯ ಚರಣದಿ ಪಡದಿಹ

ಬಹು । ಮಂಗಳಮೂರುತಿ ಶ್ರೀವಾಮನ ಜಂಗುಳಿಹೆಣ್ಣುಗಳಾ ಒಲಿಸೂತಾ ॥ ಒಲಿಸುತಾ ಚಿಂತಿಗಳೆಲ್ಲನು ಹಿಂಗಿಸುವಾ ದೇವಾ ಹಾಸೀಗೇಳೂ ॥ ೭ ॥ ಧ್ರುವದ್ರೌಪದಿಯುಸುರಜಪೋಷಕ । ಅವಿವೇಕ ದಶಮುಖವಿನಾಶಕಾ ॥ ಲವಣಾಸುರ ಕಂಸಾ ಮುರಾಧ್ವಂಸೀ ॥ ಮುರಧ್ವಂಸಿ ಐದೊಂದಬಲೆರಾ । ಧವ ವಾಸುದೇವಾ ಹಾಸೀಗೇಳೂ ॥ ೮ ॥ ಕೇಶವ ಸತ್ರಾಯಣ ಸುತ ಪ್ರಾ । ಣೇಶವಿಠ್ಠಲ ದಕ್ಷಿಣ ವಲ್ಲಭ । ದೋಷರಹಿತನೆ ಅನಿರುದ್ಧಾ ॥ ಅನಿರುದ್ಧಾ ಭಾಗವತರಘ । ನಾಶಾಪರಮಾತ್ಮಾ ಹಾಸೀಗೇಳೂ ॥ ೯ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೬೮. ಪದ, ರಾಗ–ಪೂರ್ವಿ (ಆದಿತಾಳ).

ಶೋಭಾನ ಪಾಂಡುರಂಗಗೆ । ಶೋಭನ ಶ್ರೀನಿವಾಸಗೆ ಶೋಭನ ಉಡುಪಿನಿಲಯಾಗೇ ॥ ಪಲ್ಲ ॥ ಸುಮನನರಾಳ್ದವನ ವರಜ ಬಾ । ಕಮಲೆ ಸದನ ಮುಖಕಂಜರವಿ ಬಾ । ವಿಮಲಗುಣಾರ್ಣವ । ನೀಲಜಲದನಿಗಾತ್ರಾ ಬಾ ॥ ವಾರಿಜನೇತ್ರಾ ಬಾ । ಮಂಗಳನ್ತೋತ್ರಾ ಬಾ । ವಹನ ವತತ್ರಾ ಬಾ । ನತಜನಮಿತ್ರಾ ಬಾ ಹಾಸೀಯಾ ಜಗುಲೀಗೇ ॥ ೧ ॥ ಅಷ್ಟ ನಾಮ ಒಪ್ಪುವನೇ ಬಾ । ದುಷ್ಟದಿತಿಸುತ ಮದಹರಣಾ ಬಾ । ಮುಷ್ಟಿಕ ಪ್ರಮುಖಹ ಗೋವರ್ಧನಧರ ಕೃಷ್ಣಾ ಬಾ ॥ ಹರಿಗತಕಷ್ಟಾ ಬಾ । ತ್ರಿಜಗಜ್ಜೇಷ್ಟಾ ಬಾ । ಅಕ್ರೂರಜೇಷ್ಟಾ ಬಾ । ನಿರುತವಿಶಿಷ್ಟಾ ಬಾ । ಹಾಸಿಗೆಯಾ ಜಗುಲೀಯಾ ॥ ೨ ॥ ಮಾತುಳರಿಪುವನ ಅನಳ ಬಾ । ಶ್ವೇತವಹನ ರಥನಾರಥಿ ಬಾ ॥ ಮಾತಿ ಶಿರ ಕಡಿದು, ಬಾಹುಜರೊರಸಿದನಾಥಾ ಬಾ॥ ಗೋಕುಲತ್ರಾತಾ ಬಾ । ಲೋಕೈಕ ದಾತಾ ಬಾ । ವಸುದೇವಜಾತಾ ಬಾ । ಸುಪ್ರಖ್ಯಾತಾ ಬಾ । ಹಾಸೀಯಾ ಜಗೂಲೀಗೆ ॥ ೩ ॥ ವಾಮನಕೇಶವ ಹಯಮುಖ ಬಾ । ಭೀಮಪಿನುತಸಿಃಹೀಮಾ ಬಾ । ಕಾಮಿನಿಯರ ಚೈಲಹರಣ, ಖುಷಿ, ರಣಭೀಮಾ ಬಾ ॥ ದಶರಥರಾಮಾ ಬಾ । ಬಾಣವಿರಾಮಾ ಬಾ । ಅಜಮುಖನಾಮಾ ಬಾ । ಕೃಷ್ಣಾಪ್ರೇಮಾ ಬಾ । ಹಾಸೀಜಗುಲೀಗೇ ॥ ೪ ॥ ಕಂದರ್ಪಜನಕ ನರಹರಿ ಬಾ । ಅಂದಮೃತವ ತಂದವನೇ ಬಾ । ಮಂದೇತರಮುದ ಘಟಜಪ್ರಮುಖ ಮುನಿ

ವಂದ್ಯಾ ಬಾ ॥ ಕಸ್ತುರಿಥಂದಾ ಬಾ । ದೇವಮುಕುಂದಾ ಬಾ । ದೇವಕಿಕಂದಾ ಬಾ । ಸದ್ಗುಣವೃಂದಾ ಬಾ । ಹಾಸೀಯಾ ಜಗುಲಿಗೇ ॥ ೫ ॥ ಕ್ಷಿತಿಧರಜಿನ ಧರಸಖನೇ ಬಾ । ಅತುಳಮಹಿಮನೆ ಅಜಿತನೇ ಬಾ । ಸತಿಗಮರಸದನದ ಕುಸುಮ ತಂದಚ್ಯುತನೇ ಬಾ ॥ ಮಾರುತಿಸುತನೆ ಬಾ । ಲೋಕವಿತತನೆ ಬಾ । ಪೂಜಿಗುಚಿತನೆ ಬಾ । ರಕ್ಷಣರತನೇ ಬಾ । ಹಾಸಿಯಾ ಜಗುಲೀಗೇ ॥ ೬ ॥ ಪ್ರಾಣೇಶವಿಠ್ಠಲರಾಯಾ ಬಾ । ವೀಣಾಪಾಣೀಜನಕನೆ ಬಾ । ಮಾಣದೆ ಭಕ್ತರ ಪೊರವುತಿಹನೆ ಸತ್ರಾಣಾ ಬಾ ॥ ಸತ್ಯಾಪ್ರಾಣಾ ಬಾ । ಶ್ರೀ ಪಾಠೀಣಾ ಬಾ । ನಿಜವಿಜ್ಞಾನಾ ಬಾ । ನಿತ್ಯಕಲ್ಯಾಣಾ ಬಾ । ಹಾಸಿಯಾ ಜಗುಲೀಗೆ ॥ ೭ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೬೯. ಪದ, ರಾಗ—ಪೂರ್ವಿ (ತ್ರಿಪುಡೆತಾಳ).

ಕಂಕಣ ಕಟ್ಟುವ ಪದ.

ಶೋಭಾನ ಕಾಮಜನಕನಿಗೆ । ಶೋಭನ ಶ್ರೀ ಮಹಾ ಲಕುಮಿಗೆ । ಶೋಭಾನವೆನ್ನೀ ಬುಧರೆಲ್ಲಾ ॥ ಪಲ್ಲ ॥ ಪಾಲಸಮುದ್ರವು ಹೆಣ್ಣಿನ ಮನೀ । ಮೇಲಾದ ದ್ವಾರಕಿ ಗಂಡಿನ ಮನಿ । ಮೂಲೋಕದೊಳಗಿಹ ನಿಬ್ಬಣದವ । ರೋಲಯ ಒದಗೀದಾರು ಶೋಭನೇ ॥ ೧ ॥ ಅಂಬರ ಛಪ್ಪರ ರವಿಚಂದ್ರರು । ಸಂಭ್ರಮತೋರಣಗಳು ಮದುವೀಗೆ । ಇಂಬಾದ ಮೇದಿನಿ ವರದಿಯ ಶ್ಯಾಲಿ । ಹೊಂಬಣ್ಣನ ಗಿರಿಜಗುಲೀ ॥ ೨ ॥ ಆ ಮಹಾ ಸುರರಂಗನಿಯರು ಬಹ । ಳಾ ಮುದದಲಿ । ಪ್ರಾಣೇಶವಿಠ್ಠಲಗೆ । ಶ್ರೀ ಮಾಯಾದೇವಿಗೆ । ಕಂಕಣ ನೇಮಿಸಿ ಕಟ್ಟಿದರೂ ॥ ಶೋಭನ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೭೦. ಪದ, ರಾಗ-ಶಂಕರಾಭರಣ (ಏಕತಾಳ).

ಶ್ರೀ ದೇವರ ಊಟಣೀ ಪದ

ಜಯತೂ ರುಗ್ಮಿಣಿಕಾಂತಾ । ಜಯತೂ ಕಂಸಕೃತಾಂತಾ । ಜಯ ಜಯತೂ ಧೀಮಂತಾ । ಜಯಸಿದ್ಧಿಂತಾ ॥ ಪಲ್ಲ ॥ ಖಳರಾಬಾಧಿಗೆ ಭೂಮಿ । ಲಲನೇ ಗೋರೂಪದಲಿ । ನಳಿನಾಪೀರನಕೂಡಿ ಬಿನ್ನೈಸಲು ಕೇಳಿ ॥ ೧ ॥ ತ್ರಿಗುಣಾ ವರ್ಜಿತವಾದಾ । ಯುಗವಂದೂಮಾತ್ಮಕಧಾ । ಮಗಳಲ್ಲಿದ್ದಾ

ಉತ್ಸಹ ತೋರುವೆ ಜಗತಿಯೊಳೆಂದೂ ॥ ೨ ॥ ವಾರಿಧಿಯಾ ಮಧ್ಯದಲೀ । ದ್ವಾರಕಿಯಾ ವಿರಚಿಸೀ ॥ ಕ್ರೂರಾ ದೈತ್ಯರಗೆಲಿದು ರುಗ್ಮಿಣಿಯಾ ತಂದೂ ॥ ೩ ॥ ನಿತ್ಯದಲಿ ಅವಿಯೋಗಿ । ಸತ್ಯಾವಾದರು ಶ್ರೀಶಾ ॥ ಮತ್ತೂ ಹಮ್ಮ ತಲೀವಿವಾಹ ಮನುಜಾರಂತೇ ॥ ೪ ॥ ಬ್ರಹ್ಮಾದಿ ನಿರ್ಜರರಾ । ಸುಮ್ಮ ನದಿ ಕರಿಸಾಲೂ ॥ ವಮ್ಮೇಲೆ ಬಂದರು ತಮ್ಮಯ ಸ್ತ್ರೀಯರ ಕೂಡೀ ॥ ೫ ॥ ನಿತ್ಯಾನಂದಗೆ ಮದುವೀ । ಮತ್ತೆಲ್ಲೀದೀಗವ್ಮಾ ॥ ವೊತ್ತಕೆ ಸಂತೋಷವ ಮಾಡಲು ರಚಿಸಿದನೀಗಾ ॥ ೬ ॥ ಆವಾವಾ ಕಾಲದಲೀ । ಆವಾ ಪುಣ್ಯದ ಫಲವೂ ॥ ಆವಲ್ಲಿಂದೊದಗಿತೊ ಇಂದಿಗೆ ಬಹು ಮುದವೆಂದೂ ॥ ೭ ॥ ಸರಸ್ವತಿ ಭಾರತಿ ಶಚಿಯೂ । ಗಿರಿಜೆ ವಾರುಣಿಯು ಸೌ ॥ ವರಣೀ ಗಂಗಾದಿಗಳೂ ಶುಭದಿನದಲ್ಲೀ ॥ ೮ ॥ ಗುರು ಆಜ್ಞಾದಲಿ ಕಲ್ಲೂ । ಒರಳೂ ಪೂಜೆಯು ಮಾಡೀ ॥ ಸ್ವರಗೈದು ಪಾಡಿದರೆಲ್ಲರು ಸುವ್ವೀ ಎಂದೂ ॥ ೯ ॥ ಮರುತಾ ದೇವರು ಹರಿಯಾ । ಪುರವಾ ಶ್ರಿಂಗರಿಸೀದಾ ॥ ಶರಧೀಜಾದಿತ್ಯರು ತೋರಣ ಕೊಪ್ಪಿದರಾಗಾ ॥ ೧೦ ॥ ಚಿತ್ರಾವೇದಿಕದಲ್ಲಿ । ಸಪ್ತಾ ವಾಹನ ಹರಿಯಾ ॥ ಮುತ್ತೈದೇರೆಲ್ಲರು ಕರದರು ಶೋಭಾನೆಂದೂ ॥ ೧೧ ॥ ಶಂಖಿಣಿ ಪದ್ಮಿಣಿಯರು ವಸ್ತ್ರಾ । ಲಂಕರದಿಂ ಶ್ರಿಂಗರಿಸಿ ಅರಿಶಿನ ॥ ಕಂಕಣಧಾರಗಳನು ಕಟ್ಟಿದರೂ ವೆಂಕಟಗಿಂದಿರಿಗೇ ॥ ೧೨ ॥ ಮಾಂಗಲ್ಯತಂತೂ ನಾನೆ ನಂಬೀ । ಮಂಗಳ ತರ ವಾಕ್ಯಗಳಿಂದಾ ॥ ಮಂಗಳಸೂತ್ರ ಸುಕರಿಮಣಿ ಕಟ್ಟಿದ ಮಂಗಳೆಗೀಶಾ ॥ ೧೩ ॥ ಬಳಿಕಾಲಾಜಾಹೋಮಾ । ಗಳು ವಿಧ್ಯೋಕ್ತದಿ ಮಾಡಿ । ಜಲಜಾನಾಭನಿಗೆ ಭೂಮವ ಬಡಿಸಿದರಾಗಾ ॥ ೧೪ ॥ ಆ ತರುವಾಯದಲಿ ದೇ । ವಾ ತರುಣೀರೆಲ್ಲಾರೂ ॥ ಸೂತವಕಾಡಿಂದಲಿ ಬನ್ನಿರಿ ಊಟಣಿಗೆಂದೂ ॥ ೧೫ ॥ ಸ್ವರ್ಣದ ಬಟ್ಟಲದೊಳಗೇ । ಎಂಣೀ ಅರಿಶಿನವನು ಕಲಿಸೀ ॥ ಚನ್ನೆಭಾರತಿ ಕರಿಸಿದಳಾನಂದಾದಿಂದಾ ॥ ೧೬ ॥ ಸೂರುತಿಸೀರಿ ಕೆಲರೂ । ಸಾರಾವಾಳೀ ಕೆಲರೂ ॥ ಚ್ಯಾರು ವಸ್ತ್ರಗಳನ್ನೂ ಉಟ್ಟರು ಸ್ತ್ರೀಯರು ಬ್ಯಾಗಾ ॥ ೧೭ ॥ ಕಂಚುಕ ತೊಟ್ಟರು ಬಿಗಿದೂ । ಮಿಂಚುವ ವಸ್ತ್ರಗಳಿಟ್ಟೂ ॥ ಕುಂಚಿಗಿ ಬಾಲಕರನ್ನೂ ತಮ್ಮಯ ಕೊಂಕಳೋಳಿಟ್ಟೂ ॥ ೧೮ ॥ ವರುಷಾಕಾಲದ ನದಿಯಂತೆ । ಹರು ಷುಬ್ಬಿ ಬಂದಾರೂ ॥ ಸರಸೀಜಾಕ್ಷನು ರಮೆವಾಡುವ ಊಟಣಿ

ನೋಡಾ ॥ ೧೯ ॥ ಗಿರಿಜೆ ಬಟ್ಟಲು ಪಿಡಿದೂ । ಶಿರಿಯಾ ಮುಂದಕೆ ಕರದೂ ॥ ಸರುವೇಶಾಗೂಟಣಿ ಮಾಡೆಂದರಿಶನ ಕೊಡಾಲೂ ॥ ೨೦ ॥ ತುಂಗಾವಿ ಕ್ರಮ ಹರಿಯೇ । ಶ್ರಿಂಗಾರಾಂಬುಧಿಯೇಕಾ ॥ ಳಿಂಗನ ಮರ್ದಿಸಿದಂಥಾ ಕಾಲ್ಕೊಡು ಅರಿಶನ ಹಚ್ಚೂವೇ ॥ ೨೧ ॥ ಒದಗೀದಾ ಖಳಗಂಜೀ । ಎದಿಗೊಟ್ಟೂ ನಿಲ್ಲದಲೇ ॥ ಹದಿನ್ಯೋಳಾವತ್ಯೋರ್ಡಿದ ಪದಕೊಡು ಅರಿಶಿನ ಹಚ್ಚೂವೇ ॥ ೨೨ ॥ ಆ ಪಾರ್ಥನ ತೇರಿನ ಹಗ್ಗಾ । ನಿ ಪಿಡಿಯೆ ಕುದರಿ ಖುರಧೂಳೀ ॥ ಲೇಪಿಸಿದಂಥಾ ಮುಖ ಕೊಡು ಅರಿಶನ ಕುಂಕುಮ ಹಚ್ಚೂವೇ ॥ ೨೩ ॥ ಜನನೀಯಾ ಮೊಗನೋಡೂತಾ । ವಿನಯದಲಿಂಜುರುಜುರು ಮೆಲುತಾ ॥ ಸ್ತನ ಪಿಡಿದಾಡಿದ ಕರ ಯುಗವನೆ ಕೊಡು ಗಂಧವ ಹಚ್ಚೂವೇ ॥ ೨೪ ॥ ತುಂಬೀದಾ ಕೌಂಸ್ತುಭ ಕಾಂತೀ । ಗಿಂಬಾಗೀ ತೋರಿಸುವಾ ॥ ಕಂಬೂ ಕಂಧರವನೆ ಕೊಡು ಪದ್ಮದ ಮಾಲಿಕಿ ಹಾಕೂವೇ ॥ ೨೫ ॥ ಅಂದೀ ಪರಿಯಿಂದರ್ಚಿಸೀ । ಹೊಂದೀ ಕುಳ್ಳಿರೆ ಗಿರಿಜೇ ॥ ಮಂದಾರೋದ್ಧರ ಊಟಣಿ ಮಾಡೇಳೆಂದಾಳೂ ॥ ೨೬ ॥ ಇಂದಿರೇ ಬಲುಸುಂದಾರ । ಚಂದೀರಾಸ್ಯನ್ನರಸೀ ॥ ಮಂದಸ್ಮಿತ ಮುಖವನು ಕೊಡು ಅರಿಶನ, ಕುಂಕುಮ ಹಚ್ಚೂವೇ ॥ ೨೭ ॥ ಮುನಿಸುಡಿಗೆ ಮರುಳಾಗೀ । ಎನ ಬಯಸೀ ಕಣ್ಣಿಸ ಅಂ ॥ ಜನದಿಂ ಪತ್ರವ ಬರದಿಹ ಕರಕೊಡು ಗಂಧವ ಹಚ್ಚೂವೇ ॥ ೨೮ ॥ ಅರಸೂ ನೇಮಿಸಿದಂಥಾ । ಧೊರೆಗಳ ವಂಚಕಳೆಂಬಾ ॥ ಹರಲೀಯಾ ಹೊತ್ತಿಹ ಶಿರವನೆ ಕೊಡು ನಾ ನೂಸುಕ ಮುಡಿಸೂವೇ ॥ ೨೯ ॥ ಹಾಕೀಕೊಟ್ಟು ಚೇಳು ಬೇಕೆಂದು ಕಚ್ಚಿಸಿಕೊಂಡಂತೇ ॥ ಕಾಕು ಮಾತುಗಳಾಡೀ ಎನ್ನಿಂದಾಡಿಸಿಕೊಂಡೀ ॥ ೩೦ ॥ ಎನುತಾ ಗಂಧಾದಿಗಳೂ । ವನಿತಿಗೇ ಉಪಚರಿಸೀ ॥ ಅನಿಮಿಷೇಶನು ಕುಳಿತನು ಸಂತೋಷದಿ ಪೀರದಲೀ ॥ ೩೧ ॥ ಅಂಬೂಜಾಕ್ಷನ ತೊಡಿಯಲ್ಲೀ । ಅಂಬೀಯಾ ಬರಿ ಎಂದೂ ॥ ಜಗ । ದಂಬಿಯಾ ನಿಲ್ಲಿಸಿ ಬರಸಿದರೆಲ್ಲರು ಕೂಡೀ ॥ ೩೨ ॥ ಬಂಧಕ ಶಕುತೀಯಾಲಿಂದಾ । ಇಂದಿರಿಯಾ ಮೋಹಿಪ ಗೋ । ವಿಂದಗೆ ಕಂಚುಕ ಗ್ರಂಥಿಯ ಬಿಚ್ಚೆಂದಾಡಿದರೆಲ್ಲಾ ॥ ೩೩ ॥ ಲೋಕವತೂ ಲೀಲಾಕೈವಲ್ಯಂ । ಶ್ರೀಕಾಂತಾನರರಂತೇ ॥ ತಾ ಕಂಚುಕ ಬಿಚ್ಚಿಟ್ಟನು ಪದದಡಿ ಸೀಕೊಳ್ಳೆಂದೂ ॥ ೩೪ ॥ ನಖಮುಹಿಮೆರಿಯುದವಳು ನಿನ್ನಾ । ಅಕಳಂಕಡಿಗಳೆತ್ತುವಳೇ ॥ ಸುಕರುಣಡಲಿ ಕೊಡು

ಭೃತ್ಯಳಿಹಳು ನಿನಗೆಂದಳು ಗೌರೀ ॥ ೩೫ ॥ ಸರ್ಪ ಶಕಟ ಪೂತನಿ ಪ್ರಮುಖರ ಭಯ । ಕ್ಷಿಪ್ರ ಕಳದು ಬಹು ಮೆರದವಗೇ ॥ ಉಪ್ಪಕ್ಕಿಗಳು ನಿವಾಳಿಸುತಿ ಹರಿದು ಸೋಜಿಗವಲ್ಲೇ ॥ ೩೬ ॥ ಪೂಗೀಫಲತಾಂಬೂಲವನೂ । ಆಗೊರ ಕನ್ನಿಕಿಗಳು ಮೆದ್ದೂ ॥ ಈಗಿನ ಜನ ಮಾಡಿದ ತೆರ ಲೀಲಿಯ ಮಾಡಿದರಾಗಾ ॥ ೩೭ ॥ ಪಾವಕನೆಲ್ಲವು ಉಂಬಾ । ತಾ ವರ್ಣಾವಿಕಾರಾಗಹರೀ ॥ ಆವನ ಚಾರಿಯು ಫಲ ಭಕ್ಷಿಸಿದವಗೀದೋಷಗಳುಂಟೇ ॥ ೩೮ ॥ ಯಿನಿತೂ ಸ್ತೋತ್ರವ ಮಾಡೀ । ಅನಿಮಿಷರಾ ರಾಣಿಯರೂ ॥ ಮಣಿಮುತ್ತಿನ ಆರುತಿ । ಎತ್ತಿದರತಿ ಸಂಭ್ರಮದಿಂದಲ್ಲೀ ॥ ೩೯ ॥ ಉರುವಶಿಯರು ನಲಿದಾಡುವರು । ಸುರರು ಸುಮನ ಮಳೆ ಸುರಿಸುವರೂ ॥ ಮೊರಿಯಲು ದುಂದುಭಿ ನಭದಲಿ ನಾರದಮುನಿ ಕುಣಿದಾಡುತಿರೇ ॥ ೪೦ ॥ ಮಂಗಳ ಝುಷಕೂರ್ಮಕಿಟನರ ಸಿಂಹಗೆ । ಮಂಗಳ ವಟುಭಾರ್ಗವದಾಶರಥಿಗೇ ॥ ಮಂಗಳ ಕೃಷ್ಣಜಿನಜ ಹಯವಹನಗೆ ಮಂಗಳ ಪದಗಳಿಗೇ ॥ ೪೧ ॥ ವ್ಯಾಸೋಕ್ತಿಗಳಲಿ ಬಹಳುಂಟಾದದು । ನಾಶಕುತಿದ್ದಷ್ಟೇಳಿದೆನೀಕಥಿ । ದೋಷಿರೆ ಕ್ಷಮಿಸಿ ಗ್ರಹಿಸತಕ್ಕದು ಕೇತಕಿಯಂತೆ ಸುಜನರೂ ॥ ೪೨ ॥ ಪ್ರಾಣೇಶವಿಠಲನ ಊಟಣಿಪದವನು । ಸಾನುರಾಗದಲಿ ಕೇಳ್ದರಿಗೇ ॥ ಏನು ಬೇಡಿದಿಷ್ಟಾರ್ಥವ ಕೊಡುವನು ಇಹ ಪರದಲ್ಲೀ ॥ ೪೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೭೧. ಪದ, ರಾಗ—ಕಾಂಬೋಧಿ (ಆದಿತಾಳ).

ಉಡಿ ತುಂಬುವ ಪದ.

ಶೋಭನ ಶ್ರೀನಾರಾಯಣಗೆ ಇಂದಿರಿಗೇ । ಶೋಭನ ಕ್ಷೀರಾಬ್ಧಿನಿಲಯಗಂಭೃಣಿಗೇ । ಶೋಭನ ಕೃಷ್ಣಗೆ ಭೀಷ್ಮಕುವರಿಗೇ । ಶೋಭನ ದಶರಥ ರಾಮಜಾನಕಿಗೆ । ಶೋಭನವೆನ್ನೀ ಬುಧರೆಲ್ಲಾ ॥ ಪಲ್ಲ ॥ ಜ್ಞಾನಿ ವಶಿಷ್ಟಾ ಮುಖ್ಯಾ ಖುಷಿ ಬ್ರಹ್ಮಾದಿಗಳೂ । ವಾಣೀ ಭಾರತಿ ಗೌರಿ ಪ್ರಮುಖನಾರಿಯರೂ ॥ ಕ್ಷೋಣಿಯೊಳಗೆ ಮಿಗಿಲಾದ ಸಂಭ್ರಮದಿಂದಾ । ಜಾನಕಿಗುಡೀಯಾ ತುಂಬಿದ ಕಥಿಪದವನು । ಧೇನಿಸಿ ಪಾಡುವದು ಪ್ರತಿದಿನಾ ॥ ೧ ॥ ಸರಸ್ವತಿ ಪಾರ್ವತಿ ಕೂಡಿ ಇಂದಿರಿಗೇ ಸರುವಾಭರಣ ಶ್ರಿಂಗರಿಸಿ ತವಕದಲೀ ॥ ಇರಸೀ

ತಟ್ಟೆಯೊಳು ಮುತ್ತು ಮಾಣಿಕ ಪ್ರವಾಳಾ । ಹರಿಗರ್ಪಿಸೀ ಮೂಲೋಕಾ ಜನನಿಯ ಮುಂದಕೆ । ಕರದು ತುಂಬಿದಾರು ಉಡಿಯೊಳು ॥ ೨ ॥ ವಾರುಣೀ ಸೌಪರಣೀ ದೇವಿಯರೊದಗೀ । ಸೂರುತಿ ಉಡುಸಿ ಚಿನ್ನದ ಬಟ್ಟಲೊಳಗೇ । ನಾರಿಕೇಳದಾಳಿಂಬುನಿಂಬಿಕದಳಿಫಲಾ ॥ ನಾರಾಯಣಗರ್ಪಿಸಿ ಉಡಿಯಾ ತುಂಬಿದರು । ಮಾರಾಜನನೀಗೆ ಜಯವೆಂದೂ ॥ ೩ ॥ ಉತ್ತಮ ಶಚಿದೇವಿ । ದಿವ್ಯಾಂಬರುಡಿಸೀ । ಕಿತ್ತಳಿ ಜಂಬು ದ್ರಾಕ್ಷ ಚೂತಫಲಗಳೂ ॥ ಉತ್ತುತ್ತಿ ತಾಂಬೂಲ ಪೂಗಿಫಲಗಳನ್ನೂ । ಸಪ್ತವಾಹನಗರ್ಪಿಸ್ಯುಡಿಯ ತಿಂಬಿದಳು । ಸತ್ಯಾಭಾಮಿನಿಗೆ ಶುಭವೆಂದೂ ॥ ೪ ॥ ಧಿಟ್ಟಾಂತಕನ ರಾಣೀ ಚಿನ್ನದಾಂಬರವಾ । ಧಟ್ಟಾನುದಸಿ ನಾನಾ ಜಾತಿ ಪುಷ್ಪಗಳಾ ॥ ಘಟ್ಟತಂಡೂಲ ಸಾವೀರ ಹೊನ್ನು ಬೆರಸಿ ಉಡಿ । ಘಟ್ಟ್ಯಾಗಿ ಬಿಗಿ ಎಂದು ತುಂಬಿದಳೂ । ಪ್ರಾಣೇಶ ವಿಠ್ಠಲಗರ್ಪಿಸುತಾ ಶುಭವೆಂದೂ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

ವಿವಾಹ ಮಂಗಳಾರ್ತಿ ಪದಗಳು.

೧೭೨. ಪದ, ರಾಗ–ಕಲ್ಯಾಣಿ (ತ್ರಿಪುಡೆತಾಳ).

ಕರಿವರದಗೆ ಹರಿಯರ್ಧಾಂಗಿಗೆ । ಸುರರಂಗನಿಯರು ಬಹು ಹರುಷದಿ । ನೆರದು ಆರುತಿಯ ಬೆಳಗೀರೆ । ಶೋಭನವೇ ॥ ಪಲ್ಲ ॥ ರಾಮಗೆ ದಶರಥನಂದಗೆ ಸು । ಧಾಮನ ಸಖಮಧುಮುರಭಂಜಗೇ ॥ ಶ್ರೀಮಾಯಾದೇವಿಗೆ ಹರುಷಾದಿ । ಹರುಷದಿ ಮುತ್ತಿನ ಆರುತಿ ಭಾಮಿನಿಯೇರೆಲ್ಲಾ ಬೆಳಗೀರೆ ॥ ೧ ॥ ನಾರಾಯಣ ಅಚ್ಯುತ ಕೃಷ್ಣಗೇ । ಪಾರಶರನಾಸುತ ವ್ಯಾಸಗೇ । ಕ್ಷಿರಾಬ್ಧಿಸುತಿಗೆ ಹಿತದಿಂದಾ ॥ ಹಿತದಿಂದ ಹವಳದ ಆರುತಿ । ನಾರಿಯರು ತಂದು ಬೆಳಗೀರೆ ॥ ೨ ॥ ಕೇಶವಗೆ ತ್ರಿವಿಕ್ರಮನಿಗೆ ಶ್ರೀ । ವಾಸುಕಿಶಯನಗೆ ಅನಿರುದ್ಧಗೇ । ದೋಷವಿರಹಿತೆ ಲಕುಮಿಗೆ ॥ ಲಕುಮಿದೇವಿಗೆ ಆರುತಿಯನು । ಭೇಶಾಮುಖಿಯರು ಬೆಳಗೀರೆ ॥ ೩ ॥ ಗಂಗೆಯ ಪಡದಿಹ ಗೋವಿಂದಗೇ । ಅಂಗಜ ಜನಕಗೆ ಪುರುಷೋತ್ತುಮಗೆ । ಮಂಗಳದೇವಿಗೆ

ಸೊಗಸೀಲಿ || ಸೊಗಸೀಲಿ ಮಾಣಿಕದಾರುತಿ | ಅಂಗನಿಯರೆಲ್ಲಾ ಬೆಳಗೀರೆ || ೪ || ಜಂಗಮ ಜಡದೊಳು ವ್ಯಾಪಿಸಿಹಗೇ | ರಂಗಗೆ ಸುತ್ರಿಧಾಮಗೆ ವರದಗೇ | ಇಂಗೀತಜ್ಞಳಿಗೆ ಜಯಂತೀಗೆ | ಜಯಂತೀಗೆ ರತ್ನದಾರುತಿ | ಹೆಂಗಳೆರೆಲ್ಲಾ ಬೆಳಗೀರೆ || ೫ || ವಾರಿಧಿ ಆರೊಂದು ಘನೋದಕ | ಮಿರುತ ವಿಪ್ರನ ಬಾಲಕರನು | ತೋರಿಸಿದವಗೆ ಇಂದಿರೆಗೆ || ಇಂದಿರೆಗೆ ಮಾಣಿಕ ದಾರುತಿ | ನೀರಜಾಕ್ಷಿಯರು ಬೆಳಗೀರೆ || ೬ || ದಾಮೋದರ ಪ್ರಾಣೇಶವಿಠಲಗೆ | ರಾಮನ ಅನುಜಗೆ ಜಗನ್ಮಾತೆಗೇ | ಹೇಮಮಯವಾದಾ ಹರಿವಾಣಾ || ಹರಿವಾಣದೊಳು ಶ್ರಿಂಗರಿಸಿ | ಪ್ರೇಮದಲಿ ತಂದು ಬೆಳಗೀರೆ || ೭ || ಶ್ರೀ ಮಧ್ವೇಶಾರ್ಪಣಮಸ್ತು ||

೧೭೩. ಪದ, ರಾಗ–ಸಾವೇರಿ (ಆದಿತಾಳ).

ಶಾಸೂಕಿಶಯನ ಅಶೋಕ ವರಾಕೂ | ವಾಸುದೇವಾನಿರುದ್ಧ ಶ್ರೀ ಕೃಷ್ಣ ವರಾಕೂ || ಸಾಸಿರನಾಮದ ಹರಿಯೆ ವರಾಕೂ | ದೋಷರಹಿತ ರಘುಪತಿಯೆ ವರಾಕೆಂದು ಮಿಾಸಲಾರುತಿಯಾ ಬೆಳಗೀರೆ || ೧ || ವೃಂದಾವನದೊಳಗಿಹನೆ ವರಾಕೂ | ತಂದಿತಾಯ್ಗಳ ಬಿಡಿಸಿದನೆ ವರಾಕೂ || ಸಿಂಧುರವರದ ಗೋಪಾಲ ವರಾಕೂ | ಶಿಂಧುಶಯನ ಪದ್ಮನಾಭ ವರಾಕೆಂದು || ಛಂದದಲಾರುತಿಯಾ ಬೆಳಗೀರೆ || ೨ || ಸತ್ಯಾಭಾಮಿರುಗ್ಮಿಣಿರಮಣಾ ವರಾಕೂ | ಮುತ್ಯಗ ಪಟ್ಟಗಟ್ಟಿದವನೆ ವರಾಕೂ || ಭಕ್ತಪೋಷಕ ತ್ರಿವಿಕ್ರಮನೆ ವರಾಕೂ | ಸತ್ಯಸಂಕಲ್ಪ ಹೃಷಿಕೇಶ ವರಾಕೆಂದು | ಮುತ್ತಿನಾರುತಿಯಾ ಬೆಳಗೀರೆ || ೩ || ಮಾಧವ ಖರ ದೂಷಣಾರಿ ವರಾಕೂ | ಬಾದರಾಯಣ ಪುರುಷೊತ್ತಮ ವರಾಕೂ || ಯಾದವರೊಳು ಪುಟ್ಟಿದನೆ ವರಾಕೂ || ವೇದ ಉದ್ಧರ ಮತ್ಸ್ಯರೂಪಿ ವರಾಕೆಂದು | ಮೋದದಲಾರುತಿಯಾ ಬೆಳಗಿರೇ || ೪ || ಇಂದ್ರುಬಲಿಯನುಂಡಾಧೀರ ವರಾಕೂ | ಕಂದಗೊಲಿದ ನರಸಿಂಹ ವರಾಕೂ | ನಂದನಂದನ ಶೌರಿ ವರಾಕೂ || ಮಂದರ ಪರ್ವತಧರನೆ ವರಾಕೆಂದು | ಕುಂದಣದಾರುತಿಯಾ ಬೆಳಗೀರೆ || ೫ || ಜಟ್ಟೀರ ಹುಡಿಗುಟ್ಟೀದವನೆ ವರಾಕೂ | ದುಷ್ಟ ಕಂಸನ ತರಿದವನೆ ವರಾಕೂ || ಕೆಟ್ಟಾಜಾಮಿಳಗೊಲಿದವನೆ ವರಾಕೂ | ಅಷ್ಟ ಲೋ

ಕವ ಸಲಹುವನೆ ಪರಾಕೆಂದು । ತಟ್ಟೆಯೊಳಾರುತಿಯಾ ಬೆಳಗೀರೆ ॥ ೬ ॥ ಮಾರನಯ್ಯಾ ಪ್ರಾಣೇಶವಿಠಲ ಪರಾಕೂ । ನೀರಜಾಂಬಕ ಶ್ರೀನಿವಾಸ ಪರಾಕೂ ॥ ದ್ವಾರಕಿನಿಲಯ ಮುರಾರಿ ಪರಾಕೂ । ಕ್ಷೀರಾಬ್ಧಿಸುತಿಯ ವಲ್ಲಭನೆ ಪರಾಕೆಂದು । ನಾರಿಯರಾರುತಿಯಾ ಬೆಳಗೀರೆ ॥ ೭ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೭೪. ಪದ, ರಾಗ–ಪೂರ್ಕಿ (ಆದಿತಾಳ).

ಮಂಗಳ ರಾಘವ ಜಾನಕಿಗೆ ಮಂಗಳ ಕೃಷ್ಣಗೆ ರುಗ್ಮಿಣಿಗೇ ॥ ಮಂಗಳ ಋಷಭ ಜಯಂತಿಗೇ ॥ ಶೊಭಾನೆ ॥ ಪಲ್ಲ ॥ ವೃಂದಾವನಪತಿ ಕೇಶವಗೆ । ಮಂದರಧರ ನಾರಾಯಣಗೇ । ಇಂದ್ರಕೃತ್ಯಪರಿಹರ ಮಾಧವ । ಗೋವಿಂದನಿಗೇ ॥ ಸಾಗರನಂದನಿಗೇ । ದೈತ್ಯನಿಕ್ರುಂದನಿಗೇ । ಅಂಡಜಶ್ಯಂದನಿಗಾರುಗಾರುತಿಯಾ ಬೆಳಗೀರೆ ॥ ೧ ॥ ವಿಷ್ಣುಮಧುರಿಪುತ್ರಿ ವಿಕ್ರಮಗೇ । ತ್ರಿಷ್ಠಿವಾಮನ ಶ್ರೀಧರಗೇ ॥ ದುಷ್ಟಮದ ಹೃಷಿಕೇಶ ಪ್ರಸಿದ್ಧ ಸುಪರ್ಸ್ವಲಗೇ ॥ ದೇವೋತ್ಕೃಷ್ಟಳಿಗೇ । ಕನಕೊಸನುಟ್ಟಳಿಗೇ । ವಿಧಿಗೂರಕೂಟ್ಟಳಿಗಾರುತೀಯಾ ಬಳಗೀರೆ ॥ ೨ ॥ ಕಂಜನಾಭ ದಾಮೋದರಗೆ । ಕಂಜವರದ ಸಂಕರುಷಣಗೆ । ಕುಂಜರಪಾಲಕ ವಾಸುದೇವ ವಿಷಭುಂಜನಿಗೇ ॥ ನಿತ್ಯನಿರಂಜನಿಗೇ । ಖಳಕುಲಭಂಜನಿಗೇ । ಕುಮುತ್ಯಾಂಧಾಂಜನಿಗಾರುತಿಯಾ ಬೆಳಗೀರೆ ॥ ೩ ॥ ಪ್ರದ್ಯುಮ್ನಗೆ ಅನಿರುದ್ಧನಿಗೆ । ಸಿದ್ಧರೊಡಿಯ ಪುರುಷೋತ್ತುಮಗೆ । ಶುದ್ಧ ಅಧೋಕ್ಷಜ ನಾರಸಿಂಹ ಶ್ರೀ ಬುದ್ಧನಿಗೇ ॥ ಸರ್ವದ ಇದ್ದಳಿಗೇ । ದೋಷ ಅಬದ್ಧಳಿಗೇ । ಕುಸುತನಗೆದ್ದಳಿಗಾರುತಿಯಾ ಬೆಳಗೀರೆ ॥ ೪ ॥ ತಂದೆ ಶ್ರೀ ಪ್ರಾಣೇಶವಿಠ್ಠಲಗೇ । ವಂದ್ಯಾಚ್ಯುತ ಜನಾರ್ದನಿಗೇ ॥ ಇಂದ್ರಪ್ರಕಾಶ ಉಪೇಂದ್ರಗೆ ಹರಿಯದು ನಂದನಗೇ ॥ ಭಾಗ್ಯದ ಇಂದಿರಿಗೇ । ಜಗಕತಿ ಸುಂದರಿಗೇ । ಸರಸಿಜಮಂದಿರಿಗಾರುತಿಯಾ ಬೆಳಗೀರೆ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೭೫. ಪದ, ರಾಗ–ಭೈರವಿ (ಝುಂಪೆತಾಳ).

ಜಯಮಂಗಳಂ ನಿತ್ಯ ಶುಭಮಂಗಳಂ ॥ ಪಲ್ಲ ॥ ಶ್ರೀವತ್ಸಲಾಂಛನಗೆ । ಕೌಂಸ್ತುಭ ಸುಭೂಷಣಗೆ । ಗೋವಿಂದನಿಗೆ ರುಗ್ಮಿಣೀರಮಣಗೇ ॥ ಭಾವಜ

ಪಿತಗೆ ಮಂದರಗಿರಿ ಧರಿಸಿದವನಿಗೆ । ಮಾಂವನಳಿದವನಿಗೆ ಮಧು ಹಿಂಸಕನಿಗೇ ॥ ೧ ॥ ನೀಲಾಂಬುದಾಭಗೆ ಸತ್ಯಭಾಮಿಪತಿಗೆ । ಫಾಲಾಕ್ಷಸಖಗೆ ಪುರುಷೊತ್ತುಮನಿಗೇ ॥ ವಾಲಯ ಸುಗರಿಗಮೃತ ಉಣಿಸಿದವನಿಗೆ । ಕಾಳಿಂಗಮರ್ದನಗೆ ಶ್ರೀ ಕೃಷ್ಣಗೇ ॥ ೨ ॥ ಶಂಕರಾದಿ ಸಮಸ್ತ । ಅನಿಮಿಷಾರಾಧ್ಯನಿಗೆ । ಪಂಕಜೋದ್ಭವನ ಪಿತ ಶ್ರೀ ರಾಮಗೇ ॥ ಕಿಂಕರನ ರೀತಿಯಲಿ ನರನ ರಥವು ನಡಿಸಿದಗೆ । ವೆಂಕಟಗೆ ಪ್ರಾಣೇಶವಿಠ್ಠಲನಿಗೇ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೭೬. ಪದ, ರಾಗ–ಸೌರಾಷ್ಟ್ರ (ಏಕತಾಳ).

ಗೋಪಾಲಕೃಷ್ಣನಿಗೆ ಮಂಗಳಾ । ಘೋರ । ಪಾಪಾರಣ್ಯ ಧನಂಜಯಗೆ ಮಂಗಳ ॥ ಪಲ್ಲ ॥ ಚಿಕ್ಕನನಾಗಿ ಬಲಿಯ ದಾನವ ಬೇಡಿನೆಲಾ । ಕಿಕ್ಕಿತುಳಿದಂವಗೆ ಮಂಗಳಾ ॥ ಸೊಕ್ಕಿದ ಜಾಂಬುನದಾಕ್ಷನ ಹುಡಿಗುಟ್ಟೀ । ಅಕ್ಕರೆಲ್ಲರಿಗೆ ಮಾಡ್ದಗೆ ಮಂಗಳಾ ॥ ೧ ॥ ಕಿಡಿಯನುಗುಳುತಲಿ ಚಟಚಟ ಕಂಭದಿಂದ । ಒಡದು ಬಂದನನಿಗೆ ಮಂಗಳಾ ॥ ಕಡುಕೋಪದಿಂದ ಶಾತ ಕುಂಭಕಶ್ಯಪುವಿನಾ । ಪಿಡಿದೊಡಲು ಬಗದವಗೆ ಮಂಗಳಾ ॥ ೨ ॥ ನುಡಿಯಲು ಜನನಿಯು ಕೇಳಿ ಪುರವ ಬಿಟ್ಟು ಅಡವಿಗೆ ಪೋದಂವಗೆ ಮಂಗಳಾ ॥ ಮಡದೀಯಾಕೃತಿ ಪೈದ ಸುರನ ಕೊಂದವನಿಗೆ । ಕಡಲಾಮಂದೀರನಿಗೆ ಶುಭಮಂಗಳಾ ॥ ೩ ॥ ಪಾಷಾಣಳಾದವಳ । ಉದ್ಧಾರ ಮಾಡಿದವಗೇ । ದೋಷರಹಿತನಿಗೆ ಮಂಗಳಾ ॥ ಭೇಶಭಾಸ್ಕರ ಕೋಟತೇಜಪರಿಗೆ ಪ । ರ್ವೇಶ ಮುರಾಂತಕಗೆ ಶುಭಮಂಗಳಾ ॥ ೪ ॥ ಶ್ರೀರಮಣ ಶ್ರೀಮಂತ ಪ್ರಾಣೇಶವಿಠ್ಠಲನೀಗೆ । ವಾರೀಜನಯನಗೆ ಮಂಗಳಾ ॥ ನಾರಾಯಣಗೆ ದಯಸಾಂದ್ರಗೆ ದಶಅವ । ತಾರ ಗೋವಿಂದ ವಾಮನಗೆ ಮಂಗಳಾ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೭೭. ಪದ, ರಾಗ–ಶಂಕರಾಭರಣ (ಅಟತಾಳ).

ಜೋಗುಳ ಹಾಡು ತೊಟ್ಟಿಲ ಪದ.

ಜೋಜೋ ವೃಷ್ಣಿ ಕುಲಾಂಬುಧಿ ಚಂದ್ರಾ । ಜೋಜೋ ಚಿತ್ಸುಖ ಬಲಗುಣಸಾಂದ್ರಾ । ಜೋಜೋ ಭಕ್ತೌಘ ದೋಷಾಹಿವೀಂದ್ರಾ । ಜೋಜೋ ಅಸು

ರಾರಿ ಹರಿದಿವಿಜೇಂದ್ರಾ॥ ಪಲ್ಲ ॥ ಮಧ್ವಮುನಾಬ್ಧ ಮಂಟಪದಲ್ಲಿ ಶೋಭಿಪ । ಶುದ್ಧಮಾತ್ಮಕ ಹೇಮ ನಿರ್ಮಿತ ತೊಟ್ಟಿಲ॥ ಮಧ್ಯ ಶ್ರೀ ಸಹಿತ ಉಯ್ಯಾಲಿ ಯನಾಡುವ । ಸಿದ್ಧಾರರಸ, ವೇದ ವೇದ್ಯ ಕೇಶವನೇ ॥ ೧ ॥ ಶಿರಿ ವಿಧಿ ಶಿವ ಶಕ್ರ ರವಿಶಶಿ ಮೊದಲಾದ । ಸುರರೆಲ್ಲ ಕಲ್ಪಕಲ್ಪದಲಿ ಮಾಡಿದ ಸೇವೆ । ಚರಣಕಮಲಕರ್ಪಿಸಿದ ರುಚಿನೋಳ್ಪಂತೆ । ಜುರುಜುರುಂಗುಟ ಮೆಲುತಿಹ ಮುದ್ದುಕೂಸೇ ॥ ೨ ॥ ಅನ್ನಾಜ ಪ್ರಣಾಜ್ಯ । ಶಿವ ದಿವಿಜರ ಶಾಖ । ವನ್ನು ಬೊಮ್ಮಾಂಡಾಖ್ಯ ಹರಿವಾಣದೊಳಗೇ ॥ ಚನ್ನಾಗಿ ಲಲನಿಸಹಿತವಾಗಿ ಭುಂಜಿಸಿ । ಸುಜ್ಞಾನ ವಟಪತ್ರಶಾಯಿಕೃಪಾಂಗಾ ॥ ೩ ॥ ವೇ ದನಗೋದ್ಧಾರಿ ಕೋಲನರಹರೀ । ಭೂದಾನ ಬೇಡ್ದರೇಣುಕ ರಾವಣಾರೀ ॥ ಯಾದವ ಪತಿ ಬುದ್ಧ ವಾಜೀಯನೇರಿ । ಮೇದಿನಿಯಾಳ್ದ ಸುಜನರುಪಕಾರೀ ॥ ೪ ॥ ಮಾನಿ ಮಾನಿದ ಬಕಶಕಟಾದಿ ಕಾಲಾವಿ । ತಾನ ನಂದನ ಕಾಳಿ । ಕುಂಜರಪಾಲಾ ॥ ಭಾನುಶತಾಭ ಗೋಪಾಂಗನಲೋಲಾ । ಸ್ಥಾಣು ಮೋಹಿಸಿದಾ ಶ್ರೀಪ್ರಾಣೇಶವಿರಲಾ ॥ ಜೋಜೋ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

(೨೪). ಬೋಧಪರ ಕೀರ್ತನಗಳು.

೧೭೮. ಪದ, ರಾಗ–ಮೋಹನಕಲ್ಯಾಣಿ (ತ್ರಿಪುಡೆತಾಳ).

ಮನವೆ ಸ್ಮರಿಸೊ ಕಂಡ್ಯಾ ಹರಿಯಾ । ಶ್ರೀ ರೂ । ಗ್ಮಿಣಿನಾಥಾ ಭಕತರ ನೆಂದೆಂದು ಮರಿಯಾ ॥ ಪಲ್ಲ ॥ ಮರುಳೆ ಕೇಳಿದನಾನವರತಾ । ಹಿಂದೆ । ಯರಳಿ ಜನ್ಮವ ತಾಳಿ ಬಂದಾನಾ ಭರತಾ ॥ ಧರವೆ ವಿಷಯಾಪೇಕ್ಷನಿರುತಾ । ನೀ ಎಚ್ಚರಿದು ಪೂಜಿಸೊ ತಾನೆ ವಲಿವಾ ಶ್ರೀ ಭರತಾ ॥೧॥ ಒಡಲು ನಿಶ್ಚಯ ವೆನ್ನ ಬ್ಯಾಡೋ । ಧರ್ಮಾ । ತಡಿಯಾದೆ ಹಗಲಿರಳೆನ್ನದೆ ಮಾಡೋ । ಕಡು ತ್ಯಾಗಿ ರವಿಜಾನ ನೋಡೊ । ಭೀಮಾ । ನುಡಿದಾ ಧರ್ಮಜಗಾದಾಲೋಚನೆ ಮಾಡೋ ॥ ೨ ॥ ಕುಲಗುರು ಸುಖತೀರ್ಥರೆಂದೂ । ಸ್ಪಷ್ಟಾ ತಿಳಿದು ಪ್ರಾಣೇಶಾ ವಿಠ್ಠಲನಂಘ್ರಿ ಪೊಂದೂ॥ ಹಲವು ದೋಷಾ ಪೋಪವು ಬೆಂದೂ॥

ಶಿರಿ । ನಿಲಯಾ ಕೊಡುವ । ನಿನ್ನಾಬಯುಕೀಯು ತಂದೂ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೭೯. ಪದ, ರಾಗ—ಸೌರಾಷ್ಟ್ರ (ಆದಿತಾಳ).

ಆದದ್ದಾಯ್ತಿನ್ನಾದರು ವಳ್ಳೇ । ಹಾದಿ ಪಿಡಿಯೊ ಪ್ರಾಣೀ ॥ ಈ ದುರ್ನಡತಿಂಧೋದರಿಹವರದಿ । ಮೋದೆಂದಿಗು ಕಾಣೀ ॥ ಪಲ್ಲ ॥ ನೆಲಾ ಸತೀಧನ । ದೊಳಾನವರತಾ । ಹುಳಾಗಿ ಇರುವೆಲ್ಲೋ । ಹಲಾ ಪಿಡಿದು ವಿಧಿಕುಲಾ ಚರಣೆ ಬಿಡೆ । ಪಲಾ ತಗುವರಲ್ಲ್ಯೊ ॥ ಸ್ಥಳಾಸ್ಥಳರಿಯದೆ ಕಲಾಪವಮಾಡೆ ಘು । ಕೊಳಾಗುವದು ಸಲ್ಲೋ । ಎಲಾ ಕೇಳುವಂತಿಲಾ ಮಾತ್ರ ನೀ । ಗೆಲಾಪ ಬಗೆ ಇಲ್ಲೋ ॥ ಪ್ರಾಣಿ ॥ ೧ ॥ ಶಿಲಾದಿ ವಿಗ್ರಹ । ಧಳಾನೆ ಹರಿಯುಂಬೆಲಾ ಕೇವಲ ಸುಳ್ಳೋ । ಚಲಾಪ್ರತಿಮಿ ಪದ । ಗಳಾರ್ಚಿಸದಲೆ । ಮಲಾತಿನುತಿಹ್ಯಲ್ಲೋ ॥ ಕಳಾ ಬಿಡದಿರೆ ಅ । ನಿಳಾನ ಹರಿಮುನಿ ಮೊಳಾಗಿಹದಲ್ಲೋ । ನಳಾಭರತ ಮುಖ । ಇಳಾಣ್ಮರಂದದಿ । ಭಲಾಯುನಿಸಲಿಲ್ಲೋ ॥ ೨ ॥ ಬಿಲಾನೇರಿತಲ್ಲಿ । ಕೆಳಾಗಿ ತಪಿಸಲು । ಫಲಾಲೇಸಿತಿಲ್ಲೋ । ಖಳಾರಿದಿನ ಬಿಂಜಲಾ ಕೊಳ್ಳೆನಂ । ಛಲಾ ಮಾಡಲಿಲ್ಲೋ ॥ ಬಲಾದರದಲಿಂ । ತುಲಾದಿ ಸ್ನಾನ ಮೊದಲಾದ ವೃತವಲ್ಲ್ಯೊ । ಬಲಾರಿನುತ ಪ್ರಾಣೇಶವಿಠ್ಠಲನ ಬಲಾ ಘಳಿಸಿಕೊಳ್ಳ್ಯೋ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೮೦. ಪದ, ರಾಗ—ರೇಗುಪ್ತಿ (ಅಟತಾಳ).

ವ್ಯರ್ಥ ವೈಷ್ಣವನಂತೆ ನೋಡಿ ಶೋಣಿತ ಪೂಯು । ಗರ್ತದೊಳಗೇ ಪೋಗಿ ಬೀಳಬೇಕಯ್ಯೊ ॥ ಪಲ್ಲ ॥ ಮಧ್ವರಾಯರ ನೂರು ಕಲ್ಪಸಾಧನ ನಾಮ ॥ ಬುದ್ಧಿವಂತರಿಂದ ತಿಳಿಯಲಿಲ್ಲಯ್ಯೊ ॥ ೧ ॥ ಪ್ರಾಣಯಾಮವು ಮೂರೊಂದಾಶ್ರಮವು ಆಚಮಾನ ॥ ಮಾಡುವ ವಿಧಿ ತಿಳಿಯಲಿಲ್ಲಯ್ಯೊ ॥ ೨ ॥ ಪ್ರಾಣೇಶವಿಠಲೊಂದು ಮೂರು ರೂಪದಿ । ಯಮ ॥ ಸೂನುಯೆಂತಾದನೆಂದ । ರಿಯಲಿಲ್ಲಯ್ಯೊ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೪೧. ಪದ, ರಾಗ–ಶಂಕರಾಭರಣ (ಅಟತಾಳ).

ಕೆಡುಬ್ಯಾಡ ಕಡುಬ್ಯಾಡವೆಲ ಪ್ರಾಣೀ। ಇನ್ನು ಬಿಡು ನಿನ್ನ ದುರ್ಬುದ್ಧಿ ಕಡಿಗಾಣೀ ॥ ಪಲ್ಲ ॥ ಸತ್ಯ ಮೂರು ಮಾತು ಕೇಳಲ್ಯಾ । ಜ್ಞಾನ । ಭಕ್ತಿ ವೈರಾಗ್ಯ ಘಳಿಸು ಕಾಲಾ ॥ ವ್ಯರ್ಥ ಕಳಿಯದೆ ದಿನದ ಮಾಲಾ । ವನ್ನು ಮೃತ್ಯು ಎಣಿಸುವದು । ತಿಳಿ ಮೂಲಾ ॥ ೧ ॥ ಚೇತಾನವಂದೆನ್ನ ಬಾರದೇ । ಜೀವ । ಆತೂಮವೆಂದ್ಯರಡಿಹ್ಯದೋ ॥ ಸೀತೇ ಸಮಾಸಮುವೆಂಬೊದೊ । ನ್ಯೂನ । ಧಾತಾದಿಗಳು ಎಂದು ತಿಳಿವ್ಹೋದೋ ॥ ೨ ॥ ಮಧುರಿಪು ಸ್ವಾತಂತ್ರಾಧೀಗುಣಾ। ಜೀವತದಧೀನ ಸ್ವಾತಂತ್ರ ವರ ಕಾಣೋ ॥ ಮದಡಾರ ಮಾತಲ್ಲಾ ಶೃತಿಗಾನಾ । ಮಾಡು । ತಿದೆ ಬಿಡು ನಿನ ಮತದಭಿಮಾನಾ ॥ ೩ ॥ ತಿಳಿಸಾದೆ ಜಡಚೇತನಗಳಲ್ಲೀ । ಶಿರಿ । ನಿಲಯುಸಿಹದು ನೋಡು ಮನದಲ್ಲೀ ॥ ಜಲಧಿಯೊಳಿಹ್ಯ ನದಿ ತರದಲ್ಲೀ । ಈ ಪಲವು ಜಗತ್ತಿಹ ಧರಿಯಲ್ಲೀ ॥ ೪ ॥ ಶೇವ್ಯ ಪ್ರಾಣೇಶವಿಠ್ಠಲ ಜಿತಾ । ಕಾಮ । ನವ್ಯಕ್ತ ಮಹಿಮೆ ಅಪರಿಮಿತಾ ॥ ಸವ್ಯಸಾಚಿಗೆ ಭಗವದ್ಗೀತಾ । ಕಶ್ಚಿನ್ಮಾಂವೇತ್ತಿ ತತ್ವಾತ ಯೇನದೆತಾ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೪೨. ಪದ, ರಾಗ–ಭೈರವಿ (ಝಂಪೆತಾಳ).

ಹರಿಭಕ್ತರಾದವರಿಗಾವ ಭಯುವೇನೋ । ಪೊರೆವ ಅವರನು ತಾನೆ ಕ್ಷಣಕ್ಷಣದಲೀ ॥ ಪಲ್ಲ ॥ ವಾರುಣೇಂದ್ರನು ಮಡುವಿನೊಳಗೆನಕ್ರನಬಾಧೆ। ಗಾರದಲ ಕೂಗಲಾಕ್ಷಣ ಕರುಣದೀ ॥ ಶ್ರೀರಮಣ ತವಕದಲಿ ಬಂದು ಆ ದುರಿತವನು । ತಾರಿಸಿ ಸುಗತಿ ಕೊಟ್ಟದ್ದಿಲ್ಲ ನೋದಿ ॥ ೧ ॥ ಅರಗಿನಾಲಯದಲ್ಲಿ ಕುಂತಿ ತನಯರ ಪೊಗಿಸಿ । ಉರಿ ಇಕ್ಕ ಕೌರುವರು ಕಪಟದಲ್ಲೀ ॥ ಉರುಗಶಯನನ ಕರುಣ ಪೂರ್ಣವಿದ್ದದರಿಂದ। ಹೊರಹೊರಟು ಬಂದು, ಬದುಕಿದರು ಕೇಳೀ ॥ ೨ ॥ ಧರಿಪತಿಯ ಕುವರನ್ನ ಶಂಖಲಿಖಿತರು ಕೂಡಿ । ಮರಳುವಾ ತೈಲದೊಳು ಹಾಕಲವನೂ ॥ ಸುರವಂದ್ಯ ಪ್ರಾಣೇಶವಿಠ್ಠಲನೆ ಎನಲಾಗಿ । ಪರಮ ಥಣ್ಣೀರಾಯಿತೆಣ್ಣೆ ನೋಡೀ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೮೩. ಪದ, ರಾಗ–ಕಾಂಬೋಧಿ (ಆದಿತಾಳ).

ನಂಬು ಹರಿಯ ಪಾದವಾ । ಮನವೆ । ಹಂಬಲಿಸದೆ ಹಲವಾ । ಮನವೆ ನಂಬು ಹರಿಯ ಪಾದವಾ ॥ ವಲ್ಲ ॥ ಸತಿಸುತ ರುಣಲೆಂದು । ಆಸಿಗೆ । ಸತತ ಹಾಕುವಿ ತಂದೂ ॥ ಮತಿಯೆ । ಯಮನು ಕೊಂದು ವೈತಿರೆ । ಸತಿ ಬಿಡಿಸೂಳೆ ಬಂದು ಮನವೇ ॥ ೧ ॥ ಧರಣಿ ವೆಗ್ಗಳ ಘಳಿಸೀ । ಬಹುದಿನ ಇರುವೆನೆಂಬುವೆ ಬಯಸೀ ॥ ಧರಿಯಲರು ಪೂರೈಸೀ । ದರೆ ಸುಮ್ಮ । ನಿರು ಮಾಧವನ ಸ್ಮರಿಸಿ ಮನವೇ ॥ ೨ ॥ ಧನ ಸಂಪಾದಿಸ ಬ್ಯಾಡೋ । ಖಳ ಸುಯೋಧನನು ಯೇನಾದ ನೋಡೋ ॥ ಘನ ಮಹತ್ಮರ ಕೂಡೋ । ಪ್ರಾಣೇಶವಿಠಲನ ನಿರುತ ಪಾಡೋ ಮನವೆ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೮೪. ಪದ, ರಾಗ–ಅಹರಿ (ಝಂಪೆತಾಳ).

ಸತತ ಹರಿ ಸ್ಮರಿಸುತಿರಬೇಕು ಮನವೇ । ಇತರ ಚಿಂತಿಗಳು ಗಣಿಸದಲೆ ಇರಬೇಕೂ ॥ ಪಲ್ಲ ॥ ಸತಿಸುತ ಬಳಗವನ್ನು ಪಾಲಿಸುತಲಿರಬೇಕು, ಸತತ ಮಾಡುವದೆಲ್ಲ ಸ್ವಾಮಿ ಸೇವೆನಬೇಕು । ಅತಿಥಿಗಳು ಬರಲು ಕರದು, ಉಣಿಸುತಿರಬೇಕೂ ॥ ಮತಿಹೀನರ ಸಂಗಬಿಡಬೇಕು । ಮೂಜಗತ್ಪತಿಯಾಜ್ಞದವರು । ಶ್ರೀಪ್ರಮುಖರೆನಬೇಕೂ ॥ ೧ ॥ ಗುರುಹಿರಿಯರ, ಚರಣಕ ಬಾಗಿ ನಡಿಯಲಿ ಬೇಕು । ಪರಮ ವೈಷ್ಣವರ ಗೆಳಿತನವ ಮಾಡಲಿಬೇಕು ॥ ಪರವಾದಿಗಳ ಮತವ ನಿಂದಿಸುತಲಿರಬೇಕು । ವರಮಂತ್ರಗಳು ಜಪಿಸಬೇಕೂ ॥ ತನು ನಿಮಿಷ ಸ್ಥಿರವಲ್ಲವೆಂದು ನಿಶ್ಚಯ ತಿಳಿಯಬೇಕೂ ॥ ೨ ॥ ಪ್ರಥಮ ಚರಣದಲಿ ಗುರುಕುಲವಾಸವಿರಬೇಕು । ದ್ವಿತಿಯದಲಿ ಹರಿಸುರಾರ್ಚನಿ ಮಾಡಲಿಬೇಕು ॥ ತೃತಿಯದಲಿ ತೀರ್ಥಯಾತ್ರಿಗಳ ಚರಿಸಲಿಬೇಕು । ಚತುರ್ಥದಲಿ ಹರಿಸ್ಮರಿಸಬೇಕೂ । ವರುಷ । ಶತ ಹೀಗೆ ಸತ್ಕರ್ಮದಲಿ ಕಳಿಯಬೇಕೂ ॥ ೩ ॥ ಮಾನಾಪಮಾನಾದಿ ಸಮನ ತಿಳಿಯಲಿಬೇಕು । ಜ್ಞಾನಿಗಳು ಮನುಜರಲ್ಲೆಂದು ಪೂಜಿಸಬೇಕು । ಶ್ರೀನಿವಾಸನ ರೂಪಕ್ಯೈಕ್ಯ ಚಿಂತಿಸಬೇಕು ॥ ಹೀನಗುಣವನು ಬಿಡಲಿಬೇಕೂ । ಭಗವಂತ । ಏನು ಕೊಟ್ಟದೆ ಪರಮ ಸೌಖ್ಯವೆನಬೇಕೂ

॥ ೪ ॥ ಹೇಮಲೋಷ್ಟಾದಿಗಳು ಸಮನೋಡಲಿಬೇಕು । ಶ್ರೀ ಮಧ್ವಮುನಿ ಮತಕೆ ಸರಿಯಿಲ್ಲವೆನಬೇಕು । ಶ್ರೀ ಮಾಧವನ ದಿನದಿ ಉಪವಾಸವಿರಬೇಕು । ರಾಮಕಥಿಯನೆ ಕೇಳಬೇಕೂ ॥ ಸತತ ನಿ । ಷ್ಕಾನು ಪ್ರಾಣೇಶವಿಠ್ಠಲನು ಎನಬೇಕೂ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೮೫. ಪದ, ರಾಗ–ಕಾಂಬೋಧಿ (ಝಂಪೆತಾಳ).

ಹರಿಹರೀ ಎಂದು ಅನವರತ ಸ್ಮರಿಸೋ ॥ ನರವಿಷಯಲಂಪಟವ ಮುಂಚೆ ತ್ಯಜಿಸೋ ॥ ಹರಿ ॥ ಪಲ್ಲ ॥ ಹೋಮಾನ್ನದಿಂದುದಿಸಿ । ವನಚರಿಸಿ, ಕಪಿನೆರಸಿ । ಕಾಮಿನಿಯ ಕೊಂದು ಶರನಿಧಿಯ ದಾಟೀ ॥ ತಾಮರಸ ಮುಖಿಯ ಸಂತೋಷಬಡಿಸುತ ಎಲ್ಲ । ತಾಮಸರ ಸದಬಡಿದು । ಅಸುರಗೊಲಿದಾ ॥ ೧ ॥ ಬಲಿ ತಿಂದ, ಪುವು ತಂದ, ವಿಷ ಉಂಡ, ಮಡು ಬಿದ್ದ । ತುಳಿದ ಸರ್ಪನ, ಶರಿಯ ವರ, ಬಿಡಿಸಿದಾ ॥ ಖಳ ಬಕನ ಕೊಂದರಸಿ ಊಳಿಗವಮಾಡಿ ಶಶಿ । ಕುಲದೊಳವತರಿಸಿ । ಧಾರುಣಿ ಸಲಹಿದಾ ॥ ೨ ॥ ಯತಿಯಾದ ಪ್ರಾಣೇಶ ವಿಠ್ಠಲನ ದ್ವಿಜವರಗೆ ಸುತನಾಗಿ ಸದ್ಗ್ರಂಥ ವಿರಚಿಸಿದನಾ ॥ ಧೃತ ಕಮಂಡುಲ ದಂಡ, ಕಾಷಾಯ ಬದರಿಯಲಿ ಸತತ ನಿಲಿಸಿಹ ಜಗಚ್ಚೇಷ್ಟರಾದಾ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೮೬. ಪದ, ರಾಗ–ಭೈರವಿ (ಝಂಪೆತಾಳ).

ಭಯ ಉಂಟೆ ಮನುಜ ಶ್ರೀಪತಿಯೆ ಗತಿಯೆಂದವರಿಗೆ । ಪಯಗಡಲ ನಿಲಯ, ಭಕತರ ಮರಿಯನೂ ॥ ಪಲ್ಲ ॥ ದಂಡು ಬಹು ಬರಲಿ, ತನುರೋಗದಲಿ ಬಳಲಲೀ । ಕಂಡು ಪಬ್ಬರು ಮಾತನಾಡದಿರಲೀ ॥ ಹೆಂಡತಿಯು ತುಚ್ಛ ಮಾಡಲಿ ಮಗನು ಬೊಗಳಲೀ । ಕೆಂಡತೃಣನ್ಯಾಯ ಹರಿಸ್ಮರಣಗಿನಿತೂ ॥ ೧ ॥ ಅರಸುಗಳು, ಕೋಪಿಸಲಿ ವರುಷಗಳು ತಡಿಯಲೀ । ಹರಿದು ವ್ಯಾಘ್ರಗಳು ಮ್ಯಾಲೆ ಹರಿದು ಬರಲೀ ॥ ಉರುಗ ನಿರ್ಜರವದನ ಚೋರ ಭಯ

ವಾಗಲೀ । ಶರಧಿಮುಷಿನ್ಯಾಯ್ಯಯು ಅನಘನ ಸ್ಮರಣೆಗೇ ॥ ೨ ॥ ಗ್ರಾಸದೊರ ಕದಲಿರಲಿ । ಬಂಧುಗಳು ಜರಿಯುಲೀ । ನಾಶವಾಗಲಿ ಘಳಸಿದಂಥ ಬದುಕೂ ॥ ಶ್ರೀಶ ಪ್ರಾಣೇಶವಿಠ್ಠಲನೆ ನೀ ಗತಿ ಎನಲು । ವೀಶಾಹಿನ್ಯಾಯ್ಯಯು ಈ ಭಯ ಗಳೆಲ್ಲಾ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೮೭. ಪದ, ರಾಗ–ಭೈರವಿ (ಝಂಪೆತಾಳ).

ಹುಚ್ಚು ನೇರಿತೆ ನಿನಗೆ, ಮಂದಮತಿ ಮನವೆ ಕೇಳೂ ॥ ಎಚ್ಚರಿಕೆ ಇಲ್ಲೆ ಶೃತಿಸಾರುತಿಹದೂ ॥ ಪಲ್ಲ ॥ ಪರಮಾತ್ಮ ಆವಾಗ ಏನು ಮಾಡುವನೊ ಯಮ । ಗರಿಕಿಲ್ಲವೆಂಬುವರು ಬ್ರಹ್ಮಮುಖರೂ ॥ ಬರಿದೇ ನೀ ಸದನಸುತಿ ಸುತರು ಎನ್ನವರೆಂದು । ಕರಕರಿಗೆ ವಳಗಾಗಿ । ಕೆಡುತಿಹಲೊ ವ್ಯರ್ಥಾ ॥ ೧ ॥ ಈ ತನವು ನಚ್ಚಬಾರದು ನೀರಗುಳ್ಳಿಯಂ । ದೂ ತುಚ್ಛಮಾಡುವರು ಕಪಿ ಗಳೆಲ್ಲಾ ॥ ಪ್ರೀತಿಯಿಂದಲ ಅಶನ ಉಂಡು ನೊಕ್ಕಿದೆ ಒಮ್ಮೆ । ಸೋತ್ರೆ ಉಪ ವಾಸದಲಿ । ಎಂದು ಮಿಡುಕುತಿಯಲವೊ ॥ ೨ ॥ ಹಿಂದಿನವಗುಣವು ಪೋಗಲಿ ಶುದ್ಧ ಭಕುತಿಯಲಿ । ಇಂದು ಪ್ರಾಣೇಶವಿಠ್ಠಲನ ಪಾದಾ ॥ ವಂದಿಸುತ ದುರ್ವಿ ಷಯದಾಪೇಕ್ಷ ಜರಿದು ದ್ವಿಜ । ನಂದನನ ಸ್ನೆಹ ಸಂಪಾದಿಸುತ್ವರಾ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೮೮. ಪದ, ರಾಗ–ವರಾಳಿ (ಅಟತಾಳ).

ನಾಲಿಗಿದ್ಯಾತಕೆ ಲಕುಮಿಲೋಲನ ನೆನಿಯದೆ । ಮೂಲೋಕದೊಡೆಯಾ ಕೇಶವನ ಗುಣ । ತಿಳಿದು ಸತತ ಸ್ಮರಣೆ ಮಾಡದೇ ॥ ಪಲ್ಲ ॥ ಅಜ ಶಿವಾದಿ ದಿವಿಜರಿಂದ । ಭಜಿಸಿಕೊಂಬ ಅಖಿಲ ಮಹಿಮ । ತ್ರಿಜಗ ಕ್ಷಣಕೆ ಸ್ವೇಚ್ಛೆಯಿಂದ । ಸೃಜಿಪನಂದು ಸ್ಮರಣೆಮಾಡದೇ ॥ ೧ ॥ ಮ್ಯಾಲಿನೇಳು ಲೋಕ ಕಳಗಿ । ನೇಳು ಲೋಕ ನಮ್ಮ ಹರಿಗೆ ॥ ಸ್ಥೂಲ ರೂಪವೆಂದು ವೇದ । ಪೇಳುವವೆಂದು ಸ್ಮರಣೆ ಮಾಡದೇ ॥ ೨ ॥ ಉರಗಪರ್ವತದಲಿ ನಿಂದು ।

ಧರಣಿಯೊಳಗೆ ಭಕತಜನಕೆ ॥ ಕರದು ಕೊಡುವ ಪ್ರಾಣೇಶವಿಠಲ । ವರವು ಯಂದು ಸ್ಮರಣಿ ಮಾಡದೇ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೮೯. ಪದ, ರಾಗ–ಭೈರವಿ (ಝಂಪೆತಾಳ).

ಹರಿಯನ್ನಬಾರದೆ । ಎಲ ಮನವೆ ಆವಾಗಲೀ । ಮರಳೊಂದು ವಿಷ ಯದಾವೇಕ್ಷ ತೊರದೂ ॥ ಪಲ್ಲ ॥ ಸಂಸಾರವೆಂಬುವದು ದುಃಖಸಾಗರವೊ ವಂ। ದಂಶವಾದರು ಸುಖವು ಇದರೊಳಿಲ್ಲಾ ॥ ಹಿಂಸಿಸಿಕೊ ದುರ್ಗುಣವ ಇಂದಿ ನಾರಭ್ಯ ನಿಃ । ಸಂಶಯದಿ ಸಜ್ಜನರ ಸಂಗ ಪಿಡಿದೂ ॥ ೧ ॥ ತನುವು ಸ್ಥಿರ ವಲ್ಲ ದಾನವ ಮಾಡುವದಕರ್ಥ । ಕ್ಷಣಮಾತ್ರಕಾಲಸ್ಯ ಮಾಡಸಲ್ಲಾ ॥ ಧನ ಮನವು ಯಿದ್ದಾಗೆ ಸತ್ಪಾತ್ರರಿಗೇವೆ ಕೊಡು । ನಿನಗತಿಗೆ ಪಾಥೇಯನೆಂದು ತಿಳಿದೂ ॥ ೨ ॥ ಶ್ರೀಕಾಂತ ಪ್ರಾಣೇಶವಿಠಲ ಮೆಚ್ಚೂವಂತೆ । ನೂ ಕುದಿನ ಸುಖದುಃಖ ಸಮನ ಮಾಡೀ ॥ ಈ ಕುಸರರನ್ನ ನೇವಿಸದೆ ಸದ್ಭಕ್ತಿಯಲಿ । ಶ್ರೀ ಕಾಳಿಕಾಂತನೇ, ಮುಖ್ಯ, ಗುರುವೆಂದೂ ॥ ೩ ॥ ಶ್ರೀ ಮಧ್ವೇಶಾರ್ಪಣ ಮಸ್ತು ॥

೧೯೦. ಪದ, ರಾಗ–ಭೈರವಿ (ಅಟತಾಳ).

ಯಾಕೆ ಸಾಧುಗಳ ನೇವಿಸಲೊಲ್ಲೀ ॥ ಸಾಕುವರೆ ಕಾಕುಮನವೆ ॥ ಪಲ್ಲ ॥ ನಿರುತ ಮನಸಿನಲ್ಲಿ । ಹರಿಪಾದ ಕಮಲವ ॥ ಸ್ಮರಿಸುವರಿರಲಾಗಿ । ಮರಳೊಂದು ಕ್ಷೇತ್ರ ॥ ೧ ॥ ಬಲ್ಲೀದ ಮುಷ್ಟೀಕ । ಮಲ್ಲಾರಿ ಮಹಿಮಿಯ ॥ ಬಲ್ಲಾವರವಯವ ಎಲ್ಲರಂತೇ ॥ ೨ ॥ ಶಿರಕಾಸಿ, ಗಯಾನೇತ್ರ । ವರ ಕಾಂಚೀ ನಾಸೀಕ ॥ ಶರಣಾರ ವದನವೇ । ಶಿರಿ ಜಗನ್ನಾಥಾ ॥ ೩ ॥ ಹೃದಯಾವೆ ವೈಕುಂಠ । ಉದರ ಶ್ವೇತದ್ವೀಪ ॥ ಪದ ಸರ್ವಪುಶೇಷಾ । ಸದನವು ಕೇಳೋ ॥ ೪ ॥ ಪ್ರಾಣೇಶವಿಠಲಾನ । ಧ್ಯಾನಾವ ಮಾಳ್ಪರ ॥ ಮಾನವರೆಂದರೇ । ಹೀನ ಗತಿಯೋ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೯೧. ಪದ, ರಾಗ–ವಸಂತಭೈರವಿ (ಅಟತಾಳ).

ಸೊಕ್ಕಿಲಿ ಇರಬ್ಯಾಡವೆಲ ಹುಚ್ಚಪ್ರಾಣೀ । ಸೊಕ್ಕೀಲಿ ಇರಬ್ಯಾಡಾ ॥ ಪಲ್ಲ ॥ ಧೊರಿತನ ಬಂದಾಗ ಕೇವಲ ಬಡವರ ಕರಕರಿಬಡಿಸುವಿ ತಿಳಿಯದಲೇ ॥

ಸ್ಥಿರವಲ್ಲ ಸೌಭಾಗ್ಯ ಪೋಗಲು. ಬಳಲುತ । ತಿರಿಕಿಯುಬೇಡೂವದಿಟ್ಟಹೆದೆಲ ವೋ ॥ ೧ ॥ ಪ್ರಾಯದ ಕಾಲಕ್ಕ ಮದದಿಂದ ತಿರಗುವೀ । ತಾಯಿತಂದಿ ಗುರುಗಳು ಯನದೇ ॥ ಕಾಯ ಮುಪ್ಪಾಗಲು ಮುನುಗುತ ಮೂಲಿಗೆ, ಬಾಯಿ ಮುಚ್ಚಿಕೊಂಡು ಬೀಳುವ್ಯೋ । ಮರುಳೇ ॥ ೨ ॥ ಇಪ್ಪತ್ತುಸಾವಿರ ಹೊನ್ನಿನ ಬಿಗಿವಿಲಿ, ವಪ್ಪಿಲ್ಲದುರಿವಿ ಆ ಧನವು ಕಾಳೀ । ದರ್ಪಹ ಪ್ರಾಣೇಶವಿಠಲನ್ನ್ಯ ರಿಗೆ ಕೊಡೆ । ಲಪ್ಪಯಮ್ಮ ಎಂದು ಹೊಡಕೊಂಬಿ, ಮರುಳೇ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೯೨. ಪದ, ರಾಗ–ವರಾಳಿ (ಅಟತಾಳ).

ಬಳಸ ಬ್ಯಾಡಿರೊ ಇಂಥ ಖಳರ ಸ್ನೇಹವಾ । ಹಲವು ಬಗೆಯಿಂದ ನೋಡಿ । ತಿಳಿದುಕೊಂಡು ಬಾಳಿರೆಣ್ಣ ॥ ಪಲ್ಲ ॥ ಖಿನ್ನರಾಗಬ್ಯಾಡಿ ಮುಂದೆ । ಯನ್ನ ಕಾರ್ಯ ಬರಲಿ ನಿಮ್ಮ ॥ ನುನ್ನ ತರನ ಮಾಳ್ಪೆನೆಂದು ಅನ್ನ ಕಳವ ಸಾಪಿ ಕೂಡ ॥ ೧ ॥ ಮೊದಲ ಸ್ನೆಹಕಿಂದು ನಮ್ಮ । ಕಧಿಕ ಪ್ರಾಪ್ತಿ ಆಹದೆಂದು ॥ ಒದಗಿ ಬಂದವರಿಗೆ ಊರ । ಕದಕೆ ಅಪ್ಪಣಿಲ್ಲವೆಂಬ ॥ ೨ ॥ ಕಲುಷನಾಶ ದ್ವಿಜರ ಪಾದ । ನಳಿನ ಪಾಂಸುಸ್ಪರುಶವೆಂದು ॥ ತಿಳಿಯದೆಮ್ಮ ಮನಿಯು ಸ್ವಲ್ಪ । ಬಳಿಯ ಗ್ರುಹದೋಳಿಹ್ಯದು ಯಂಬ ॥ ೩ ॥ ಹಲವು ಬೇಡಿದದನು ಕೊಟ್ಟು । ಬಲು ಉದಾರಿ ಎಂದು ತೋರಿ ॥ ಶಳದುಕೊಂಬ ಸಕಲ ವಿದ್ದ್ಯ । ಸುಲಿವ ಹಣ ಉಪಾಯದಿಂದ ॥ ೪ ॥ ಕಾಸಿನಾಸಿಗಾಗಿ ಯಿಂಥ । ದೋಷಿ ಸಂಗ ಮಾಡಿ ವ್ಯರ್ಥ ॥ ಮೋಸವಾಗಬ್ಯಾಡಿ ಪ್ರಾಣೇಶವಿಠಲನಂಘ್ರಿ ಭಜಿಸಿ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೯೩. ಪದ, ರಾಗ–ವರಾಳಿ (ಅಟತಾಳ).

ಘಾಸಿ ಮಾಡನು ಯಮನು । ಘಾಸಿ ಮಾಡನೂ ವಾಸುದೇವನಂಘ್ರಿ ಯುಗಳ । ಬ್ಯಾಸರದಲೆ ಭಜಿಸುವರಿಗೆ । ಘಾಸಿಮಾಡನೂ ॥ ಪಲ್ಲ ॥ ಎರಡು ಆರು ಪುಂಡ್ರ ತುಲಸಿ । ಸರಸಿಜಾಕ್ಷಮಾಲಿ ಧರಿಸಿ । ಶಿರಿ ರಮಣನ ಗುಣ ಕಥನವ । ಇರಳು ಹಗಲು । ಸ್ಮರಿಸುವರಿಗೆ ॥ ೧ ॥ ಅಲವ ಬೋಧರುಕ್ತಿಯಂತೆ।

ಮಲವಿಸರ್ಜನಾದಿ ಕರ್ಮ । ಗಳನು ತಪ್ಪದಲೆ ನಡಿಸುತ । ಭಳಿರೆ ಎನಿಸಿ ಕೊಂಬುವರಿಗೆ ॥ ೨ ॥ ಪನ್ನಗಾರಿ ಧ್ವಜನ ದಿನದೊ । ಳನ್ನ ನಿದ್ರಿಗಳನು ತೊರದು ॥ ಅನ್ಯಶಾಸ್ತ್ರಗಳನು ಕನಸಿ । ಲೆನ್ನ ನೆನಿಸದಿದ್ದವರಿಗೆ ॥ ೩ ॥ ಪಂಚತೀರ್ಥಕರದೊಳರಿತು । ಪಂಚಕರ್ಮಗಳನು ಮಾಡಿ ॥ ಪಂಚ ಅಗ್ನಿ ಗಳಲಿ ನಿರುತ । ಪಂಚ ಆಹುತಿ ಕೊಡುವರಿಗೇ ॥ ೪ ॥ ತಾರತಮ್ಯರೂಪಗ ಳನು । ಸೂರಿಗಳ ಮುಖದಲಿ ಕೇಳಿ ॥ ವಾರಣಾಸಿ ಪ್ರಮುಖಯಾತ್ರಿ । ಭಾರಿ ಭಾರೆ ಮಾಡುವರಿಗೆ ॥ ೫ ॥ ಯಾದವೇಶನಿಚ್ಛೆಯಿಂದ । ಲಾದ ದೇವೆ ಲಾಭ ವೆಂದು ॥ ಮೋದಬಡುತಲಿದ್ದು ಪಂಚ । ಭೇದ ತಿಳಿವ ಜ್ಞಾನಿಗಳಿಗೇ ॥ ೬ ॥ ಹೀನ ಬಹು ಉತ್ತುಮನು ಯಿಂದು । ಪ್ರಾಣಿಗಳೆಂತರಿವರೊ ಅಂತೆ ॥ ಕಾಣಿಸಿ ಕೊಂಬ ಪ್ರತ್ಪ್ರತ್ಯೇಕ । ಪ್ರಾಣೇಶವಿಠಲನೆಂಬುವರಿಗೆ ॥ ೭ ॥ ಶ್ರೀ ಮಧ್ವೇ ಶಾರ್ಪಣಮಸ್ತು ॥

೧೯೪. ಪದ, ರಾಗ–ಕಾಂಭೋದಿ (ಅಟತಾಳ).

ಕೆಡುವರೊ ವ್ಯರ್ಥ ಈ ಬ್ರಹ್ಮಣ್ಯ । ಜನ್ಮ । ಪಡದು ಸಾಧನ ಮಾಡಿ ಕೊಳ್ಳಾರೋ ವ್ಯರ್ಥ ಕೆಡುವಾರೊ ॥ ಪಲ್ಲ ॥ ಅಧಮರ ದಾಸೆಂದರಾನಂದಾ । ಶಿರಿ । ಸದನನದಾಸೆಂದರತಿ ದುಃಖ ॥ ದಿನ್ನ ಎದಿಯಲ್ಲಿ ಚರ್ಮಗಳಾನಂದಾ । ತುಲಸಿ । ಪದುಮಾಕ್ಷಿ ಧರಿಸಲಿಕ್ಕತಿ ದುಃಖಾ ॥ ೧ ॥ ಸೂಳೀಯ ಬಳಿ ಫೋಗಲಾನಂದಾ । ಪಾತ್ರ । ರಾಲಯಖೋಗುವದತಿ ದುಃಖ ॥ ತನ್ನ ಎಳೆಮ್ಮಿ ತೊಳಿವದಕ್ಕಾನಂದಾ । ಒಂದು ಸಾಲಿಗ್ರಾಮದ ಪೂಜಿಗತಿ ದುಃಖಾ ॥ ೨ ॥ ಬಳುವಾಗ ಶಗಣೀಯನಾನಂದಾ । ಪುಷ್ಪ । ಗಳ ನೋಡಿ ತಾಹೋದಕ್ಕತಿ ದುಃಖಾ ॥ ಬಹು । ಕಲಭಾಷೆ ಮಗಸೋಳಾನಂದಾ । ನಾಮ । ಗಳ ಉಚ್ಚ ರಿಸುವದಕ್ಕ ಅತಿ ದುಃಖಾ ॥ ೩ ॥ ನತಿಗಂಬರನ ಕೊಂಬದಾನಂದಾ । ನಮ್ಮ । ಚ್ಯುತಗೊಂದು ಗೇಣೊಸ್ತ್ರಕ್ಕತಿ ದುಃಖಾ ॥ ನಿತ್ಯ । ಪತಿತರೀಗೀವೊದಕ್ಕಾ ನಂದಾ । ಸಂಭ । ವಿತರಿಗೆ ಕೊಡುವದಕ್ಕತಿ ದುಃಖ ॥ ೪ ॥ ಎಸೂರು ತಿರು ಗುವದಾನಂದಾ । ಕ್ಷೇತ್ರ । ವಾಸೇಕ ರಾತ್ರಿಗೆ ಅತಿ ದುಃಖಾ ॥ ಇಂಥ । ದೋಷಕಾರಿಗಳಿಗಿಲ್ಲ್ಯಾನಂದಾ । ಶ್ರೀ । ಪ್ರಾಣೇಶವಿಠ್ಠಲಲ್ಲೀವತಿ ದುಃಖಾ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೯೫. ಪದ, ರಾಗ—ಭೈರವಿ (ಏಕತಾಳ).

ಬೇಡೂವರೋ ಸುಖ । ಬೇಡಾರೋ ಕಷ್ಟವ । ಮಾಡಾರೋ ಅದರ ಉಪಾಯವಾ ॥ ಜನ ಬೇಡೂವರೊ ಸುಖವಾ ॥ ಪಲ್ಲ ॥ ಕಿಟ್ಟಾ ತುಳಿದು ಕುರ । ಳೊಟ್ಟೂವರೊಂದಿನ ॥ ಕುಟ್ಟಾರೋ ರಂಗ ವಾಲಿಯನೂ ॥ ೧ ॥ ಬಟ್ಟ ಕೊಂಬುವರು । ಎಥೇಷ್ಟ ದೇವರುಗಳು ॥ ಪೆಟ್ಟಗಿಯೊಳು ಬತ್ತಲಿಹ್ಯವೂ ॥ ೨ ॥ ಸಾಲೂಸಾಲೆಮ್ಮಿಯ । ಸೋಲಾದೆ ತೊಳವರು ॥ ಸಾಲಿಗ್ರಾಮಕ್ಕೀಸು ನೀರಿಲ್ಲಾ ॥ ೩ ॥ ಇದ್ದ ಪದಾರ್ಥವನ್ನೆ ಬುದ್ಧಿಪೂರ್ವಕವಾಗಿ ॥ ಮಧ್ವೇಶಗರ್ಪಿಸಿ ಭುಂಜಿಸರೋ ॥ ೪ ॥ ತುಕ್ಕೂವರೂರು । ಮುಕ್ಕೂಕಾಳಿಗೆಂದೆದ್ದು ॥ ಮುಕ್ಕುಂದನಾ ಸುತ್ತಿ ನಮಿಸಾರೋ ॥ ೫ ॥ ಬೀಗರೂಟಕನೇಕ । ಭೋಗಾವು ಜೋಳದ ॥ ವಾಗಾರ ಬ್ರಾಹ್ಮರಯಡಿಯೊಳಗೇ ॥ ೬ ॥ ತಮ್ಮನಿಯವರಿಗೆ । ಖವ್ಮಾನ ತುಪ್ಪವು ॥ ಖಮ್ಮಟು ದೇವ ಬ್ರಾಹ್ಮರೀಗೆ ॥ ೭ ॥ ಹಾಳೂಸುದ್ದಿಗೆ ಕಿವಿಗಾಳು । ಕೊಟ್ಟಹರೊವ್ಮ್ಮೆ ॥ ಕೇಳಾರೋ ಸತ್ಕಥೆಗಳನೂ ॥ ೮ ॥ ಕೆಟ್ಟದ್ದು ತಾಂವಮಾಡಿ । ಬಿಟ್ಟೆವ್ಮನು ಪ್ರಾಣೇಶ ॥ ವಿಠ್ಠಲನೆಂದು ಮಿಡುಕೂವರೊ ॥ ೯ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೯೬. ಪದ, ರಾಗ—ಭೈರವಿ (ಅಟತಾಳ).

ಹೋಗುವಳಗಸೀಯ ಪರಿಯಂತಾ । ಭ್ರಾಂತಳಾಗಿ ಬಂದೆಂಬಳ್ಸೊಸಿಗೆ ಹೀಗಂತಾ ॥ ಹೋಗೂವಳಗಸೀಯ ಪರಿಯಂತಾ ॥ ಪಲ್ಲ ॥ ಹರಿಯಾತ್ರಿ ಘೋಹ ಜ । ನರ ಕಂಡು ಬ್ಯಾಗ ವೈ । ಮರದು ನೋಡುವೆನೆಂಬ ಹರುಷದಿಂದುಬ್ಬೀ ॥ ೧ ॥ ನೆರಮನಿಯವರಿಗೆ । ಮೊರಪುಟ್ಟಗಿದ್ದಾನ ॥ ಯರವು ಎಂದಿಗು ಕೊಡದಿರು ಕಂಡ್ಯಾ ಎಂದೂ ॥ ೨ ॥ ಸುಟ್ಟೀತು ಕೊಳವಿ, ಮು । ತ್ತಿಷ್ಟ ಬಾಯಿಲೆ ಊದಿ ॥ ಅಟ್ಟುಣ್ಣು ನಿನ್ನಯ । ಹೊಟ್ಟಗೇ ಎಂದೂ ॥ ೩ ॥ ತಪ್ಪತಾರ ತಿಂದು ತಿಪ್ಪಿ । ಘಾಕಲಿಬ್ಯಾಡ ॥ ಒಪ್ಪತ್ತೆ ತಿನುತಬಾಸಪ್ಪಟಯುಂದೂ ॥ ೪ ॥ ಮಂದಿ ಕಂಡು ದೀಪ ಮಂದಿರಕಿಡಬ್ಯಾಡ ॥ ಮಂದ ತುಟ್ವಾಕ್ಕೆಧಿತು । ಮುಂದೆಣ್ಣೆ ಎಂದೂ ॥ ೫ ॥ ಸಡಗರದಲಿ ಥಾಂವು ಕೊಡು

ಎಂದು ಕೇಳ್ಯಾರು ॥ ಪಡಸಾಲಿಯೊಳು ತಂದು । ಇಡು ಬಾನವೆಂದೂ ॥೬॥ ಭಿಕ್ಷಾದವರಿಗೆ ಮುಂತ್ರಾಕ್ಷತಿಗಿಲ್ಲೆನ್ನು ॥ ನಾ ಕ್ಷಮಿಸೆ ನೀಡಿದರೆ । ಸೀಕ್ಷಿಪೆ ನೆಂದೂ ॥ ೭ ॥ ಕುರುಳುತಾ ಬೆಂಕಿ ಹೊ । ತ್ತಿರಿಸಿಕೊಡುವೆನೆಂದು ॥ ಮುರಿದು ಹೊತ್ತಿಸಿಕೊಡು ನೆರಿಯುವರಿಗೆಂದೂ ॥ ೮ ॥ ಹೆತ್ತವರೂರಿಂದ । ಹಸ್ತು ಬಂದ ವರೀಗೆ ॥ ಅತ್ತೆವರೆಯಿಲ್ಲೆಂದು ಉತ್ತರ ಕೋಡೆಂದು ॥ ೯ ॥ ಬಿಸಿಲಿಗೆ ಹಾಕುದ । ವಸಗಳ ಮಾಳಿಗಿ ಸಾ ॥ ರಿಸಿ ಖಡ್ಡಿಬುಡ್ಡಿಯ । ಹಸಮಾಡ್ಯಣ್ಣೆಂದೂ ॥ ೧೦ ॥ ಪ್ರಾಣೇಶವಿಠಲಾನುಧೇನಿಸಲಿಲ್ಲಿಹ ॥ ನಾನ್ಯಾಖೋಗಲಿ ಎಂದು । ತಾನಿಂತಳಬಲೆ ॥ ೧೧ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೯೭. ಪದ, ರಾಗ–ವರಾಳಿ, (ಅಟತಾಳ).

ಅನ್ಯಸತಿಗೆ ಒಲಿಯಬಾರದೂ । ಅನ್ಯಸತಿಗೆ ಒಲಿದರೊಂದು । ಘನ್ನತನವ ಕಾಣೆ ಜನರು । ಮುನ್ನಣಿಡರು ಸದ್ಗತಿಲ್ಲ । ಸಣ್ಣ ಮನುಜನಾಗಬ್ಯಾಡ ॥ ಅನ್ಯಸತಿಗೆ ॥ ಪಲ್ಲ ॥ ತಂದಿತಾಯಿ ಅಣ್ಣತಮ್ಮ । ಬಂಧುಬಳಗ ತೊರಿಸಿ ತನ್ನ ॥ ಹೊಂದಿಕೊಂಡ ಶ್ವಾನನಂತೆ । ಹಿಂದೆಮುಂದೆ ತಿರುಗಿಸುವಳು ॥ ೧ ॥ ಸ್ನಾನ ಮೊದಲು ಕರ್ಮಮಾಡಿ । ಏನು ಉಂಬಿ ಫಲವ ದೇಹ ॥ ಕ್ಷೀಣಗೊಳಿಸ ಬ್ಯಾಡವೆಂದು । ಹೀನಬುದ್ಧಿ ಪ್ರೇರಿಸುವಳು ॥ ೨ ॥ ಯನ್ನ ಪತಿಯು ಒಬ್ಬ ಮ್ಯಾಲೆ । ನಿನ್ನ ಸಂಗವಲ್ಲದಿತರ ॥ ಕಣ್ಣನೆತ್ತಿ ನೋಡೆನೆಂಬ । ಛನ್ನೈಕಾರಿ ಜಾರಿ ಕುಲಜೆ ॥ ೩ ॥ ಪ್ರಾಣದೊಲ್ಲಭನ್ನಕಿಂತ । ನೀನೆ ಅಧಿಕವೆಂದು ಬಹಳ ॥ ಆಣೆಕೊಟ್ಟು ವಗತನವನು । ಹಾನಿಮಾಡಿ ತೋರಿಸುವಳು ॥ ೪ ॥ ಸತಿಯ ಸೇರದಂತೆ ಮಾಡಿ । ಸತತಚೋದ್ಯ ಮಾತನಾಡಿ ॥ ಹಿತವತೋರಿ ಮತಿಯ ಕೆಡಿಸಿ । ಅತಿಯಭಾಸ ಮಾಡಿಸುವಳು ॥ ೫ ॥ ಧನವುಕೊಡುವ ತನಕ ಯನ್ನ । ತನುವು ನಿನ್ನದೆಂದು ದಕ್ಕಿ ॥ ಕೊನಿಗೆ ರಿಕ್ತತನವು ಬರಲು । ಮನಿಯಕಡಿಗೆ ಸುಳಿಯಗೊಡಳು ॥ ೬ ॥ ಇದನು ಮನಕೆ ತಂದು ದಯಾ । ಉದಧಿ ಪ್ರಾಣೇಶವಿಠಲನಂಘ್ರಿ ॥ ಹೃದಯದಲ್ಲಿ ನೆನೆದು ಚಿಂತಿ । ವದದು ಸತತ ಸುಖಿಸೊ ಮನುಜ ॥ ೭ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೯೮. ಪದ, ರಾಗ–ವರಾಳಿ (ಅಟತಾಳ).

ಜಾರ ಪುರುಷಾರಾಡೋ ನುಡಿಯು । ಶ್ರೀ ಸ । ಮಾರನ ಭಕ್ತರು ಕೇಳಿ ಥೀಯನ್ನಿರೀ ॥ ಜಾರಾ ಪುರುಷಾರಾಡೊ ನುಡಿಯು ॥ ಪಲ್ಲ ॥ ಮೊನ್ನೆ ನಾ ನದಿಯೋಳು ಸ್ನಾನಕ್ಕೆ ಪೋಗಿರೆ । ಹೆಣ್ಣೊಂದು ಬಂದಿತ್ತೊ ವಗಿಯಲಿಕ್ಕೆ ॥ ಅಣ್ಣಾ ನಾ ಏನು ಹೇಳಲಿ ಯಂಪಿ ಇಕ್ಕಾದೆ । ಯನ್ನನೇ ನೋಡುವಳೆಂದು ಪೇಳೂವನೊಬ್ಬ ॥ ೧ ॥ ದಾರಿಯೊಳ್ ಬರುತೀರೆ ಗಜಗಮನ್ಯೊಬ್ಬಳು । ಸಾರಿಸಾರಿಗೆ ಬಂದು ನಗುತ ನಿವ್ಮಾ ॥ ಊರಾವದೆಂಬಳು ಬಿಡಿಬಿಡಿಮಾ ತೀಲಿ । ನಾರಿಹಂಬಲ ಮರಿಯಿನ್ಯೊ ತಮ್ಮ, ಎಂಬೊಬ್ಬ ॥ ೨ ॥ ಆ ತರುಣಿಯು ಚಲ್ವಿಕಿಯ ನೋಡಿ ಬೆನ್ನಿಗೆ । ಆರೂ ಪೋಗಲು ಕೋಣಗುದಗ ಗಂಡೂ ॥ ಜಾತಿಗಳಿಗೆ ನಾಚಿಕಿಲ್ಲೆಂದು ಬೈವಳ । ಮಾತೀನ ಸಂಪಿಯೇನು ಹೇಳಲೆಂಬೊಬ್ಬನು ॥ ೩ ॥ ಬಳಿಜಾಡರೋಣಿಯೋಳ್ ಬರುವಾಗ ಪ್ರಾಯದ । ವಳು ಕಂಡು ಎದುರಿಗೆ ಪೋಗಲಾಗೀ ॥ ಲಲನೆ ಹಿಂದಕ್ಕೆ ದಬ್ಬಿದರೆ ಗೋಡಿಗಾತೆಕ್ಕೈ । ವಳ ದದ್ದೆ ಯಚ್ಚರಿಕಿಲ್ಲವೆಂಬುವನೊಬ್ಬ ॥ ೪ ॥ ಜಾಣಾರು ಬಹುಮಂದಿ ಇರಲಾಗಿ ಬೇಕಂತ । ಓಣೀಯೊಳಗೆ ತೊಂಬಲದರಸವಾ ॥ ಮೀನಾಕ್ಷಿ ಉಗಳೀದಳೆನ ವ್ಯಾಲೆ ಸುಳ್ಳಲ್ಲ । ಪ್ರಾಣೇಶವಿಠಲನ ಆಣೆಂಬೊಬ್ಬ ವಿವೇಕಿ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೯೯. ಪದ, ರಾಗ–ಪೂರ್ವಿ (ಆದಿತಾಳ).

ವೈರಾಗ್ಗ್ಯವೆ ಜಪತಪ ಮಖಯೋಗ ಯಾತ್ರಿ ಧರ್ಮದಾನ ॥ ಮಾರಮಣನ ಪ್ರೀತಿದರಿಂದಾಹದು । ಎಂಬುವನೇವೇ ಪ್ರವೀಣಾ ॥ ಪಲ್ಲ ॥ ಉಂಡು ಉಂಡು ನಾವುಂಡಿಲ್ಲೆಂಬದೆ ಮಹ ವೈರಾಗ್ಗ್ಯ । ಕಂಡೂಕಂಡು ನಾ ಕಂಡಿಲ್ಲೆಂಬದೆ ಬಲು ವೈರಾಗ್ಗ್ಯ ॥ ಹೆಂಡತಿಸಂಗವಮಾಡಿ ಮಾಡಿಲ್ಲೆಂಬದೆ ವೈರಾಗ್ಗ್ಯ । ಹಿಂಡೂಬಳಗದೊಳು ಇದ್ದೂ ಇದ್ದೂ ಇಲ್ಲೆಂಬದೆ ವೈರಾಗ್ಗ್ಯ ॥ ೧ ॥ ನಡದು ನಡದು ನಾ ನಡದೆ ಇಲ್ಲೆಂಬದೆ ದೃಢವೈರಾಗ್ಗ್ಯ । ನುಡಿದು ನುಡಿದು ನಾ ನುಡಿದೇ ಇಲ್ಲೆಂಬದೆ ನಿಜವೈರಾಗ್ಗ್ಯ ॥ ಹಿಡಿದು ಹಿಡಿದು ನಾ ಹಿಡಿದೇ ಇಲ್ಲೆಂತಿಪ್ಪದೆ ವೈರಾಗ್ಗ್ಯ । ಉಡಿಗಿ ಉಟ್ಟು ನಾ ಉಟ್ಟೆ ಇಲ್ಲೆಂತೆಂಬದೆ ವೈರಾಗ್ಗ್ಯ ॥ ೨ ॥ ಬಿಟ್ಟೂ ಬಿಟ್ಟೂ ನಾ ಬಿಟ್ಟೆಯಿಲ್ಲೆಂಬದೆ ವೈರಾಗ್ಗ್ಯ । ಕೆಟ್ಟೂ ಕೆಟ್ಟೂ ನಾ ಕಟ್ಟಲ್ಲವೆಂಬದೆ

ಘನವೈರಾಗ್ಯ । ಕೊಟ್ಟೂ ಕೊಟ್ಟೂ ನಾ ಕೊಟ್ಟೆಯಿಲ್ಲೆಂತೆಂಬದೆ ವೈರಾಗ್ಯ । ಅಷ್ಟೂ ಶ್ರೀ ಪ್ರಾಣೇಶವಿಠ್ಠಲಗರ್ಪಿತವೆಂಬದೆ ವೈರಾಗ್ಯ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೦೦. ಪದ, ರಾಗ–ಪೂರ್ವಿ (ಆದಿತಾಳ).

ಇಂಥಲ್ಲಿರಬೇಕು ಜನ್ಮಸಾರ್ಥಕವಮಾಡುವ ನರನೂ । ಎಂಥೆಂತಲ್ಲೆಂದರೆ ಕೇಳ್ವದು ಸುಜನರು ಪೇಳ್ವೆನದನೂ ॥ ಪಲ್ಲ ॥ ಭಾಗವತಾದಿ ಪುರಾಣ ಸಾತ್ವಿಕರು ಪೇಳುವ ಸ್ಥಳದಲ್ಲೀ । ಭಾಗೀರಥಿ ಮೊದಲಾಗಿಹ ಸತ್ತೀರ್ಥಗಳಿಹ ಭೂಮಿಯಲೀ ॥ ಯಾಗಮಾಡುವಲ್ಲಿ ನಾಗಪಾಲಕನ ಆಲಯವಿದ್ದಲ್ಲೀ । ಯೋಗಿಜನರು ಅಹರ್ನಿಶಿಯಲಿ ಭಗವದ್ಧ್ಯಾನ ಮಾಡುವಲ್ಲೀ ॥ ೧ ॥ ಸತ್ಯವಚನವಿದ್ದಲ್ಲಿ ದುರ್ವಿಷಯ । ಬಿಟ್ಟ ಪುರುಷರಲ್ಲೀ ॥ ಮತ್ತರಾಗದಲೆ ಬ್ರಹ್ಮಚಾರಿಮಾತ್ರಕ ನಮಿಸುವರಲ್ಲೀ । ವಿತ್ತರಾಶಿ ಕಸಕುಪ್ಪಿ ಸಮನೆಂದರಿತು ಈಹರಲ್ಲೀ । ಮರ್ತ್ಯರಾಶ್ರಯಿಸಿ ವಂದು ಕಾಲಕುವಜೀವಿಸದವರಲ್ಲೀ ॥ ೨ ॥ ತತ್ವವರಿತು ನೋಳ್ಪರಿಗೆ ಹುಚ್ಚರಂದದಿ ಇದ್ದವರಲ್ಲೀ । ಉತ್ತಮವಾಗಲಿ ಕೆಟ್ಟದೆ ಆಗಲಿ । ನಗುತಲೆ ಇಹರಲ್ಲೀ ॥ ಕತ್ತಿಯೆ ಮೊದಲಾಗಿಹ ಪ್ರಾಣಿಗಳಲಿ ಸಮಕರುಣಿದ್ದಲ್ಲೀ । ಸತ್ಯರಮಣ ಪ್ರಾಣೇಶವಿಠ್ಠಲನ ಮೂರ್ತಿಕಾಂಬರಲ್ಲೀ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೦೧. ಪದ, ರಾಗ–ವರಾಳಿ (ಅಟತಾಳ).

ಏನು ಸಾರ್ಥಕಾ, ಬದುಕಿ ಏನು ಸಾರ್ಥಕಾ । ಜಾನಕೀಶನ ಧ್ಯಾನ ಮಾಡದೆ ನಾನು ಎಂಬವ ಹೀನ ಬದುಕಿ । ಏನು ಸಾರ್ಥಕಾ ॥ ಪಲ್ಲ ॥ ಎಳಿ ಎಳಿದೆನಿಯ ತುಲಸಿ । ದಳ ತಂದು ಭಕುತಿಯಿಂದ । ಜಲಜನಾಭನ ಚರಣ ಕಮಲ । ಗಳಿಗೆ ಅರ್ಪಿಸದವನು ಬದುಕಿ ॥ ೧ ॥ ಹೊತ್ತರೆದ್ದು ಕ್ರಮದಲಿಂದ । ಮೃತ್ತಿಕಿ ಶೌಚಾದಿಕರ್ಮ ॥ ನಿತ್ಯಮಾಡಧರಟಬಡದು । ಹೊತ್ತುಗಳವುತಿಹನು ಬದುಕಿ ಎನು ಸಾರ್ಥಕಾ ॥ ೨ ॥ ಪತ್ನಿ ಜರಿದು ಅನ್ಯ ಸತಿಯು । ರತ್ನ ಸಮನ ತಿಳಿದು ಹರಿಯ । ನರ್ತನದಿಂದ ಪಾಡಿಸು ಗತಿ । ಯತ್ನಮಾಡದವರು ಬದುಕಿ ॥ ೩ ॥ ಮಾತೃಪಿತೃಗಳಿಗೆ ಮಾರಿ । ಭ್ರಾತೃಗಳೊಳು ವಂಚಿಸುತಲಿ ॥ ಶ್ರೋತ್ರಿಯರನು ಹಳಿದು ನಿರಯ । ಪಾತ್ರನಾಗುವವನು ಬದುಕಿ ॥ ೪ ॥ ಡಂಬ

ಕದಲಿ ಮಡಿಯು ಮಾಡಿ । ನಂಬಿದವರ ಕೆಡಿಸಿ ತಾನೆ ॥ ಉಂಬುವದಕೆ ಪರರ ಹಾನಿ । ಹಂಬಲಿಸುತಲಿಹನು ಬದುಕಿ ॥ ೫ ॥ ಭೇದಮತವ ಪೊಂದದಲೇವೆ । ಮೇಧ್ಯ ಮೇಧ್ಯ ಭಕ್ಷಿಸುತ ಕು ॥ ಚೋದ್ಯದಿಂದ ತಂದಿತಾಯಿ । ಶ್ರಾದ್ಧ ಮಾಡದವನು ಬದುಕಿ ॥ ೬ ॥ ಕಾರ್ತಿಕಾದಿ ಸ್ನಾನಹೋಮ । ವಾರ್ಧ ಸಖನ ದಿವ್ಯವಾದ ॥ ಮೂರ್ತಿಗಳಿಗೆ ಧೂಪ ಮಂಗ । ಳಾರ್ತಿ ಮಾಡದವನು ಬದುಕಿ ॥ ೭ ॥ ಮಾಧವನ್ನ ರೂಪಗಳಿಗೆ । ಭೇದವಿಲ್ಲವೆಂದು ತಿಳಿದು ॥ ಸಾದರ ದಲಿ ಪೂಜಿಸಿ ಪ್ರ । ಸಾದ ಉಣ್ಣದವನು ಬದುಕಿ ॥ ೮ ॥ ಪ್ರಾಣೇಶವಿಠಲ ಪೇಳಿದದನು । ಧ್ಯಾನಕೆ ತರದೆ ಅನ್ಯಶಾಸ್ತ್ರ ॥ ಸಾನುರಾಗದಿ ಕೇಳಿಸುಖಿವ । ಹೀನಬುದ್ಧಿ ನರನು ಬದುಕಿ ॥ ೯ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೦೨. ಪದ, ರಾಗ-ವರಾಳಿ (ಆದಿತಾಳ).

ಹೀಗನುದಿನದಲಿ ಆಚರಿವರು ಸದ್ವೈಷ್ಣವರೂ । ಹ್ಯಾಗೆಂದರೆ ಆವನಿತು, ಪೇಳುವೆನು, ಕೇಳ್ವದು ಸಜ್ಜನರೂ ॥ ಪಲ್ಲ ॥ ಕೊಡೊದಿಲ್ಲ ಶೈವರಿಗೆ ದಾನವನು । ಹಿಡೋದಿಲ್ಲವರದೂ । ಅಡೋದಿಲ್ಲ ಹರಿಗಲ್ಲದೆ ವಿಷಯಕೆ । ಸಿಡೋದಿಲ್ಲ ಮನಸೂ ॥ ಸುಡೋದಿಲ್ಲ ಪರರನ್ನವಹಮ್ಮಿಗೆ । ಪಡೋದಿಲ್ಲ ಖ್ಯಾತೀ । ನಡೋದಿಲ್ಲವಧಮರ ಸ್ಥಾನಗಳಿಗೆ । ವಡೋದಿಲ್ಲ ತತ್ವಾ ॥ ೧ ॥ ತಡೋದಿಲ್ಲ ವನ್ಯಾಯು, ಪ್ರವರ್ತಕ । ಬಡೋದಿಲ್ಲ ದೈನ್ಯಾ । ಕಡೋದಿಲ್ಲ ವೃಧವರ್ಣಾ ದಿಗಳನು । ತೊಡೋದಿಲ್ಲ ಸ್ವರ್ಣಾ ॥ ಇಡೋದಿಲ್ಲ ನಾಳಿಗೆ ದಿವ್ಯಾಂಬರ । ಉಡೋದಿಲ್ಲ ಬಯಸೀ । ಜಡೋದಿಲ್ಲ ಭೋಗ ದ್ರವ್ಯಂಗದಿ । ನುಡೋದಿಲ್ಲ ಪದ್ಧಾ ॥ ೨ ॥ ಹೊಡೊದಿಲ್ಲ ಪ್ರಾಣಿಗಳ ಅನರ್ಪಿತ । ಮುಡೋದಿಲ್ಲ ಶಿರದೀ । ಶಡೋದಿಲ್ಲ ಬಲ್ಲವರಾವೆಂದೂ । ತೂಡೋದಿಲ್ಲ ಮುದ್ರೀ ॥ ಕುಡೋದಿಲ್ಲ *ಸಪ್ತಾಂಬುಕುಶಾಸ್ತ್ರದಿ । ನಡೋದಿಲ್ಲ ಬುದ್ಧೀ ॥ ಬಿಡೋದಿಲ್ಲ ಪ್ರಾಣೇಶ ವಿಠಲನ ದಿನ । ಕೆಡೋದಿಲ್ಲವೆಂದೂ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

---

*ಸಪ್ತಾಂಬು = ೭. ನೀರು: — केश[1] श्मश्रु[2] नखाग्रे[3] च शय्या[4] तश्चैक[5] पाणिनः तिष्टत्पानं[6] शौचशेषं[7] सप्तांबुसुरयासमं

೨೦೩. ಪದ, ರಾಗ–ಪೂರ್ವಿ (ಅಟತಾಳ).

ಹರಿಭಕ್ತರಾದ ಬಳಿಕ ದುಃಸ್ವಭಾವದ । ನರರ ಕೊಂಡಾಡೂವರೆ । ಸರಸೀಜಾಂಬಕನೆ ಕೃಪಾಂಗದಿಂದೀಸೆ । ಮರಳೊಂದು ಯೋಚನಿಯೇ ॥ ಪಲ್ಲ ॥ ಉತ್ತೂಮ ಏಕದಶಿಯ ವೃತವಿರಲಾಗಿ । ಮತ್ತೊಂದು ವೃತಗಳ್ಯಾಕೆ । ಸತ್ಯವಂತರ ಸನ್ನಿಧಾನದಲ್ಲಿರುತಿರೆ । ಪ್ರತ್ತೇಕ ಕ್ಷೇತ್ರವ್ಯಾಕೇ ॥ ಪತ್ನಿಸಂಗವಬಿಟ್ಟು ದುಷ್ಟಬುದ್ಧಿಯಲ್ಲಿಹ । ತೊತ್ತಿನ ಸಂಗತಿಯೇ । ವಿತ್ತದಗಿರಿ ತನ್ನ ಕೈವಶವಾಗಲು । ಹತ್ತೆಂಟು ಹೊನ್ನಿನಾಶೇ ॥ ೧ ॥ ವರಗಾಯಿತ್ರಿಯ ದಿವ್ಯಮಂತ್ರವ ಜಪಿಸಲು । ಶರೀರಕ್ಕೆ ವ್ಯೈಲಿಗಿಯೇ । ಸುರಗಂಗೆ, ಯೊಳು ಪೊಕ್ಕು ಸ್ನಾನಮಾದಿದ ವ್ಯಾಲೆ । ಹರವೊ ಹಳ್ಳದ ಪೊರವೇ ॥ ಗರುಡ ದೇವರ ಮಂತ್ರ ಕಲಿತುಕೊಂಡವನಿಗೆ । ಉರುಗಾನ ಹಾವಳಿಯೇ । ಅರಸಿನ ಕರುಣಾವೆ ಪೂರ್ಣವಿದ್ದರೆ ಮಿಕ್ಕ । ಪರಿಚಾರಿಕರ ಭಯವೇ ॥ ೨ ॥ ಕುಂತಿ ನಂದನನ ನಿರಂತರ ಭಜಿಸಲು । ಅಂತಕನು ಪಟಳವೇ । ಚಿಂತಿತ ಫಲವೀವ ಸುರತರುವಿರಲಾಗಿ । ತಿಂತ್ರಿಣಿ ಬಯುಸುವರೇ ॥ ಸಂತತ ಸತ್ಕಥ ಶ್ರವಣವಾಗುತಲೀರೆ । ಮಂತ್ರಗಳಾಸಕ್ತಿಯೇ । ಕಂತೂಪ ಪ್ರಾಣೇಶಾವಿಠಲಾನ ಪೊಂದಾಲು ಚಿಂತೀಯುಮಾಡುವರೇ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೦೪. ಪದ, ರಾಗ–ಮನದಿಟ್ಟಿ (ಅಟತಾಳ).

ಧಿಕುಧಿಕು, ನರಪತಿ ಊಳಿಗವು । ಬೇಕು ಬೇಕು ಸಿರಿಪತಿ ವಾಲಗವು ॥ ಪಲ್ಲ ॥ ಕರದಾಕ್ಷಣ ಸ್ವಾಮಿ ಪರಾಕು ॥ ಎಂದು ಕರವು ಮುಗಿದು ನಿಲ್ಲಲಿ ಬೇಕೂ ॥ ೧ ॥ ಸಮೂಹಕೊಂದಾಜ್ಞಾಪಿಸಲೂ । ತಾ ಮಮತೆಯಲಿ ಮಾಳ್ಪುದು ಬಹಳೂ ॥ ೨ ॥ ಹಳಿದರು ನಗುತಲೆ ಇರಬೇಕೂ । ತನ । ಕುಲದಭಿಮಾನವ ಬಿಡಬೇಕು ॥ ೩ ॥ ಇಷ್ಟಾದರು ಉಣಲನ್ನಿಲ್ಲಾ । ಗೇಣೂ ಘಟ್ಟ ವಸ್ತ್ರ ಸ್ವಪ್ನದೋಳಿಲ್ಲಾ ॥ ೪ ॥ ಹೀನವಿದೆಂದು ತಿಳಿದಧಮರೂ ॥ ಶ್ರೀ ಪ್ರಾಣೇಶಾವಿಠಲನವರೆನಿಸರೂ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೦೫. ಪದ, ರಾಗ–ಮೋಹನಕಲ್ಯಾಣಿ (ಝಂಪೆತಾಳ).

ನಗಿಬರುವದೋ ಮನವೆ । ನೀನು ಮಾಡುವಾ । ಹಗರಣಾಕಿದು ಘನವೇ ॥ ಜಗಪತಿಗೆ ಕರಮುಗಿಯುದಲೆಸದ । ವಗತನದೊಳಗೆ ತಗಲಿ

ಕೊಂಡೀ ॥ ಪಲ್ಲ ॥ ಶೃತಿಸಾರುತಿಹದು ಕೇಳೂ । ಈ ಶರೀರವು । ಸತಿಪುತ್ರಾದಿ ಧನಂಗಳೂ । ಅಸ್ಥಿರವೆಂದೂ । ಮತಿಯಿಲ್ಲೆ ತಿಳಿದು ಬಾಳೂ । ಸ್ವಾಮಿಪಾದಕ್ಕೆ ಸತತಬ್ಯಾಸರದೆ ಬೀಳೂ । ನಿಂದಿಸೇ ತಾಳು ॥ ಪ್ರತಿದೀನಾ ಮರಿಯದೆ । ಅತಿಥಿ ಗಾಳುಣಿಸೀ । ಸದ್ಗತಿಯ ಪಡವದೊ, ದು । ರ್ಮತಿಯಾ ಹರಿಕಥಿಯೊಳ ಗತಿನಿ । ರತನೆನಿಸಿ ಕೋಯಿ । ನಿತು ಮನಕೆ ಬರಲಿ ತವಕದಿ ಮ । ನ್ಮಥನ ಆಟಕೆ ತೊಡಕಿ ನಿರಯ । ಸ್ಥಿತನೆನಿಸುವದು । ಹಿತವೆ, ನಿನಗೇ ॥ ೧ ॥ ನರ ರಾಶ್ರೈಯಿಸುವದ್ಯಾಕೆ । ಭಕ್ತಿಯಲಿ ಶ್ರೀನರಹರಿಯ ಸ್ತುತಿಸಾಬೇಕೋ । ಯಿನಿತೂ ಭಾಗ್ಯ । ಯರವೆಂದು ತಿಳಿಯಬೇಕೂ ॥ ಮತ್ಸರಾಬಿಟ್ಟೊ ಹಿರಿಯರೀ ಗೆರಗಬೇಕೊ । ಆಸೀಯೂ ಯಾಕೊ ॥ ಧರಿಯೊಳು ಬಹುಮಂದೀ । ಅರಸಾರಿ ದ್ದರು ಹಿಂದೆ । ಅರಿಯಾ ತಮ್ಮ ಕೂಡ ವೈ । ದರೆ ಸ್ವಲ್ಪ ಸುಖಗಳಾ ॥ ಹರಿ ದಿನದಿ ಜಾಗರಮಾಡಿ ಇ । ತರನ ಬಯಸದೆ । ನಿರುತ ಅಧರ್ಮದಿ ನಿರತ ನಾಗದೆ । ಬೆರಸುತಿಹೆ ನೀ । ಚರೊಳು ಸ್ನೇಹವ । ಮರುಳು ಮನುಜಾ ॥ ೨ ॥ ಎಷ್ಟು ಹೇಳಲಿ ಸಜ್ಜನಾ । ಭಜಿಸೀ ವಿ । ಶಿಷ್ಟನೆನಿಸೋ ದುರ್ಜನಾ । ರೊಡನೆ ಮಾತೂ । ಬಿಟ್ಟು ಘಳಿಸೋ ವಿಜ್ಞಾನಾ । ಹೀಂಗಿರೆ ದೋಷಾ । ನಷ್ಟಾವೊ ಉಳಧಿತೇನಾ । ನಿಶ್ಚಯಪ್ರಮಾಣಾ ॥ ಬಿಟ್ಟು ಭಾರತಿಕಾಂತಾ ಗಿಷ್ಟು ನಿಂದಿಸಿದಾ ವಾ । ಕೆಟ್ಟಕೆಟ್ಟನುಯನ್ನೊ । ಇಟ್ಟು ದ್ವಾದಶನಾಮಾ । ಮುಟ್ಟದಿರು ಪರರಿಟ್ಟ ಒಡವಿಯಾ । ಧಿಟ್ಟಸುತ ಮನ । ಸಿಟ್ಟು ಸ್ತ್ರೀಯರ ದೃಷ್ಟಿಸದೆ ಜಗ । ಜಟ್ಟ ಪ್ರಾಣೇಶವಿಠಲನ । ಸಂತುಷ್ಟಿಬಡಿಸೋ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೦೬. ಪದ, ರಾಗ–ಪಾಡಿ (ತ್ರಿವಿಡಿತಾಳ).

ಒಲ್ಲೇ ಈ ಕುವೃತ್ತಿಗಳ ಒಲ್ಲೆ ಒಲ್ಲೇ ॥ ಎಲ್ಲಾ ಸಜ್ಜನರಿಗೆ ಬಾಗೀ ಬೇಡಿಕೊಂಬೆ ॥ ಒಲ್ಲೆ ಈ ಕು ॥ ಪಲ್ಲ ॥ ಕುಜನರೊಳಗೆ ಸ್ನೇಹ ಎಂದಿ ಗೆಂದಿಗೇ ಒಲ್ಲೆ । ಸುಜನಾರ ಅಸಂತೋಷ ಬಡಿಸಲೊಲ್ಲೆ ॥ ರಜತಾದ್ರಿ ನಿಲಯ ಸರ್ವೋತ್ತಮಾನೆನಲೊಲ್ಲೆ । ಭುಜಗಶಯನಗೆ ಸಮರು ಉಂಟೆನಲಿ ವಲ್ಲೇ ॥ ೧ ॥ ಹರಿದಿನದಲುಂಬೋರ ಮೊಗವನೋಡಲಿವಲ್ಲೆ । ಹಿರಿಯಾ

ರರ್ಚಿಸದವರಾನ್ಯೆರಿಯೂನೊಲ್ಲೆ ॥ ಪರಪೀಡಿಯನು ಸ್ವಪ್ನಾದಲ್ಲಿ ನೆನಿಸಾಲೊಲ್ಲೆ । ನರಸ್ತೋತ್ರವನು ಮಾಡೀ ಬದುಕಾವಲ್ಲೇ ॥ ೨ ॥ ಪ್ರಾಣೇಶಾವಿಠಲಾ ಕೊಟ್ಟದನೂವೇಕ್ಷಿಸಲೊಲ್ಲೆ । ಏನೂ ಕೊಡದೀರಲಾವೇಕ್ಷಿಸಲಿವಲ್ಲೇ ॥ ಹೀನಾ ವಿಪ್ರರ ಕುಲಕೆ ಎಂದು ಚಿಂತಿಸಲೊಲ್ಲೆ । ಮೀನಾಂಕನ ಮ್ಯಾಳಾವಲ್ಲೇವಲ್ಲೇ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೦೭. ಪದ, ರಾಗ–ಸಾರಂಗ (ಅಟತಾಳ).

ಮಧ್ವಮತ ಪೊಂದದವ ದೈತ್ಯಾ । ಮನಶುದ್ಧವಿಲ್ಲದೆ ಶೀಲಮಾಳ್ಪನೆ ವ್ರಾತ್ಯ ॥ ಮಧ್ವ ॥ ಪಲ್ಲ ॥ ರವಿಬಾರದಿರಲರ್ಘ್ಯ ಕೊಡುವವ ಧನ್ಯ । ದಿವದಿ ಕರ್ಮವ ಬಿಟ್ಟು ಮಲಗೂವರೊಣ್ಣ್ಯ ॥ ದಿವಿಜೇಶಾರ್ಪಿತವಲ್ಲದುಂಬಾವ ಅನ್ನ್ಯ । ಅವದಾನಾ ಕೊಡುವವ ಅಗ್ರಗಣ್ಣ್ಯ ॥ ೧ ॥ ತಾರತಮ್ಯ ತಿಳಕೊಳದವನಷ್ಟಾ । ಮಿರಾರದೇ ಹಿರಿಯರರ್ಚಿಸುವನೇನಿಷ್ಠಾ ॥ ನಾರಿಯರಿಗೆ ಮನ ಸಿಡುವವ ಭ್ರಷ್ಟಾ । ಸೂರಿಗಳಿಗೆ ಎರಗುವನೆ ವಿಶಿಷ್ಟಾ ॥ ೨ ॥ ಕಾಮಕ್ರೋಧಂಗಳು ಗೆದ್ದವ ವೀರಾ । ಈ ಮೊಣ್ಣುದೇಹ, ಪೋಷಿಸಿಕೊಂಬೊ ಚೋರಾ ॥ ಧಾಮಾದಿಗಳು ಎನ್ನದೆನದವಧೀರಾ । ಆ ಮಹತ್ಮರ ನಿಂದಿಸುವನೇವೆ ಘೋರಾ ॥ ೩ ॥ ಮೂಲಾವತಾರೈಕ್ಯವೆನದವ ಖೋಡಿ । ಕಾಲವಿಲ್ಲದೆ ಸುಳ್ಳಾಡುವನೇವೆ ಪೀಡೀ ॥ ಆಳಲಾರದೆ ಸತಿಬಿಡುವ ಹೇಡಿ । ಶ್ರೀಲೋಲವರನೆನ್ನದವ ಕುಲಿಗೇಡೀ ॥ ೪ ॥ ತಿಥಿತ್ರಯ ಸತಿಸಂಗಾಮಾಳ್ಪನೇ ಹೊಲಿಯಾ । ಮತಿಗೆಟ್ಟು ಯಮನಲ್ಲಿ ತಿಂಬೂವಕೊಲಿಯಾ ॥ ಕ್ಷಿತಿಯೋಳು ತನಭಾವಜನಕ ತೋರದೀಪ್ಯನೆ । ಕೃತಿಪತಿ ಪ್ರಾಣೇಶವಿಠಲಾಗ ಗೆಳಿಯಾ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೦೮. ಪದ, ರಾಗ–ಪಂಥವರಾಳಿ (ಏಕತಾಳ).

ಪರವಾದೀ ಪರವಾದೀ । ಪರಮಾತ್ಮನೆ ನೀನೆಂಬುವರೇಸೂ । ಪರವಾದೀ ಪರವಾದೀ ॥ ಪಲ್ಲ ॥ ಕ್ಲೇಶಮೋದಗಳು ಶ್ರೀಶಗೆಲ್ಲಿಹವೊ ॥ ನೀಸೋಸು ತಲಿಹೆ । ಯೋನು ಜನ್ಮದಲಿ ॥ ೧ ॥ ನಿತ್ಯತೃಪ್ತನಂ ವ । ಹೊತ್ತು ತಿಂಬಿನೀ ॥ ಎತ್ತ ಆತ ನೀನೆತ್ತಲೂ ಮರುಳೇ ॥ ೨ ॥ ಒಂದೆ ಎಂಬೊ ಮತದಿಂದ ಸಹೋ

ದರಿ || ಗಿಂದಿಲಿಂದ ಸತಿ ಎಂದು ಕರವದೋ || ೩ || ಕಲಿಯುಲಿ ಸಲ್ಲದು | ಜಲ ಜಜನಿದ್ದ್ಯವ || ಹಳಿಯು ತಟ್ಟಲಿಯು ಹೊಲಿ ಅನುದಿನದೀ || ೪ || ಶುದ್ಧಸ್ವಭಾವ ದೊ | ಳಿದ್ದಿಯೊ ಅಧವಾ || ಮದ್ಯಕುಡಿದಕೀ ಬುದ್ಧಿಯೊ ತಿಳಿಯದು || ೫ || ನೀನಾಡುವದಕೆ | ಹೀನಗತಿಯೆ ಧ್ರುವ || ಪ್ರಾಣೇಶವಿಠಲನ ಆಣೆಲೊ ಕೇಳೂ || ೬ || ಶ್ರೀ ಮಧ್ವೇಶಾರ್ಪಣಮಸ್ತು ||

೨೦೯. ಪದ, ರಾಗ–ಕಾಂಬೋಧಿ (ಅಟತಾಳ).

ಶಿವಭಕ್ತನಾಗೋ ಪ್ರಾಣೀ | ಅವನಿಯುಲ್ಲಿ ಪರದಲ್ಲೀ | ವಿವಿಧ ಭೋಗಂಗಳ ಕಾಂಬೀ || ಶಿವಭಕ್ತನಾಗೊ ಪ್ರಾಣೀ || ಪಲ್ಲ || ಲಿಂಗಾಧಾರಣ ಮಾಡಿ | ಜಂಗಮರಧಿಕಾರಾ ಸಾರೀ | ಹಿಂಗಿಕೊ ಭವಜನ್ನ್ಯ ದುಃಖ || ಸಂಗಾ ವಾಗಿ ರುದ್ರಾಕ್ಷಿಯಂಗಾಳರ್ಚಿಸೂತಾ | ನಿಃಸಂಗನಾಗೊ ದುರ್ವಿಷಯದೀ || ೧ || ಸುವಿವೇಕಿ ಮನಸಿಲಿಂದಾ | ಶಿವಶಬ್ದವ ಶೋಧಿಸಿ | ಕವಿಗಳ ಮುಖದಿಂದ ತಿಳಿಯೋ || ನವತ್ರಿಪತ್ರಯುಕ್ತ ಬಿಲ್ವಾ ಸಮರ್ಪಣೆ ಮಾಡೊ | ಸವೆಯಾದಂಥ ಪದವೈದೂವಿ || ೨ || ಭಜಿಸೋ ವೀಭೂತಿಯನ್ನು | ದ್ವಿಜಸ್ತ್ರೋಮಾಕೆರ ಗಾದೀರೊ | ಪ್ರಜಗಳಿಗೆ ತೋರದಿರುಭಾವಾ || ಅಜ ಪ್ರಾಣೇಶವಿಠ್ಠಲಾನು ಅಜಿನಾಂಬರ ಸನುನೆನ ಬ್ಯಾಡಾ ವಿಜಯುವಂತನಾಗುವೀಜಗದೀ || ೩ || ಶ್ರೀ ಮಧ್ವೇಶಾರ್ಪಣಮಸ್ತು ||

೨೧೦. ಪದ, ರಾಗ–ಪೂರ್ವಿ (ಅಟತಾಳ).

ಶಿವ ಸತ್ತ ಎಂಥ ಆಶ್ಚರ್ಯವು, ಇದು ನೋಡಿ | ಕವಿಗಳು ಮನಕ ತಂದು || ಭುವನತ್ರಯುಗಳಲ್ಲಿ ಪ್ರಖ್ಯಾತವಾಗಿದೆ | ಅವಿವೇಕಿಗಳ ಮಾತಲ್ಲಾ || ಪಲ್ಲ || ಅಧಮರು ಬಹು ಬಗೆಯಿಂದಲ್ಲಿ ಘಳಿಸೀದಾ | ಬದಕು ವ್ಯರ್ಥ ವಾಹದು || ಬುಧರ ಪದಾರ್ಥವು ಸಾರ್ಥಕವಾಹದೆಂಬು | ದಿದೆ ಸಾಕ್ಷಿ ಎನ ಬಹುದೂ || ೧ || ಭೂಭುಜರಿಗೆ ಭೂಷಣಾದವು ಆಯುಧ | ಈ ಭೂಮಿ ಪೊತ್ತವ್ಯಾಳಾ || ಆ ಭಿಕ್ಷುಕನ ಕುಟುಂಬವ ರಕ್ಷಿಸುತಿಹ್ಯದು | ಶೋಭಿಸು ತಿಹ್ಯಕ ಪಾಲಾ || ೨ || ಮಂದೀಯುನಂಜಿಸುತಿಪ್ಪದು | ಆತನ ಹಿಂದೆಮುಂದಿ

ರುವ ಗಣಾ ॥ ನಂದೀಪಿತೃಗಳಿಗೆ ಕೈವಲ್ಯ ತೋರಿತು । ಸಂದೇಹವಿನಿತಿಲ್ಲವೂ ॥ ೩ ॥ ಸೋಮುಕಂಣಾದ ಜಗತ್ತ್ರಿಕ್ಕದಿಕ್ಕಿಗೆ । ಸ್ವಾಮಿ ಎನಿಸಿದ ವನ್ಹೀ ॥ ಧೀಮಂತರಾತನ ಮಡದೀಯ ಪೂಜಿಸಿ । ಶ್ರೀಮಂತರಾಗುವರೂ ॥ ೪ ॥ ಮೌನಿಗಳಿಗೆ ಚರ್ಮ ವೈಷ್ಣವರಿಗೆ ಭಸ್ಮ ತಾನು ಪ್ರೀಯಕರಾದೀತು ॥ ಪ್ರಾಣೇಶವಿಠಲಾನೊಳರ್ಧಾಂಗವಾಗಾಭಿ । ಮಾನಿಯೊಳರ್ಧವಿಟ್ಟಾ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೧೧. ಪದ, ... (ಆರ್ಯವೃತ್ತ).

ಭುವನವನಾ, ಯಂಥ್ಯಾಗಿದ್ದರೆ ಕರ । ಸುವದು ನಿರಂತರ ಲೋಕದಲೀ ॥ ಅವಿದಿತ ನಾನು ಅದನ್ನು ಆಪನಿತು । ವಿವರಿಸುವೆನು ಕವಿಗಳು ಕೇಳೀ ॥ ಪಲ್ಲ ॥ ರವಿಮೂಡದ ಮುಂಚೇಳುತ ಶ್ರೀ ಮಾ । ಧವನ ಸ್ಮರಿಸುತಿರಲಡೆಭವನಾ ॥ ಯುವತಿಯರಾವ್ಯಾಳ್ಯದಲಿ ಮೊಸರು ಮಥ । ನವ ಮಾಡುತಿಹರು ಅದೆ ಭವನಾ ॥ ೧ ॥ ಶಂಖಚಕ್ರ ಮೊದಲಾಯುಧ ಧರಿಸದೆ । ಮುಂಕುಗಳಿರುತಿಪರ ದೇವನಾ ॥ ಸಂಕಟ ಚೌತೀ ಶಿವನಿಸಿ ಭೂತಶಶಾಂಕನ ಪೂಜಿಪರದೇವನಾ ॥ ೨ ॥ ಅಂಗನಿಯರು ತಿಲಕಾಯುಧ ಕುಂಕುಮ । ಶ್ರಿಂಗರವಾಗಿ ಹರದೆ ಭವನಾ ॥ ಅಂಗಣದಲಿ ವೃಂದಾವನ ಗೋವ್ಗಳು । ರಂಗವಲಿಕ್ಕುವರದೆ ಭವನಾ ॥ ೩ ॥ ಸರುವರು ಸರ್ವದ ದುಷ್ಟ ಶಬ್ದ ಉ । ಚ್ಚರಿಸುತಲಿಪ್ಪರು ಅ ದೇವನಾ ॥ ಹರಿಗತಿ ಪ್ರಿಯಕರತುಲಸಿಲ್ಲದ ಮಂ । ದಿರವೆ ನಿಶ್ಚಯವಾಗಿವನಾ ॥ ೪ ॥ ರಾಮಾರ್ಪಿತದನ್ನವ ಹೋಮಿಸಿದ । ಧೂಮವ್ಯಾಪಿಸಿಹದದೆ ಭವನಾ ॥ ಭಾಮಿನಿಯರು ಕೆಲಸವಮಾಡುತ ಖಳ । ಭೀಮನ ಸ್ಮರಿಸುವರದೆ ಭವನಾ ॥ ೫ ॥ ದೇವಪೂಜಿನ್ನೈವೆದ್ಯವು ವೈಶ್ವ । ದೇವಯುಂಬದಿಲ್ಲದೇವನಾ ॥ ಆವಕಾಲಕೂ ವೇದವೇದ್ಯ ಭೂ । ದೇವರು ಬರದಿಹದ ದೇವನಾ ॥ ೬ ॥ ವೇದಪುರಾಣದ ಘೋಷವು ಸರ್ವದ । ಭೂದಿವಿಜರ ಸಂದಣೆಭವನಾ ॥ ವಾದಿಗಳ ಹಳಿದು ಮಧ್ವರಾಯರಾ । ರಾಧನೆಮಾಡುವರದೆ ಭವನಾ ॥ ೭ ॥ ಹಿಕ್ಕದೆ ತಲಿಕಚ್ಚಿಲ್ಲದೆ ತಿರುಗುತ । ಮಕ್ಕಳ ನಳಿಸುವರ ದೇವನಾ ॥ ಸೊಕ್ಕಿಲಿ ಗಂಡತ್ತಿಗಳಿಗೆ ಬೈತಿಹ । ರಕ್ಕಿಸಿ ಹೆಂಗಸಿಹ ದೇವನಾ

॥ ೮ ॥ ತಂಬೂರಿತಾಳಂಗಳ ಸುಸ್ವರ । ತುಂಬಿಹೆದೆಂದೆಂದದು ಭವನಾ ॥ ಉಂಬುವಾಗ ಪ್ರತಿಪ್ರತಿತುತ್ತಿಗೆ । ಪೀತಾಂಬರನ ಸ್ಮರಿಪರದೆ ಭವನಾ ॥ ೯ ॥ ಶೌಂಚದಂತ ಧಾವನ ಮೊದಲಾದ ಸ । ದಾಚಾರಿಲ್ಲಿಲ್ಲ ದೇವನಾ ॥ ಯಾಚಕರಿಗೆ ತುತ್ತನ್ನವಿಲ್ಲವು । ತ್ರ್ಯೋಚನಿ ಯಾತಕೆ ಅದೇವನಾ ॥ ೧೦ ॥ ಹರಿದಿನದಲಿ ಸರ್ವರು ನಿರ್ಜಲ ಜಾ । ಗರವನು ಮಾಡುವರದೆ ಭವನಾ ॥ ಮರು ದಿನ ಭೋಜನ ಸೂರ್ಯೋದಯ ಕಂ । ತರಿಸದೆ ಮಾಡುವರದೆ ಭವನಾ ॥ ೧೧ ॥ ಉದಪಾಗಿ ತಾಸಾದರನ್ನ ನರ । ಸುದತಿಯರೇಳದ ಮನೇವನಾ ॥ ಪದುನಾಭನಾಮೋಚ್ಚಾರಣೆ ಯಂಬದು ಎಂದೆಂದಿಲ್ಲ ದೇವನಾ ॥ ೧೨ ॥ ಪ್ರತಿದಿನ ಧರ್ಮಕೆ ಪ್ರತಿಕೂಲಾಗದ । ನತಿಸುತರಿದ್ದರೆ ಅದೆ ಭವನಾ ॥ ವ್ರತಗಳು ಸದ್ದಾನಗಳು ತಿಳಿದನವ । ರತಮಾಡುತಿಪ್ಪರದೆ ಭವನಾ ॥ ೧೩ ॥ ರೊಕ್ಕವಿದ್ದು ಸದ್ವ್ಯಯವಾಗದಯುಳಿ । ಮುಕ್ಕಳಿಲ್ಲದಿಪ ಸದನೇವನಾ ॥ ಮುಕ್ಕುಂದನ ದಾಸರನಿಂದಿಸುತಿಪ್ಪ । ಚಿಕ್ಕಮತಿಗಳೀಹ ದೇವನಾ ॥ ೧೪ ॥ ಮಾರುತ ಮತವನುಸರಿಸುತಲೀ ವ್ಯವ । ಹಾರಮಾಡುವರದೆ ಭವನಾ ॥ ಮಾರುತಿಸುತ ಪ್ರಾಣೇಶವಿಠಲನ ಪ । ದಾರಾಧನೆ ಮಾಡುವರದೆ ಭವನಾ ॥ ೧೫ ॥ ಶ್ರೀಮಧ್ವೇಶಾರ್ಪಣಮಸ್ತು ॥

ಶ್ರೀ ಸೀತಾರಾಮ ಪ್ರಸೀದ.

೨೧೨. . . . . . (ಆರ್ಯವೃತ್ತ).

....ಸ್ವರ್ಗ ನರ್ಕವೆಂಬುದು ಬ್ಯಾರಿಲ್ಲಾ । ತಿಳಕೊಳಲಿಕ್ಕರಿವರಧಮರೂ ॥ .. .ದುರ್ಗಾರಮಣನಗುಣ ಕೊಂಡಾಡುವ । ರಿಲ್ಲೇ ಉಂಟೆಂಧೇಳುವರೂ ॥ ಪ॥ ....ಅರುಣೋದಯ ಕೇಳುತ ಭಕ್ತಿಂಧರಿ । ಸ್ಮರಣೆಯ ಮಾಡುತಿಹದೆ ಸ್ವರ್ಗಾ ॥ ತುರುಕರಬಿಡಿ ಶಗಣಿಯ ಬಳಿ, ಕುರ್ಚಿಗಿ । ಸರವಿಯ ತಾಯುಂಬದೆ ನರ್ಕಾ ॥ ೧ ॥ ನಳಿನಿ ಪ್ರಮುಖ ನದಿಗಳ ತಾರತಮ್ಯವ । ತಿಳಿದು ಸ್ನಾನಮಾಳ್ಪದೆ ಸ್ವರ್ಗಾ ॥ ಹಳಸಮೋರಿಯಿಂಧರಟಕೊಳುತ ಊ । ರೊಳು ಸಂಚರಿಸುವದೇ ನರ್ಕಾ ॥ ೨ ॥ ದ್ವಾದಶನಾಮುವಮುದ್ರಿ ತುಲಸಿಸರ । ಸಾದರದಿಂಧರಿಪದೆ ಸ್ವರ್ಗಾ ॥ ತಾ ದುರ್ಬುದ್ಧಿಯಲಿಂದಲಿ ಮತ್ತೇ । ನಾದರು, ಧರಿಸುವದೇ

ನರ್ಕಾ || ೩ || ಜಲಜಾಕ್ಷನ ಪೂಜಿಸಿ ನೈವೇದ್ಯಂ | ಗಳ ದ್ವಿಜಗಿತ್ತುಂಬದೆ ಸ್ವರ್ಗಾ || ಹುಲಿಗಿಯಲ್ಲಿ ಪೊಕ್ಕಮ್ಮ ಕಂಭಗೋ | ದಲಿಗರ್ಪಿಸಿ ತಿಂಬದೆ ನರ್ಕಾ || ೪ || ದರುಶನ ಗ್ರಂಥಾರ್ಥವ ಸಾದರದಿಂ | ನಿರುತದಿ ಕೇಳುತಿಹದೆ ಸ್ವರ್ಗಾ || ಪರಕಥಿಕೇಳುತ | ಪ್ರಾಣೇಶವಿಠಲನ ಮರದು ಬದುಕುತಿಹ ದೇ ನರ್ಕಾ || ೫ || ಶ್ರೀ ಮಧ್ವೇಶಾರ್ಪಣಮಸ್ತು ||

೨೧೩. ಪದ, ರಾಗ–ಕಾಂಬೋಧಿ (ಝಂಪೆತಾಳ).

ನೀತಿಕೆಟ್ಟಿತು ಕಲಿಯುಗದಲಿ ಕೇಳಿ | ಮಾತುಳಾಂತಕನ ಮಹಿಮಿ, ಯುಹೀಂಗದೇ || ಪಲ್ಲ || ನೀಚಕುಲದವನು ಧೊರೆ | ಬುಧರವನ ಸೇವ ಕರು | ಚೋಚುವಳು ಹೆಂಡತಿಯು ತನ್ನ ಪತಿಯಾ || ಆಚಾರಮಾಡುವರೆ ತೊತ್ತು ಹುಡಿಕ್ಯಾಡುವರು | ನಾಚಿಕಿಲ್ಲದೆ ಸತತ ಬೇಡುತಿಹರೂ || ೧ || ತನ ಗಾಗಬೇಕೆಂದು ಪರಹಿಂಸೆಮಾಡುವರು | ಧಣಿಯ ಮಾತನು ಮಿರುವನು ಭೃತ್ಯನೂ || ಘನಗರ್ವದಿಂದ ಗುರುಗಳ ನಿಂದಿಮಾಡುವರು | ಮುಣಿಗೆ ಹೋಯಿತು ಹರಿದಿನದ ನಿರ್ಜಲಾ || ೨ || ಹೆಣ್ಣು ಮಾರುವರು, ಉತ್ತುಮರು, ತಮ್ಮಾದವನು | ಅಣ್ಣನಿಗೆ ಕಠಿಣ ವಾಕ್ಯವನಾಡುವಾ || ಇನ್ನೊಂದು ಜನುಮ ಕರಿಯುರು ಹೆತ್ತವರ ಸೇವಿ | ಸಣ್ಣನಡತಿಯಲೆ ಇರುವರು ಸರ್ವರೂ || ೩ || ಸುಳ್ಳನಾಡುವರು ಪಂಡಿತರು, ಪ್ರಭುತನದವನು | ಕೊಲ್ಲಿಸುವ ತನ್ನ ರಾಜ್ಯದ ಪ್ರಜೆಗಳಾ || ಇಲ್ಲಧೋಯಿತು ಬ್ರಾಹ್ಮರಲ್ಲಿ ಮಂತ್ರದ ವೀರ್ಯ | ಬಲ್ಲವರೆ ಅವಿವೇಕ ಪಥ ಪಿಡಿವರೂ || ೪ || ಶ್ರೀ, ಕ, ನುತ ಪ್ರಾಣೇಶವಿಠಲನಂ ತಿಳಿದು | ಕಾಳೀಕಾಂತನಲ್ಲಿ ಭಕ್ತಿಮಾಡರೂ || ಕಾಕುಲಾತಿಯು ಬಿಟ್ಟು ನಿಃಸಂಗಿಯನಿ ಸರೂ | ನೂಕುವರು ಹಸಿದುಬಂದರೆ ವಿಪ್ರರಾ || ೫ || ಶ್ರೀ ಮಧ್ವೇಶಾರ್ಪಣ ಮಸ್ತು ||

೨೧೪. ಪದ, ರಾಗ–ಭೈರವಿ (ಆದಿತಾಳ).

ಮಾರನೈಯ್ಯನೆ ಕೇಳಾ ಕಲಿವ್ಯಾಪ್ತಿ ಆದದ್ದು | ಆರಾ ಮುಂಧೇಳಿ, ಎನ್ನುಬ್ಬಸ ಕಳಕೊಳ್ಳಲ್ಯೊ || ಪಲ್ಲ || ನಳಪ್ರಮುಖರು ತೋಟಕ ಬೀಜಬಿತ್ತಿ ನೀರೆರೆಧಾಳು || ನಾಟಲಿಲ್ಲೆಂದವರಾಸಿಗೊರವಬಾಳು || ೨ ||

ನಳಪ್ರಮುಖರು ಪೂಜಿಸಿದ ಗುಡಿ ಹಾಳು ॥ ಹಲವರು ಬಳಸಲು ಈಚಲ ಹಾಳು ॥ ೧ ॥ ಜಲತೃಣ ದುರ್ಲಭ ವೈದನ ಹಾಳು ॥ ಬೆಳದೀತೆ, ಭೂಪೂರಾ ಎಂಬಾಸಿ ಹಾಳು ॥ ೩ ॥ ಹೊನ್ನಹಳ್ಳಿ ದೊಡ್ಡವು ಕಲ್ಲೂರು ಮಣ್ಣೂರು ॥ ಅನ್ನಿಲ್ಲಾ ದ್ವಿಜರಿಘೊಟ್ಟತುಂಬಾ ಹೆಸರೂರು ॥ ೪ ॥ ಊರ ಮುಂದಿದ್ದಷ್ಟೆವೆ ಅಡವಿಭಾವಿ ಮಾರಿ ॥ ದೂರ ಹೋದರೆ, ಹಾಳ್ಕೇರಿ ನೀರಲಕೇರಿ, ॥ ೫ ॥ ಅಧಮರು ಹೊನ್ನಾಕುಪ್ಪಿ ಛತ್ರುವ, ವಡವರು ॥ ಬುಧರ ಸದನಗಳಾದವು ತಿಪ್ಪಿ ತೆವರೂ ॥ ೬ ॥ ಕನಸವಿ, ರಳಮುತ ಕೈಯ್ಯೋಳಗಲಗೂ ॥ ಅನುಚಿತಾದಿಂದ ವಿಪ್ರರಾದರು ಭಣಗೂ ॥ ೭ ॥ ಸುಳ್ಳೆಷ್ಟು ಹಾಳಭಾವೀ ಗುಂಡನಾಗ ರೆಂಬೋರು ॥ ಎಲ್ಲೆಲ್ಲಿ ನೋಡೆ ಗುಡ್ಡಾ । ಇಲ್ಲ ಕಲ್ಲೆಂಬೋರು ॥ ೮ ॥ ನೊನ್ನ ವೆಂಬಾರೂರೀಗೆ ಭಂಗಾರಗುಂಡೆಂಬರೂ ॥ ಸಣ್ಣಹಳ್ಳಿಗೆ ಚನ್ನಪಟ್ಟಣೆಂಬು ವರೂ ॥ ೯ ॥ ಬೆಲ್ಲಾದಮೊರಡಿ ಹತ್ತಿಗುಡ್ಡಾ ಯಮ್ಮಿಗುಡ್ಡೆಂಬೋರು ॥ ಅಲ್ಲೆಲ್ಲಿ ವ್ಯಾತ್ಯರೇವೆ ಬಲುಗಿಂಚರಿಹರು ॥ ೧೦ ॥ ಹುಲಿಗುಡ್ಡಾ, ಕರಡಿ ಚಿಚಾರ್ಜ ದೇಶದೊಳೆಲ್ಲಾ ॥ ಸಲಹೋದು ನೀ ಬಲ್ಲಿ ಪ್ರಾಣೇಶವಿಠಲಾ ॥ ೧೧ ॥ ಶ್ರೀ ಮಧ್ವೇಶಾರ್ಪಣಮಸ್ತು ॥

---

(೨೫) ಪ್ರಮಾಣಪ್ರಮೇಯಯುಕ್ತ ಶ್ರುತಿಸ್ಮೃತಿವಚನಾನುಸಾರ ಕೀರ್ತನಗಳು.

೨೧೫. ಪದ, ರಾಗ–ಕನಡ ಕಾಂಬೋಧಿ (ಝಂಪೆತಾಳ).

ಶ್ರೀ ಪೂರ್ಣ ಬೋಧಮತವಾ । ನಂಬಿ । ಶ್ರೀ ಪತಿಯ ಒಲಿಸುವವರು । ಕೇಳೀ ॥ ಶ್ರೀ ಪೂರ್ಣ ಬೋಧಮತವಾ ॥ ಪಲ್ಲ ॥ ಆದಿಯಲಿಯಾದ ಚರಿತೆ । ಯನ್ನು ಪರ । ಮಾದರದಿ ಕೇಳಿ ಸುಜನಾ ॥ ರಾದವರು ಭಕುತಿಯಿಂದಾ । ಮಹ ಪ್ರಳಯ । ವಾದ ತರುವಾಯು । ಸೃಷ್ಟಿಯಾಗೇ ॥ ೧ ॥ ಸುರರೆಲ್ಲ

---

೧ ಇವೆಲ್ಲವೂ, ಗ್ರಾಮಗಳ ಹೆಸರುಗಳು, ಲಿಂಗಸೂಗೂರ ಸುತ್ತಲೂ ಇರುವವು. ಊರುಗಳ ವ್ಯಾಜದಿಂದ, ಅಧ್ಯಾತ್ಮದಿಂದ ನಿಳಿತವಾದ ಪ್ರಮೇಯ, ಭಾಷಾತ್ರಯ, ಯುಕ್ತ ಶ್ರೀ ದೇವರಪ್ರಾರ್ಥನಾ.

ತಮ್ಮ ತಮ್ಮಾ । ಸ್ಥಾನದಲಿ ಸ್ಥಿರರಾಗಿ ಯುವರಾಜ್ಯಕೇ ॥ ಅರುಹೆನಾರೆನಲು ಅದಕೇ । ಪೇಳಿದನು । ಹರಿಯು ಇಂತುಪಾಯುವ ಕೇಳೀ ॥ ೨ ॥ ವಂದು ದೇಹದಿ ಸರ್ವರೂ । ಕ್ರಮನುಸಾರ । ದಿಂದ ತೆರಳಿರಿ ಚೇತನಾ ॥ ಕುಂದು ವದು ಆವನಿಂದಾ । ಅವಶ್ರೇಷ್ಠ । ನೆಂದರಿವದೆಂದು ಸರಿದಾ ಕೇಳೀ ॥ ೩ ॥ ಹರಿ ಆಜ್ಞದಂತೆ ತ್ಯಜಿನೇ । ಕುಂಟನೂ ಕುರುಡ ಮೂಕನು ಯನಿಸಿತೂ ॥ ಹಿರಿಯು ಪವಮಾನ ಬಿಡಲೂ । ಎಲ್ಲರೂ । ಅರಿತರೂ ಕುಣಪವೆಂದೂ ಕೇಳಿ ॥ ೪ ॥ ಮತ್ತೆ ಮೊದಲಂತೆಲ್ಲರೂ । ವ್ಯಾಪಿಸಲು । ಬಿತ್ತು ಏಳಲಿಲ್ಲ ವದೂ ॥ ಸತ್ಯಸಂಕಲ್ಪಮರುತಾ । ಸೇರಲದು । ತತ್ತಲಿಲ್ಲದೆ ಚಲಿಸಿತೂ ಕೇಳಿ ॥ ೫ ॥ ಅಂದಿನಾರಭ್ಯವಾಗೀ । ತಿಳಿಸಿದನು । ಇಂದಿರೇಶನು ಈತನಾ ॥ ವಂದಿಪರಿಗೊಲಿವೆನೆಂದೂ । ಇನ್ನಿದಕೆ । ಸಂದೇಹ ಉಂಟೆವಂದೂ ಕೇಳಿ ॥ ೬ ॥ ಸ್ವಾಮಿ ಶ್ರೀ ರಾಮನಾಗೇ । ಅವತಾರ । ವಾ ಮಾಡಿದನು ಮಾರುತಾ ॥ ಭೂಮಿಜಯ ದನುಜ ವೈಯುಲೂ ॥ ಆ ಪುರಕೆ । ಪ್ರೇಮದಿಂದಲಿ ಚಿಗಿದನು ಕೇಳೀ ॥ ೭ ॥ ರಾಘವನ ಉಂಗುರವನೂ । ವನದೊಳಗೆ । ಬ್ಯಾಗೆ ಇಂದಿರಿಗೆ ಕೊಟ್ಟೂ ॥ ಆಗಾ ಪೊಳಲನೇ ಸುಟ್ಟೂ । ಹಾರಿತ್ವರ । ರಾಗಟಯು ಒಡಿಯ ಗಿತ್ತಾ । ಕೇಳೀ ॥ ೮ ॥ ಇಂದ್ರಜಿತು ಮೋಹನಾಸ್ತ್ರಾ । ಬಿಡಲಾಗಿ । ಅಂದ ಗೆಟ್ಟಿತು ಕಪಿಕುಲಾ ॥ ಇಂದಿರೇಶನ ಆಜ್ಞದಿಂ । ಆಗ ತ್ವರ । ತಂದ ಸಂಜೀ ವನವನೂ । ಕೇಳಿ ॥ ೯ ॥ ಅನಿಮಿಷರು, ಕಪಿಗಳಾಗೀ । ನಿರುತ ರಾಮನ । ಭಜಿಪರೀ ಕೆಲಸಕೇ ॥ ಅನುಕೂಲರೊಬ್ಬರಲ್ಲಾ । ಒಬ್ಬ ಅಂ । ಜನಿಸುತನೆ ಸೇವಿ ಮಾಡ್ದಾ ಕೇಳಿ ॥ ೧೦ ॥ ಉಪಕಾರವಂದಕೆನ್ನಾ । ಕೊಟ್ಟ ಮ್ಯಾ । ಲೆ ಪರಿ ಮಿತ ಸೇವಿಗುಚಿತಾ ॥ ಸು ಪರಿಕ್ಷಿಸಿದರು ಕಾಣೇ । ಭಳಿರೆ ಯಂ । ದ ಪರಾ ಜಿತನು ಪೊಗಳಿದಾ ಕೇಳಿ ॥ ೧೧ ॥ ಈ ವಾಯು ವಲಿದನೆಂದೂ । ಒಲಿದ ಸು । ಗ್ರೀವ ವಿಭಿಷಣಗೆ ರಘುಜಾ ॥ ಶ್ರೀ ವರನೆ ಕೃಷ್ಣನಾಗೀ । ಅವತರಿಸೆ । ಐವರೊಳು ಭೀಮನಾದಾ ಕೇಳಿ ॥ ೧೨ ॥ ತರಣಿ ಮೊಮ್ಮಗನ ಸೇವೀ । ಈ ವೃಕೊದರ ಮಾಳ್ಪನೆಂದು ಶೌರೀ ॥ ನರನ ರಧವನು ನಡಿಸಿದಾ । ಇಲ್ಲದಿರೆ । ಥರವೆ ಇದು ಪಾಂಡವರಿಗೇ ಕೇಳಿ ॥ ೧೩ ॥ ಜೀವೇಶರೊಂದೆ ಎಂದೂ । ವಾದಿಗಳು । ಭಾವಿಸಿರೆ ಮಧ್ವಮುನಿಯೂ ॥ ತಾ ವಿರಚಿಸಿ ಸುಗ್ರಂಥವಾ ।

ನಿರ್ದೋಷ । ಗೋವಿಂದನೆಂದರುಹಿದಾ ಕೇಳಿ ॥ ೧೪ ॥ ಈತ ಮಾಡಿದ ಚರಿತೆಯಾ । ಕಡೆಯಾಗಿ । ನಾ ತುತಿಸಲಾರೆ ಸ್ವಲ್ಪಾ ॥ ವಾತಸ್ಮರಣೆಯ ಮಾಡಲೂ । ವೈಕುಂಠ । ಆತು ಇಪ್ಪದು ತಪ್ಪದೂ ಕೇಳಿ ॥ ೧೫ ॥ ದೇಶ ದೊಳು ತುಂಬಿ ಇಹ್ಯದೂ । ಶ್ರೀ ಭಾರ । ತೀಶ ಮಾಡಿದ ಮಹಿಮೆಯೂ ॥ ಲೇಶವಾತನ ಚರಿತ್ರೇ । ಸ್ಮರಿಸೆ ಪ್ರಾ । ಣೇಶ ವಿಠ್ಠಲ ಒಲಿವನೂ ಕೇಳಿ ॥ ೧೬ ॥ ಪ್ರಾಣದೇವರ ಕಥೆಯನು ಕೇಳಿದರೆ । ತಾನೆ ಇಹಪರದಿ ಬಿಡದೇ ॥ ಪ್ರಾಣೇಶ ವಿಠಲ ಕಾಯ್ವಾ । ಇದಕೆ ಅನು । ಮಾನ ಲೇಸಿತವಿಲ್ಲವೂ ಕೇಳಿ ॥ ೧೭ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೧೬. ಪದ, ರಾಗ–ಕಾಂಬೋಧಿ (ಝಂಪೆತಾಳ).

ಪಂಚಭೇದ ತಿಳಿವದು ಪ್ರತಿ ದಿನದಲೀ ॥ ಮುಂಚಿನಜ ಮಧ್ವಮುನಿ ಮತವನುಸರಿಸಿದವರೂ ॥ ಪಂಚಭೇದವ ॥ ಪಲ್ಲ ॥ ಜೀವೇಶರಿಗೆ ಭೇದ ಜೀವ ಜೀವಕೆ ಭೇದ । ದೇವರಿಗೆ ಜಡಕು, ಜಡಕೆ ಜಡಭೇದಾ ॥ ಆವಾಗ ಜೀವರಿಗೆ ಜಡಗಳಿಗೆ ಭೇದುಂಟು । ಈ ವಿವರವ ಪೇಳ್ವೆ । ಯನ್ನಾಪನಿತು ಕೇಳುವದೂ ॥ ೧ ॥ ಈಶ ನಿತ್ಯ ಅನಾದಿಸ್ವರತ ಸರ್ವಗಸ್ವಪ್ರ । ಕಾಶ ಸರ್ವಜ್ಞ ವಿಶ್ವವಿಲಕ್ಷಣಾ ॥ ಮೇಶ ಅಪರಿಚ್ಛಿನ್ನಮೂರ್ತಿ, ಪ್ರಾಣಿಗಳಿಂದ । ತಾ ಸಾಕ್ಷಿಯಾಗಿ ಬಹು ಕರ್ಮಗಳ ಮಾಡಿಸುವ ॥ ೨ ॥ ಶ್ರೀಮುಖ ಜಗತ್ಯಕುತ್ಪತ್ಯಾದಿ ಕಾರಣಮ । ಹಾ ಮಹಿಮ ಸರ್ವತಂತ್ರಃ ಸ್ವತಂತ್ರಾ ॥ ಆಮಯವಿದೂರ ಜ್ಞಾನಾನಂದ ಬಲಪೂರ್ಣ । ಸೀಮೆಯಿಲ್ಲದ ಸುಗುಣಕ್ರೀಯಾತ್ಮಕ ಸ್ವರೂಪ ॥ ೩ ॥ ಸುಖದುಃಖ ಭೋಗಿಜೀವನು ಅಃಸ್ವತಂತ್ರ ಬಹು । ಕಕುಲಾತಿ ಉಳ್ಳವನು ದುರ್ವಿಷಯದೀ ॥ ಲಕುಮಿಾಶನಲ್ಲಿ ಭಕ್ತಿವಿವರ್ಜಿತನು ಪ್ರತಿಕ್ಷ । ಣಕೆ ಅನಂತ ಅಪರಾಧ ಜನ್ಮಮೃತಿ ಉಳ್ಳವನು ॥ ೪ ॥ ಆಧಿವ್ಯಾಧಿಗಳಿಂದ ಪೀಡಿತನು ಅಜ್ಞಾನಿ । ಮಾಧವನ ಬಂಧಕ ಶಕುತಿಯೊಳಗಿಹ್ಯಾ ॥ ತಾ ಧರಿಸಿಹನು ಪ್ರಾಕೃತ ಪ್ರಾಕೃತಾವರಣ । ಭೇದವೆ ಸಿದ್ಧ ಯಿಂಥ ಜೀವಗೂ ಹರಿಗ್ಯೂ ॥ ೫ ॥ ವಂದಲ್ಲ ಸರ್ವ ಜೀವರು ಸತ್ವರಜತಮರು । ಯಂದು ಭೇದಗಳುಂಟವರ ಲಕ್ಷಣಾ ॥ ಮುಂದಿನ ಪದದಿ ಪೇಳ್ವೆ ಸಜ್ಜನರು ಕೇಳಿ

ಯಾ । ನಂದ ಬಡಲೆಂದು ವಿನಯದಲಿ ಬಿನ್ನೈಸುವೆನು ॥ ೬ ॥ ಭಿನ್ನಭಕ್ತರು ಯೆನಿಪರೆಲ್ಲ ದೇವತಿಗಳ । ಭಿನ್ನ ಭಕ್ತರು ವಿಧೀರವರ್ಹೆಂಡರೂ ॥ ಚನ್ನಾಗಿ ಮುದದಿ ಈ ನಿರ್ಜರರ ತರತಮ್ಯ । ವನ್ನು ಕೇಳಿಕೊಬೇಕು ಜ್ಞಾನಿಗಳ ಮುಖದಿಂದ ॥ ೭ ॥ ವಿಧಿ ಮೊದಲು ತೃಣಜೀವ ಪರಿಯಂತ ಸಾತ್ವಿಕರು । ಇದರೊಳಗೆ ದೇವ, ಋಷಿ, ಪಿತೃಪ, ನರರೂ ॥ ಸುಧಿಗೆ ಯೋಗ್ಯರಜಾದಿ ಗೀರ್ವಾಣ ಗಂಧರ್ವ । ತುದಿಯಾಗಿ ಸಾಂಶರು ನಿರಂಶರುಳಿದವರೆಲ್ಲ ॥ ೮ ॥ ಇವರಿಂದ ಭಿನ್ನರಾಜಸರು ಗೋಭೂನರಕ । ತ್ರಿವಿಧಗತಿ ಉಳ್ಳವರು ಪಂಚ ಭೇದಾ ॥ ವಿವರ ತರತಮ ದೇವರ ಮಹತ್ಮೆಯನು ಅರಿಯ । ದವರು ಲಿಂಗ ಕಳಿಯರು ಧಾಮತ್ರಯ ಪೊಗದವರೂ ॥ ೯ ॥ ಸಂಸಾರಿಗಳಿಗೆ ಭಿನ್ನರು ತಮೋಗುಣದವರು । ಕಂಸಾರಿಯಲಿ ದ್ವೇಷವರ ಸ್ವಭಾವಾ ॥ ಆ ಸುರಾರಿ ಗಳು, ನಾಲ್ಕು ಪ್ರಕಾರ, ದೈತ್ಯ ರಾ । ಕ್ಷಸರು, ಪಿಶಾಚರವರನುಗರು, ನರಾ ಧಮರು ॥ ೧೦ ॥ ಈ ನಾಲ್ಕು ಬಗೆಯ ಸುರರಿಗೆ ಅರಸು ಕಲಿಯುವನಾ । ಹೀನತನವೆಷ್ಟುಚ್ಚರಿಸಲಿ ಮಿಥ್ಯಾ ॥ ಜ್ಞಾನಿ ಭೇದವನರಿಯ । ಪಂಚ ಮಹ ಪಾತಕಿ ಪು । ರಾಣ ವೇದಗಳಿಗೆ ವಿರುದ್ಧಾರ್ಥ ಕಲ್ಪಿಸುವಾ ॥ ೧೧ ॥ ಸುಜನ ರಾಚರಣೆ ನಡಿಯುಗುಡ ದುಃಖಬಡಿಸುವ । ಕುಜನರಿಗನೇಕ ಬಗೆ ಸಹಯ ವಹನೂ ॥ ವ್ರಜಗಳನರೋಗನಾ ವೃಷ್ಟಿಯಿಂದಣಿಸುವನು । ವೃಜನವನ ವಪು ತಾಯಿತಂಗಿಯಂಬರನರಿಯ ॥ ೧೨ ॥ ಬವರಬಂಗಾರದ್ಯೂತಾ ಪೇಯ ಅನೃತನಟ । ಯುವತಿಯೀಯಾರು ಸ್ಥಳ ನಿಲಯವಂವಗೆ ॥ ನವ ವಿಧ ದ್ವೇಷಿಗಳಿಗಾಕಾರ ನೆನಿಸುವನು । ಅವನ ಸಮ ಪಾಪಿಗಳು ಮೂರು ಲೋಕದಲಿಲ್ಲ ॥ ೧೩ ॥ ಆ ನೀಚನ ಮಲಮೂತ್ರವಿಸರ್ಜನದಿ ಘೋರ । ಕಾನನದಿ ಕತ್ತಲಿಯೊಳಗೆ ಸ್ಮರಿಪುದೂ ॥ ಕ್ಷೋಣಿಯೊಳವನ ನಿಂದೆ ನಿರುತ ದಲಿ ಮಾಡುವದೆ । ಶ್ರೀನಾಥನರ್ಚನೆ ಮಹಾಯಜ್ಞವೆನಿಸುವದು ॥ ೧೪ ॥ ಈ ವಿಧದಿ ಮೂರು ಗುಣದಿಂದ ಪರಸ್ಪರ ಜೀವ । ಜೀವರಿಗೆ ಭೇದಯ್ಯೋಗ್ಯತಿ ಪ್ರಕಾರಾ ॥ ಮೂವರಿಗೆ ಪಾಪಮಿಶ್ರತ ಕರ್ಮ ಪುಣ್ಯ ಬಹು । ನೋವು ಸ್ವರ್ಗ ನರಕ ಸುಮೋಕ್ಷಾದಿ ಗತಿ ಉಂಟು ॥ ೧೫ ॥ ಈ ಜೀವರಿಗೆ ಉಳ್ಳನು ಭವ ಜಡಗಳಿಗಿಲ್ಲ । ನೈಜವಾಯಿತು ಭೇದ ಜೀವಜಡಕೇ ॥ ಆ ಜಡತ್ರಿ, ನಿತ್ಯಾ

ಅನಿತ್ಯನಿತ್ಯಾ, ನಿತ್ಯ । ಮೂಜದವು ಅವ್ಯಾಕೃತ ನಭಶೃತಿ ವರ್ಣಗಳೂ ॥ ೧೬ ॥ ಪ್ರಾಕೃತ ವಿಕೃತ ವೈಕೃತ ತ್ರಯು ಅಸ್ಥಿರ ಜಡವು । ಪ್ರಾಕೃತ ವಜಾಂಡಧೊರ ಆವರಣವೂ ॥ ಸ್ವೀಕೃತೈವತ್ತು ಕೋಟ್ಯೋಜನ, ಸುವರ್ಣಾತ್ಮ । ಕಾಕ್ರಮಿಸಿಹದ ಜಾಂಡಕಿದು ವಿಕೃತ ಜಡವೆಂದು ॥ ೧೭ ॥ ಸರಸಿಜ ಭವಾಂಡದೊಳಿಹ, ನೆಲ ಜಲಧಿ ಗಿರಿಗಳು । ಎರಡೇಳು ಭುವನ ವೈಕೃತ ಜಡವಿದೂ ॥ ಸ್ಥಿರ ಅಸ್ಥಿರ ಜಡತ್ರಯುವಿಧ ಪುರಾಣಗಳರ್ಥ । ಇರುತಿಹವು ಅಚಲಾಗಿ ಶಬ್ದಗಳ ನಿತ್ಯಾ ॥ ೧೮ ॥ ಮೂಲಪ್ರಕೃತಿಗತ ತ್ರಿವಿಧಾನಂತ ಪರಮಾಣು । ಜಾಲಕಾರಣತ ಸುಸ್ಥಿರವೆನಿಪವೂ ॥ ನ್ಯಾಲೆ ಅದರಿಂದಾದ ತತ್ವಗಳ ನಿತ್ಯ ಮಹ । ಕಾಲವೆಂದಿಗ್ಯು ನಿತ್ಯ ಅಣುಕಾಲಗಳ ನಿತ್ಯಾ ॥ ೧೯ ॥ ಹೀಗೆ ಮೂರು ವಿಧ ಜಡ ವಂದೊಂದೆ ಮೂರು ಮೂ । ರಾಗಿರಲು ಜಡಜಡಕೆ ಭೇದ ಸಿದ್ಧಾ ॥ ಭಾಗಾರಮಾಡಿ ಗುಣರೂಪ ಕ್ರೀಯದಿ ನೋಡೆ । ನಾಗಾರಿವಹಗೆ ಜಡಗಳಿಗೆ ಭೇದವೇ ಸತ್ಯಾ ॥ ೨೦ ॥ ಈ ಕಮಲಜಾಂಡವು ಅನಿತ್ಯವಿದರೊಳಗೆ ಎಂ । ದೂ ಕೆಡದೆ ಸುಖಕಾಂತಿಯುಕ್ತವಾದಾ ॥ ಶ್ರೀ ಕಳತ್ರನ ತ್ರಿಧಾಮಗಳು ಕುಕಲಿಗೆ ತಕ್ಕ । ಶೋಕ, ಪೂರಿತವಾದ ನಿತ್ಯ ನರಕಗಳಿಹವು ॥ ೨೧ ॥ ಈ ಪಂಚಭೇದ ಜ್ಞಾನಿಲ್ಲದವ ಶ್ರೀಮುದ್ರಿ । ಗೋಪಿಚಂದನ ಧರಿಸಿದರು ಫಲವೇನೂ ॥ ಈ ಪೊಡವಿಯೊಳು ವೇಷಧಾರಿಗಳು ಜೀವಿಸರೆ । ಆ ಪರಿಯು ಭಾಸ ವೈಷ್ಣವನೆಂದರಿಯುಬೇಕೂ ॥ ೨೨ ॥ ಹರಿಗುರುಗಳ ದಯಪಡವರಿಗೆ ರುಚಿ ತೋರ್ವದಿತ । ರರಿಗೆ ಈ ಕೃತಿಯು ಕರ್ಣಕಠೋರವೂ ॥ ತರಣಿಬರೆ ಸರ್ವರಿಗೆ ಘೂಕಗಾದಂತೆ ಯಿದು । ಬರಿಯ ಮಾತಲ್ಲ ಶಾಸ್ತ್ರಕೆ ಸಮ್ಮತಾಗಿಹದು ॥ ೨೩ ॥ ಹೀನರೊಳು ಬೆರಿಯದಲೆ ಪಂಚಭೇದವ ತಿಳಿದು । ಸಾನುರಾಗದಲಿ ಹರಿ ಸರ್ವೋತ್ತುಮಾ ॥ ಪ್ರಾಣ ದೇವರೆ ಗುರುಗಳೆಂದರಿತು ಭಜಿಸುವರು । ಕಾಣರು ಕುಸಂಸಾರ ಧಾಮುತ್ರ ವೈದುವರು ॥ ೨೪ ॥ ಇಪ್ಪತ್ತೈದು ಪದಗಳಿಂದ ಸಂಗತಿಯಾಗಿ । ಒಪ್ಪುತಿಹ ಈ ಪಂಚಭೇದವನ್ನೂ ॥ ತಪ್ಪದಲೆ ನಿತ್ಯ ಪಠಿಸುವರ ಪೊರವವನು ಬೊಮ್ಮ । ನಪ್ಪ ಶ್ರೀ ಪ್ರಾಣೇಶ ವಿಠಲನಿಹಪರದಲ್ಲಿ ॥ ೨೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೧೭. ರಾಗ–ಕಾಂಬೋಧಿ (ಝಂಪೆತಾಳ). ॥ ಮಧ್ವನಾಮದ ಧಾಟಿ. ॥

ಮಾನಸಪೂಜಾ ಕ್ರಮ.

ಹೃದಯಮಂದಿರ ವಿವರ ಈ ಪರಿಯಲಿಂತಿಳಿದು । ಮಧುವೈರಿ ಪೂಜೆ ಮಾಳ್ಪುದು ಸುಜನರೂ ॥ ಪಲ್ಲ ॥ ಉದಯದಲಿ ಮೂರು ಬಾಗಿಲು, ಪ್ರಥಮದಲಿ ರಮಾ । ಅದರ ತರುವಾಯ ರವಿನಾಮ ಪ್ರಾಣಾ ॥ ಪದುಮಾಕ್ಷಿ ಭಾರತಿದ್ಯುನಾಮದಿಂದಿಹಳಲ್ಲಿ । ತುದಿಯ ಬಾಗಿಲಿಗಿಗೆ, ಜಯವಿಜಯರೂ ॥ ೧ ॥ ಯಮದಿಸಿಗೆ ಮೂರು ಕದ ಮೊದಲು ಶ್ರೀಯರಡರೊಳು । ತಿಮಿ ಪಾಖ್ಯವ್ಯಾನದಿಜ್ಞಾಂಭಾರತೀ ॥ ಅಮಲ ಬಲಪ್ರಬಲ ಮೂರನೇ ದ್ವಾರಕಿ ಹರು ಪ । ಕ್ಷಮ ದ್ವಾರ ಮೂರರೊಳಿಹರ ಪೇಳ್ವೇ ॥ ೨ ॥ ಪ್ರಥಮಮಾ ದ್ವಿತಿಯದಲಿ ಶಿಖಿನಾಮಕ ಪಾನ । ಪೃಧಿವಿನಾಮಕ ಭಾರತೀ ಕುಮುದರೂ ॥ ತೃತಿಯದಲ್ಲಿಹ್ಯರುತ್ತರಕೆ ಮೂರು ದ್ವಾರಗಳು । ಸತತಲ್ಲಿ ನೆಲಸಿಹರ ಪೆಸರು ಕೇಳೀ ॥ ೩ ॥ ಒಂದರೊಳು ಶ್ರೀ ದ್ವಿತಿಯ ಸುರವನಾಮುಸಮಾನ । ಇಂದುಮುಖಿಭಾರತಿಯು ವಿದ್ವ್ಯನ್ನಾಮ್ನಾ ॥ ನಂದನು ಸುನಂದ ಮೂರನೇ ಬಾಗಿಲಲ್ಲಿಹರು । ಒಂದು ಕದ ಮೇಲೂ ಭಾಗದಲೀಹದೂ ॥ ೪ ॥ ಅಲ್ಲಿ ಆಕಾಶ ನಾಮಕಳು ಲಕ್ಷ್ಮಿ ಉದಾನ । ಚಲ್ವಿಭಾರತಿಯು ವಾಙ್ನಾಮದಲಿಹಳೂ॥ ಮಲ್ಲರಿಪು ಅಷ್ಟಪತ್ರದೊಳಗೆ ದ್ವಿಷಡ್ರೂಪ । ದಲ್ಲಿಹ್ಯ ವಿವರ ಕೇಳಿ ಆದರದಲೀ ॥ ೫ ॥ ಎರಡೆರಡು ದಿಕ್ಕಿನಲಿ ಒಂದೊಂದು ದಿಕ್ಕಿನಲಿ । ಎರಡೈದು ಒಂದು ಸ್ತ್ರೀ ಒಂದು ಪುರುಷಾ ॥ ಪರಮ ಪಾವನವಾದ ಈ ಹನ್ನೆರಡು ರೂಪ । ಗುರು ಮಧ್ವಮುನಿರಾಯರೊರಣಿಸಿಹರೂ ॥ ೬ ॥ ಮನಕಂಜ ಮೂಲದಲಿ ದುರ್ಗ ಭೂಮಧ್ಯದಲಿ । ಕೊನಿನಳ ಶ್ರೀ ಭಾಗಭೇದಗಳಿವೂ ॥ ಮನುಜನಂಗುಟ ಮಿತಿ ತುದಿಯಲಿ ಹರಿಯಗ್ರೇಶ । ನೆನಿಸಿ ಜೀವರಿಗೆ ಸುಸುಪ್ತಿಯನೀವನೂ ॥ ೭ ॥ ತಾವರಿಯ ಮಧ್ಯದಲಿ ಇಹನಷ್ಟೆ ಪ್ರಾದೇಶ । ಆವಾಗ ದೇಹಿಗಾ ಧಾರ ಪುರುಷಾ ॥ ಭಾವಿಸುವದಿನಿತೆಮಿತೆ ಮೂಲೇಶ ಈತಗೇ । ಕೋವಿದರು ವಿಜ್ಞಾನವಪು ಎಂಬರೂ ॥ ೮ ॥ ಮೂಲೇಶನಂಘ್ರಿ ಆಶ್ರೈಸಿ ಮುಖ್ಯ ಪ್ರಾಣ । ವಾಲಗವ ಮಾಳ್ಪ ಕೈಮುಗಿದು ನಿರುತಾ ॥ ಕಾಳೀಶನಂತರ್ಗತನು ವಿಷ್ಣುವಿಗೆ ನಾಮ । ಲಾಲೂಕ ವೈಕುಂಠಶೇನಕೇಂದ್ರಾ ॥ ೯ ॥ ಹಂಸ ನೋ

ಹಂಸ್ವಹಾ ಎಂಬ ಜಪ ಸರ್ವರೊಳು । ಶ್ವಾಸರೂಪದಿ ಮಾಳ್ಪ ಇದನು ತಿಳಿದೂ ಶ್ರೀಶಗರ್ಪಿಸಿದವನೆ ಜ್ಞಾನಿ ಎಂದಿಗ್ಯು ಬಂಧ । ಪಾಶದೊಳು ಶಿಲ್ಕ ಲಾಲಿಪುದು ಬುಧರೂ ॥ ೧೦ ॥ ಈ ವಾಯುದೇವನಡಿ ಆಶ್ರೈಸಿ ಸರ್ವದಾ । ಜೀವನಿಹ ಅವನಿರವು ಎಂತು ಕೇಳೀ ॥ ಆವ ಕೇಶಸಹಸ್ರ ಭಾಗದೊಳು ವಂದಂಶ । ದೀ ವಪ್ಪುವನು ಸರ್ವವಯುವಗಳಿಂದ ॥ ೧೧ ॥ ವಾಸುದೇವನೆ ಹರಿಗೆ ಶಿರವೆನಿಪ ನಾಶಿರವು । ಈ ಶರೀರಗೆ ಶಿರವು ನಾರಾಯಣಾ ॥ ಭಾಸಿ ಸುವ ಮಧ್ಯಮಧ್ಯದೊಳಿಹದು ಪ್ರದ್ಯುಮ್ನ । ಶ್ರೀಶನಾ ಬಲಭಾಗ ಬಲ ದೊಳಿಹದೂ ॥ ೧೨ ॥ ವಾಮಹರಿಗನಿರುದ್ಧ ಜೀವನೆಡದಲ್ಲಿಹದು । ಸ್ವಾಮಿ ಪದ ಸಂಕರಷಣೆದರೊಳಿಹದೂ ॥ ರಾಮವಾಗೇಂದ್ರಿ ದೇವಗೆ ವಾಗ್ದೋಳಿಹ ನೃಹರಿ । ಶ್ರೀ ಮನೊರಮಗೆ ಘ್ರಾಣ ಜೀವಘ್ರಾಣಾ ॥ ೧೩ ॥ ಹರಿನೇತ್ರ ಕಪಿಲಜೀವನ ಕಂಣಿನಲ್ಲಿ ಹವಿ । ವರ ತಿಳಿವದೀ ಜೀವನಂಗಧವಣೀ ॥ ವರ ರಮ್ಯವಾದ ಜೀವನ ಹೃತ್ಕಮಲ ಶ್ವೇತ । ವರಣಷ್ಟ ಪತ್ರ ಉಳ್ಳದು ತಿಳಿವದೂ ॥ ೧೪ ॥ ಅಲ್ಲಿದ್ದ ಹರಿಗಾತ್ಮಜೀವ ಹೃದಯಂಬುವರು । ಬಲ್ಲವರು ಸ್ಥೂಲಾಂಗ ಹೃತ್ಸರಸಿಜಾ ॥ ದಲ್ಲೆಷ್ಟದಳ ಮಧ್ಯ ರತ್ನಮೌಕ್ತಿಕ ಕಾಂತಿ । ಯಲ್ಲಿಹದು ಹೇಮಮಂಟಪಮಾತ್ಮಕಾ ॥ ೧೫ ॥ ಆ ಮಂಟಪದಲಿ ಹನ್ನೆರಡು ಮೂಲ್ಯುಳ್ಳ ಭಾ । ನೂ ಮಂಡಲದಲಿ ಬಡುವಾಗೀಹದೂ ॥ ಸೋಮ ಮಂಡಲದಲಿ ತ್ರಿಕೋಣಾಗ್ನಿ ಮಂಡಲದಿ । ಭೂಮಿಧರ ಶೇಷಪರಿಯಂಕದಲ್ಲೀ ॥ ೧೬ ॥ ಮುತ್ತುರತ್ನಗಳಿಂದ ದಟಿತವಾದಾಸನ ವಿ । ಚಿತ್ರ ರತ್ನಖಚಿತದ, ಉಪ ಬರ್ಹಣಾ ॥ ಉತ್ತುಮಶಿತ ದ್ವೀಪಗತ ವಿಷ್ಣು ಅಲ್ಲಿಹನು । ನಿತ್ಯ ಪರಮಾತ್ಮ ನೆಂಬರು ಆತಗೇ ॥ ೧೭ ॥ ಬಿಂಬನಾಮನರೂಪವೇನು ವರ್ಣಿವೆನುದಿತ । ಅಂಬುಜಾಪ್ತಾಭಚಿತ್ಸು ಸುಖವಿಗ್ರಹಾ ॥ ಕಂಬುರವಿಗದ ಕಂಜಶಿರಿ ಧರಣಿ ಸಹಿತ । ಹೇಮಾಂಬರದಿ ವಧ್ಯಾಣದಿಂದೊಪ್ಪುವಾ ॥ ೧೮ ॥ ಕಟಪ್ರದೇಶನು ಗುಂಭನಾಭಿ ಕೌಂಸ್ತುಭ ವಕ್ಷ । ಪಟುತರ ಭುಜದಿ ಭೂಷಣದಲೊಪ್ಪುವಾ ॥ ದಟಿತ ರತ್ನದ ಮುಕುಟ ನೀಲಾಳಕನು ಬ್ರಹ್ಮ । ನಿಟಲಾಕ್ಷ ಮುಖಸ್ಯೆನ್ನ್ಯ ಶೃತಿಭೂಷಣಾ ॥ ೧೯ ॥ ಪವಳ ಮೌಕ್ತಿಕ ರತ್ನಹಾರ ಅರವಿಂದಾಕ್ಷ । ಸುವಿ ಶಾಲ ಹೃದಯ ಮಂದಸ್ಮಿತ ಮುಖಾ ॥ ಸುವರಣ್ಣ ಕಡೆಯನೂ ಪುರಗೆಜ್ಜೆ

ಯುಕ್ತ ಪದ । ದಿ ವಿಷತ್ಪತಿಯು ಪೊಗಳಲಾಶಕ್ತನೇ ॥ ೨೦ ॥ ಸ್ಥಾನತ್ರಯು ದೊಳಿದ್ದ ಹೃತ್ಪದ್ಮದೊಳಗಿದ್ದ । ನಾನಾ ಜೀವಜಡರೊಳ ಹೊರಗಿರುತಿಹ್ಯಾ ॥ ಶ್ರೀನಿವಾಸನ ರೂಪಕತ್ಯಂತ ಐಕ್ಯ್ಯವನು । ಸಾನುರಾಗದಲಿ ಚಿಂತಿಪುದೆ ಪೂಜೀ ॥ ೨೧ ॥ ಧನರೂಪ ಬಲಯುಕ್ತನಾದ ಕಾಲಕು ತನ್ನ । ತನಯ ವಂಡಿತನಾಗದೆಂತ ಸಂಹ್ಯಾ ॥ ಜನಕಗಾಗುವಥಾಂಗೆ ಬಾಹ್ಯ ವಸ್ತುಗಳಿಂದ । ಘನ ಪೂಜಿಸಿದರು ಶ್ರೀನಾಥ ಮೆಚ್ಚಾ ॥ ೨೨ ॥ ತನ್ನ ಮನಿಯೊಳಗಿನ ವಿಚಾ ರವನು ಬಿಟ್ಟು ಮ । ತ್ತನ್ಯ್ಯರಪರಾಧವೆಣಿಸುವನ ತೆರದೀ ॥ ಚನ್ನಾಗಿ ಈ ಮರ್ಮ ತಿಳಕೊಳ್ಳದೆ ಬಲ್ಲೆನೆಂ । ದಿನ್ನೊಂದು ಪ್ರಶ್ನ ಮಾಡುವನೆ ಮೂರ್ಖ ॥ ೨೩ ॥ ಹದಿನೂರು ದ್ವಾರಷ್ಟ, ಪತ್ರಧೋಮುಖವಾದ । ಹೃದಯದ ವಿಚಾರಗಣಿತೆನ್ನಮತಿಗೇ ॥ ವದಗಿದಷ್ಟೇಳಿಹೆನು ತುಷ್ಟನಾಗನೆ ಶ್ರೀಶ । ವಿದು ರಿತ್ತಪಾಲಿಗೊಲಿದವನಲ್ಲವೇ ॥ ೨೪ ॥ ಹೃದಯ ಜೀವನ ಶರೀರಹಂಕಾರ ಅಂತರಾತ್ಮ । ಮೊದಲು ಪರಿನಾಮ ಜೀವನೊಳು ತಿಳಿದೂ ॥ ಮದನನ್ಯಯನ ಪೂಜಿ ಮನದಲ್ಲಿ ಮಾಡಲು ಬಿ । ಡದೆ ಕಾಯ್ವ ಇಹಪರದಿ ಕರುಣಸಾಂದ್ರಾ ॥ ೨೫ ॥ ಏನು ಕೊಟ್ಟರುವಲ್ಲ ಈ ವಿಚಾರಕೆ ಪ್ರೀಯ । ಧೇನುವಂದದಲೀವ ಬೇಡಿದಿಷ್ಟಾ ॥ ನಾನರಿಯೆ ನಿದನಪದ್ಧವ ಕ್ಷಮಿಸುವರು ಬುಧರು । ಶ್ರೀನಾ ಥನುಡಿಸಿದಂದದಿ ಪೇಳಿಹೇ ॥ ೨೬ ॥ ಶಬರಿ ಗಾಂಗೇಯ ಕಾಳಿಂಗ ಶಿಶುಪಾಲ ಭೃಗು । ಅಬುಜ ಪ್ರಥಮಾಂಗ ಅಜಮಿಳ ತಾರಾ ॥ ವಿಬುಧೇಶ ಪ್ರಮುಖ ರಪರಾಧ ಕ್ಷಮಿಸಿದ ಕೃಪಾ । ಅಬುಧಿಯನ್ನಯ ಅಪದ್ಧಗಳೆಣಿನೊನೇ ॥ ೨೭ ॥ ಸೂಜಿಯಿಂ ರಣ ಜೈಸಿದಂತೆ ಯನ್ನೀಮತಿಗೆ । ರಾಜೀವನಯನೊಲಿದು ಪೇಳಿಸಿದ ನೇ ॥ ಶ್ರೀ ಜಗನ್ನಾಥರಾಯರ ದಾಸರವನೆಂದು । ಸೋಜಿಗವ ಮಾಡ್ದ ಪ್ರಾಣೇಶ ವಿಠಲಾ ॥ ೨೮ ॥ ಮಂಗಳಂ ಶಫರ ಕೂರ್ಮ ಕಿಟನೃಹರಿ ವಟುರಾಮ । ಮಂಗಳ ಧರಿಜರಮಣ ಕೃಷ್ಣ ಬುದ್ಧಾ ॥ ಮಂಗಳಹಯವಹನ ಅನಂತ ಸುಗುಣಾರ್ಣವಗೆ । ಮಂಗಳಂ ಪ್ರಾಣೇಶವಿಠ್ಠಲನಿಗೇ ॥ ೨೯ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೧೮. ಪದ, ರಾಗ–ಸಾವೇರಿ (ಝಂಪೆತಾಳ). ॥ ಮಧ್ವನಾಮದ ಧಾಟಿ ॥

ನರಜನ್ಮ ಬಂದುದಕೆ ಇಪ್ಪತ್ತು ಆರು ಕಳೆ । ವರದೊಳಿಹ ಹರಿರೂಪ ಚಿಂತಿಸುವದೂ ॥ ಪಲ್ಲ ॥ ಎರಡನಂತದ ಮ್ಯಾಲೆ ವಂಭತ್ತಧಿಕ ನೂರು । ಸ್ವ

ರುಪದೊಳಗಿಹವು ಆವ್ಯಾಲೆ ಇಚ್ಛಾ ॥ ವರಣದಲಿ ಒಂದು ಲಿಂಗದಲಿ ಆರೊಂದಧಿಕ । ಅರುವತ್ತು ರೂಪಗಳು ಉಂಟು ಕೇಳೀ ॥ ೧ ॥ ಎಪ್ಪತ್ತರೊಂಭತ್ತಧಿಕ ನೂರು ಅವ್ಯಕ್ತ । ಕಿಪ್ಪವು ಅವಿದ್ಯದೊಳು ಯೇಳು ಅಧಿಕಾ ॥ ಇಪ್ಪತ್ತು ಕರ್ಮಕಾಮಾವರಣದಲಿ ಮೂರು । ಇಪ್ಪತ್ತು ಮೂರು ಅರುವತ್ತು ಎಂಟೂ ॥ ೨ ॥ ನಾರಮಣಜೀವ ಪರಮಾಚ್ಛಾದಿಕೆರಡರೊಳು । ಬ್ಯಾರೆ ಬ್ಯಾರಿಪ್ಪ ಒಂಭತ್ತು ರೂಪಾ ॥ ನಾರಾಯಣಾದಿ ಐದರೊಳಗೊಂದೊಂದೇವೆ । ತೋರುತಿಹವಜಪಿತನ ವಿಮಲಮೂರ್ತೀ ॥ ೩ ॥ ಎರಡು ಲಕ್ಷೆರಡು ಸಾವಿರದ ನಾನೂರು ಈ । ರೆರಡಧಿಕ ತೊಂಭತ್ತು ಅನಿರುದ್ಧದೀ ॥ ಮೆರವ ಶ್ರೀ ವಾಸುದೇವ ನಾರಾಯಣ ಕವಚದಿ । ಇರುವ ಒಂದೊಂದು ಆನಂದಮಯದೀ ॥ ೪ ॥ ಇನ್ನು ವಿಜ್ಞಾನ ಮನವಾಙ್ ಶ್ರೋತ್ರ ಚಕ್ಷು ಪ್ರಾ । ಣನ್ನಮಯ ಹೀಗೆ ಯೇಳೊಂದರೊಳಗೇ ॥ ವನ್ನಜಾಕ್ಷನ ರೂಪ ಒಂದೊಂದೆ ಇಹವೆಂದು । ಚನ್ನಾಗಿ ಭಕ್ತಿಪೂರ್ವಕ ತಿಳಿವದೂ ॥ ೫ ॥ ಸ್ಥೂಲವಾದಂಗದಲಿ ಮೂವತ್ತೆರಡು ಕೋಟಿ । ಯೇಳು ಲಕ್ಷದ ಮೇಲೆ ರಮ್ಯವಾಗೀ ॥ ಶ್ರೀಲೋಲ ತೊಂಭತ್ತು ಮೂರು ಸಾವಿರದ ಹದಿ । ನೇಳಧಿಕ ಎಂಟು ಶತರೂಪದಲಿಹಾ ॥ ೬ ॥ ಈರನಂತ ಮೂವತ್ತೆರಡು ಕೋಟಿ ನವಲಕ್ಷ । ಆರಧಿಕ ತೊಂಭತ್ತು ಸಾವಿರೆಂಟೂ ॥ ನೂರು ಐವತ್ತೆಂಟು ರೂಪಗಳು ಸ್ತಂಬಾದಿ । ವಾರಿಜಭವಾಂತ ದೇಹಗಳೊಳೀಹವೂ ॥ ೭ ॥ ಮೋದತೀರ್ಥರ ಮತವ, ಪೊಂದಿದವರೀ ರೂಪ । ಸಾದರದಿ ಚಿಂತಿಸುವದೇ ಮೋಕ್ಷಕೇ ॥ ಸಾಧನವಿದು ಸಾತ್ವಿಕರಿಗಲ್ಲದಲೆ ಅನ್ಯ । ವಾದಿಗಳಿಗುಪದೇಶ ಮಾಡಸಲ್ಲಾ ॥ ೮ ॥ ಪ್ರಾಣೇಶವಿಠ್ಠಲನ ಸುಮೂರ್ತಿ ಈ ಪರಿಯಿಂದ । ಧ್ಯಾನಕ್ಕೆ ತಂದು ಹಿಗ್ಗದಲೆ ಬರಿದೇ ॥ ಏನು ಓದಿದರು ಕೇಳಿದರು ತಪಮಾಡಿದರು । ಆನಿ ತಿಂದಕಪಿಧ್ಥದಂತೆರಿವದೂ ॥ ೯ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೧೯. ಪದ, ರಾಗ–ಪಂಥುವರಾಳಿ (ಏಕತಾಳ).

ಸಜ್ಜನರ ನಡತಿದೂ । ಶ್ರೀ । ಅರ್ಜುನ ಸಖನ ಪದಾಬ್ಜ ಭಜಿಸುವದೆ । ಸಜ್ಜನರ ನಡತಿದೂ ॥ ಪಲ್ಲ ॥ ಕುಹಕರ ಸಂಗವ ಮಾಡದೆ ಖೇಚರ । ವಹನ

ನಾಳುಗಳ ಆಳಾಗೀ || ಅಹರ್ನಿಶಿಯಲಿ ತತ್ವವಿಚಾರಿಸುತಲಿ | ಅಹಲ್ಲಾದವ ಮನದಲಿ ಬಡುತಿಪ್ಪುದೆ || ೧ || ನೀಚ ಸುರನರರ, ಸೇವಿಸಿ ವರಶನ | ಯಾಚಿಸದೆ ಸ್ವಧರ್ಮವ ಬಿಡದೇ || ಖೇಚರಜ ಮತವ ಪೊಂದಿನು ಕರ್ಮಗ | ಳಾಚರಿಸುತ ವಿಜ್ಞಾನ ಫಳಿಸುವದೆ || ೨ || ಪದ್ಮಜಮುಖರಿಗೆ ಕ್ಷಣಕ್ಷಣದಲಿ ಶಿರಿ | ಬುದ್ಧಿಯ ಪ್ರೇರಿಸುವಳು ಆಕೀ || ಪ್ರದ್ಯುಮ್ನನು ಮಾಡುವ, ಲೀಲಿಯು ಬಳಿ | ಇದ್ದರು ಒಂದನು ಅರಿಯಳು ಎಂಬುದೆ || ೩ || ತತ್ವಾಭಿಮಾನಿಗಳೆಲ್ಲ ಸಮಿರಾರ ಪ್ರ | ವರ್ತಿಸಿದಂದದಿ ವರ್ತಿಪರೂ || ಸತ್ಯವತಿ ಜಗತೊಬ್ಬನೆ ಅಚ್ಚಿ | ನ್ ಭೃತ್ಯ ಶಿವಾದ್ಯರು ಭಿನ್ನರು ಎಂಬುದೆ || ೪ || ಮೂಲದಲಿದ್ದ ಮಹತ್ಮಿನಿರುತ ಶ್ರೀ | ಲೋಲನ ಅವತಾರದೋಳುಂಟೂ || ಕಾಳೀಶಗೆ ಕೊಂಡರೆ ಬರುತಿಪ್ಪದು | ನೀಲಕಂಠ ಪ್ರಮುಖರಿಗಿಲ್ಲೆಂಬುದೆ || ೫ || ಚೇತನ ಚೇತನವಾದ ಜಗತ್ಯವು | ವಾತನಧೀನದೊಳಿರುತಿಹದೂ || ಅತನುರಮೆಯಧೀನವಳು ಹರಿ | ದೂತಳೆಂದು ನಿಶ್ಚಯ ತಿಳಕೊಂಬುದೆ || ೬ || ಎಲ್ಲದಿವಿಜರವಲಕ್ಷಣಯುಕ್ತರು | ಬಲ್ಲಿದ ಹರಿಮಾರುತ ಮಾತ್ರಾ || ಸಲ್ಲಕ್ಷಣರೆನುತಲಿ ತಿಳಿದು ಗಿರಿಜ | ವಲ್ಲಭ ಪ್ರಮುಖರಿಗೊಂದಿಸುತಿಪ್ಪುದೆ || ೭ || ಅಂಬುಜಭವ ಮೊದಲಾದವರಿಗೆ ಪೀ | ತಾಂಬರತನ ಪೆಸರಿತ್ಯಹನೂ || ಕಂಭನದನ ತೊಲಿಜಂತಿಯು ಮಾಳಿಗಿ | ಎಂಬು ಶಬ್ದವಾಚ್ಯನು ಹರಿ ಎಂಬುದೆ || ೮ || ಅರಸುಗಳಾದವರನುಗರ ಕೈಯಲಿ | ನರರ ಸೀಕ್ಷಿಮಾಡಿಸುವಂತೇ || ಹರಿವಿಧಿಶಿವರೊಳು ತಾನಿಂತಾವಾಗ | ಮರಿಯಾದಿಗಳು ನಡಿಸುತಿಹ್ಯನೆಂಬುದೆ || ೯ || ಸೃಜಿಸುವ ಜನೊಳಿದ್ದು ಜಗವ ಪೊರವನು | ಭುಜಗಭೂಷಣನೊಳಿದ್ದು ಲಯಾ || ದ್ವಿಜರೂಪಿಯೆ ಮಾಳ್ಪನು ಎಂತಿಳಿಯದ | ಕುಜನರು ನರಕವ ಐದುವರೆಂಬುದೆ || ೧೦ || ವಂದೊಂಧರಿ ನೇಮದಿ ಬಲ್ಲರು, ಮರ | ಳೊಂದನರಿಯರ ಜಾದಿಗಳೂ || ಮುಂದರಧರ ಬಹುಬಲ್ಲನು ಜೀವರ | ಬಂಧಕಶಕುತಿಯೊಳಿರಿಸಿಹನೆಂಬುದೆ || ೧೧ || ಜ್ಞಾನಾನಂದಾದಿ ಗುಣಭರಿತಹರಿ | ಹೀನತನವನೆಂದಿಗ್ಯು ಅರಿಯಾ || ಕಾಣಿಸಿಕೊಳ್ಳನು ಎಂದಿಗು ಅಧಮರಿ | ಗೇನಳಿನಾಕ್ಷನು ಎಂದುಚ್ಚರಿಪುದೆ || ೧೨ || ಝುಷ ಮೊದಲಾದವತಾರವು ಮಿಥುನೀ | ದೆಶೆಯಿಂದಲಿ ಆಗಿಲ್ಲನಳಾ || ಮುಸಿಯುಲು ಕಾಷ್ಟದಿ ತಾ

ತೋರ್ವಂದದಿ । ವಸುದೇವಜನವ್ಯಕ್ತನು ಯಂದರಿವದೆ ॥ ೧೩ ॥ ಆಪಗ, ವನಧಿ, ಯನಳನಿಳ ಶಶಿರವಿ । ಈ ಪೊಡವೀ ವನ ನಿರಂತರದೀ ॥ ಶ್ರೀಪತಿ ಕಟ್ಟಲಿಯೊಳಗಿಹದೆಂದು ಪ । ದೆ ಪದೆ ನೆನದು ಸುಖಬಡುತಲಿರುವದೆ ॥ ೧೪ ॥ ನಿಶಿಯಲಿ ಕಂಡಿಹ ಸ್ವಪ್ನವು ನಿಶ್ಚಯ । ಅಸಮು ಸೃಜಿಸಿದ ಜಗತ್ಯವನೂ ॥ ಹುಸಿ ಎಂಬವ ಕುಲಭ್ರಷ್ಟನು ಎಂದಿಗು । ಹಸಗತಿ ಅವನಿಗೆ ಇಲ್ಲಿಲ್ಲೆಂಬುದೆ ॥ ೧೫ ॥ ಪ್ರಾಣಿಗಳೊಳಗಿದ್ದೆಲ್ಲ ಕೆಲಸವನು । ತಾನೆ ಮಾಡಿಮಾಡಿಸಿ ಫಲ ವಾ ॥ ಏನು ನೋಡೆ ನಿರ್ಮಲನಾಗಿಹ ಹರಿ । ಭಾನುಸಖ ಜಲದೊಳಿರುವಂತೆಂಬುದೆ ॥ ೧೬ ॥ ತಾ ಬಂಧಿಸುತಿಹ ಸರ್ವ ಜಗತ್ಯವ । ನೂ ಬದ್ಧನು ಅಲ್ಲವು ಊರ್ಣಾ ॥ ನಾಭಿಯು ಜಾಲಿಯ ಹೊರಗಿರುವಂದದಿ । ಶ್ರೀ ಭಗವಂತನು ಇರುತಿಹನೆಂಬುದೆ ॥ ೧೭ ॥ ಭಕ್ತಿಗೆ ಭೇದವು ಜ್ಞಾನಕೆ ಭೇದವು । ಮುಕ್ತಿಗೆ ಭೇದವು ಯಂತಿಳಿದೂ ॥ ಸತ್ಪುರುಷರ ಸ್ನೇಹವ ಸಂಪಾದಿಸಿ । ಮುತ್ತೊಂದೊಲ್ಲೆನು ಯಂದಿರುತಿಪ್ಪುದೆ ॥ ೧೮ ॥ ಸಾಧನತ್ರಯ ಫಲಗಳನು ವಿಚಾರಿಸಿ । ಮಾಧವನ ಗುಣ ಮಹತ್ಮಿಯನೂ ॥ ಸಾದರದಿಂ ಜ್ಞಾನಿಗಳ ಮುಖದಲಿ ದಿ । ನೇ ದಿನೇ ಕೇಳಿ ವಿಜ್ಞಾನ ಫಳಿಸುವದೆ ॥ ೧೯ ॥ ಕಾಲಿಲ್ಲದೆ ನಡಿಯಲಿ ಬಲ್ಲನು ಹರಿ । ಕೇಳುವ ಕಿಂವಿಯಿಲ್ಲದೆ ತನ್ನಾ ॥ ಲೀಲಿಯು ಹೀಂಗದೆ ಯಂದು ತಿಳಿಪುದಕೆ । ಈ ಲೋಕದಿ ಅಹಿ ಮಾಡಿಹನೆಂಬುದೆ ॥ ೨೦ ॥ ಚೇತನಕೃತ್ಯವ ಮಾಡುತಲಿಪ್ಪವ ಚೇ । ತನಗಳು ಚಿಂತಾಮಣಿದೇ ॥ ವಾ ತರು ಸಂಜೀವನ ಪರ್ವತ ಶ್ರೀ । ನಾಥನ ಆಜ್ಞವು ಯಿದು ಎಂದರಿವುದೆ ॥ ೨೧ ॥ ಸತ್ವಾದಿ ಗುಣರಹಿತ ಪರಮಾತ್ಮನು । ಚಿತ್ತು ಜ್ಞಾನಬಲ ಸುಖ ಪೂರ್ಣಾ ॥ ಮೃತ್ಯುಂಜಯು ಸಖಗುಣ ಶೂನ್ಯಂಬ ಪ್ರವರ್ತಕ ಹೀಗೆಂದೂ ತಿಳಿದೀಹದೆ ॥ ೨೨ ॥ ಯೇಸು ಯೇಸು ಕಲ್ಪಗಳಾದರು ಶ್ರೀ । ವಾಸುಕಿ ಶಯನಗೆ ಎಂದೆಂದೂ ॥ ನಾಶವಿಲ್ಲ ವಿಶೋಕರು ಧರಿಯೊಳು । ಶ್ರೀಶನ ವ್ಯತಿರಿಕ್ತಾರಿಲ್ಲೆಂಬುದೆ ॥ ೨೩ ॥ ಬ್ರಹ್ಮಾದಿಗಳಿಗೆ ಜನಕನು ಶ್ರೀ ಪರ । ಬ್ರಹ್ಮಗೆ ಒಬ್ಬರು ಸರಿಯಿಲ್ಲಾ ॥ ಒಮ್ಮಿಗು ಅಧಿಕರು ಇಪ್ಪರೆ ಶೃತಿಯಲಿ । ಸಮ್ಮತವಾಗೆದೆ ಈ ನುಡಿಯಂಬುದೆ ॥ ೨೪ ॥ ಶತಸುಖ ವಿಧಿಕೋಟ ಸುಖಿರಮಾಪರಿ । ಮಿತಯಿಲ್ಲದ ಸುಖಿಕೇಶವನೂ ॥ ಕ್ಷಿತಿಯೊಳು ಪರಮೇಶ್ವರನೈಶ್ವ

ರ್ಯಕೆ । ಇತರರು ಆರುಂಟು ಸಮನೆಂಬುದೇ ॥ ೨೫ ॥ ತಾರಿ ಯುಗಗನ ದೊಳೀಸವೆಯುಂಬುದು । ಧಾರುಣಿಯೊಳಗೆಣಿಸಲಿ ಬಹುದೂ ॥ ನಾರಾಯ ಣನ ಮಹತ್ಮಿ ಗಣಣೆಯನು । ಆರಾರಿಲ್ಲವು ಬಲ್ಲವರೆಂಬುದೆ ॥ ೨೬ ॥ ವಿಶ್ವಾ ಸದಿದೂರ್ವಿಯದಳವಿತ್ತರೆ । ವಿಶ್ವಕುಟುಂಬಿಯು ಕೈಕೊಂಬಾ ॥ ಅಶ್ವಾದಿ ಮುಖದಿಂ ಪೂಜಿಸಲು ಅ । ವಿಶ್ವಾಸದವರು ಕೊಳ್ಳನು ಎಂಬುದೆ ॥ ೨೭ ॥ ಗೋವಿಂದಗೆ ನಿಜನಾಮನಿಸುತಿಹವು । ಐವತ್ತೊಂದೂ ವರ್ಣಗಳೂ ॥ ಈ ವಿವರವು ತಿಳಿದು ನಿಂದಾಸ್ತುತಿಗಳು । ದೇವನ ಗುಣಕಥನಗಳೆಂದರಿ ವದೆ ॥ ೨೮ ॥ ದುರ್ಜನರಿಗೆ ಎಂದಿಗೂ ದಯಮಾಡನು । ನಿರ್ಜರೇಶ ಸಂತರಿ ಗೊಲಿವಾ ॥ ದುರ್ಜಯವಾದ ಮನಸು ನಿಶ್ಚೈಸುತ । ಅಬ್ಜದಳಾಕ್ಷನ ಒಲಿ ಸಿರೊ ಎಂಬುದೆ ॥ ೨೯ ॥ ಯಮನಿಯಮಾದಿಗಳಲಿ ದಾರಢ್ಯದಿ । ಕಮಲಾ ಸ್ವಸ್ತಿಕ ದಾಸನದೀ ॥ ಸಮಚಿತ್ತದಿ ರೇಚಕ ಪ್ರಮುಖದಲಿಂ । ಸಮಿರನ ಬಂಧಿಸಿ ಜಪವನು ಮಾಳ್ಪದೆ ॥ ೩೦ ॥ ಸ್ವಾಗರ್ಭಕ ಆಗರ್ಭಕ ಎಂಬುವ । ಯೋಗದ ಲಕ್ಷಣ ತಿಳಕೊಂಡೂ ॥ ಮೂಗಿನ ತುದಿಯನೆ ನೀಕ್ಷಿಸುತಲಿ ಶ್ರೀ । ಭಾಗೀರಥಿ ಪಿತನ ಸ್ಮರಿಸುತಿಪ್ಪುದೆ ॥ ೩೧ ॥ ಅಂಗುಷ್ಠಾರಂಭಿಸಿ ಮಸ್ತಕತನ । ಕಂಗಜ ಜನಕನ ರೂಪವನೂ ॥ ಹಿಂಗದೆ ಧೇನಿಸಿ ವೈರಧರು ಷದಿ । ಕಂಗಳಿಂದುದಕ ಸೂಸುತಲಿಪ್ಪುದೆ ॥ ೩೨ ॥ ಈ ಕರ್ಮವ ಮಾಡಿದೆ ಯನಗೀ ಪರಿ । ಸಾಕಲ್ಯೈವು ಆಯಿತು ಎಂದೂ ॥ ಲೋಕಕಕೆ ತಿಳಿಸದೆ ತನ್ನಯ ಭಾವವ ಜೋಕಿಲಿ ಬಚ್ಚಿಟ್ಟೊಕೊಂಡಿರುವದೆ ॥ ೩೩ ॥ ಧ್ಯಾನಕೆ ಕುಳಿತರೆ ಮನಹರಿದೋಡಲು । ಜಾನಕಿರಮಣನ ಮೂರುತಿಯಾ ॥ ತಾ ನೀಕ್ಷಿಸುತಲಿ ಸರ್ವದ ತತ್ಪದ । ರೇಣುದೊಳಗೆ ಮುಣಿಮುಣಿಗಿ ಯೇಳು ವದೆ ॥ ೩೪ ॥ ಅಸುರರನಳಿಯಲು ಶಕ್ತನು ಶ್ರೀ ಹರಿ । ದಶರೂಪವ ತಾಳಿದ ನ್ಯಾಕೇ ॥ ವಸುಧಿಯೊಳಗೆ ಪಾಪಿಷ್ಠ ಜನರ ಮೋ । ಹಿಸುವದಕೀ ಪರಿಲೀಲಿ ಗಳೆಂಬುದೆ ॥ ೩೫ ॥ ಅನ್ನ್ಯತ್ರದಿ ಇಂದ್ರಿಯಗಳ ಚಲಿಸದೆ। ತನ್ನೊಶದೊಳಗಿ ರಿಸೆನುದಿನದೀ ॥ ಪನ್ನಗಶಯನನ ಪೂಜಿಯ ಮಾಡುತ । ಧನ್ನ್ಯನು ಈ ನರ ನೆನಿಸುತಲಿಪ್ಪುದೆ ॥ ೩೬ ॥ ಕೋಪವ ಬಿಟ್ಟು ನಿರಂತರ ಜ್ಞಾನಿಗ । ಳಾಪದ ಭಜಿಸುತ ಹರಿದಿನದೀ ॥ ಲೋಪವ ಮಾಡದೆ ನಿರ್ಜಲ ಜಾಗರ । ವಾ ಪರಮ

ಮುದದಿ ನಡಸುತಲಿಪ್ಪುದೆ ॥ ೩೭ ॥ ಖುಣಕೆ ಕಾಳ ಕೂಟವ ಕುಡಿವಂತೆ ಮ । ರಣದಂದದಿ ಸನ್ಮಾನಕ್ಕೇ ॥ ಕುಣುಪದಂತೆ ಪರಸ್ತ್ರೀನೊಡಲ್ ಭಯ । ವನು ಬಡುವನೆ ಬ್ರಾಹ್ಮಣನೆಂದರಿವದೆ ॥ ೩೮ ॥ ಶತ ಮುಖನಿಗೆ ಈಶಬಲ ಅವಗೆ ಬಲ ಮ ।–ರುತವಗೆ ಬಲಹರಿ ಅವಗೆಂದೂ ॥ ಇತರರ ಬಲಬೇಕಿಲ್ಲ ಸ್ವತಂತ್ರ । ಚ್ಯುತ ಸರ್ವಜ್ಞ ಸುಗುಣ ಪೂರ್ಣೆಂಬುದೆ ॥ ೩೯ ॥ ಸಂಸಾರವ ಹೇಯಿಸಿಕೊಂಡಾವಗ । ಕಂಸಾಂತಕನೂಳಿಗವನ್ನೂ ॥ ಸಂಶಯವಿಲ್ಲದೆ ಮಾಡುತೊಂದಧಿಕ । ವಿಂಶತಿ ಕುಲ ಉದ್ಧಾರಮಾಡುವದ ॥ ೪೦ ॥ ಪ್ರಥಮ ವಯಸದಲಿ ವಿದ್ಯಾಭ್ಯಾಸವು । ದ್ವಿತಿಯದಲ್ಲಿ ಗ್ರಹಕರ್ಮವನೂ ॥ ತೃತಿಯದಿ ಸತ್ತೀರ್ಥಯಾತ್ರಿಗಳನು ಮಾ । ಡುತ ಲಲ್ಲಲ್ಲಿಹ ಮಹಿಮೆ ಕೇಳುವದು ॥ ೪೧ ॥ ಘೋರತರಕು ಸಂಸಾರವೆಂಬ ಈ । ವಾರಿಧಿ ತ್ವರದಾಟುವದಕ್ಕೇ ॥ ಮಾರಮಣನ ನಾಮೋಚ್ಚಾರವೆನವ । ತಾರಕವೆಂದುಪದೇಶ ಮಾಡುವದೆ ॥ ೪೨ ॥ ಜಲದೊಳಗುದ್ಭವಿಸಿದ ಮುತ್ತುದಕ ಮ । ರಳೆ ಹ್ಯಾಂಗಾಗದೊ ಆದರಂತೇ ॥ ಕಲಿಕ್ಯವತಾರನ ಶರಣರು ಎಂಬರು । ಇಳಿಯೊಳು ನರರೆಂದೆನಿಸರು ಯಂಬುದೆ ॥ ೪೩ ॥ ದ್ವಾದಶನಾಮುವ ಪಂಚಮುದ್ರಿಗಳು । ಆದರದಲಿ ಧರಿಸುತ ಪಂಚಾ ॥ ಭೇದವ ತಿಳಿದು ನಿರಂತರದಲಿ ದು । ರ್ವಾದಿಗಳ ಮತವ ಹಳಿವುತಲಿಪ್ಪುದೆ ॥ ೪೪ ॥ ಮಧ್ವಮತದ ಸರಿ ಮತಗಳು ಸಪ್ತಸ । ಮುದ್ರ ತನಕ ಹುಡುಕಿದರಿಲ್ಲಾ ॥ ಬುದ್ಧಿವಂತರೆಲ್ಲೀತನ ಸೇವಿಸಿ । ಸದ್ವೈಷ್ಣವರೆಂದೆನಿಸಿರೊ ಎಂಬುದೆ ॥ ೪೫ ॥ ಮಾತಾಪಿತೃರ ಆರಾಧನಿ ಬಲು । ಪ್ರೀತಿಲಿ ಮಾಡುತ ಭಾಸ್ಕರಗೇ ॥ ಪ್ರಾತರಾದಿ ಸಂಧ್ಯಾರ್ಘ್ಯವ ಕೂಡುತಲಿ । ಆ ತರುವಾಯ ಜಪಂಗಳ ಮಾಳ್ಪುದೆ ॥ ೪೬ ॥ ಗುರುಹಿರಿಯರ ಚರಣವ ವಂದಿಸುತಲಿ । ಪರರಿಗೆ ಉಪದ್ರವನು ಕೊಡದೇ ॥ ಮರುತಾಂತರ್ಗತ ನೋಲ್ಗವನಲ್ಲದೆ । ನರಸ್ತೋತ್ರವ ಸ್ವಪ್ನದಿ ಮಾಡದಿಹದೆ ॥ ೪೭ ॥ ನಡಿಯಲು ದಾರಿಯು ಮನಿಯೊಳಗಿದ್ದರು । ನುಡಿನುಡಿಗನಿರುದ್ಧನ ನೆನದೂ ॥ ಬಡವರೆ ಗೋಪಾಲನ ಹೊಂದಿದವರು । ಅಡವಿಯೊಳಿದ್ದರು ಧೊರಿಗಳೆ ಎಂಬುದೆ ॥ ೪೮ ॥ ಪರಮಾಣುಗಳೊಳು ತಾನಿಪ್ಪ । ತನ್ನೊಳ । ಗಿರಸಿಹನಗಣಿತ ಬೊಮ್ಮಾಂಡಾ ॥ ಶಿರಿಗೆಂದೆಂದಿಗನದಳವು ತಿಳಿಯಲು । ಕರಿನರದಿಂಥ ಮಹ

ತ್ಮನು ಎಂಬುದೆ ॥ ೯ ॥ ಹೊತ್ತರಾದಿ ನಿಶಿಪ್ರಹರಾಗುವನಕ । ವ್ಯತ್ತಿಕಿ ಶೌಂಚಾದಿ ಸುಕರ್ಮ ॥ ತತ್ತಲವಾಗದೆ ಶ್ರೀಮುದತೀರ್ಥರ । ಉಕ್ತ್ಯನು ಸಾರಾಚರಿಸುತಲಿಪ್ಪುದೆ ॥ ೫೦ ॥ ಹಾನಿ ಲಾಭ ಜಯ ಅಪಜಯ ಮಾನಪ । ಮಾನಸುಖಾಸುಖ ಸಮನಾದೀ ॥ ಈ ನರರಿಗೆ ತನ್ನಿಂಗಿತ ತೋರದೆ । ಪ್ರಾಣೇಶವಿಠಲನ ಕರುಣವ ಪಡವದೆ ॥ ೫೧ ॥ ಶ್ರೀ ಮಧ್ವೇಶಾರ್ಪಣ ಮಸ್ತು ॥

೨೨೦. ಪದ, ರಾಗ-ಕಾಂಬೋಧಿ (ಏಕತಾಳ).
ತಂತ್ರಸಾರೋಕ್ತ ಕೇಶವಾದಿ, ಇಪ್ಪತ್ತುನಾಲ್ಕು ಮೂರ್ತಿ ಲಕ್ಷಣವು.

ತಿಳಿವದು ಸಜ್ಜನರೂ । ಶಿರಿ । ನಿಲಿಯು ವಿಧಿಗೆ ತಾ । ವಲಿದು ಸರಿದ ನುಡಿ । ತಿಳಿವದು ಸಜ್ಜನರೂ ॥ ಪಲ್ಲ ॥ ಮಾಧವನಿಪ್ಪತ್ನಾಲ್ಕು ಮೂರ್ತಿ ಬಹು । ಬೋಧರ ಉಕ್ತಿಮನಕೆ ತಂದೂ ॥ ಶೋಧಿಸಿ ಕ್ರಮವ್ಯತ್ಕ್ರಮ ಪದ್ಮಾದಿಗ । ದಾದಿ ಅರ್ಥ ನಾಂತರಕ್ರಮವೆಂಬುದು ॥ ೧ ॥ ಕೇಶವ ವಿಷ್ಣು ಗೋವಿಂದ ವಾಮನ ಕ್ರಮ । ಈಶ ಮಧುರಿಪುರ ಮಾಧವನೂ ॥ ದೋಷಹ ತ್ರಿವಿಕ್ರಮ ನಾರಾಯಣ । ಭಾಸಿಸುತಿಹವ್ಯತ್ಕ್ರಮಮೂರುತಿ ಎಂದು ॥ ೨ ॥ ಸಂಕರುಷಣ ಅನಿರುದ್ಧನು ಶ್ರೀಧರ । ಪಂಕಜನಾಭ ಕಂಜಾದಿ ಕ್ರಮಾ ॥ ಬಿಂಕದ ದಾಮೋದರ ಪುರುಷೋತ್ತಮಕ । ಳಂಕ ಹೃಷೀಕಪು ವೇಂದ್ರಗದಾದೆಂದು ॥ ೩ ॥ ಮುನಿನುತ ವಾಸೂದೇವ ಅಧೋಕ್ಷಜ । ಮನ ಸಿಜಪಿತನರಸಿಂಹ ಹರೀ ॥ ಅನಘರ್ಧಕ್ರಮ ಪ್ರದ್ಯುಮ್ನ ಜನಾ । ರ್ದನ ಅಚ್ಯುತ ಕೃಷ್ಣನು ನಾಂತರಕ್ರಮ ॥ ೪ ॥ ನೀಲಘನಾಂಗನ ರವಿನಿಭ ಇಪ್ಪ । ತ್ನಾಲಕು ಮೂರುತಿ ಲಕ್ಷಣವೂ ॥ ವ್ಯಾಲಿನ ಬಲಗೈ ಮೊದಲು ಕೆಳಗೆ ಕಡಿ । ಕೇಳಿ ಶಂಖ ರವಿಗದ ಕಂಜಕೇಶವ ॥ ೫ ॥ ಕಂಜಗದ ರವಿದರ ಧರ ನಾರಾಯಣ । ವೃಜನ ಹರವಿದರ ಪದ್ಮಗದಾ ॥ ಭುಜ ಮಾಧವ ಗದಕಂಜ ದರ ರವಿ ಭೂ । ವಿಜ ವಲ್ಲಭ ಗೋವಿಂದ ಮೂರುತಿಯೆಂದು ॥ ೬ ॥ ಪುಂಡರೀ ಕದರ ರವಿಗದ ವಿಷ್ಣು ಪ್ರ । ಚಂಡ ಶಂಖ ಕಂಜಗದ ಚಕ್ರಾ ॥ ಅಂಡಜವಹ ಮಧುರಿಪುಗದ ರವಿದರ । ಮಂಡಿತ ಪದ್ಮ ತ್ರಿವಿಕ್ರಮಮೂರುತಿ ॥ ೭ ॥ ಅರಿದರ ಕಂಜಸುಕಂಬು ವಾಮನ ಶ್ರೀ । ಧರ ರವಿಗದದರ ಪದ್ಮಯುತಾ ॥

ವರ ಚಕ್ರಜಲಜದರಗದ ಹೃಷಿಕಪ । ಪರಕಂಜ ರವಿಗದ ಶಂಖ ಪದುಮ ನಾಭಾ ॥ ೮ ॥ ದರಗದರವಿಕಂಜ ದಾಮೋದರ ಸಂ । ಕರುಷಣ ಶಂಖ ಕಂಜಾರಿಗದಾ ॥ ಶರಧಿಜರವಿ ಪಂಕಜಗವ ಸಂತತ । ಧರಿಸಿಹ ಮಾಯುವ ವಾಸುದೇವನೆಂದು ॥ ೯ ॥ ದರ ಸುಗದನಳಿನ ಅರಿಪ್ರದ್ಯುಮ್ನನು । ದುರುಳಹ ಗದ, ಕಂಬುಕಂಜಾರೀ ॥ ಸುರವನಿರುದ್ಧ ಕಮಲದರ ಗದರವಿ । ಧರಿಸಿಹ ಸರ್ವದ, ಪುರುಷೋತ್ತುಮನೆಂದು ॥ ೧೦ ॥ ಗದಕಂಬುಚರಣ ಸರಸಿಜಧೋಕ್ಷಜ । ಪದುಮ ಗದದರ ರವಿ ನರಹರೀ ॥ ಉದಜಾರಿದರ ಗದಾಚ್ಯುತ ರವಿ ದರ । ಗದ ಕಮಲಾಂಕ ಜನಾರ್ದನ ವಿಭುವೆಂದು ॥ ೧೧ ॥ ಗದ ಚಕ್ರ ವಿಷಜ ಶಂಖ ಉಪೇಂದ್ರನು । ಸುದರುಶನ ಕಂಜ ಗದದರ ಹರೀ ॥ ಯದು ಪತಿ ಕರನಾಲ್ಕರೊಳು ಗದ ಕಮಲ । ಸುದರುಶನ ವಿಧುಭ ಪಾಂಚಜನ್ಯವೆಂದು ॥ ೧೨ ॥ ವರ ಗಾಯತ್ರೀ ವರ್ಣಮೂರ್ತಿಗಳಿ । ವರು ಸಾದರದಲಿ ಧೇನಿಪುದೂ ॥ ನಿರುತ ಸುಕವಿಗಳ ಮತವಿದು ದಕ್ಷಿಣ । ವರ ಪ್ರಾಣೇಶ ವಿಠಲ ಸಂತೈಪನೂ ॥ ೧೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೨೧. ಪದ, ರಾಗ–ಸೌರಾಷ್ಟ್ರ (ಝಂಪೆತಾಳ).

ಶಿರಿರಮಣ ದಯದಿಂದ ಮಂತ್ರಾರ್ಘ್ಯ ಕೊಡುವ ಬಗೆ ಪರಮೇಷ್ಠಿಗೊಲಿದು ಪೇಳಿದನು ಇಂತೂ ॥ ಪಲ್ಲ ॥ ಅಷ್ಟಾಕ್ಷರದಿ ಮಂತ್ರಾರ್ಘ್ಯ ಸಾಲಗ್ರಾಮ । ವಿಟ್ಟು ಸದ್‌ಭಕ್ತಿಯಲಿ ಶಂಖದಿಂದಾ ॥ ಕೊಟ್ಟವಗೆ ಸಂತುಷ್ಟನಾಗಿ ಎನ್ನಯ ಸದನದೋ । ಳಿಟ್ಟು ಸಂತೈಸುವೆನು ಬ್ರಹ್ಮ ಕೇಳೂ ॥ ೧ ॥ ಸತ್ಯಭಾಮಾದಿ ಮಿಕ್ಕಾದ ಮಂತ್ರಾರ್ಘ್ಯವನು । ಮತ್ಪಾದ ಜಲದಿಂದ ಪಾತ್ರಿಯಲ್ಲೀ ॥ ಹಸ್ತದಿಂ ಕೊಡಬೇಕು ಎನ್ನ ಪ್ರೀತಿ ಎಲೊ ಇದು । ಸತ್ಯಲೋಕಾಧಿಪನೆ ಕೇಳು ಮುದದೀ ॥ ೨ ॥ ಎನ್ನ ಮಂತ್ರಾರ್ಘ್ಯ ಹಸ್ತದಲಿ ಪಾತ್ರಿಯೊಳೀಯೆ । ಅನ್ಯಾಯವೆಷ್ಟೆಂದು ಪೇಳಲೀಗಾ ॥ ವನ್ನ ಜಾಸನ ಎನಗ ರಕ್ತ ವೆರದಂತಹದೊ । ಮುನ್ನವರ ಕ್ಲೇಶಕ್ಕೆ ಎಣಿಕೆ ಇಲ್ಲಾ ॥ ೩ ॥ ಅದರಿಂದ ತಿಳಿದು ಸಾಲಗ್ರಾಮವಿಟ್ಟು ಶಂ । ಖದಲಿ ಕೊಡಬೇಕು ಎನ್ನರ್ಘ್ಯಗಳನೂ ॥ ವಿಧಿ, ಕಾಷ್ಟಗತ ವನ್ಹಿ ಮಥಿಸೆ ತೋರ್ವಂತೆ ಸ । ರ್ವದ ತೋರ್ವೆ

ನಾನು ಸಾಲಗ್ರಾಮದೀ ॥ ೪ ॥ ಶ್ರೀ ನಾರಿ ಪ್ರಮುಖ ಮಂತ್ರಾರ್ಘ್ಯ ಶಂಖ ದಲಿ ಕೊಡೆ । ನಾನೊಪ್ಪೆನವರ ಭಂಗವ ಬಡಿಸುವೇ ॥ ವಾಣೀಶ ತಿಳಿಯಂದು ಸ್ಮಿತವದನದಿಂದ ಶ್ರೀ । ಪ್ರಾಣೇಶವಿಠಲ ನಿರೋಪಿಸಿದನೂ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

ಗ್ರಂಥಮಾಲಿಕಾ ಸ್ತೋತ್ರಾ.

೨೨೨. ಪದ, ರಾಗ–ಮನದಿಚ್ಛಿ (ತ್ರಿಪುಡೆತಾಳ). ॥ ಭಾಮಿನಿಷಟ್ಪದಿ ॥

ಸದ್ವೈಷ್ಣವರಾದವರೆಲ್ಲ ಕೇಳಿರಿ । ಅದ್ವೈತರು ಸರಾಡದಂದದಿ । ಮಧ್ವಮುನಿ ಬರದಂಥ ಗ್ರಂಥಸಂಖ್ಯವ ಪೇಳ್ವೆನೂ ॥ ಪಲ್ಲ ॥ ಪ್ರಥಮ ಗೀತಾ ಭಾಷ್ಯನಂತರ । ಚತುರಮುಖಸೂತ್ರಕ್ಕೆ ಭಾಷ್ಯ ಮು । ಕುತಿ ಪ್ರದಣು ಭಾಷ್ಯಾಖ್ಯ ಗ್ರಂಥವು ಅನುವ್ಯಾಖ್ಯಾನಾ ॥ ಚತುರ ಗ್ರಂಥಪ್ರಮಾಣಲಕ್ಷಣ । ಕ್ಷಿತಿಯೊಳಗೆ ವೈಷ್ಣವಜನಕೆ ಸನ್ಮತ ಕಥಾಲಕ್ಷಣ ಉಪಾಧೀಖಂಡನಾ ಗ್ರಂಥಾ ॥ ೧ ॥ ಸರಸಮಾಯಾವಾದ ಖಂಡನ । ವರಮಿಥ್ಯತ್ವ ಸುಮಾನ ಖಂಡನ । ಪರಮ ಮಂಗಳ ಕೊಡುವ ಗ್ರಂಥವು ತತ್ವ ಸಂಖ್ಯಾನಾ ॥ ವರದ ತತ್ವ ವಿವೇಕ ಗ್ರಂಥವು । ಹಿರಿದು ತತ್ವೋದ್ಯೋತ ಗ್ರಂಥ ಸು ! ಕರುಮ ನಿರ್ಣಯ ವಿಷ್ಣು ತತ್ವ ನಿರಣಯ ಋಗ್ಭಾಷ್ಯಾ ॥ ೨ ॥ ಐತರೇಯವು ತೈತ ರೇಯ ಸು । ಖ್ಯಾತೆ ಬ್ರಹದಾರಣ್ಯ ಮಹಿಮಾ । ವ್ರಾತ ಈಶಾವಾಶ್ಯ, ಕಾಠಕ ದಿವ್ಯ ಛಂದೊಗ್ಯಾ ॥ ಭೂತಿದಾಥರ್ವಣ ಸುಮುಂಡುಕ । ವೀತ ಭಯಷಟ್ಪ್ರಶ್ನ ಅಭಯದ । ಆ ತಳವಕಾರಿಂತು ಹತ್ತು ಪನಿಷದಗಳ ಭಾಷ್ಯಾ ॥ ೩ ॥ ಪತಿತಪಾವನಗೀತ ತಾತ್ಪ । ರ್ಯತುಳನ್ಯಾಯ ವಿವರ್ಣ ಹರಿ ನಖ । ಸ್ತುತಿಯಮಕ ಭಾರತ ಬಿಡದೆ ವಿಶ್ವಾಸಮಾಳ್ಪರಿಗೇ ॥ ಗತಿ ದ್ವಾದಶ ಸ್ತೋತ್ರ ಕೃಷ್ಣಾ । ಮೃತ ಮಹರ್ಣವ ತಂತ್ರಸಾರ । ಚ್ಯುತ ಪ್ರಿಯ ಸದಾ ಚಾರಸ್ಮೃತಿ ಭಾಗವತ ತಾತ್ಪರ್ಯಾ ॥ ೪ ॥ ಬಾಹದುರಿತವ ತಡದು ತ್ವರ ಹೃ । ದಾಹ ಪರಿಹರಿಸುತಿಹ ಶ್ರೀ ಮ । ನ್ಮಾಹ ಭಾರತ ತಾತ್ಪರ್ಯ ನಿರ್ಣಯ ಪ್ರಣವ ಕಲ್ಪಾ ॥ ಸ್ನೇಹ ಭಕ್ತರ ಪೊರವ ಮಾತುಳ । ದ್ರೋಹಿ

ಜನ್ಮಜಯಂತಿಕಥಿ ನಡು । ಗೇಹಸುತ ವಿರಚಿಸಿದ । ಮೂವತ್ತೇಳು ಗ್ರಂಥ ವಿವ್ರೂ ॥ ೫ ॥ ಹಲವು ಕ್ಷೇತ್ರ ಸುಯಾತ್ರಿದಾನಂ । ಗಳು ವ್ರತ ಉಪವಾಸ ಯಜ್ಞಮಾಡಿದ । ಫಲವು ಈ ಗ್ರಂಥಗಳ ಪಠಿಸುವದಕ್ಕೆ ಸಮವಲ್ಲಾ ॥ ಇಳಿಯು ಮಧ್ವದೊಳೆಮ್ಮ ವಚನಂ । ಗಳಿಗೆ ಸಮಹಿತ ವಸ್ತುವಿಲ್ಲೆಂ । ದಲವ ಬೋಧರು ಶಿಷ್ಯಜನರಿಗೆ ತಾವೆ ಪೇಳಿಹರೂ ॥ ೬ ॥ ಕುನರಗೆಂದಿಗ್ಯೂ ಪೇಳ ದಲೆ ನ । ಜ್ಜನರು ಸದ್ಭಕ್ತಿಯಲಿ ಪಠಿಸುವ । ದನವರತ ಈ ಗ್ರಂಥಮಾಲಿಕಿ ಶ್ರೀದಶುಚಿಸದನಾ ॥ ಅನಘ ಶ್ರೀ ಪ್ರಾಣೇಶವಿಠಲನು । ಮನದಭೀಷ್ಟಿಯ ಕೊಟ್ಟು ಇಹದಲಿ । ಕೊನಿಗೆ ತನ್ನಾಲಯದಿ ಸಂಪಿಯದ ಸುಖದೊಳಿರಿಸು ವನೂ ॥ ೭ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೨೩. ಪದ, ರಾಗ—ಕಾಂಬೋಧಿ (ಝಂಪೆತಾಳ)

ಸುಖತೀರ್ಥಕಿದುವರನ ಸ್ಥಾಪಿಸ್ಯೊಂಭತ್ತೆತಿಗಳನು ಮಾಡಿ ಅವರವ ರಿಗೆ । ಅಕಳಂಕ ನಾಮಗಳ ಮೂರ್ತಿಗಳ ಕೊಟ್ಟ ವಿವರವ ಬಣ್ಣಿಸುವೆ ಸುಜ ನರೂ ಕೇಳೀ ॥ ಪಲ್ಲ ॥ ಶ್ರೀ ಪದ್ಮನಾಭ, ಹೃಷಿಕೇಶ, ನರಹರಿ, ಜನಾರ್ದನ ಯತಿ, ಉಪೇಂದ್ರತೀರ್ಥಾ । ಪಾಪಘ್ನ ವಾಮನ ಮುನಿಪ । ವಿಷ್ಣುಯತಿ, ರಾಮತೀರ್ಥಧೋಕ್ಷಜತೀರ್ಥರೂ ॥ ಈ ಪೆಸರಿಲೊಂಭತ್ತು ಮಂದಿ, ರಘು ಪತಿ, ಕಾಳೀಮಥನ ವಿಠಲೆರಡು ಎರಡೂ । ಭೂಪತಿ ನೃಸಿಂಹ ಮತ್ತೊಂದು ವಿಠ್ಠಲ ಹೀಗೆ ಒಂಭತ್ತು ಮೂರ್ತಿಗಳನೂ ಕೊಟ್ಟೂ ॥ ೧ ॥ ಪದುಮನಾಭ ರಿಗೆ ರಾಮನ ಕೊಟ್ಟು ಸಕಲ, ದೇಶ್ಯಾಳಿ, ಧನತಾ, ಎನುತಲೀ । ಅದರ ತರುವಾಯ ಹೃಷಿಕೇಶತೀರ್ಥರಿಗೊಂದು ರಾಮಮೂರ್ತಿಯನು ಕೊಟ್ಟೂ ॥ ಬುಧಜನಾರ್ಚಿತ ನೃಸಿಂಹಾರ್ಯರಿಗೆ ಕಾಳೀ ಮರ್ದನನಾದ ಕೃಷ್ಣ ಮೂರ್ತೀ । ಹೃದಯ ನಿರ್ಮಲ ಜನಾರ್ದನತೀರ್ಥರಿಗೆ । ಕಾಳಿ ಮಥನ ಶ್ರೀ ಕೃಷ್ಣಮೂರ್ತಿ ಕೊಟ್ಟೂ ॥ ೨ ॥ ಯತಿವರ ಉಪೇಂದ್ರರಾಯರಿಗೆ ವಿಠ್ಠಲನ । ವಾಮನತೀರ್ಥರಿಗೆ ವಿಠಲನಾ । ನತಸುರದ್ರುಮ ವಿಷ್ಣುತೀರ್ಥ ರಿಗೆ । ವರಹ ಶ್ರೀ ರಾಮತೀರ್ಥಗೆ ನೃಸಿಂಹಾ ॥ ಅತಿ ಸುಗುಣಧೋಕ್ಷಜ ಮುನಿಗೆ ವಿಠ್ಠಲನಿಂತು ವಂಭತ್ತು ಮೂರ್ತಿಗಳ ಕೊಟ್ಟೂ ॥ ಕ್ಷಿತಿಯೊಳಗೆ

ರಾ(ಶೌನ)ಪ್ಯ ಪೀರ ಪೂರಸ್ಥ ಪ್ರಾಣೇಶಪಠ್ಠಲನರ್ಚನಿಗಿಟ್ಟರೂ ಕೇಳಿ ॥ ೩ ॥
ಶ್ರೀ ಮಧ್ವೇಶಾರ್ಪಣಮಸ್ತು ॥

ಶ್ರೀ ರಾಮ.

೨೨೪. ಶ್ರೀ ಗೋಪಿಚಂದನ ಮುದ್ರಾಧಾರಣ ಮಹತ್ಮಿ (ಮಧ್ಯನಾಮದ ಧಾಟಿ).

ಗೋಪಿಚಂದನ ಮುದ್ರಧಾರಣ ಮಹಾತ್ಮಿಯನು । ಆ ಪನಿತು ಬರವೆ ಕೇಳ್ವದು ಸುಜನರೂ ॥ ಪಲ್ಲ ॥ ಪೂರ್ವದಲಿ ಕೈಲಾಸ ಶಿಖರದಲಿ ಇಂದ್ರಾದಿ । ಗೀರ್ವಾಣ ಸಕಲ ಮುನಿಪ್ರಮುಧರಿಂದಾ ॥ ಪಾರ್ವತೀಶನು ಸೇವೆಗೊಳು ತಿರಲು ಜನಕ ದಯ । ಬೀರ್ವದಕೆ ಗೌರಿ ಪತಿಗಿಂತೆಂದಳೂ ॥ ೧ ॥ ಎಲೆ ದೇವ ನಿಮ್ಮಿಂದ ಲೋಕಖಿತಕರವಾದ । ಬಲು ಧರ್ಮಗೌಪ್ಯವೃತ ಕೇಳ್ದೆ ನೀಗಾ ॥ ತಿಳಿಸುವದು ಊರ್ಧ್ವಪುಂಡ್ರದ ಮುದ್ರಿ ಮಹಿಮೆ ಎನೆ ಮು । ಗುಳುನಗಿಯಿಂದ ಸತಿಗಿಂತೆಂದನೂ ॥ ೨ ॥ ಅರಸಿ ಕೇಳ್ ವಿಪ್ರನಾಗಲಿ ಸುಪಂಡಿತನಾಗೆ । ಧರಿಸದಿರೆ ಗೋಪಿಚಂದನ ಮುದ್ರಿಯಾ ॥ ಸುರಘಟ ಸಮಾನ ತದ್ದೇಹದರುಶನ ಪಾಪ । ತರಣಿ ಬಿಂಬವ ನೋಡಿ ಕಳಿಯಬೇಕೂ ॥ ೩ ॥ ಕೋಪಿಯಾಗಲಿ ಯಮಾಚಾರಿಯಾಗಲಿ ಸರ್ವ । ದಾ ಪರರ ನಿಂದೆ ಗೈವವನಾಗಲೀ ॥ ಗೋಪಿಚಂದನ ಲಿಪ್ತಗಾತ್ರನಾದನ ದೋಷ । ಲೇಪವಿಲ್ಲದೆ ಮುಕ್ತನಹನುಭವದಿಂ ॥ ೪ ॥ ಎಂತು ಪೇಳಲಿ ಊರ್ಧ್ವಪುಂಡ್ರ ಮಹತ್ಮಿಯನು । ಅಂತಿಜಲಲಾಟದಲಿ ಶೋಭಿಸಲ್ಕೇ ॥ ಅಂತಃಕರುಣ ಶುದ್ಧನವನೇ ಪೂಜ್ಯನು ಪಲಿವ । ಕಂತು ಪಿತಕುಲಶೀಲಗಳನೆಣಿಸದೇ ॥ ೫ ॥ ಭಾಮಿನಿಯು ಅಜ್ಞಾನದಿಂ ಪುಂಡ್ರ ಧರಿಸದಲೆ । ಹೋಮಾರ್ಥವಾಗಿ ಪಾಕವ ಮಾಡಲೂ ॥ ಆ ಮಹತ್ಪಾಪವೇನಂಬೆ ವಿಷ್ಟಸಮಾನ್ನ । ಈ ಮರ್ಮವರಿಯದುಂಡುವಗನರಕಾ ॥ ೬ ॥ ಹರಿಯ ಚಕ್ರಾಂಕಿತ ವಿರಹಿತ ಸ್ತ್ರೀ ಪುರುಷಾಂಗ । ಸ್ಪರುಶವಾಯಿತೆ ದೈವವಶದಿಂದಲೀ ॥ ಅರಲವ ತಡಿಯದೆ ಆ ಮಲ್ಕಗೋಮಯ ಸ್ನಾನ । ವಿರಚಿಸುತ ಶ್ರೀಶಂಘ್ರಿ ಪೂಜಿಸುವದೂ ॥ ೭ ॥ ಸ್ಮರಣೆಮಾಡದೆ ಹರಿಯ ಅಂಕಿತರ ಹಿತದೇಹ । ಜರಿಯೆ ಜಾಹ್ನವಿಯಲ್ಲಿ ನರಕ ಉಂಟೂ ॥ ಅರಿಶಂಖ ಧರಿಸಿ ಕೀಕಟದಲ್ಲಿ ಮೃತನಾಗೆ । ಲರಿವದು ಪ್ರಯಾಗ ಮೃತಿಗತಿಯವನಿಗೇ ॥ ೮ ॥ ಪುತ್ರಹೀನಗೆ ಲೋಕವಿಲ್ಲವೆಂಬುವ

ದ್ಯಾಕೆ । ಮಿತ್ರಕುಲಜನಮುದ್ರೆ ಧರಿಸುತಿರಲೂ ॥ ಶತ್ರು ಸಮಾನಾಪಹ್ಯ
ರಿದು ಮುದ್ರಿಯನಿಡದೆ । ಸ್ವಪಿತೃಗಳಿಗೈದಿಸುತಿಹರು ದುರ್ಗತೀ ॥ ೯ ॥
ಆವ ವಿಪ್ರನು ಊರ್ಧ್ವಪುಂಡ್ರವಿರಹಿತನಾಗಿ । ಭಾವಶುದ್ಧದಿ ಶ್ರಾದ್ಧಮಾಡ
ಲವನಾ ॥ ಜೀವಿಸುವದ್ಯಾಕೆಂದು ಶಪಿಸಿ ದ್ವಾದಶವರ್ಷ । ತಾಂ ವದನ
ದೋರಧೋಹರು ಪಿತೃಗಳೂ ॥ ೧೦ ॥ ಶಿರದಲ್ಲಿ ಚಕ್ರವಿರೆ ದೇವರೆನಿಸು
ವದು ಭುಜ । ಅರಿಯುಕ್ತವಾಗಿರಲು ದ್ವಿಜನೆನಿಸುವಾ ॥ ವಿರಹಿಥರಿ ಪ್ರತಿಮಿ
ಪೂಜಿಸಲು ವಿಪ್ರಗೆ ದಾನ । ವಿರಸೆ ರಂಧ್ರಕಲಶದೊಳುದಕದಂತೆ ॥ ೧೧ ॥
ಯಾಗ ಮಾಡಲಿ ಮಹದ್ದಾನ ಬಹು ಮಾಡಲೀ । ಯೋಗ ಮಾಡಲಿ ವೇದ
ಓದುತಿರಲೀ ॥ ನಾಗ ವರದನಲಾಂಛನವ ಧರಿಸದಲೆ ಕುನ್ನಿ । ಭಾಗೀರಥಿ
ಯೊಳದ್ದಿ ತೆಗಿದ ತೆರವೂ ॥ ೧೨ ॥ ನಾಮುಕರ್ಣವನಯನ ಆಷಾಢ ಕಾರ್ತೀ
ಕ । ಶ್ರೀ ಮಾಧವನ ದಿನದಿ ತಪ್ತಮುದ್ರಿ ॥ ಧೀಮಂತರಾದ ಗುರುಗಳ ಕೈಯ
ಧರಿಸುವದು । ನೇಮದಿಂ ಪಂಚಸಂಸ್ಕಾರದೊಳಿದೂ ॥ ೧೩ ॥ ಎರಡಾರು
ನಾಲ್ಕು ಎರಡೂ ವಂದು ಪುಂಡ್ರಗಳು । ಧರಿಸುವದು ನಾಲ್ಕು ವರ್ಣವು
ಕ್ರಮಾತೂ ॥ ಅರಿಪ್ರಮುಖ ಪಂಚಮುದ್ರಿಯೊಳು ಹಿಂಕಾರಾದಿ । ಹರಿರೂಪ
ಪಂಚರಿದುಧರಿಸಬೇಕೂ ॥ ೧೪ ॥ ಶಚಿಯೆ ಮೊದಲಾದ ನಿರ್ಜರರ ಹೆಂಡರು
ಪುಂಡ್ರ । ಶುಚಿಮನದಿ ಧರಿಸಿ ಸ್ವಪತಿಗಳಸಹಿತಾ ॥ ಅಚಲಿತ ಸುಮಾಂಗಲ್ಯ
ಯೈದಿಪ್ಪ ಸ್ಥಳದಲ್ಲಿ । ಮುಚಕುಂದ ವರದನಾರಾಧಿಸುವರೂ ॥ ೧೫ ॥ ಈ
ವಚನಕಾವ ಸ್ಥಳಕಾವ ನಾಮಾವ ಮು । ದ್ರಾವ ಮಿತಿಯಾಕಾರ ಮೃದ
ಪೆಲ್ಲಿದೂ ॥ ಆವ ವರ್ಣದಲೇನು ಆವಂಗುಲದಲೇನು । ಆವ ಮಂತ್ರದಕೆನಲು
ಪೇಳ್ವನಿಂತೂ ॥ ೧೬ ॥ ಕಾಮಿನಿಯೆ ಗೋಪಿಚಂದನ ಮರ್ದಿಸುವದಿಂತು ।
ವಾಮ ಹಸ್ತದ ಮಧ್ಯ ಜಲವ ಧರಿಸೀ ॥ ಈ ನೂರು ಪಾದ ಗಾಯಿತ್ರಿಯಿಂ
ಮಂತ್ರಿಸುತ । ಆ ಮಹಾ ಋಕ್ಕಧೋ ದೇವೆತಿಯಿಂ ॥ ೧೭ ॥ ತರುವಾಯ
ಧರಿಸುವದು ಪುಂಡ್ರಗಳು ಕೇಳೆಲಗೆ । *ವರವಣಿಗೆ ಆದಿಯಲಿ ಕೇಶವಲ್ಲೀ ॥

---

* ದ್ವಾದಶ ನಾಮಗಳ ವಿವರ, ೧ ಲಲಾಟ, ೨ ಮಧ್ಯೋದರ, ೩ ಹೃದಯ, ೪ ಕಂಠ, ೫–೬ ಉಭಯ ಉದರ ಪಾರ್ಶ್ವ, ೭–೮ ಭುಜ ಉಭಯ, ೯–೧೦ ಉಭಯ ಕರ್ಣ ಮೂಲ ಕಂಠದಲ್ಲಿ, ೧೧ ಪೃಷ್ಠ, ೧೨ ಕಕು.

ಸುರಪನಾರಾಯಣುದರದಿ ಹೃದಯುದಲ್ಲಿ ಮಾ । ವರ ಕಂಠ ದೇಶದಲಿ ಗೋವಿಂದನೂ ॥ ೧೮ ॥ ಬಲಪಾರ್ಶ್ವದಲಿ ವಿಷ್ಣು ಭುಜದಲ್ಲಿ ಮಧುಸೂದ । ಸಲೆ ಬಲದ ಕಂಠದಲಿ ತ್ರಿವಿಕ್ರಮಾ ॥ ಲಲನೇ ಕೇಳ್ ವಾಮಪಾರ್ಶ್ವಕೆ ವಾಮನಾಭುಜಕ । ಖಳಹ ಶ್ರೀಧರ ಕಂಠದಲಿ ಹೃಷಿಕಷಾ ॥ ೧೯ ॥ ಪೃಷ್ಟ ದಲಿ ಕಂಜನಾಭ ಶಿರದಿ ದಾಮೋದರನು । ಇಷ್ಟೆ ದ್ವಾದಶನಾಮ ಸಿತ ವಕ್ಷಕೇ ॥ ಕೃಷ್ಣಪಕ್ಷದೊಳಿವಕೆ ಸಂಕರುಷಣಾದಿ ಶ್ರೀ । ಕೃಷ್ಣ ಪರಿಯಂತ ತಿಳಿವರು ಸುಜನರೂ ॥ ೨೦ ॥ ಶೈಲಾಗ್ರ ವಲ್ಮೀಕ ಶಿಂಧು ಹರಿ ಕ್ಷೇತ್ರ ನದಿ । ಕೂಲ ದ್ವಾರಕಿ ನೆಲದ ಶ್ರೀ ತುಲಸಿಯಾ ॥ ಮೂಲದಲ್ಲಿಹ ಮೃತ್ತಿಕಾ ಗಳಿಂತು ಸುಪವಿತ್ರ । ಕೇಳದರೊಳಗೆ ಗೋಪಿಚಂದನಧಿಕಾ ॥ ೨೧ ॥ ಶಾಮ ಶಾಂತವು ರಕ್ತ ರಾಜ ವಶ ಪೀತ ಶ್ರೀ । ಆ ಮಹಾ ವಿಷ್ಣು ಪ್ರಿಯಕರವು ಶ್ವೇತಾ ॥ ಈ ಮರ್ಮಗಳ ತಿಳಿದು ಪುಂಡ್ರಧಾರಣ ಮಾಡೆ । ಭೂಮಿಯೊಳ ಗವರು ಸಜ್ಜನರು ಸಖಿಯೇ ॥ ೨೨ ॥ ಸ್ತ್ರೀ ಪುರುಷರೆಲ್ಲ ಧರಿಸುವದು ವಿವರವ ತಿಳಿದು । ಪಾಪಿ ಹೆಂಗಸು ಅವಳಾದರನ್ನಾ ॥ ಗೋಪಿಚಂದನ ಗದಾವಣಿಗೆ ಧರಿಸದಲಿದ್ದ । ರಾ ಪುರುಷರನಳಿದು ದುಃಖವ ಬಡವಳೂ ॥ ೨೩ ॥ ಸಕಲ ಗುಣತರ್ಜನದಿ ಮಧ್ಯಮದಿ ಜ್ಞಾನ ನಾ । ಮಿಕ ಸದಾಚಾರ ಕನಿಷ್ಠದಲಿ ಮೋಕ್ಷಾ ॥ ಸುಖದಿ, ವಿಧಿತಿಲಕ ದಕ್ಷಣದಿ ಉತ್ತರದಿ ಶಿವ । ಅಕಳಂಕ ಹರಿಮಧ್ಯ ಛಿದ್ರದಲ್ಲೀ ॥ ೨೪ ॥ ಸಛಿದ್ರ ಹರಿಮನೆನಿಸುವದು ಶ್ವಾನಾಂಘ್ರಿ ಸಮ । ಅಚ್ಛಿದ್ರಪಣೆಯು ಈ ಲೋಕದಲ್ಲೀ ॥ ತತ್ಸಮಾನಧಮರಿಲ್ಲ ಪುಂಡ್ರ ದಾಕಾರ ಮತ್ಸಖಿಯೆ ಕೇಳಾದರದಲಿ ಪೇಳುವೇ ॥ ೨೫ ॥ ದಂಡದಾಕಾರ ಹಚ್ಚುವದು ಪಣಿಯಲ್ಲಿ ಖರ । ದಂಡದಂತೆದಿಗೆ ಬುಜದಲಿ ಬಿದಿರೆಲೀ ॥ ಪುಂಡರೀಕಾಕ್ಷೆ ಕೇಳನ್ಯದೀಪಾಕೃತಿಯು । ಪಂಡಿತರು ಧರಿಸುವರು ನಿಗಮೋ ಕ್ತಿಯಿಂ ॥ ೨೬ ॥ ವನಿತೇ ಕೇಳ್ ಪಣಿಕಂಠದಲಿ ನಾಲ್ಕು ಪೃಷ್ಠತಲಿ । ಇನಿ ತರಲಿ ಪಂಚಾಂಗುಲದ ಪರಿಮಿತೀ ॥ ಮುನಿನೇತ್ರ ಬೆರಳಷ್ಟು ಕುಕ್ಷಿಯಲಿ ಯೇಳೊಂದು । ಘನ ಉದರದಲ್ಲಿ ಬಾಹುಗಳಿಘತ್ತೂ ॥ ೨೭ ॥ ವಕ್ಷದಲಿ ಅಷ್ಟಾಂಗುಲದ ಪ್ರಮಾಣವ ಧರಿಸಿ । ಅಕ್ಷಯಾನಂದದಿಂ ನಿರ್ವ್ಯಾಜದಿಂ ॥ ಪಕ್ಷಿವಾಹನಾಯುಧವ ನಾಲ್ಕೊಂದು ವಿವರವ । ಮುಮುಕ್ಷಗಳು ತಿಳಿದು

ಧರಿಸುವರು ಇಂತೂ ॥ ೨೮ ॥ ವಲ್ಲಭಿಯೆ ಕೇಳ್ಮುದ್ರಿಗಳು ಭಂಗರ ಬೆಳ್ಳಿ । ತಾಮ್ರವಾದರು ದೊರಕದ ಕಾಲಕೇ ॥ ಕಲ್ಲಿನವು ಕಾಷ್ಟದವು ಕಬ್ಬಿಣದವಾದರೂ । ಬಲ್ಲವರು ಮುದದಿಂದ ಧರಿಸುತಿಹರೂ ॥ ೨೯ ॥ ಉದರದಲಿ ಮೂರು ಚಕ್ರದರಡಿಗೆ ದರ ವಂದು ; ಪದುಮದ್ವಯ ಮದ್ಧ್ಯದಲಿ ನಾವು ನಾಲ್ಕೂ ॥ ಇದರಂತೆ ಬಲಕುಕ್ಷಿ ಬಾಹುಗಳಿಘಚ್ಚುವದು । ಮುದದಿಂದಲರಿ ಮಾತ್ರ ವಂದು ಕೊರತೀ ॥ ೩೦ ॥ ದರ ಎರಡರಡಿ ವಂದು ಅರಿ ಎರಡು ಗದಿನಾವು । ಧರಿಸುವದು ನಾಲ್ಕು ಎಡಕುಕ್ಷಿ ಭುಜಕೇ ॥ ಕೊರಳಿಗೆ ಕಪೋಲಗಳಿಗೊಂದೊಂದು ಹಚ್ಚುವದು । ಅರಿಬಲಕ ಎಡಭಾಗದಲಿ ಶಂಖವೂ ॥ ೩೧ ॥ ಗದೆಪಣಿಗೆ ಹೃದಯದಲಿ ರವಿಪದ್ಮ ಕರದ್ವಯಕ । ಮಧುಸೂದನಾಂಕಿತವು ಸರ್ವ ಸ್ಥಳಕೇ ॥ ಇದರಂತೆ ಆಚರಿಪ ಸದ್ವೈಷ್ಣವರ ಸುಖವು । ಅದನೆಂತು ವರ್ಣಿಸಲಿ ವಶವಲ್ಲವೂ ॥ ೩೨ ॥ ಶರಚಾಪಗಳನು ಮೂರ್ಧ್ನಿಯಲಿ ಖಡ್ಗವು ಚರ್ಮ । ವೆರಡು ಬಲ ಎಡ ಸ್ಥನದಿ ಕೌಂಸ್ತುಭವನೂ ॥ ಉರದಲ್ಲಿ ದಕ್ಷಿಣದ ಸ್ತನದಲ್ಲಿ ಶ್ರೀವತ್ಸ । ಧರಿಸುವದು ಆರು ಚಿನ್ಹಗಳು ಸತತಾ ॥ ೩೩ ॥ ಲಕ್ಷ್ಮಿರಮಣನ ಮುದ್ರ ಪುಂಡ್ರ ಧರಿಸಿದ ದ್ವಿಜನ । ಕುಕ್ಷಿಯೊಳು ಕವಳ ಮಾತ್ರನ್ನ ಕೊಡಲೂ ॥ ಅಕ್ಷಯಾಗುವದು ಫಲ ಹಿಂದೆ ಮುಂದೇಳು ಕುಲ । ತಕ್ಷಣಕೆ ಶುಚಿಯಾಗಿ ಗತಿ ಕೊಡುವದೂ ॥ ೩೪ ॥ ಹೀನ ಪುಂಡ್ರನು ಸುಪಂಡಿತನಾಗಿರಲು ಅವನ । ಆನನದಿ ಕೊಟ್ಟನ್ನ ಅಳುವದಿಂತೂ ॥ ಏನು ದುಷ್ಕರ್ಮ ಒದಗಿತೊ ಈ ಒಡೆಯನಿಂದ । ಈ ನಷ್ಟನಿಗೆ ಕೊಡಿಸಿಕೊಂಡೆನೆಂದು ॥ ೩೫ ॥ ಪಂಚನಿತಿ ಬದುಕುವದೆ ಲೇಸೂರ್ಧ್ವಪುಂಡ್ರಗಳು । ಪಂಚಮುದ್ರಿಯ ಧರಿಸಿ ಹರಿಭಜಿಸುತಾ ॥ ವಂಚಿಸಿ ಮುಕುಂದನ ತಿರಸ್ಕರಿಸಿ ಮುದ್ರಿಯ ವಿ । ರಂಚಿ ಕಲ್ಪಯುತ ಜೀವಿಸಲು ವ್ಯರ್ಥಾ ॥ ೩೬ ॥ ಎಲ್ಲಿ ಶ್ರೀ ತುಲಸಿವನ ಪದ್ಮವನ ವೈಷ್ಣವರು । ಎಲ್ಲಿ ಇಹರಲ್ಲೇ ಇಹ ಪರಮಾತ್ಮನೂ ॥ ಸೊಲ್ಲಾಲಿಸಿದು ಹರಿ ನುಡಿದಿಹನಾ ವೈಕುಂಠ । ದಲ್ಲಿಲ್ಲ ನೆನವರಲ್ಲಿರುವೆನೆಂದೂ ॥ ೩೭ ॥ ಯರಡಾರು ಪುಂಡ್ರ ಶ್ರೀಮುದ್ರಿಧಾರಣ ಚರಿತ । ಸ್ಮರಿಸಿ ಕೇಳಿದರೆ ಇಚ್ಛಾರ್ಥ ಪಡೆದೂ ॥ ಮುರವೈರಿಲೋಕ ವೈದುವರು ಶೃತಿಸಿದ್ಧವಿದು । ಗಿರಿಜೆ ಕೇಳೆಂದು ಧೂರ್ಜಟ ಪೇಳಿದಾ

॥ ३८ ॥ ಶಿವ ಸಕಲ ಶಾಸ್ತ್ರಗಳ ಕಲಿಕಿ ಗಿರಿಜಿಗೆ ಪೇಳ್ದ ವಿ । ವರರಿತು ಆಚರಿಪ ಭಾಗವತರಾ ॥ ಭವಶರಧಿಯಿಂದ ಕಡಿಗೆತ್ತಿ ಪಾಲಿಸುತಿಹನು । ಕವಿಗೇಯ ಪ್ರಾಣೇಶವಿಠ್ಠಲ ಜಸ್ರಾ ॥ ३೯ ॥ ಶ್ರೀ ಮಧ್ವೇಶಾರ್ಪಣಮಸ್ತು ॥

२२५. ರಾಗ–ಸಾರಂಗ, (ಅಟತಾಳ), ಉಗಾಭೋಗ.

(ಶ್ರೀ ದೇವರಿಗೆ ನೈವೆದ್ಯ ಇಡುವ ಕ್ರಮ.)

ಅಮರಾಸ್ಯ ಮೂಲಿಗೆ ಭಕ್ಷ ಪಾಯಸವನ್ನು । ಸಮನಗೋಲಾರಿ ಕೋಣಿಗೆ ಲೇಹಪೇಹಾದಿ । ಸುಮನಸರಿಪು ಮೂಲಿಯಲಿ ವಾಯು ಕೋಣಿಗೆ । ಸಮಿಚೀನಸೂಪ, ಮಧ್ಯದಲಿ ತುಪ್ಪಾನ್ನವು । ಕ್ರಮದಿಂದ ಮುಂದೆ ತಾಂಬೂಲ ತಕ್ರೋದಕಾ । ವಿಮಲ ಭಕ್ತಿಯಲಿಟ್ಟು । ವಿಪ, ದರ, ರವಿ, ಮೇರು, ಅಮರರಾಕಳು, ಇಂತು, ಪಂಚ ಮುದ್ರಿಯ ತೋರಿ । ರಮೆ ಮನೋರಮ । ಶ್ರೀ ಪ್ರಾಣೇಶವಿಠ್ಠಲನೀಗೆ । ಸಮರ್ಪಿಸೀರನಳ, ದ್ವಿಜರಿಗಿತ್ತುಂಬುವದೆ ಧರ್ಮಾ ॥ ೧ ॥ ಶ್ರೀ ಮಧ್ವೇಶಾರ್ಪಣಮಸ್ತು ॥

२२६. ರಾಗ–ಮನದಿಚ್ಛಿ (ತ್ರಿಪುಡೆತಾಳ), ಭಾಮಿನಿಷಟ್ಪದಿ

ತಿಥಿತ್ರಯದಲ್ಲಿ ವರ್ಜ ಪದಾರ್ಥಗಳ ವಿವರ.

(ಉಗಾಭೋಗ).

ಪುನಹ ಭೋಜನ, ಕಾಂಶ, ಹಾರಕ, । ಚಣಕ ಉದ್ದಲ ಸಂಧಿಮಧು ನ್ಯೈ । ಥುನ ಪರಾನ್ನವು ಶಾಖ ಈ ದಶ ವರ್ಜ ದಶಮಿಯಲೀ ॥ ದಿನದಿನಿದ್ರಿ ಕದಳಿ ಮಧುದ್ವಿ ಭೋ । ಜನ ಸ್ತ್ರೀ, ತೈಲುದ ಕಾಂಶ ಈ ಎಂ । ಟನು ಬಿಡಲು ದ್ವಾದಶಿಗೆ ಪ್ರಾಣೇಶವಿಠಲ ಮೆಚ್ಚುವನೂ ॥ ೧ ॥ ಶ್ರೀ ಮಧ್ವೇಶಾರ್ಪಣಮಸ್ತು ॥

२२೭. ಪದ, ರಾಗ–ಭೈರವಿ (ಅಟತಾಳ).

(ತಿಥಿತ್ರಯ ನಿರ್ಣಯ).

ಅಂಧಂತಮಸೆ ಪ್ರಾಪ್ತಿ ನಿಶ್ಚಯಾ । ಶೃತಿ । ಯಂದ ಪ್ರಕಾರ ವಾಚರಿಸದವರಿಗೆ । ಅಂಧತಮಸೆ ಪ್ರಾಪ್ತಿ ನಿಶ್ಚಯಾ ॥ ಪಲ್ಲ ॥ ಹರಿದಿನದಲ್ಲಿ ಅಹರ

ಬಿಟ್ಟು ಮುದದಿ ಜಾ । ಗರವ ಮಾಡದಲುಂಡು, ವರಗೂವಧಮಗೇ ॥ ೧ ॥ ಹರಿವಾಸರ ವಿನಹಾ । ಸರುವ ದ್ವಾದಶಿ ಪಾರ ॥ ಣಿ ರವಿಯೋದಯು ಕಾಗ । ದಿರುವ ದುರ್ಮತಿಗೇ ॥ ೨॥ ನಾಲ್ವತ್ತೈದು ಘಟ । ವ್ಯಾಲಿ ಕಾದತಿಯಾಗೆ ॥ ಶ್ರೀಲೋಲವಾಸರಾ । ರೇಳು ಕಳವಂಗೇ ॥ ೩ ॥ ಪ್ರಥಮ ಕಾಲವ ಮಾರೆ । ಚ್ಯುತನ ಪ್ರಸಾದವ ॥ ಪ್ರತಿ ದ್ವಾದಶಿಯೊಳುಂಬ । ಮತಿಗೇಡಿಗಳಿಗೇ ॥ ೪ ॥ ದಶಪಂಚವ್ಯಾಲೊಂದು । ದಶಮಿ ಸಿದ್ಧಾಂತ ವೋ ॥ ದಿಸಲು ಶ್ರೀವರನ ದಿ । ವಸ ಹಿಂದಾಗುವಗೇ ॥ ೫ ॥ ವೇಧಿಲ್ಲಾ ದಶಿಮಿಗೆ । ದ್ವಾದಶಿ ಪರದಿನ ॥ ಖ್ಯೋದಾರೆ ದ್ವಯ ನಿರ್ಜ । ಲಾದ ವೆನ್ನದೀರೆ ॥ ೬ ॥ ಪಳಾಧಿಕ್ಯೈವತ್ತೇಳು । ಘಳಿಗಿ ದ್ವಾದಶಿ ವೋದಿ ॥ ಸಲು ಸಾಧನಿದು ಎಂದು । ತಿಳಿಯದವನಿಗೇ ॥ ೭ ॥ ದಶಿಮಿಯೋಳ್ ಹತ್ತು ದ್ವಾ । ದಶಿಯೊಳೆಂಟು ಬಿಡಾದೆ ॥ ಪಶುವಿ ನಂದದಿ ಬಲು । ಹಸಗೆಟ್ಟವನಿಗೇ ॥ ೮ ॥ ಎಲ್ಲಾರು ಸಂದೇಹ । ಉಳ್ಳಾರೆ ಮರುದಿನ ॥ ದಲ್ಲೆ ದಶಿಮಿ ಮಾಡ । ದೊಲ್ಲದಿದ್ದವಗೇ ॥ ೯ ॥ ಅತಿ ಸಾಧನಿ ರಲು ಆ । ಹುತಿಯನ್ನು ಬಹು ಪೋಷಿ ॥ ಸುತ ಪಾರಣಿಗೆ ಹೊತ್ತು । ವೃಥ ಕಳವವಗೆ ॥ ೧೦ ॥ ಅನಿವಾರ್ಯ ಬರಲು ಸಾ । ಧನಿಗೆ ತೀರ್ಥವಕೊಂಡು ॥ ಅನುಮಾನ ವ್ಯಾಲಿ । ಭೋಜನಕೆ ಮಾಡುವಗೇ ॥ ೧೧ ॥ ಮಂಕುಬುದ್ಧಿ ಯಲಿಂದ । ಸಂಕಟಲ್ಲದೆ ತೀರ್ಥ ॥ ಮಂ ಕೊಂಡು ಸಾಧನಿ । ಯಂಕ ತೋರುವಗೇ ॥ ೧೨ ॥ ಸತಿಗೆ ಶ್ರಾದ್ಧವ ಮಾಳ್ಪ । ಸುತ ಗೊಡಿಯುನ ಸೇವೆ ॥ ರತಿಗೆ ಸಂಕಟವೆನ್ನದತಿ ಮೂಢ ನರಗೇ ॥ ೧೩ ॥ ಈರಾರುದಿನ ಹದಿ । ಮೂರು ಘಳಿಗಿ ವಿಷ್ಣು ॥ ತಾರವಿದ್ದರೆ ನೀರ । ಹಾರ ಮಾಡದಿರೆ ॥ ೧೪ ॥ ದ್ವಯ ಪಕ್ಷದಲಿ ತಿಥಿ । ತ್ರಯು ಸಮನಾಗೇವೆ ॥ ಭಯಹಾರ ವ್ರತವೆನ್ನ । ದ ವಿವೇಕಿಗಳಿಗೇ ॥ ೧೫ ॥ ತಿಥಿತ್ರಯುದಲಿ ಮಾತು । ಪಿತು ಸ್ವರ್ಗವೈದಾಲು ॥ ರತಿ ಇಂದೋಪನ ವಾಹ । ಪತಿತ ಮಾನವಗೇ ॥ ೧೬ ॥ ಅನಳಗಾಹುತಿ ಶ್ರಾದ್ಧ । ಅನಿಮಿಷಾದ್ವ್ಯರಿಗೆ ತ ॥ ರ್ಪಣ ಕೃಷ್ಣಾಷ್ಟಮಿ ಹರಿ । ದಿನದಿ ಮಾಡುವಗೇ ॥ ೧೭ ॥ ಸಮಿರ ಮತಸ್ಥಾನು । ಅಮರ ಲೋಕ್ಯೈಯದಾರೆ ॥ ವಿಮಸ್ಥ ನಿಂದಲಾ । ಕ್ರಮವ ಮಾಡಿಸಿದರೆ ॥ ೧೮ ॥ ದಶಿಮಿ ಶಿವನಿಸಿ ದ್ವಾ । ದಶಿ ಸಾಧನಿಶ್ರಾದ್ಧ ಸಂ । ಧಿಸಿರೆ ವಿಷ್ಣೋಪವಾಸ । ಎಸಗುವವನಿಗೆ ॥ ೧೯ ॥

ಅನಿರುದ್ಧಗರ್ಪಿಸಿ, । ಅನುದಿನದಲ್ಲಿ ಪ್ರಾ । ಣನಿಗರ್ಪಿಸದಲುಂಬ । ಮನುಜಾಧಮುರಿಗೇ ॥ ೨೦ ॥ ಪ್ರಾಣೇಶವಿಠಲಾನ । ಧ್ಯಾನದೊಳಿರುತಿಪ್ಪ ॥ ಪ್ರಾಣದೇವರ ಉಕ್ತಿ । ಯೂ ನಂಬದವಗೇ ॥ ೨೧ ॥ ಶ್ರೀ ಮಧ್ವೇಶಾರ್ಪಣಮಸ್ತು ॥

ಉಗಾಭೋಗಗಳು.

೨೨೮. ಮಧ್ಯಮಾವತಿ ಧಾಟಿ (ಝಂಪೆತಾಳ.)

ಅಲ್ಪ ಧರ್ಮವು ಜ್ಞಾನದಿಂದ ಮಾಡಲು ಬ್ರಹ್ಮ । ಕಲ್ಪ ಪರಿಯಂತ ಸುಖ ಉಂಟು ನರಗೇ ॥ ಸ್ವಲ್ಪೇತರ ತಿಳಿಯದೆ । ಮಾಡಲ್ ಫಲವು ಭುಜಗ । ತಲ್ಪ ಪ್ರಾಣೇಶವಿಠ್ಠಲ ಮೆಚ್ಚನೂ ॥ ೧ ॥

೨೨೯. (ಭಾಮಿನಿಷಟ್ಪದಿ.)

ನಿರುಮಲೋದಕ ವೆರಿಯೆಲಘುದಶ । ಹರವು ಕ್ಷೀರಕೆ ಶತದಧಿಗೆ ಸಾ । ವಿರ ಮಧುವಿನಿಂಧತ್ತು ಸಾವಿರ ಘೃತಕೆ ಲಕ್ಷಹರಾ ॥ ನೆರೆಗುಡದಿ ದಶಲಕ್ಷ ಟೆಂಗಿನ । ವರಜಲದಿ ಶತಲಕ್ಷ ಗಂಧಜಲೆರಿಯೆ ಪ್ರಾಣೇಶವಿಠಲ ಪಾಪ ನಾಶನವೂ ॥ ೧ ॥

೨೩೦. ಉಗಾಭೋಗ, (ಭಾಮಿನಿ.)

ನಾಲ್ಕು ಕರ್ಣದೊಳೊಂದು ಮುಖದೊಳ । ಗೇಕ ನಾಭಿಯೊಳೊಂದು । ಶಿರದಲಿ । ಶ್ರೀಕರಾರ್ಚಿತಪದ ಜಲದಿತ್ರಯ ಅನ್ನದೊಳಗೈದೂ ॥ ಹಾಕುವದು ಮೂರ್ಭೋಜನೋತ್ತರ । ಸ್ವೀಕರಿಪದಿಂತಷ್ಟ ದಶದಳ । ಶೋಕಪರ ಪ್ರಾಣೇಶವಿಠಲಗೆ ಅರ್ಪಿಸಿದ ತುಲಸೀ ॥ ೧ ॥

೨೩೧. ಉಗಾಭೋಗ, (ಮಧ್ಯಮಾವತಿ ಧಾಟಿ.)

ಅಪ್ರವಹ ಜಲಸ್ನಾನ ಪಾದಾಭಿಷೇಚನವು । ವಿಪ್ರರಿಗೆ ಗಾಯತ್ರಿ ಅರ್ಘ್ಯವನ್ನೂ ॥ ಅಪ್ರಾಕೃತಾಂಗ ಪ್ರಾಣೇಶವಿಠ್ಠಲನವರು । ಸುಪ್ರಭಾಕರನ ಎದುರಿಗೆ ಮಾಳ್ಪದೂ ॥ ೧ ॥

೨೩೨. ಉಗಾಭೋಗ, (ಭಾಮಿನಿ.)

ಫಣಿಯು ನರಪತಿ ಹುಲಿಯು ಯತಿಯು ಪೋ । ರನು ಪರರ ಜಿಂಹ ಪನು ಕಡು ಮೂ । ರ್ಖನು । ಮಲಗಿರಲೆಚ್ಚರಿಸೆ ಸಲ್ಲ । ಕ್ಷುಧಿತ್ರುಷಿ ಕಾಮಾ ರ್ಥೀ ॥ ಯನು ವಿದ್ಯಾರ್ಥಿಯ ನಿರುತಕೃಷಿ, ಪೊರ । ವನ ಅಡಿಗಿ ಮಾಳ್ಪನ ಫಳಿಗಿ ಬಡಿ । ವನ ಎಬ್ಬಿಸಲು ಚಿತನಘ ಪ್ರಾಣೇಶವಿಠಲನಾಳ್ಗಳಿಗೇ ॥ ೧ ॥

೨೩೩. ಉಗಾಭೋಗ, ರಾಗ–ಅಹರಿ (ತ್ರಿಪುಡೆತಾಳ).

ಬಿಳಿಯಾಬಟ್ಟಿಯು ಕೆಂಪು ಡೊಳ್ಳಿನವರು ಬೀದಿ । ಯೊಳು ಬರುತಿರೆ ಕಂಡು ಆತಿಯಿಂದಾ ॥ ಸಲೆ ಲಜ್ಜೆಯನು ತೊರದು ಬೆನ್ನುಬಿಡದಲೆ ಹತ್ತಿ । ಕೊಳಬೇಕು ಫಲಮುಂತ್ರಾಕ್ಷತಿಯಾನೆಂದೂ । ಹಲುಬುತ ಕುಣಿ ಕಲ್ಲು ಮುಳ್ಳು ನೋಡದೆ ಓಡೂ । ತಲಿ ಬಂಟರಿಂದಾಗ ತಡಿಸಿಕೊಳುತಾ । ತಿಳಿದು ದಾತನು ತೋರಿದಷ್ಟು ಕೊಟ್ಟಾರೆ ಹಿಗ್ಗಾ । ದಲೆ ಜನ್ಮಾರಭ್ಯದಾ ಕಷ್ಟಾ ಸ್ಮರಿಸೀ ॥ ಫಳಿಕೇನು ವ್ಯಜ್ಜೆನೀಗ್ರುಹಸ್ಥನಲ್ಲಿಹ ದ್ರುವ್ಯಾ । ನೆಲಿಯಾ ಬಲ್ಲಿನ್ಯು ವಂದಕ್ಕಧಿಕಾರೆಂದೂ । ಕಲವು ಜನರು ತನ್ನಿಂದಧಿಕಾ ತಂದದು ನೋಡಿ । ಬಲು ನೊಂದವರೀಗೆ ದೋಷಾರೋಪೀಸೀ । ಇಳಿಯೋಳಿಪರಿ ದುರ್ಮಾರ್ಗ ದಲಿಹ ಜನಕ್ಕೆ ನೀ । ನೊಲಿವೊದೆಂತೊ ಶ್ರೀ ಪ್ರಾಣೇಶವಿಠಲಾ ॥ ೧ ॥

೨೩೪. ಉಗಾಭೋಗ, ರಾಗ–ಸಾವೇರಿ (ಅಟತಾಳ).

ವನಹೀನವಾದ ನದಿಗಳಿದ್ದು ವ್ಯರ್ಥಾ । ಧನಹೀನನಾದ ಸಾವಕಾರ ವ್ಯರ್ಥಾ । ತನುಜಾರುಯಿಲ್ಲದ ಮುಂದೀರ ವ್ಯರ್ಥ । ಹಣ ವಿಷ್ಣುದ್ರೋಹಿಗೆ ಕೊಟ್ಟದ್ದು ವ್ಯರ್ಥಾ । ಗುಣಹೀನ ಸನ್ಯಾಸಿ ವಂದನಿ ವ್ಯರ್ಥಾ । ಘನ ಘರ್ಜಿಸಿದರೇನು ಮಳಿ ಇಲ್ಲ ವ್ಯರ್ಥಾ । ಅನಳಾನು ಧೂಮಯುಕ್ತವಾಗೆ ವ್ಯರ್ಥಾ । ಅನಿಮಿಷರಿಗೆ ಮಂತ್ರಹೀನಾಹುತಿಯು ವ್ಯರ್ಥ । ವನುತಿಗೆ ಗಂಡ ಅಂತರಿಸಾಲು ವ್ಯರ್ಥ । ಮನಿತನದಳಿಯನಾಗುವದಂತು ಬಲು ವ್ಯರ್ಥ । ವನಜ ರಹಿತವಾದ ಕಾಸಾರವು ವ್ಯರ್ಥ । ಅನುವಾದ ಮದಹೀನಗಜವಾದರು ವ್ಯರ್ಥ । ಕುಣಿಯುದ ಹಾರದ ಕುದುರಿ ಇದ್ದೂ ವ್ಯರ್ಥ । ಸನುಮತ ಸ್ವರ ಹೀನ ವೇದಪಾಠ ವ್ಯರ್ಥ । ತೃಣಕಂಟಕಯುಕ್ತ ಮಾರ್ಗವಾದರು ವ್ಯರ್ಥ ।

ಮನಸು ಸಮಹೀನವಾದ ಜ್ಞಾನ ವ್ಯರ್ಥ । ಕನಸು ಕಾಸೆಂಬೊದು ಸುಳ್ಳು ಖ್ಯಾತಿ ವ್ಯರ್ಥ । ವಣಡಂಬಕವಾದ ದಾನಧರ್ಮ ವ್ಯರ್ಥ । ಮನಸಿಜಪಿತ ಶ್ರೀ ಪ್ರಾಣೇಶ ವಿಠಲನಂಘ್ರಿಯನು ನೇವಿಸದ ಬಂದ । ಮನುಜ ಜನ್ಮವು ವ್ಯರ್ಥಾ ॥ ೧ ॥

೨೩೫. ಉಗಾಭೋಗ, ರಾಗ–ಸಾವೇರಿ (ಅಟತಾಳ).

ಪರಸತಿ ಪಡದಮ್ಮನೆಂಬವ ಧನ್ಯ । ಹರದಿಮಕ್ಕಳನ ಪೋಷಿಸುವವ ಧನ್ಯ । ಶಿರಿ ಬಂದಿರಲು ನೋಡಿ ನಡದವ ಧನ್ಯ । ಧರಣಿಸುರರ ಪೂಜಿ ಮಾಳ್ಪನೆ ಧನ್ಯಾ । ಇರದಂತೆ ಸಂಸಾರದೊಳಗಿಹ ಧನ್ಯಾ । ಸಿರುತ ಪ್ರಾತಃ ಸ್ನಾನ ಮಾಳ್ಪನೆ ಧನ್ಯಾ। ತರಣಿಗೆ ಸಭ ಅರ್ಘ್ಯಕೊಡುವವ ಧನ್ಯ । ಸುರ ಮುಖನಿಗೆ ಉಣಿಸುವನೇವೆ ಧನ್ಯಾ । ಮರತು ದುರ್ಮತ ನೆನಸದವನೆ ಧನ್ಯ । ಹರಿದಿನವ್ರತ ದೃಢನಾದವ ಧನ್ಯ । ಉರು ಕ್ಷೇತ್ರಗಳ ಯಾತ್ರಿ ಮಾಳ್ಪನೇ ಧನ್ಯ । ಪರಪೀಡಿಗಳಿಕಿ ಕೊಂಬುವನೇವೆ ಧನ್ಯಾ । ಪರ ಕಾರ್ಯಂಗಳಿಗೆ ಸಹಯನಾಹ ಧನ್ಯ । ಶರಿರಭಿಮಾನವ ಬಿಟ್ಟವನೆ ಧನ್ಯ । ವರ ಪಂಚಭೇದವ ತಿಳಿದವನೇ ಧನ್ಯ । ಹರಿಗಿಂದಿರಿಗೆ ಭೇದವೆಂಬವ ಧನ್ಯ । ಹರಮುಖ್ಯರಲಿ ಭಕ್ತಿಮಾಳ್ಪನೆ ಧನ್ಯ । ದುರುಳಾ ದೇವರ ಪೂಜಿ ಬಿಟ್ಟಾವ ಧನ್ಯ । ನರರಿಚ್ಛೈಸಿದೊಸ್ತು ಕೊಡುವವ ಧನ್ಯ । ಕೊರತಿ ವೃದ್ಧಿಗೆ ಸಮ ನಿಹಾನೆ ಧನ್ಯ । ಗುರು ಮಧ್ವಾಂತರ್ಗತ ಪ್ರಾಣೇಶವಿಠಲಾನ । ಚರಣ ಕಮಲ ಪೊಂದಿ ಬಾಳ್ವನೆ ಧನ್ಯಾ ॥ ೧ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೩೬. ಉಗಾಭೋಗ, ರಾಗ–ಅಠಾಣ (ತ್ರಿಪುಡಿತಾಳ).

ಕಡ್ಡಿಮ್ಯೇಯಂದೂ ತುಡುಗು ಹೋಗಾಲರಿಯದಂಥಾ । ದೊಡ್ಡಾ ಆಕಳ ಕರವಾಹಗ್ಗಾದಿಂದಾ ॥ ದುಡ್ಡಿನ ಗಲಾತಾವಿನೊಳಗೆ ಕಂಭಕೆ ಕಟ್ಟೀ । ವಡ್ಡಿಕಾವಲಿಯೊಳು ಮುಂದಿ ಇಟ್ಟಹ್ಯನೂ । ಧಡ್ಡಾನಲ್ಲಾವು ಶ್ರೀ ಪ್ರಾಣೇಶಾ ವಿಠ್ಠಲನಾಟಾ । ಮಡ್ಡಾರರಿಯಾರಿದನೂ ಬಲ್ಲಾರು ಕವಿಗಳೂ ॥ ೧ ॥

೨೩೭. ಉಗಾಭೋಗ, ರಾಗ–ಶಂಕರಾಭರಣ (ತ್ರಿಪುಡೆತಾಳ.)

ಒಂದಾರೊಳೆಂಟೆ ವಂದರೊಳಾ ಘನ್ನೆರಾಡೆನೂ । ವಂದಾರೊಳೆರ ಡೊಂದೊಂದರೊಳೊಂದೆನೂ । ಇಂದೀರೆ ಶಾರಲ್ಲ್ಯಾವನಾ ವೂದಲಿಹ್ಯರು ಆ । ನಂದ ತೀರ್ಥಾರಾವ ನಾಮುದಲಿಹ್ಯರೂ । ವೃಂದಾರಕರು ಅಲ್ಲೆಲ್ಲಿರುತಿ ಹರು ಹದಿನೆಂಟೂ । ಮುಂದಿ ಶಿರಿಕೇಶವಾ ಇರುತಿಹರೂ । ಎಂದೂ ತಿಳಿಯ ದವ ಬಾಳಲ್ಯಾತಕೆ ಹದ್ದಿ । ನಂದಾದಿ ಬಹುಕಾಲಾ ವ್ಯರ್ಥವಾಗೀ ॥ ಶಿಂಧೂ ಶಯನ ಶ್ರೀ ಪ್ರಾಣೇಶವಿಠ್ಠಲ್ಲಾ ಅವಗೆಂದೆಂದು ಒಲಿಯಾನು ಕೇಳಿ ಸಜ್ಜನರೂ ॥ ೧ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೩೮. ಉಗಾಭೋಗ, (ವಾರ್ಧಿಕ.)

ಪದಕಟ ಬೆರಳು ಕಂಠ ಕಿಂವಿ ಪುಬ್ಬು ಸಂಣವಾರು । ಅಧರಕದಪು ರದನಖ ಗುಂಹ್ಯದರ ತಿಳುವಾರು । ಹೃದಯ ಜಘನಾಕ್ಷನಾಸಿಕ ಊರು ಕೇಶಗಳಾರು ದೊಡ್ಡವು ಈ ಪರೀ ॥ ಪದಿನೆಂಟು ಶುಭಲಕ್ಷಣಗಳೊಪ್ಪುತಿಹವು ದ್ರೌ । ಪದಿಗೆ ಪ್ರಾಣೇಶವಿಠಲನ ಕರುಣಬಲದಿ ಭವ । ವೊದಲಾದವರಿಗೆ ಒಡತಂದಿವಳ ಮಹಿಮೆ ಬಹು ಶೃತಿಸ್ಮೃತಿಗಳಲಿ ಪೇಳ್ವದೂ ॥ ೧ ॥

೨೩೯. ಉಗಾಭೋಗ, (ಭಾಮಿನಿ.)

ವಾಸುದೇವನು ಶುಕ್ಲ ಶ್ರೀ ಶಾಂ । ತೀಶ ನೀಲಜಯೇಶ ಪಿಂಗಳ । ದೋಷಹರ ಶ್ರೀ ಪ್ರದ್ಯುಮ್ನ ಹರಿತಾಭಾ ॥ ಮೇಶ ನಾರಾಯಣನು ಲೋ ಹಿತ । ಈ ಸುರೂಪದಿ ಪಂಚನಾಡಿಸು । ಕೋಶನಳ ಪ್ರಾಣರೊಳಗಿಹ । ಪ್ರಾಣೇಶವಿಠ್ಠಲನೂ ॥ ೧ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೪೦. ಉಗಾಭೋಗ.

ಪ್ರಥಮ ಪೂಜಿ ಆವಾಹನ ಆಸನ । ದ್ವಿತಿಯ । ಪಾದ್ಯ. ತೃತಿಯರ್ಘ್ಯ ನಾಕು ಸ್ನಾನ । ತುತಿಸಾದು ಐದೆಂದು ವಸನಾರೂಪವಿತೇಳು । ಅತಿ ಸುಗಂ ಧಷ್ಟ ಸುಮನನವದಶಧೂಪ । ಚತುರದೀಫನ್ನೊಂದು ನೈವೆದ್ಯದ್ವಾದಶ । ತ್ರಿತಿದಶ ಆಚಮನವು ಸುಫಲಂಗಳು । ಚತುರ್ದಶ ತಾಂಬೂಲ ಹದಿನೈದು

ಹದಿನಾರು । ಮತಿವಂತರರಿವದು ಸುಪ್ರದಕ್ಷಿಣೆಯಂದೂ ॥ ಪತಿತಪಾವನ್ನ ಶ್ರೀ ಪ್ರಾಣೇಶವಿಠ್ಠಲಗೆ ಸಂ । ತತ ಷೋಡಶೋಪಚಾರ ಪೂಜೆಗಳು ಇವೆ । ವೃತಿಗಳೆಲ್ಲರು ಮೆಚ್ಚು ಪಂಚರಾತ್ರಾಗಮಾ । ನುತಿಪದು ಅತಿಗೌಪ್ಯ ಸೊಲ್ಲಿವಕೊ ॥ ೧ ॥

ಶ್ರೀ ಜಗನ್ನಾಥರಾಯರ ಸ್ತೋತ್ರ ಸಂಪುಟಾಕಾರವಾಗಿ

೨೪೧. ರಾಗ–ಕೇದಾರಗೌಳ (ಅಟ್ಟತಾಳ.)

ಶ್ರೀ ಕಾಂತೊಲಿದ ದಾಸ । ರೀ ಕಲಿಯುಗದಲ್ಲಿ । ಲೇಖಾಂಶರಹುದೇ ತಂಗೀ ॥ ಶೋಕಬ್ಯಾಡೆಲೆ ನರಲೋಕ ಉಳಿದರೆಂದು । ಈ ಕಂಭದೊಳಗಿಹ ರೇ । ಹೇನೀರೇ ॥ ಪಲ್ಲ ॥ ಆಶೇತೂ ಮೊದಲಾದ ಹಿಮಾಶೈಲ ಪರಿಯಂತ । ಸೂಸಿಹದಿವರ ಕೀರ್ತಿ ॥ ಯೇಸು ಬಗಿಯಲಿಂದ । ನೋಸಿನೋಡಿದರನ್ನ । ಪಾಸಟಯನಿಸಸದಲ್ಲೇ । ಯೇನಲ್ಲೇ ॥ ೧ ॥ ನರಮೋಹನಾರ್ಥವಾದರು ಲೌಕೀಕೆಂಬುದೂ । ಅರಿಯಾರು ಸ್ವಪ್ನದಲ್ಲೀ ॥ ಧರಿಯೊಳಖಿಳ ನಜ್ಜ । ನರು ಪರಿಕ್ಷಿಸಿಹರು । ಬರಿದೆಸ್ತವನ ವಲ್ಲಾವೆ । ಕೇಳಲವೇ ॥ ೨ ॥ ಹರಿ ಕೃಪಿ ನೋಡು ಇ । ವರಿಗೆ ಜನರು ಎಷ್ಟು । ಜರಿದಾರು ಮನ್ನಿಪರೂ ॥ ಕರಣ ತ್ರಯದಿ ಶುದ್ಧ । ರೆರಡು ಮಾರ್ಗವ ಬಲ್ಲ । ವರು ನಿತ್ಯಾಚರಿಸಿದರೂ । ಹಿರಿಯಾರೂ ॥ ೩ ॥ ಇವರಂದ ನುಡಿಯನುಭವಕೆ ತಂದರೆ ಲೇಶ । ಭವದುಃಖ ವಾಗದಲ್ಲಾ ॥ ಜವದೊರವದು ಮುಕ್ತಿ । ಜವನಬಾಧಿಲ್ಲಾ ಶು । ಕವಿಕುಲ ತಿಲಕರಿಗೇ । ನೀಯರಗೇ ॥ ೪ ॥ ಖಳಹ ಪ್ರಾಣೇಶ ವಿ । ಠ್ಠಲನ ಚರಿತೆ ಪದ । ಗಳಲಿ ಬಂಣಿಸಿ ಸಂತತೀ ॥ ನಿಲಸಿ ಜ್ಞಾನಿಗಳನ್ನು । ತಲಿತೂಗಿಸಿದರು ಪೇ । ಳಲು ಎನ್ನಮತಿ ಸಾಲದೂ । ಸತ್ಯವಿದೂ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

ಮಂಗಳಾರ್ತಿ ಕೀರ್ತನಗಳು.

೨೪೨. ರಾಗ–ಪೂರ್ವಿ (ತ್ರಿಪುಡೆತಾಳ.)

ಮಂಗಳಂ ಜಯ ಮಂಗಳಂ । ಜಯ ಮಂಗಳಂ ಪರಮೇಷ್ಟಿಜನಕ ಉಪೇಂದ್ರಾ ॥ ಮಂಗಳಂ ಮಂಗಳಂ ॥ ಪಲ್ಲ ॥ ವೇದಉದ್ಧಾರಶ್ರೀ । ಬಾದ

ರಾಯಣ ಮಧು ॥ ಸೂದನ ಅಸುರರ ಕಾಯ್ದ ದಯಾಬ್ಧೀ ॥ ೧ ॥ ನಂದ ಗೋಪಾತ್ಮಜ । ಸಿಂಧೂರ ಪಾಲಮು । ಕುಂದ ಪಾಲಿಪುದೆನ್ನ ಇಂದಿವರಾಕ್ಷಾ ॥ ೨ ॥ ತುಂಗವಿಕ್ರಮನೆ ಕಾ । ಳಿಂಗ ಮರ್ದನ ದೇವಾ ॥ ಗಂಗಜನಕ ಶ್ರೀ ವಿಹಂಗವಾಹನನೇ ॥ ೩ ॥ ಸಣ್ಣ ರೂಪದಿ ಬಲಿ । ಯನ್ನು ತುಳಿದ ಶ್ರೀ । ವ ಮನ್ನ ಕ್ಷಿತಿಪಹರವನ್ನಜನಾಭಾ ॥ ೪ ॥ ಪ್ರಾಣೇಶವಿಠಲ ಶ್ರೀ । ಮಾನಿನಿ ಪತಿ ಶತ ॥ ಮೀನಾಂಕ ಲಾವಣ್ಯ । ಭಾನುಪ್ರಕಾಶಾ ॥ ೫ ॥ ಶ್ರೀ ಮಧ್ವೇ ಶಾರ್ಪಣಮಸ್ತು ॥

೨೪೩. ಪದ, ರಾಗ–ಸಾವೇರಿ (ಏಕತಾಳ).

ಮಂಗಳಂ ಜಯ ಮಂಗಳಂ । ಶುಭ ಮಂಗಳ ಅಕ್ರೂರವರದನಿಗೇ ॥ ಮಂಗಳಂ ಜಯ ಮಂಗಳಂ ॥ ಪಲ್ಲ ॥ ಕ್ಷರ ಅಕ್ಷರ ಪುರುಷವಿನುತಗೇ । ಕ್ಷೀರಸಾಗರದಿ ನಿವಾಸನಿಗೇ । ಪಾರಶರನಸುತ ಬಾದರಾಯಣನಿಗೆ । ಮಾರನಪಿತ ಮಧುಸೂದನಗೇ ॥ ೧ ॥ ಶುಂಡಲವರದ ಮೃಡನರಸಖಗೇ । ಪಾಂಡುವಪಕ್ಷ ಕೌರುವಾಶೀಕ್ಷಾಗೇ ॥ ಲೆಂಡಚಾಣೂರ ಮುಷ್ಟಿಕರ ಸಂಹಾರಗೇ । ಅಂಡಜವಹನಿಗೆ ಸರ್ವನಾಮಗೇ ॥ ೨ ॥ ಸಚ್ಚಿದಾನಂದಪೂರ್ಣ ಕಾಮನಿಗೇ ! ಮತ್ಸ್ಯವಾಮನ ನರಸಿಂಹನಿಗೇ ॥ ಹೆಚ್ಚಿನ ಹಯವೇರಿ ಮೆರವ ಬೇವಗೆ ಭಕ್ತಾ । ವತ್ಸಲ ಶ್ರೀ ಪ್ರಾಣೇಶವಿಠ್ಠಲನಿಗೇ ॥ ೩ ॥ ಶ್ರೀ ಮಧ್ವೇ ಶಾರ್ಪಣಮಸ್ತು ॥

೨೪೪. ಪದ, ರಾಗ–ಅರಬಿ (ಅಟತಾಳ).

ಮಂಗಳಂ ಮಂಗಳಂ । ಜಡಜಂಗಮವ್ಯಾಪ್ತ ನಿರ್ಲಿಪ್ತ ಸುಕಲ್ಕೀ ॥ ಮಂಗಳಂ ॥ ಪಲ್ಲ ॥ ತುಚ್ಛೇತರಜ್ಞಬಿ । ಭತ್ಸು ಪೂಜಿತ ಪಾದ । ವತ್ಸಲೇಖಪ ಭಕ್ತ । ವತ್ಸಲಹರಿತೇ ॥ ೧ ॥ ವಿದ್ಯುನ್ನಾಥನೆ ಕೋಟ । ವಿದ್ಯುಧ್ಧ ಲೋಕೇಶ ॥ ಶುದ್ಧಸತ್ವಾಂಗ ಪ್ರಸಿದ್ಧಪುರುಷತೇ ॥ ೨ ॥ ಪ್ರಾಣೇಶಾವಿಠಲಕ । ಲ್ಲ್ಯಾಣ ಮರುತಿದಾಸ ॥ ಮಾನಸನಿಲಯ ವಿಜ್ಞಾನದಾಯಕತೇ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೪೫. ಪದ, ರಾಗ–ಅರಬಿ (ಅಟತಾಳ).

ಮಂಗಳಂ ಮಂಗಳಂ । ದೇವಗಂಗಜನಕ ಶ್ಯಾಮಲಾಂಗಮುರಾರೇ ॥ ಪಲ್ಲ ॥ ಸಾಮಜಪಾಲ ಅ । ಸಮಾನ ಮೂರ್ತೆಸು ॥ ಸಾಮಗಾಗ ಭೂಮುತ್ರಿ । ಧಾಮ ಶ್ರೀ ರಾಮತೇ ॥ ೧ ॥ ದಕ್ಷಿಣ ಪೂಜ್ಯ ಸಂ । ರಕ್ಷಣ ಗೋಕುಲ ಜಗ ॥ ತ್ಕುಕ್ಷೆಹೇಪಾಂಡವ । ಪಕ್ಷಾನಪೇತೇ ॥ ೨ ॥ ದೀನಮಂದಾರ ವಿ । ಹೀನ ವಿಕಾರರ ॥ ಮಾನಾಧ ಶ್ರೀ ಪ್ರಾಣೇಶವಿಠ್ಠಲತೇ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೪೬ ಪದ, ರಾಗ–ಭೈರವಿ (ಅಟತಾಳ).

ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ ಪಲ್ಲ ॥ ಕೋಪದಿಂ ಭೂಪ ರಳಿದವಗೆ ಋಷಿವರ್ಯಗೆ । ಶ್ರೀಪಾದ ಜಲದಿ ಉದ್ಧರಿಸಿದವಗೇ ॥ ಭೂಪಲೀ ಲಿಯ ತೋರಿ ತುರಗ ಕಟ್ಟಿದವನಿಗೆ । ಶ್ರೀಪೂಜ್ಯ ನಿರ್ದೋಷ ವರ ಕಪಿಲಗೇ ॥ ೧ ॥ ಹಡದ ತಾಯಿಗೆ ತತ್ವ ಉಪದೇಶ ಮಾಡ್ದವಗೇ । ಕಡು ದಯಾವಂತ ಸಾಮಗದೇವಗೇ ॥ ಬಿಡದೆ ಸ್ತ್ರೀ ಪುರುಷರಲಿ ನಾಲ್ಕು ರೂಪದಲಿ ಹಗೆ । ನಡುಗೇಹನುತಗೊಲಿದ ಮುನಿಪುತ್ರಗೇ ॥ ೨ ॥ ಕಪಟರೂಪದಿ ರಾಯಸುತ ನಂಗ ಬೇಡ್ದವಗೆ । ಶಪಿಸಲ್ಕೆ ಶಿಲಿಯಾದ ಚರಣಧರಗೇ ॥ ಅಪರಿಮಿತ ಮಹಿಮ ಶ್ರೀ ಪ್ರಾಣೇಶವಿಠ್ಠಲನಿಗೆ । ಶಫರಾದಿ ದಶರೂಪ ತಾಳ್ದ ಹರಿಗೇ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೪೭. ಪದ, ರಾಗ–ಭೈರವಿ (ಝಂಪೆತಾಳ).

ಮಂಗಳಂ ಮಂಗಳಂ ॥ ಪಲ್ಲ ॥ ಮೂಜ್ಜಗದೊಡಿಯಗೆ ಮಾರಶತ ಲಾವಣ್ಯಸಗೆ । ಅರ್ಜನಸಖ ಸಮಾಧಿಕ ಶೂನ್ಯಗೇ ॥ ದುರ್ಜನರ ಸಂಹಾರಿ ಹತ್ತಾವತಾರನಿಗೆ । ಸಜ್ಜನಮನ ಮಂದಿರಗೆ ಸ್ವಾಮಿಗೇ ॥ ೧ ॥ ಜಾನಕೀ ರಮಣಗೇ ರಘುನಾಧ ಜಗದೇಶಗೆ । ಮೌನಿಕುಲ ಸನ್ಮಾನ್ಯ ವಿಧಿಪೂಜ್ಯಗೇ ॥

ಎನೆಂಬೆನದ್ಭುತ ಚರಿತ್ರೆ ತೋರಿಸುವನಿಗೆ । ಶ್ರೀನಿವಾಸನಿಗೆ ಪುರುಷೋತ್ತುಮನಿಗೇ ॥ ೨ ॥ ತ್ರಣ ಮೊದಲು ಮಾಂತ ಚೇಷ್ಟಪ್ರದಗೆ । ಸುಂದರಗೆ ಗುಣಪೂರ್ಣನಿಗೆ ಭೈಷ್ಮಿ ವಲ್ಲಭನಿಗೇ ॥ ಅನಿಮಿಷಾರ್ಚಿತಪಾದ । ಪ್ರಾಣೇಶವಿಠಲನಿಗೆ । ಘನವರ್ಣನಿಗೆ ಪರಾಶರ ಸುತನಿಗೇ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೪೮. ರಾಗ-ಕಾಂಬೋಧಿ (ಧ್ರುವತಾಳ.)

ಮಂಗಳ ವಿಶ್ವವ್ಯಾಪ್ತ । ವಿಶ್ವಭಿನ್ನನಿಗೇ । ಮಂಗಳ ಸರ್ವನಾಮ ಸರ್ವರೂಪನಿಗೆ ॥ ಮಂಗಳಾನಂತಾ ಅನಂತ ಮಹಿಮಗೆ । ಮಂಗಳವಾಯುವಹನಗೆ ಜಗನ್ಮಾತಿಗೆ । ಮಂಗಳವೆನ್ನೀ ಮುದದಿಂದ ॥ ಪಲ್ಲ ॥ ಕೇಶವಗೆ ಶ್ರೀದೇವಿಗೆ । ನಾರಾಯಣ ಲಕ್ಷ್ಮಿಗ । ಈಶಾಮಾಧವಗೆ ಕಮಲೆಪದಗಳಿಗೇ ॥ ದೋಷಹ ಗೋವಿಂದನಂಘ್ರಿಗೆ ಪದ್ಮದೇವಿಗೆ । ಶೇಷಶಯನ ವಿಷ್ಣುವಿಗೆ ಪದ್ಮಿಣಿ ದೇವಿಗೇ । ವಿಾಸಲಾರುತಿಯಾ ಬೆಳಗೀರೆ ॥ ೧ ॥ ಮಧುರಿಪುವಿಗೆ ಕಮಲಾಲಯ ಪದಗಳಿಗೇ । ವಿಧಿನುತ ತ್ರಿವಿಕ್ರಮಗೆ ರಮಜನನಿಗೇ ॥ ನದಿಪಿತ ವಾಮನನಂಘ್ರಿಗೆ ವೃಷಕಪಿಗೆ । ಬುಧಜನಾರ್ಚಿತ ಶ್ರೀಧರಗೆ ಧನ್ಯದೇವಿಗೆ । ಸುದತಿಯರಾರುತಿಯಾ ಬೆಳಗೀರೆ ॥ ೨ ॥ ಹೃಷಿಕೇಶನಂಘ್ರಿಗಳಿಗೆ ಮಂಗಳದೇವಿಗೆ । ಬಿಸಿಜನಾಭಬುದ್ಧಿಗೆ ದಾಮೊದರಿಂದಿರೀಗೆ ॥ ವಿಷಕಂಠಾರ್ಚಿತ ಸಂಕರುಷಣ ಹರಿಣಿಗೆ । ಅಸಮ ವಾಸುದೇವಗೆ ದಕ್ಷಿಣದೇವಿಯಂಘ್ರಿಗೇ । ಶಶಿಮುಖಿಯರಾರುತಿಯಾ ಬೆಳಗಿರೆ ॥ ೩ ॥ ಅನಘಾಶ್ರೀ ಪ್ರದ್ಯುಮ್ನಗೆ ನಿತ್ಯಾಯಂ ಬಳಿಗೇ । ಅನಿರುದ್ಧಗೆ ಆನಂದದೇವಿ ಪದಗಳಿಗೆ ॥ ಮುನಿಗೇಯ ಪುರುಷೊತ್ತುಮಂಗೆ ಸದಶ್ರಯಳಿಗೇ । ಘನನಿಭಾಧೋಕ್ಷಜದೇವಾಗೆ ಶುಭದೇವಿಗೇ । ವನುತಿಯರಾರುತಿಯಾ ಬೆಳಗಿರೆ ॥ ೪ ॥ ನರಸಿಂಹಗೆ ಯಜ್ಞಳಿಗೆ । ಅಚ್ಯುತ ಸುಖದೇವಿಗೆ । ವರದ ಜನಾರ್ದನ ಸೌಗಂಧಿದೇವಿಯಳಿಗೆ । ವರ ಉಪೇಂದ್ರ ಸುಂದರಿಗೆ ಹರಿಗೆ ವಿದ್ಯದೇವಿಗೆ । ಕರುಣಿ ಕೃಷ್ಣ ಪ್ರಾಣೇಶವಿಠ್ಠಲ ಸುಶೀಲಿಗೇ । ತರುಣಿಯರಾರುತಿಯಾ ಬೆಳಗೀರೆ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೪೯. ರಾಗ—ರೇಗುಪ್ತಿ (ಏಕತಾಳ.)

ಶ್ರೀ ನಾರಸಿಂಹಾ, ಕಾಯೊ । ದಾನವಾನೀಕಾಧ್ವಾಂತಾ । ಭಾನು ಕಾಮಿತ ಸುರಧೇನು ॥ ಶ್ರೀ ನಾರಸಿಂಹಾ ॥ ಪಲ್ಲ ॥ ಘೋರ ದುರಿತಾ ಪರಿಹಾರ ಮಾಳ್ಪರ ಕಾಣೆ ॥ ವೀರಾ ನಿನ್ಹೊಳೀದು ಇನ್ನಾರಾ ॥ ಶ್ರೀ ॥ ೧ ॥ ಭೀಷಣ ಉಗ್ರವಿಶ್ವವಾಸಾ ಭದ್ರಾನೆ ಸ್ವಪ್ರ ॥ ಕಾಶಾಮೃತ್ಯುರ್ವೃತ್ಯು ನಿರ್ದೋಷಾ ॥ ೨ ॥ ಪ್ರಬಲಾನೀ ತುಚ್ಛಮಾಡಿ ಅಬಲಾರ ಕೈಬಿಡಲು ॥ ಸುಬಲಾರ್ಮೊಚ್ಚೋರೆ ಶಾಮು ಶಬಲಾ ॥ ೩ ॥ ಜ್ಞಾನಶೂನ್ಯ ನಾ ನಿನ್ನ ಧ್ಯಾನವ ಮರೆತರೆ ॥ ನೀನು ಹಾಗೆ ಮರಿಯಬೇಕೇನೂ ॥ ೪ ॥ ಎಲ್ಲಾರಿಗೊಡಿಯಾ ಲಕ್ಷ್ಮಿನಲ್ಲಾ ಪ್ರಾಣೇಶವಿಠಲಾ ॥ ಬಲ್ಲೀದಭಯವಾ ಕಳಿಯ ಬಲ್ಲೀ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೫೦. ಉಗಾಭೋಗ, (ಮಧ್ವನಾಮದ ಧಾಟಿ)

ದ್ವಯಪರ್ವನಾಮಿಕ । ಕನಿಷ್ಠಾದಿ ಕ್ರಮತರ್ಜ । ನಿಯ ಮೂಲತನಕ ಗಾಯಿತ್ರಿ ಮಂತ್ರಾ ॥ ನಯದಿಂದ ಶಕ್ತ್ಯಾನುಸಾರ ಜಪಿಸಲು ರಮಾ । ಲಯಸು ಪ್ರಾಣೇಶವಿಠಲನ ಕಾಂಬರೂ ॥ ೧ ॥

अनामिकद्वयपर्वं । कनिष्ठादिक्रमेणतु ॥ तर्जनीमूलपर्यंतं गायत्रीजपमाचरेत् ॥

೨೫೧. ರಾಗ—ಸೌರಾಷ್ಟ್ರ (ಅಟತಾಳ)

ಮಂಗಳಂ ಮಂಗಳಂ। ಜಯ ಮಂಗಳ ಶ್ರೀ ಸುಧೀಂದ್ರಾಬ್ಧೀಜ ಚಂದ್ರಾ ॥ ಪಲ್ಲ ॥ ನಾಭಿಜ ನಾಭಿಜ ನಾಭಿಜ ಪದ ॥ ಜಿತ ಕಂಜ ॥ ಶೋಭಿತ ಕೇಳಿ ಬಿಡದೆಮ್ಮನಾಳೀ ॥ ೧ ॥ ಕೋಲಜ ಕೂಲಸುಸ್ಥೀಲ, ಮಂತ್ರಾಮಂದಿರಾಲಯ । ವಾಲಯ ಪಾಲಯಮಾಂಗುರು ॥ ೨ ॥ ಏನೇನು ಮಾಡಲು ನೀನೊಲಿಯುದಲೆಂದು ॥ ಪ್ರಾಣೇಶವಿಠಲನ ಕಾಣರೋ ಜನರೂ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨೫೨. ಪದ, ರಾಗ–ಸೌರಾಷ್ಟ್ರ (ಅಟತಾಳ).

ಮಂಗಳಂ ಮಂಗಳಂ ಜಯ ಮಂಗಳ ಭುವನೇಂದ್ರಪೂಜ್ಯ ಪದಾಬ್ಜಾ || ಪಲ್ಲ || ಪಿಂಗಳಭಂಗ ಸುಸಂಗನ್ನೈವಾದಿ || ಭುಜಂಗ ವಿಹಂಗ ಉತ್ತುಂಗ ನಿಸ್ಸಂಗಾ || ೧ || ದಾತವಿಖ್ಯಾತ ವಿಧಾತಾಂಶ ಸದ್ಗುಣ || ವ್ರಾತಳೆಂದ್ರಕರ ಜಾತಸುನಾಥಾ || ೨ || ಪ್ರಾಣೇಶವಿಠಲನ ಪ್ರಾಣಪ್ರವೀಣ || ಸು | ಪ್ರಾಣ ಮತಾಬ್ಧಿ ಪಾರೀಣ ಕಲ್ಯಾಣ || ೩ || ಶ್ರೀ ಮಧ್ವೇಶಾರ್ಪಣಮಸ್ತು ||

ಸದ್ಧ್ಯಕ್ಕೆ ಉಪಲಬ್ಧವಾಗಿರುವ,
ಶ್ರೀ ಪ್ರಾಣೇಶ ವಿಠಲರ ಕೀರ್ತನಗಳು ಸಂಪೂರ್ಣವಾದದು.

|| ಶ್ರೀ ಗುರು ಮಧ್ವೇಶ ಶ್ರೀ ಕೃಷ್ಣಾರ್ಪಣಮಸ್ತು ||

हरिः ॐ

प्राणपतिपदद्वंद्वं । पंकजासक्तमानस ॥
शमादिगुणसंयुक्तं श्रीप्राणेशगुरुं भजे ॥ १ ॥
गुरुभक्तिमतां श्रेष्ठां गुरु पादावलंबनं ॥
गुरुपदिष्ठ मार्गस्थं गुरुप्राणेश गुरुंभजे ॥ २ ॥

ಶ್ರೀಪ್ರಾಣೇಶ ದಾಸಾರ್ಯರ ಸಾಕ್ಷಾತ ಪುತ್ರರೂ
ಶಿಷ್ಯರೂ ಅಪರೋಕ್ಷಜ್ಞಾನಿಗಳೂ ಮಹಾತ್ಮರೂ ಆದ

ಶ್ರೀಗುರುಪ್ರಾಣೇಶ ವಿಠಲರ ಕೀರ್ತನಗಳು.



ಶ್ರೀ ದೇವರ ಸ್ತೋತ್ರ.

೧. ಪದ, ರಾಗ–ಕೇದಾರಗೌಳ (ಆದಿತಾಳ).

ಪಾಹಿ ಪಂಢರಿ ರಾಯಾ । ಮಾಂ । ಪಾಹಿ ಪಾಂಡವ ಪ್ರಿಯಾ ॥ ಪಲ್ಲ ॥
ಹಿಂದೆ ನಾನು ನಿನ್ನ । ದರುಶನ । ಕಂಡು ಬಂದು ಘನ್ನಾ ॥ ನಂದದಿ ನಿಂದ ವನಾ । ರಕ್ಕಿಸಿ । ಮುಂದೆ ನಲಿದೆ ಚನ್ನಾ ಮಾಂಪಾಹಿ ॥ ೧ ॥ ಅಷ್ಟೆ ಮಾತ್ರ ಸಾಕು, । ದುರಿತಗ । ಳಟ್ಟಿ ಕಾಯಬೇಕೂ ॥ ಮುಟ್ಟು ಮಾಡಬೇಕೂ । ವಿಷ

ಯುಗ । ಳಿಟ್ಟ ಹಾಕಿ ನೂಕು, ಮಾಂಪಾಹಿ ॥ ೨ ॥ ಮರುತ ಮತದೊಳಿಟ್ಟು । ನಿನ್ನನು । ಸ್ಮರಿಪ ಭಾಗ್ಗ್ಯ ಕೊಟ್ಟೂ ॥ ಗುರು ಪ್ರಾಣೇಶವಿಠಲಾ । ನಿನ್ನವನೆಂದು । ಕರಪಿಡಿದು ಕರಿಯೋ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨. ಪದ, ರಾಗ–ಜಾಂಗಲಿ (ರೂಪಕತಾಳ).

ಪೊರಿಯು ಬೆಕೆಲಾ । ಮರಿ ನೀನು ಥಲಾ ॥ ಪಲ್ಲ ॥ ಯೇಸು ಜನ್ಮದಿ ನಿನ್ನ ದಾಸನೆನಿಸಿದೆ । ಉ । ದಾಸ ಮಾಡದೆ ನುಹಿ ದಾಸ ಎನ್ನನು ನೀ ॥ ೧ ॥ ನಿನ್ನನೆ ಮರೆವುದು ಯನ್ನ ಸ್ವಧರ್ಮವು ॥ ನಿನ್ನ ಘನ್ನತಿಗಿದು । ಸನ್ನುಮತವೆ ಹರಿ ॥ ೨ ॥ ಸರುವಜ್ಞ ನೀನೆಂದೂ । ವರದವು ಶೃತಿಗಳೂ ॥ ಮರೆವದುಚಿತ ವೇನೊ ಗುರು ಪ್ರಾಣೇಶವಿಠ್ಠಲ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೩. ಪದ, (ಅಟತಾಳ).

ದಯಾನಿಧೆ ದಯ ಮಾಡಬೇಕೂ । ದಯಮಾಡಬೇಕು ಎನ್ನಯ ದೋಷಾವೆಣಿಸದೆ । ಹಯಮುಖಲೋಕಾತ್ರಯ ವ್ಯಾಪ್ತ ಪರಮಾಪ್ತ ॥ ಪಲ್ಲ ॥ ನಿನ್ನ ನಂಬಿದಾ ಭಕತರನ್ನ ಚನ್ನಾಗಿ ಕಾಯ್ದಾ ॥ ಘನ್ನಾಕೀರುತಿ ಕೇಳಿ ಮನ್ನಾದಿನಮಿಸುವೆ । ಬನ್ನಬಡಿಸದೆ ಸಂಪನ್ನ ಗುಣಾರ್ಣವ ॥ ೧ ॥ ಮಾನಿ ಮಾನದನೇ ದ್ರೌಪದಿ ಅಭಿಮಾನ ರಕ್ಷಕನೇ ॥ ಭಾನುಜನಕ ಮುಖ್ಯಪ್ರಾಣ ವಂದಿತಾಂಘ್ರಿ । ನೀನೊಲಿಯದಿರೆ । ಸುಜ್ಞಾನಮಾರ್ಗವ ಕಾಣೆ ॥ ೨ ॥ ಹರಿಕೋಟತೇಜಾ ಕಾಮಿತಕಲ್ಪತರು ಮಹರಾಜಾ ॥ ಸುರನದಿ ಜನಕ ಅಸುರಶಿಕ್ಷ ಕಮಲಾಕ್ಷ । ಕರುಣಿ ಕಪಿಲವ್ಯಾಸಾ । ಗುರು ಪ್ರಾಣೇಶವಿಠಲಾ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೪. ಪದ, ರಾಗ–ಶಂಕರಾಭರಣ (ಅಟತಾಳ).

ಸುಖದಸುಂದರ ವಿಠ್ಠಲರಾಯಾ । ಈ । ಭಕುತಗೆ ವಿಜ್ಞಾನ ಕೊಡು ಜೀಯಾ ॥ ಪಲ್ಲ ॥ ಸುಖತೀರ್ಥ ಶಾಸ್ತ್ರಸಮ್ಮತವಾಗಿ । ಈ । ಸುಕವನಕ್ಕೆ ವಾಕ್ಯ ವದಗಾಲಿ ॥ ಸಕಲ ಜನರು ಕೇಳಿ ಪಾಡಲೀ । ಇದು । ಮುಕುತಿಗೆ ಸತ್ಪಥ ವಾಗಲೀ ॥ ೧ ॥ ಆಯುರಾರೋಗ್ಗ್ಯವು ಪೆಚ್ಚಲಿ । ಕೇಳಿ ಮಾಯಾವಾದಿ

ಗಳು ಬಾಯ್ಮುಚ್ಚಲೀ ॥ ಶ್ರೇಯಸ್ಸು ಬಂದು ಕೈಗೂಡಲೀ । ಶ್ರೀ ವಾಯುದೇವನು ಪ್ರೀತನಾಗಲೀ ॥ ೨ ॥ ಗುರು ಪ್ರಾಣೇಶಾವಿಠ್ಠಲ ನೀನೂ । ತ್ವರ ಕರ ಪಿಡಿ ಶರಣರ ಸುರಧೇನೂ ॥ ಮರತವನಲ್ಲವೊ ನಿನ್ನನು । ಈ । ಬಿರಿದು ನಿನ್ನದು ಕರ ಮುಗುವೇನೂ ॥ ೩ ॥

೫. ಪದ, ರಾಗ–ಕಾಂಬೋಧಿ (ಝಂಪೆತಾಳ).

ತಂದೆ ಪ್ರಾಣೇಶವಿಠ್ಠಲರಾಯುವಲಿದು ಆ । ನಂದ ಕೊಡು ಈ ಭಕ್ತಗೇ ॥ ಪೊಂದಿ ಕೊಂಡಿಹ ನಿನ್ನ । ನೆಂದು ನಾ ಪ್ರಾರ್ಥಿಸುವೆ । ಮಂದರರೋದ್ಧರ ಮುಕುಂದಾ । ನಂದಾ ॥ ಪಲ್ಲ ॥ ಅನವರತ ನಿನ್ನ ಧೇನಿಸುವಂತೆ ಮನವು ಬಹು ಅನುಕೂಲವಾಗಿ ಇರಲೀ । ಅನಘ ನಿನ್ನಂಘ್ರಿಗಳ ಪೂಜಿಸುವದಕೆ ಕರಗ । ಳನುಕೂಲವಾಗಿ ಇರಲೀ ॥ ಅನಿಮಿಷಾರಾಧ್ಯ ನಿನ್ನ ಕೀರ್ತಿ ಪದಕೇಜಿಂಹೆ । ಅನುಕೂಲವಾಗಿ ಇರಲೀ । ದನುಜ ಕುಲವೈರಿ ನಿನ್ನ ವರಡಿಗೆ ನಡಿಯೆ ಪದ । ವನುಕೂಲವಾಗಿ ಇರಲೀ । ಬರಲೀ ॥ ೧ ॥ ಇವನ ಕವನಾ ಕೇಳಿ ಹರುಷಯುತರಾಗಿ ಸ । ತ್ಕವಿಗಳೂ ತಲಿದೂಗಲೀ । ಪವನ ಮತದಲಿ ಪೇಳಿದಂತೆ ಅದನನುಸರಿಸಿ । ಕವಿತಯೂ ಬಂದೊದಗಲೀ ॥ ನವರಾಗಗಳಿಂದೊಪ್ಪಿಲಘುದೀರ್ಘ ಮೊದಲು ಮ । ರ್ಮವ ತಿಳಿದು ಪೇಳುತಿರಲೀ ॥ ಭುವನದೊಳಗುಳ್ಳ ಸಜ್ಜನರು ಶೋಧಿಸಿ ಆಶು । ಕವಿ ಎಂದು ಕರವುತಿರಲೀ । ಮೆರೆಯಲೀ ॥ ೨ ॥ ಚಿರಕಾಲ ಬಾಳಿ ಬಹು ಕೀರ್ತಿಯುತನಾಗಿ । ಈ ಧರಿಯೊಳಗೆ ಸುಖಿಸುತಿರಲೀ । ಪರಮ ಭಕುತಿಯು ಪೆಚ್ಚಿ ಸ್ವೋತ್ತುಮರ ಪದಗಳಿಗೆ । ಎರಗಿ ಕರುಣವ ಪಡೆಯಲೀ ॥ ಮರಿಯದಲೆ ಇಹಪರದಿ ಸುಖಗಳನು ಕೊಟ್ಟು ಶ್ರೀ । ಹರಿಯೆ ಪೊರೆಯುಂದಾಡಲೀ । ಮರುತಾಂತರ್ಯಾಮಿ ಗುರು ಪ್ರಾಣೇಶವಿಠ್ಠಲನೆ । ಶರಣಜನ ಕಾಮಧೇನೂ । ನೀನೂ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೬. ಪದ, (ಅಟತಾಳ).

ಶ್ರೀಹರಿ ಸ್ಮರಣಿಯ ಮಾಡೋ ಪ್ರಾಣಿ ॥ ಶ್ರೀಹರಿ ॥ ಸ್ಮರಣಿಯ ಮಾಡೊ ಪ್ರಾಣಿ । ಕುಹಕರ ಸಂಗಕೆ ಬ್ಯಾಡೋ ಪ್ರಾಣಿ ॥ ಪಲ್ಲ ॥ ಉರಿಹಸ್ತ

ವರ ಕೊಟ್ಟು ಹರನು ಬಳಲಿದನಾಗ ॥ ತ್ವರದಿಂದವನ ಪೊರೆದ ಸುರನ ಸಂಹರಿಸೀದ । ಶ್ರೀಹರಿ ॥ ೧ ॥ ದಿತಿಜರ ಬಾಧಿಗೆ । ಶತಮುಖ ಪ್ರಾರ್ಥಿಸಲ ಮೃತವ ಕರದು । ಅಹಿತರನ್ನು ವಂಚೀಸಿದ ॥ ೨ ॥ ತರುಳ ಪ್ರಲ್ಹಾದ । ಕರ್ಬುರ ದೈತ್ಯನ ಬಾಧಿಗೆ ॥ ಹರಿಯೆಂದೊದರಲವನ ಪೊರದು ದೈತ್ಯನ ತರಿದ ॥ ೩ ॥ ಶಿಷ್ಟೇಷ್ಟಪ್ರದ ಪರಮೇಷ್ಟಿಜನಕನಲ್ಲಿ । ಅಷ್ಟ ಕರ್ತೃತ್ವವಿರಲು ॥ ಇಷ್ವಾಕ್ಯ ಬಳಲುವಿ ॥ ೪ ॥ ಗುರು ಮಧ್ವಾಂತರ್ಗತ । ಗುರು ಪ್ರಾಣೇಶ ವಿಠಲಾ ॥ ಸುರಮುಖ್ಯರಳಿದು । ತನ್ನ ಶರಣಜನರ ಪೊರೆದಾ ॥ ೫ ॥ ಶ್ರೀಮಧ್ವೇಶಾರ್ಪಣಮಸ್ತು ॥

ಸುಪ್ತಿಪದ.

೭ ಪದ, ರಾಗ–ಕಾಂಬೋಧಿ (ಝಂಪೆತಾಳ).

ಪಂಚಶರ ಪಿತನೆ ಅಹಿಮಂಚದಲಿ ಮಲಗಿಹನೆ । ಪಂಚಾಸನಾದಿ ಸುರವಂದ್ಯಾ ॥ ಸುರವಂದ್ಯ ದುರಿತಾರಿ ಪಂಚಾಶ್ಯವದನಾ ಸಲಹೆಮ್ಮಾ ॥ ೧ ॥ ಅಂಬುಜಾಸನ ವಾಯು । ಶಂಭುಸುರಮುಖ ಪೂಜ್ಯ । ಅಂಬುಜಾನಾಭಾ ಅರ್ಕಾಭಾ ॥ ಅರ್ಕಾಭಯನ್ನ ಕುಟುಂಬ ಸಲಹುವದೋ ನರಸಿಂಹಾ ॥ ೨ ॥ ಘೋರ ದುರಿತಗಳ ಪರಿಹಾರ ಮಾಳ್ಪರ ಕಾಣೆ ನಾರಸಿಂಹನೆ ನಿನ್ನೈತಿರಿಕ್ತಾ ॥ ವ್ಯತಿರಿಕ್ತ, ಕಾರುಣ್ಯಸಿಂಧು ಸಂಸಾರಾಬ್ಧಿಯಿಂದಾ ಕಡೆಗೆತ್ತೂ ॥ ೩ ॥ ಕಲಿ ಕಲುಷದಿಂ ಮನಸು ಮಲಿನವಾಗಿದೆ ದೇವ । ಉಳಿವ ಬಗಿ ಕಾಣೇ ಕಲಕಾಲ ॥ ಕಲಕಾಲ ಕರುಣದಲಿ ಸಲಹುವದು ನೀನೇವೆ ಬಲ್ಲೀ ॥ ೪ ॥ ನೀನೊಲಿದು ಕೊಟ್ಟದ್ದು ಏನಾದರೂ ಇರಲಿ । ನಾನುರಾಗದಲಿ ಸವಿವಂಧಾ । ಸವಿವಂಧ ಮತಿ ಇತ್ತು ಗುರು ಪ್ರಾಣೇಶವಿಠಲಾ ಪೊರಿಯಮ್ಮಾ ॥ ೫ ॥

ಶ್ರೀ ಲಕ್ಷ್ಮೀದೇವಿ ಸ್ತೋತ್ರ.

೮ ಪದ, ರಾಗ–ಪೂರ್ವಿ (ಆದಿತಾಳ).

ದಯಮಾಡೆ ದಯಮಾಡೆ ॥ ಹಯಮುಖನಿಗೆ ಅತಿ ಪ್ರಿಯ ಕಮಲಾಲಯೆ ॥ ಪಲ್ಲ ॥ ಹೊಲಬುಗಾಣೆ ಭವಜಲಧಿಯೊಳಗೆ ತ್ವರ ॥ ಸಲಹು ನಿನ್ನ ಕರಜಲಜದಿ ಪಿಡಿದು ॥ ೧ ॥ ನಳಿನ ಭವಾದ್ಯರ ಸಲಹುವಿ ಈಪ್ಸಿತ ॥

ಫಲವಿತ್ತು ಕರುಣದಲೀ ಮಹಲಕುವಿಗಾ ॥ ೨ ॥ ಕ್ಷೋಣಿ ಭಣಗು ನಾನೋ ರ್ವನು ನಿನ್ನಯ । ಧ್ಯಾನವೆ ಪಾಲಿಸು ಮಾಣದೆ ಜವದಿಂ ॥ ೩ ॥ ಶರಣು ಪೊಕ್ಕವರ ಜರಿದರೆ ನಿನ್ನಯ ॥ ಬಿರಿದಿಗೆ ಬಾಹದೆ ಕೊರತಿಯು ಜಾನಕಿ ॥ ೪ ॥ ಜ್ಞಾನಗಮ್ಯ ಗುರು ಪ್ರಾಣೇಶವಿಠಲನ ॥ ಮಾನಿನಿಯನ್ನಯ ಹೀನತ ಎಣಿಸದೆ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೯. ಪದ, ರಾಗ–ಸುರಟಿ (ಅಟತಾಳ).

ಮಂಗಳಂ ಮಂಗಳಂ । ಜಯ । ಮಂಗಳ ಶ್ರೀ ಶ್ರೀನಿವಾಸನರ್ಧಾಂಗೀ ॥ ಪಲ್ಲ ॥ ಭೃಗುಕಾಲಿಲೊದಿಯಾಲು । ಅಗಲಿ ಬಂದಳು ಎಂಬೊ ॥ ಬಗ ತೋರಿ ಮೋಹಿಸಿ ಇಗಡ ಜನರನಾ ॥ ಮಂಗಳಂ ॥ ೧ ॥ ಪರನು ಧಾರ್ಮಿ ಕನಾದ । ವರನಾರಾಯಣ ಋಷಿ ॥ ಗೊರವಿತ್ತು ನಡೆತಂದೆ ಮೆರವ ಸನ್ನ ತಿಗೆ ॥ ೨ ॥ ಕೋಲಾಸುರನ ಕೊಂದು ಪಾಲಿಸಿ ಪುರವನ್ನು ॥ ಶೀಲೆ ಚಂದ್ರಾ ದೇವಿ ಆಳಿದ ಗೊಲಿದೇ ॥ ೩ ॥ ಆತ ತಕ್ಷಣದಲ್ಲಿ ಶ್ವೇತುರಾಯನ ಕೊಂದು ॥ ಮಾತು ಲಾಲಿಸಿ ಅವನ ಪಾತಕ ಕಳದೇ ॥ ೪ ॥ ಗುರು ಪ್ರಾಣೇಶಾವಿಠಲಾ ಇರುವ ನೀನಿದ್ದಲ್ಲೀ ॥ ಎರವಿಲ್ಲೀ ಮಾತಿಗೆ ಸುರರ ಸಮ್ಮತವೂ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

ಶ್ರೀ ವಾಯು ದೇವರ ಸ್ತುತಿ.

೧೦. ಪದ, ರಾಗ–ಕಾಂಬೋಧಿ (ಆದಿತಾಳ).

ಶ್ರೀ ಮದಾನಂದ ತೀರ್ಥರಂಬ । ಅರ್ಥಿಯ ಪೆಸರುಳ್ಳ । ಗುರುಮಧ್ವ ಮುನಿರಾಯಾ । ಎನಂಬೆ ನಾನಿನ್ನ ಕರುಣಕೆ ಎಣೆಗಾಣೆ ॥ ಪಲ್ಲ ॥ ಬ್ಯಾಸ ರದೆ ಸರ್ವರಲ್ಲಿ । ಶ್ವಾಸಜಪಗಳ ಮಾಡಿಗುಂ ॥ ಶ್ರೀಶಗರ್ಪಿಸುತ ಹರಿ । ದಾಸ ರನ್ನು ಪಾಲಿಸಿದೆ ॥ ೧ ॥ ಅಂದು ಹನುಮಂತನಾಗಿ । ಬಂದು ಸುಗ್ರೀವಗೆ ಗುರುಂ ॥ ಅಂದವಾದ ಪದವಿತ್ತಾ । ನಂದವನು ಬಡಿಸಿದೇ ಗುರುಂ ॥ ೨ ॥ ಕುಂತಿಯ ಕುಮಾರನಾಗಿ । ಹಂತ ಕೌರುವರನ ಕೊಂದಿ ಗುರುಂ ॥ ಅಂತು ಪುಣ್ಯವ ಶ್ರೀ । ಕಂತುಪಿತಗರ್ಪಿಸಿದಿಯೊ ॥ ೩ ॥ ಅದ್ವೈತರನ್ನು ಕಾದಿ ।

ಗೆದ್ದು ನಿನ್ನ ಭಕ್ತರಿಗೆ ಗುರು ಮಧ್ವಮುನಿರಾಯಾ ॥ ಶುದ್ಧ ತಾತ್ಪರ್ಯ ವಾಕ್ಯ । ಪದ್ಧತಿಯ ತಿಳಿಸಿದಿ ಗುರುಂ ॥ ೪ ॥ ಗುರು ಪ್ರಾಣೇಶಾವಿಠಲ । ವರನೆಂದು ಡಂಗುರವ ಗುರುಂ ॥ ಸಾರಿಸಿ ಸಜ್ಜನರನ್ನು । ಹರಿಲೋಕ ಸೇರಿಸಿದೀ ಗುರುಂ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೧. ಪದ, (ಏಕತಾಳ).

ಪವನಾ ಸಂಭೂತಾವಲಿದೂ, ತವಕಾದಿ ಕಾಯಾಬೇಕೂ । ಇವನಾರೋ ಎಂದೂದಾಸಿನಾ । ಮಾಡದಲೆಯನ್ನಾ ॥ ಪಲ್ಲ ॥ ಹರಿವೇಷಧರನೇ ನರ । ಹರಿ ಭಕುತರ ಪೊರಿಯುವದಕ್ಕೇ ॥ ಹರಿಯಂತೆ ಪದಗುವಿಯೋ । ನೀನೂ । ಹರಿದಾಸ ನಾನೂ ॥ ೧ ॥ ಕಪಿವಾಕಪಿಯಾಜ್ಞದಂತೇ । ಕಪಿಲನ್ನ ಪತ್ನಿಯನ್ನೂ ॥ ಕಪಿಗಳು ಹುಡುಕಿ ಮಿಡುಕಲು । ಕಾಯ್ದೇ ಆಗಾಲೂ ॥ ೨ ॥ ಅಜಸುತನ ಶಾಪದಿಂದ । ಅಜಗರನಾದ ಪನಪಾದ ॥ ರಜದೀ ಪೂನಿತನ ಮಾಡಿದನೇ । ಅಜ ಪದವಿಗೆ ಬಹನೇ ॥ ೩ ॥ ಕಲಿಯುಗದಿ ಕವಿಗಳಿಲ್ಲಾ । ಕಲಿಯಾ ಬಾಧೆಗೆ ಬಳಲೀ ॥ ಕಲಿವೈರಿ ಮುನಿ ಎಂದೆನಿಸಿದೇ । ಕಲಿಮಲವಾ ಕಳದೇ ॥ ೪ ॥ ಗುರು ಪ್ರಾಣೇಶಾವಿಠಲಾ । ಗುರುವರನೆಂಬೊ ಜ್ಞಾನಾ ॥ ಗುರು ಮಧ್ವರಾಯಾ ಕರುಣಿಸೋ । ಗುರು ಮತಿಯನು ಬಿಡಿಸೋ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

ಸರಸ್ವತಿದೇವಿ ಸ್ತುತಿ.

೧೨. ಪದ.

ವಾಣೀ ಬ್ರಹ್ಮನ ರಾಣಿ ಜಾಣೆ ಸು । ಶುಕವಾಣೀ ॥ ಪಲ್ಲ ॥ ಪ್ರೀಯಳೆ ಹರಿಯಾ । ನವ ವಿಧದಿ ಭಜಿಸುವಾ ॥ ಕವಿಗಳೊಳಿಡಬೇಕೂ । ನಿನ್ನನೆ ವಂದರಿಯಬೇಕೂ ॥ ೧ ॥ ವೀಣಾ ಪಾಣಿಯೆ ಪಿತನಾ । ಧ್ಯಾನಾದೊಳಿರಿಸೆನ್ನ ॥ ಹೀನಾ ವೃಷಿಕಗಳನ । ನಾಸೊಲ್ಲೆನನುಗಾಲಾ ॥ ೨ ॥ ಗುರು ಪ್ರಾಣೇಶಾವಿಠ್ಠಲಾ । ತ್ವರಿತಾ ತಾನೂಲಿವಂತೆ ॥ ವರಮತಿಯ ನಿತ್ತೆಮ್ಮ । ಪೊರಿಯಲಿ ಬೇಕಮ್ಮ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

ರುದ್ರ ದೇವರ ಸ್ತುತಿ.

೧೩. ಪದ, (ಏಕತಾಳ).

ಮಹದೇವ, ಮಹದೇವ । ಕಾಯೋ ಮಹದೇವ ಯನ್ನ ನೀ ನೋಯುಗೊಡದೆ ತ್ವರ । ಪಾವನ ಮಾಡೀ ॥ ಪಲ್ಲ ॥ ಅಸುರರಕ್ಕಸಗೆ ವಶವಾಗೆ ವನನು ॥ ಬಿಸಿಜಾಕ್ಷಗೆ ಒಪ್ಪಿಸಿ ಕೊಲಿಸಿದನೇ ॥ ೧ ॥ ನಂಜುಂಡರಗಿಸಿ । ದಂಜನೆ ಕುವರ ಪ್ರ ॥ ಭಂಜನಸುತನಾನಂಜುವೆನೀಗಾ ॥ ೨ ॥ ಸೂಸುವ ಭವಶರಧೀಸದೆ ಗುರು ಪ್ರಾ । ಣೇಶವಿಠ್ಠಲನ ದಾಸ ಮಾಣುಗುವೆ ॥ ೩ ॥ ಶ್ರೀಮಧ್ವೇಶಾರ್ಪಣಮಸ್ತು ॥

ಶ್ರೀ ರಾಘವೇಂದ್ರ ಸ್ವಾಮಿಗಳವರ ಸ್ತೋತ್ರ.

೧೪. ಪದ, ರಾಗ–ಕೇದಾರಗೌಳ (ಅಟತಾಳ).

ತಂಗೀ ನೀ ಕೇಳಿದ್ಯಾ ರಾಘವೇಂದ್ರಾ । ಘಂಗಳ ಕಳದು ಸುಖಂಗಳ ಕೊಡುವದು । ತಂಗಿ ನೀ ಕೇಳಿದ್ಯಾ ॥ ಪಲ್ಲ ॥ ಶ್ರೀ ಪೂರ್ಣ ಬೋಧರ ಮತಾಪಯೊಬ್ಧಿಗೆ ಚಂದ್ರ ॥ ತಾಪಸೋತ್ತುಮರ ದಿವ್ಯಾಪಾರ ಮಹಿಮೆಯು ॥ ೧ ॥ ಅಂಗಹೀನರಿಗೆ ದಿವ್ಯಾಂಗ ಕೊಟ್ಟರೆಂದು ॥ ಸಂಗೀತಮುಖದಿ ಜನಂಗಳು ಪಾಡುವದು ॥ ೨ ॥ ಕಿವಿ ಇಲ್ಲದವರಿಗೆ ತವಕಾದಿ ಕೊಟ್ಟರೆಂದು ॥ ಸುವಿವೇಕ ಮನದಿಂದ । ಕವಿಜನ ಪಾಡುವದು ॥ ೩ ॥ ವಂಧ್ಯಾಸ್ತ್ರೀಯರು ಬಂದು ನಿಂದು ಆರಾಧಿಸೆ ॥ ಸಂದೇಹವಿಲ್ಲ ಬಹು ಮಂದಿ ಮಕ್ಕಳ ಕೊಟ್ಟ ॥ ೪ ॥ ಗುರು ಪ್ರಾಣೇಶಾವಿಠಲ ಸರುವ ಕಾಮಿತಾರ್ಥವ ॥ ಗುರು ರಾಘವೇಂದ್ರರಲ್ಲಿ ನಿರುತದಿ ಕೊಡಿಸುವ ॥ ೫ ॥ ಶ್ರೀ ಗುರು ಮಧ್ವೇಶಾರ್ಪಣಮಸ್ತು ॥

೧೫. ಪದ, ರಾಗ–ಧನಾಶ್ರಿ (ಅಟತಾಳ).

ತಪ್ಪುಗಳೆಣಿಸಾದೆನ್ನಪ್ಪ ಕಾಯಲಿಬೇಕು । ಸರ್ಪಶಯನನ ದೂತಾ ॥ ಇಪ್ಪತ್ತುವಂದು ಕುಭಾಷ್ಯ ಮುರಿದ । ರಾಮ । ತಪ್ರವರ್ತಕ ರಾಘವೇಂದ್ರ ಮುನಿಪ ಮಹಾ ॥ ಪಲ್ಲ ॥ ಪ್ರತಿ ವರುಷಕೆ ಬಂದು ನುತಿಸಿ ಪೋಗು ಎಂದು । ನತ ಸ್ವಪ್ನದಲಿ ನೀ ಬಂದೂ ॥ ಹಿತದಿಂದ ಪೇಳಲು ರತನಾಗಿ ಧನದಿ ಮ । ರತು ಬಿಟ್ಟೆ ನಿಮ್ಮನು ಯತಿಕುಲೋತ್ತುಮ ಇಂಥಾ ॥ ೧ ॥ ಸ್ನಾನಸಂಧ್ಯಾನ ಸುಜ

ವತಪ ವ್ರತಹೋಮ । ಮೌನಮಾರ್ಗಗಳರಿಯೇ ॥ ಜ್ಞಾನಿಗಳಾನುಸಂಧಾನಪೂರ್ವಕಪೂಜೆ । ಯಾನು ಮಾಡದೆ ದುಷ್ಟಮಾನವರೊಳಗಿದ್ದೆ ॥ ೨ ॥ ಏನು ಜನ್ಮದಿ ಬಂದಾ ದೋಷವ ಕಳದು ವಿ । ಶೇಷ ಸುಖವ ಕೊಡುವಾ ॥ ಈ ಸುವಾರ್ತೆಯ ಕೇಳಿ ಮೊರೆಹೊಕ್ಕೆ ಗುರು ಪ್ರಾ । ಣೇಶ ವಿಠಲನ ದೂತಾ । ಮತ್ಪ್ರೀತಾ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

ಶ್ರೀ ಸತ್ಯ ಪರಾಯಣ ಸ್ವಾಮಿಗಳ ಸ್ತುತಿ.

೧೬ ಪದ, ರಾಗ–ಕಲ್ಯಾಣಿ (ರೂಪಕತಾಳ).

ಕಂಗಳು ದಣಿಯ ನೋಡೆಲ ಮನವೆ । ಮಂಗಳಾಂಗ ಸತ್ಯಪರಾಯಣ ಗುರುಗಳ ॥ ಪಲ್ಲ ॥ ಹಿಂದಿನ ಜನುಮದಿಂದ । ಬಂದ ಪಾಪಂಗಳ ॥ ಇಂದು ತಮ್ಮ ದರುಶನ । ದಿಂದ ಕಳದಾ ॥ ಕಂ ॥ ೧ ॥ ನಂದತೀರ್ಥ ಶಾಸ್ತ್ರ । ಸಿಂಧುವಿಗೆ ಪೂರ್ಣ ಚಂದ್ರಾ । ನಂದದಲೊಪ್ಪುವ ಗುಣ । ಸಾಂದ್ರರ ಪದಂಗಳ ॥ ೨ ॥ ವರ ಸೀತಾರಾಮ ಪದ । ಸರಸಿಜಕೆ ಮಧುಪಾ ॥ ಗುರು ಪ್ರಾಣೇಶ ವಿಠಲಾ । ನಿರಸಿದ ಹೃದಯದಿ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

ಶ್ರೀ ಪ್ರಾಣೇಶ ದಾಸಾರ್ಯರ ಸ್ತೋತ್ರ.

೧೭. ಪದ, ರಾಗ–ಕಲ್ಯಾಣಿ (ಝಂಪೆತಾಳ).

ತೆರಳಿದರು ಪರಮ ತೋಷದಲಿ ಹರಿಪುರಕೇ ॥ ಹರಿ ಪ್ರೀಯ್ಯರಾದ ಪ್ರಾಣೇಶದಾಸರು ತ್ವರದಿ ॥ ಪಲ್ಲ ॥ ನಿರುತದಲಿ ಹರಿಪೂಜೆ ಮರಿಯದಲೆ ಮಾಡಿ ಬಲು । ಸ್ಥಿರಬುದ್ಧಿಪೂರ್ವಕದಲೀ ಗುರುಗಳೊಳು ಸರ್ವಜ್ಞ ರಾಯರಿಂದಧಿಕ । ಮತ್ತಿರಲುಂಟೆ ಎಂದು ತಿಳಿಹೀ ॥ ದುರುಳ ಜನರನುಸರಿಸದಲೆ ಕವಿಗಳೊಡನಾಡಿ । ಚರಿಸಿ ದೇಶಗಳಲ್ಲಿ ಮೆರದು ಖ್ಯಾತಿಯ ಪಡದು ॥ ೧ ॥ ಭಾಗವತ ಶ್ರೇಷ್ಠ ಜಗನ್ನಾಥ ದಾಸಾಖ್ಯರಡಿ । ಜಾಗುಮಾಡದಲರ್ಚಿಸೀ । ಭೋಗಿವರಶಯನ ಪ್ರಾಣೇಶವಿಠಲಾಂಕಿತವ । ಆ ಗುರುಗಳಿಂದ ಕೊಂಡೂ ॥ ರಾಗದ್ವೇಷಗಳೆಂಬ ಅರಿಗಳನು ಸಂಹರಿಸಿ । ರಾಗದಲಿ ಹರಿಕಥನ ಕವನರೂಪದಿ ಪೇಳಿ ॥ ೨ ॥ ಪ್ರಾಣಮತವನುಸರಿಸಿ ಆಚರಣೆಯನು ಮಾಡಿ । ಪ್ರಾಣ

ಗಳಿಗೇ ತಿಳಿಸದೇ । ಕ್ಷೋಣಿಯೊಳಗಿನ್ನು ಇರಸಾಕೆಂದು ಆ ಚಿತ್ರಭಾನು ಆಶ್ವಿಜ ಶುದ್ಧ ಸಪ್ತಮಿಯಲೀ ॥ ಜ್ಞಾನಪೂರ್ವಕದಿಲಯ ಚಿಂತನಿಯ ಮಾಡಿ ಗುರು । ಪ್ರಾಣೇಶವಿಠಲನಿದ್ದಾ ಪುರಕ ಜವದಿಂದ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

(ಉಪದೇಶಪರ ಪದ.)

೧೮. ಪದ, ರಾಗ–ಶಂಕರಾಭರಣ (ಆದಿತಾಳ).

ಯಾ ಯಾ ವರವ ನೀಡಿ ಶ್ರೀ । ಮಾಯಾ ರಮಣನ ಭಕುತರಿಗೇ ॥ ಪಲ್ಲ ॥ ಅರುಣೋದ ಕಾಲದಲೆದ್ದು ಶ್ರೀ । ಹರಿಸ್ಮರಣಿ, ಮಾಡುತಲಿದ್ದು ॥ ಕರಚರಣಾದ್ಯವಯವ ಶುದ್ಧಿ । ವಿರಚಿಸಿ ನಿರ್ಮಲಮನದಿ ॥ ೧ ॥ ಆದ್ಯಂತ ಗುರುವಾದ । ಮಧ್ವರಾಯರ ಮತವ ॥ ಪೊದ್ದಿದ ಭಗವದ್ದಾಸರು ಬಂದರೆ । ಇದ್ದಿಲ್ಲವು ಎಂದೆನಬ್ಯಾಡೀ ॥ ೨ ॥ ಘನಮಹಿಮ ನಾರಾಯಣನು ಇವ । ರನು ಕರತಂದಿಹನೆಂದರಿದೂ ॥ ಮನದಲ್ಲಿ ಯೋಚಿಸಿ । ಸನುಮಾನವನು ಮಾಡುತಲಿ ॥ ೩ ॥ ಯಾಚನೆ ಮಾಡುವರೆಲ್ಲಾ ಬಲು । ನಾಚಿಕೆ ಉಳ್ಳವರೆಂದು ॥ ಖೇಚರವಾಹನ ಪ್ರಿಯರು ಶು । ದ್ಧಾಚರಣೆಯವರೆಂದು ॥ ೪ ॥ ನರರಂತೆ ಇವರಲ್ಲಾ । ಗುರು ಪ್ರಾಣೇಶವಿಠ್ಠಲನಂಘ್ರಿ ॥ ಸರಸೀಜ ಧೇನಿಸುತಾ ಯಂ । ಮ್ಮರಸುತ ಬಂದಿಹರೆಂದೂ ॥ ೫ ॥ ಶ್ರೀ ಗುರು ಮಧ್ವೇಶ ಕೃಷ್ಣಾರ್ಪಣಮಸ್ತು ॥

ಸದ್ಯಕ್ಕೆ ಉಪಲಬ್ಧವಾಗಿರುವ
ಶ್ರೀಗುರುಪ್ರಾಣೇಶ ವಿಠಲರ ಕೀರ್ತನಗಳು ಸಂಪೂರ್ಣವಾದವು.

॥ ಶ್ರೀ ಗುರು ಮಧ್ವೇಶಾರ್ಪಣಮಸ್ತು ॥

*

ಹರಿ: ಓಂ

ಶ್ರೀಪ್ರಾಣೇಶ ದಾಸಾರ್ಯರ ದೌಹಿತ್ರರು,

ಶ್ರೀಗುರುಪ್ರಾಣೇಶ ವಿಠ್ಠಲರ ಪರಮ ಪ್ರಿಯ ಶಿಷ್ಯರೂ

ಅಪರೋಕ್ಷಿಗಳೂ ಆದ ರಾಮದಾಸರು ರಚಿಸಿದ

ಸದ್ಯ ಉಪಲಬ್ಧವಾಗಿರುವ

ಶ್ರೀಶ ಪ್ರಾಣೇಶ ವಿಠಲರ ಕೀರ್ತನಗಳು.

೧. ಪದ, ರಾಗ–ಪೂರ್ವಿ (ಆದಿತಾಳ).

ದಯ ಮಾಡೋ, ದಯ ಮಾಡೋ । ಪಯಸಾಗರದೊಡೆಯನೆ ಶ್ರೀ ಕೃಷ್ಣಾ ॥ ಪಲ್ಲ ॥ ಬನ್ನಬಡಿಸುವರ್ಭಕನ ದುರಿತವ ॥ ಘನ್ನಮಹಿಮನೀ ಜವದಿಂತರಿದು ॥ ೧ ॥ ನೀ ಪೊರಿಯದೆ ಜರಿದರೆ ಕಾಯ್ವರನಾ ॥ ಈ ಪೊಡವಿಯೊಳೆಲ್ಲೆಲ್ಲೀ ಕಾಣೇ ॥ ೨ ॥ ಶೇಷಗಿರಿ ನಿಲಯ ಬನ್ನವ ಲಾಲಿಸೋ ॥ ಶ್ರೀಶ ಪ್ರಾಣೇಶ ವಿಠಲ ದಯಾಳೋ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೨. ಪದ, (ತ್ರಿವಿಡಿತಾಳ).

ನೋಡಿ ನಾನು ಧನ್ಯನಾದೆನು ಅನಂತಶಯನನ । ನೋಡಿ ನಾನು ಧನ್ಯನಾದೆನು ॥ ನೋಡಿ ನಾನು ಧನ್ಯನಾದೆ । ರೂಢಿಯೊಳಗೆ ಮರುತ ಮಂದಿರ । ರೂಢ ಬೆಳಗಾವಿಯೊಳು ನಿಂದು ಈಡು ಇಲ್ಲದ ಮೆರವ ದೇವನ ॥ ಅನುಪಲ್ಲ ॥ ಮೂಲರೂಪನು, ವೈಕುಂಠ ಬಿಟ್ಟು । ಪಾಲಸಾಗರಶಾಯಿ ಶ್ರೀ

ಲೋಲ ॥ ಕಾಲಕಾಲದಿ ಭಕ್ತರ ಮೌಳಿ । ಪೊರಿಯಬೇಕೆಂದು ನಿಂದನ ॥ ೧ ॥ ಸಂತಾನ ಸಂಪತ್ತು ಜ್ಞಾನ ಸುಬುದ್ಧಿಯ । ನಂತಶಯನ । ಇವರಿಗಾ ॥ ನಂತ ಸುಖವನೀವೆನೆಂದು । ಸ್ವಾಂತದೊಳಗ ಬಂದು ನಿಂದನ ॥ ೨ ॥ ಶ್ರೀಶ ಪ್ರಾಣೇಶ ವಿಠಲರೇಯ । ಶ್ರೀ ಸಹಿತವಾಸವಾಗಿಲ್ಲಿ ॥ ಭೂಸುರೋತ್ತಮ ಕಟ್ಟಿಯವರನ್ನ ಪೋಷಿಸಬೇಕೆಂದು ನಿಂದನ ॥ ೩ ॥ ಶ್ರೀ ಮಧ್ವೇಶಾರ್ಪಣ ಮಸ್ತು ॥

೩. ಪದ, (ಏಕತಾಳ).

ನಾರಾಯಣ ಗೋವಿಂದ । ಹರಿ । ನಾರಾಯಣ ಗೋವಿಂದ ॥ ಪಾರಾ ಶರ ಸುತನಂದ । ಹರಿನಾರಾಯಣ ಗೋವಿಂದ ॥ ಪಲ್ಲ ॥ ವೇದವ ಕದ್ದೊಯ್ಯಲು ಆತಮನಾ । ಬಾಧಿಸಿ ನಿಗಮವತಂದ ॥ ೧ ॥ ದಿವಿಜರು ಚ್ಯುತ ಬಲರಾಗಿರಲ ಮೃತವ । ದಿವಿಜರಿ ಗುಣಸಿದನಂದಾ ॥ ೨ ॥ ಖಳನು ಭೂಮಿಯಾ ಕದ್ದೊಯ್ಯಲು ತಾ । ಪೊಳವ ಕೋರಿಯಲಿ ತಂದಾ ॥ ೩ ॥ ತರುಳನ ಪರಿ ಪರಿ ಬಾಧಿಸುತಿರಲಾ ॥ ದುರುಳ ದೈತ್ಯನ ಕೊಂದ ॥ ೪ ॥ ಬಲಿಯುವರಾಧವ ನೊಂದೆಣಿಸದೆ ತಾ ॥ ವಲಿದು ಬಾಗಿಲಲಿನಿಂದಾ ॥ ೫ ॥ ಕ್ಷತ್ರಿಯ ಬಲವನ್ನೆಲ್ಲ ಸವರಿನಿ । ಕ್ಷತ್ರರ ಮಾಡಿದನಂದಾ ॥ ೬ ॥ ವರಮುನಿ ಶಾಪದಿ ಶಿಲೆಯಾಗಿರಲು ॥ ದ್ಧರಿಸಿದ ಪರಮಾನಂದಾ ॥ ೭ ॥ ಮಡದಿ ಗೋಪಿಯರ । ಒಡನಾಡಿದ ॥ ಪಾಲ್ಗಡಲಶಯನ ಮುಕ್ಕುಂದಾ ॥ ೮ ॥ ತ್ರಿಪುರದ ಸ್ತ್ರೀಯರ ವ್ರತಗೆಡಸಿದ ವಟು ॥ ವಪು ಮೃಡಮುಖ ಸುರವಂದ್ಯಾ ॥ ೯ ॥ ಪುರುಷೋತ್ತಮಯುವನರ ಸಂಹರಿಸೀ ॥ ತುರಗವನೇರಿನಿಂದಾ ॥ ೧೦ ॥ ಶ್ರೀಶ ಪ್ರಾಣೇಶ ವಿಠಲ ಈ ಸರ್ವರ ॥ ಪೋಷಕ ನಾನಹುದೆಂದಾ ॥ ೧೧ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೪. ಪದ, ರಾಗ–ವರಾಳಿ (ಆದಿತಾಳ).

ಪಾಲಿಸಯ್ಯಾ ಶ್ರೀ । ಪ್ರಾಣರಾಯಾ । ಪಾಲಿಸಯ್ಯಾ ॥ ಪಾಲಿಸಯ್ಯ ಶ್ರೀಲೋಲನ ಭೃತ್ಯನೆ । ವಾಲಯದಲಿ, ಮಹದುರಿತವ ತರಿದು ॥ ಪಲ್ಲ ॥ ಶರಣು ಪೊಕ್ಕವರ ಸಲಹುವನೆಂದು ॥ ವರವೇದಂಗಳು ಸಾರುತಲಿಹವೊ

॥ ೧ ॥ ಶಿಶುವಿನ ತಪ್ಪೆಣಿಸದೆ । ಆ ಜನನಿಯು । ಬಿಸುಟದೆ ತ್ವರದಿಂ । ಕರುಣ ಮಾಳ್ಪವೋ । ಲ್ ॥ ೨ ॥ ಶ್ರೀಶ ಪ್ರಾಣೇಶ ವಿಠಲನ ದಾನಾಗ್ರಣಿ । ನೀ ಸದಾ ಕರುಣಿಸು ವೇಕ್ಷಮಾಡದೇ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೫. ಪದ, ರಾಗ–ಸೌರಾಷ್ಟ್ರ (ಆದಿತಾಳ).

ಸಂತಿಯು ಕೆಲವುರವಾಸಾ । ಭಾರತಿ ಕಾಂತನು ಶ್ರೀ । ಹರಿದಾಸಾ ॥ ಸಂತತ ಸೇವಿಪರಘ ಓಡಿಸಿ । ನಿಶ್ಚಿಂತರಮಾಡಿ ಪೊರೆವ ದಯಾಳೋ ॥ ಪಲ್ಲ ॥ ದಾಶರಥಿಯ ಪದಕೆರಗೀ । ನಿಂದು । ಲೇಸಾಗಿ ತುತಿಸುವಯೋಗೀ ॥ ಸಾಸಿರ ನಾಮನ ರಾಣಿಯು ಕಂಡು । ತೋಷದಿ ಸ್ವಾಮಿಗೆ ವಾರ್ತೆಯ ಪೇಳಿದ ॥ ೧ ॥ ಕುಂತಿ ಕುಮಾರಕ ನೆನಸೀ । ಮಹ । ಹಂತ ಕೌರುವರ ನೊರಸೀ ॥ ಕಾಂತಿಗೆ ಸೌಗಂಧಿಕ ಪುಷ್ಪವ ಮುಡಿಸಿ । ಶ್ರೀಕಾಂತನ ಪ್ರಿಯ ಭೂಭಾರವ ನಿಳುಹಿದ ॥ ೨ ॥ ಆನಂದ ತೀರಥರಾಗಿ । ವರ । ಮಾನಂದದಿ । ಕುಮತವ ನೀಗೀ ॥ ನಂದನಸುತ ಶ್ರೀಶಾ ಪ್ರಾಣೇಶ ವಿಠ್ಠಲಾ ನಂದನೆಪರನೆಂದು ಡಂಗುರ ಸಾರಿದ ॥ ೩ ॥

೬. ಪದ, ರಾಗ–ವರಾಳಿ (ಆದಿತಾಳ).

ಬಾಗಿಸೋಪಿಲಿ ವಾಸವಾಗಿಹ ಯೋಗಿ ಪ್ರಾಣರಾಯಾ ॥ ಜಾಗು ಮಾಡದೆ ಭಕ್ತರ ದುರಿತವ ನೀಗಿ ಸಲಹಯ್ಯಾ ॥ ಪಲ್ಲ ॥ ಕಪಿಗಳೆಲ್ಲಾ ಸುಗ್ರೀವನ ಭಯದಿಂ ತಪಿಸುತಲಿರೆ ಅವರಾ ॥ ಲಪನ ಕಾಣುತಲೆ ಅಭಯವನಿತ್ತು । ನೀ । ಪೊರದೆ ಕಪಿವರಾ ॥ ೧ ॥ ಹಿಂದೆ ಭೂಸುರನು ಚಿಂತಿಸುತಿರಲಾ । ನಂದದಿಂದ ಅವನಾ ॥ ಬಂಧನ ಬಿಡಸಿದ । ಬಕನನು ಕೊಂದು । ತಂದೇ ಶ್ರೀ ಪವನಾ ॥ ೨ ॥ ಈಶನ ಸಾಸೆಂತೆಂಬುವ ಖಳರಾ । ನೋಸಿನಲ್ಲಿ ಮುರಿದೇ ॥ ಶ್ರೀಶ ಪ್ರಾಣೇಶ ವಿಠ್ಠಲರಾಯನ । ಪರದೈವೆಂದೊರದೇ ॥ ೩ ॥

೭. ಪದ, ರಾಗ–ಮಾರವಿ (ಅಟತಾಳ).

ಪ್ರಾಣರಾಯ ನೀನಲ್ಲದೆ ಮತ್ತನ್ಯ ಪ್ರಾಣರುಜಗದೊಳುಂಟೇ ॥ ದೀನ ರಕ್ಷಕನೆಂಬ ಬಿರುದಿಗೆ । ಪ್ರೇಮದಿನೀನೇ ರಕ್ಷಿಸಬೇಕೈ । ಪರಾಕೈ ॥ ಪಲ್ಲ ॥

ಹಿಂದೆ ಭಕತರನು ಪೊರೆದ ನಂಬದು ಕೇಳಿ । ಬಂದು ವಂದಿಸುವೆ ನಿನ್ನ ॥ ಕಂದನ ಅಪರಾಧ ಸೀನೆಣಿಸದೆ । ಭವಬಂಧನ ಪರಿಹರಿನೋ । ಉದ್ಧರಿಸೋ ॥ ೧ ॥ ವಂದಿಪ ಶರಣರ ಪೊರಿಯು ಬೇಕೆನುತಲಿ। ಬಂದು ಬಾಗಿಸೋಪಿಲಿ ॥ ಭಂದದಿ ವನದೊಳು । ನಿಂದಾದಲತ । ಗೋವಿಂದ ರಾಯುಗವಲಿದೀ । ನೀನ ಲಿದೀ ॥ ೨ ॥ ಈ ಸುಮುಹಿಮೆಯುನು ತುತಿಸಲು । ಖಗ । ಪಾರ್ವತೀ ಶರಿಗಸ ದಳವೈ ॥ ಶ್ರೀಶ ಪ್ರಾಣೇಶ ವಿಠಲನ ದಾಸಾಗ್ರಣಿ । ಈ ಸನುಯುದಿ । ಸಾಲಿಸೋ । ಲಾಲಿಸೋ ॥ ೩ ॥

೮. ಪದ, ರಾಗ–ಕೇದಾರಗೌಳ (ಆದಿತಾಳ).

ಗೇಣರಾಯ ನಿನ್ನಾ ಮಹಿಮಿಯು ಸ್ಥಾಣು ಅರಿಯ ಮುನ್ನಾ । ದೀನರಕ್ಷಕನೆಂಬೊ ಬಿರಿದು ಕೇಳಿತವ । ಧ್ಯಾನವ ಕೊಡು ಎಂದೇ । ತಂದೇ ॥ ಪಲ್ಲ ॥ ರವಿಜನ ಭಯುದಿಂಬಾ । ಕಪಿಗಳು ಲಯುಚಿಂತೆಗಳಿಂದಾ ॥ ಪವನ ಕುವರ ಕಂಡಾಕ್ಷಣ ಈ ಭಯ । ತವಕನಟ್ಟಿ ಪೊರದೀ ಮೆರದೀ ॥ ೧ ॥ ಭೂಸೂರ ಚಿಂತಿಸೆ ಬರಿದೀ । ಈ । ಮೊರಿಕೇಳಿ ಆ ಶಿಶುವಿನ ಉಳುಹಿದೀ ॥ ಘಾಸಿಗೊಳಿಸುವ । ಖಳ ಬಕನೊರಸಿ । ಭಾಸುರ ಕೀರ್ತಿಯು ಪೊರದಿ । ಇಷ್ಟಾರ್ಥವ ಕರದೀ ॥ ೨ ॥ ಧರಿಯೊಳು ಚಿಲಕರಾಗಿ ಗ್ರಾಮದೊಳು ಮೆರೆಯುವ ಯತಿಯೋಗೀ ॥ ಗುರು ಶ್ರೀಶ ಪ್ರಾಣೇಶ ವಿಠ್ಠಲನ ಚರಣ । ಪೊಕ್ಕವರ ಸಲಹುವ ಕರುಣೀ ॥ ಯೇಧಣಿ ॥ ೩ ॥

೯. ಪದ, ರಾಗ–ಭೈರವಿ (ಆದಿತಾಳ).

ರಾಯರ ನೋಡಿರೈ ಶ್ರೀ । ಗುರುರಾಯರ ಪಾಡಿರೈ ॥ ಶ್ರೀಯರಸನ ಪ್ರಿಯ ಕಂಜಾಪ್ತಾ ಭಸುಕಾಯಾ । ಕವಿಜನಗೇಯಾ ॥ ಪಲ್ಲ ॥ ಶ್ರೀ ಸುಧೀಂದ್ರ ಕರಕಮಲದಲಿ ಸಂಭೂತಾ । ಬಹು ವಿಖ್ಯಾತಾ । ಶ್ರೀಶನ ಗುಣಗಳ ತುತಿಸುವ ಯತಿ ಶಿರೊಮಣಿಯೊ । ಚಿಂತಾಮಣಿಯೊ । ಈ ಸುಜನರ ಮನಸಿಗೆ ತೋರುವದಹಲ್ಲಾದಾ । ಶಿರಿಪ್ರಲ್ಹಾದಾ ॥ ೧ ॥ ದಂಡಕ ಮಂಡಲ ಕಾಷಾಯವು ಸೂವಸನಾ । ವೇದವ್ಯಸನಾ । ಪುಂಡರೀಕ ಪದಭೃಂಗಾ ಮುನಿಕುಲೊತ್ತುಂಗಾ । ಕರುಣಾಪಾಂಗಾ ॥ ಮಂಡಲದೊಳು ಬಹುತೋಂಡರ

ಪರಿಪಾಲಕಾ । ವರ ಬಾಲ್ಹೀಕಾ ॥ ೨ ॥ ತುಂಗಾತೀರದಿ ಮಂತ್ರಾಲಯದೊಳ ಗಿರುವೊ । ಕಲ್ಪತರುವೊ । ಗಂಗಾಜನಕ ವಿಹಂಗವಾಹನ ಇಲ್ಲಿಹನು । ನತ ಸುರಧೇನೂ ॥ ಮಂಗಳ ಮಹಿಮರ ದರುಶನ ಮಾತ್ರ ಘನಾಶಾ । ಶ್ರೀ ಗುರು ವ್ಯಾಸಾ ॥ ೩ ॥ ಪರಿಮಳ ವಿರಚಿಸಿ ಬುಧರಿಗೆ ಬೀರಿದಧೀರಾ । ಗುಣಗಂಭೀ ರಾ । ಪರಿಪರಿ ಚರಿತೆಯ ತೋರ್ದ । ಭೂದೇವರದೇವಾ । ದೇವಸ್ವಭಾವಾ ॥ ನರ ಇವರನ ಕ್ಷಣಬಿಡದಲೆ ಭಜಿಸಲು ಸುಖವೂ । (ಅಘವರಿಹರವೂ) ಅಹಿ ಕಾಮುಕವೂ ॥ ೪ ॥ ದುಷ್ಟ ಮತವ ಖಂಡಿಸಿ ಹರಿವರನೆಂದೊರದಾ । ಭೀಷ್ಟಿ ಯಗರದಾ । ಸೃಷ್ಟಿಯೊಳಗೆ ಶ್ರೀಶ ಪ್ರಾಣೇಶ ವಿಠಲನ ದಾಸಾ । ಮುನಿಕುಲೊ ತ್ತಂಸಾ ॥ ಎಷ್ಟು ಪೊಗಳಲಾಶಕ್ಯವು ಸದ್ಗುಣಸಾಂದ್ರಾ । ಶ್ರೀ ರಾಘವೆಂದ್ರಾ ॥ ೫ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೦. ಪದ, ರಾಗ–ಪೂರ್ವಿ (ಆದಿತಾಳ).

ಶ್ರಿ ರಾಘವೆಂದ್ರ ರಾಯಾ ಸೂರಿ ಪರಾಕೂ । ಪರಿಮಳ ವಿರಚಿಸಿದ ವನೆ ಪರಾಕು ॥ ಧರೆಯೊಳು ಮಂತ್ರಾಲಯ ನಿಲಯ ಪರಾಕು । ಗುರು ಸುಧೇಂದ್ರರ ಕುವರ ಪರಾಕೆಂದು । ಹರದೆರಾರುತಿಯಾ ಬೆಳಗಿರೆ ॥ ೧ ॥ ದಂಡಕ ಮಂಡುಲಧರ ಪರಾಕೂ । ಪಂಡಿತರೊಡಿಯ ವಿಕ್ರಮನೆ ಪರಾಕೂ ॥ ಚಂಡದುರ್ವಾದಿ ಮತಮುರಿದ ಪರಾಕು । ಗಂಡುಗಲೀಹರಿಯಾ, ಪರಾ ಕೆಂದು ಪುಂಡಲೀಕ ದಾರುತಿಯಾ ಬೆಳಗೀರೆ ॥ ೨ ॥ ಶ್ರೀಶ ಪ್ರಾಣೇಶ ವಿಠಲಾ ದೂತ ಪರಾಕೂ । ಶ್ರೀಶನ ಗುಣಗಳ ತುತಿಪ ಪರಾಕೂ ॥ ಆಶೇತು ಹೇಮಂತ ಮೆರವ ಪರಾಕು । ದೇಶಿಕ ಶ್ರೇಷ್ಠ ನಿರ್ದುಷ್ಟ ಪರಾಕೆಂದು ಸಾಸಿರ ಆರುತಿಯಾ ಬೆಳಗಿರೆ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೧. ಪದ, (ಏಕತಾಳ).

ದಾಸರ ಭಾಗ್ಯವಿದು । ಶ್ರೀ ಹರಿ । ದಾಸರ ಭಾಗ್ಯವಿದು ॥ ಪಲ್ಲ ॥ ತರುಳತನದಿ ಬಲು ಮಂದ ಬುದ್ಧಿಯುಲಿ । ತರುಳರಕರಕರೀ ಬಡಿಸುವನಾ ॥ ಕರವಪಿಡಿದು ಉದ್ಧರಿಸಿ ನಾಮಾಮೃತ । ಎರದು ದೇಶದೋಳ್ ಮೆರಸಿದಿ

ಎಲ್ಲಾ ॥ ೧ ॥ ಪದಸುಳಾದಿಗಳು ತಾಳಪ್ರಾಸದಿಂ । ಪದುಮನಾಭನ ಚರಿತೆಯನೂ ॥ ಮುದದಿಂದಲಿ ಕೊಂಡಾಡುತ ವದನದಿ । ಪದಪದಿಗೆ ಅಡಿಗೆರಗುವದೆಲ್ಲಾ ॥ ೨ ॥ ಯೇಸು ಜನ್ಮದಾ ಸುಕೃತೊದಗಿತೊ ಹರಿ । ದಾಸಾರ್ಯರು. ಇತ್ತರು ಪದವಾ ॥ ಶ್ರೀಶ ಪ್ರಾಣೇಶ ವಿಠ್ಠಲ ದಾಸಾರ್ಯರ । ದಾಸರ ದಾಸನು ಎನಿಸುವದೆಲ್ಲಾ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೨. ಪದ, ರಾಗ-ಕಾಂಬೋಧಿ (ಆದಿತಾಳ).

ದಾಸರಾಯರಾ ಚರಣ ಕಮಲ ಭಜಿಸೋ । ದುರ್ವಿಷಯವ ತ್ಯಜಿಸೋ । ಶ್ರೀಶಭಜಕ ಗುರು ಪ್ರಾಣೇಶ ದಾಸಾರ್ಯ್ರಾ । ಹರಿದಾಸಾವರ್ಯ್ರಾ ॥ ಪಲ್ಲಾ ॥ ಸದ್ವೈಷ್ಣವ ಅಧ್ಯಕ್ಷರೆಂದಿನಿಪರೊ । ಕರ್ಮಠರರೆನಿಪರೊ । ಮಧ್ವಮತ ಪ್ರವರ್ತಕರೆನಿಪರೊ । ಜ್ಞಾನಿಗಳೆನಿಪರೊ ॥ ಪದ್ಧತಿಪೂರ್ವಕ ಕವನವ ಪೇಳುವರೊ । ಹರಿಪರನೆಂಬುವರೊ ! ಶುದ್ಧಾತ್ಮರಿಗತಿ ಪ್ರಿಯರೆಂದೆನಿಸುವರೊ । ಸತ್ಕಥಾಲಾಪರೊ ॥ ೧ ॥ ಕಾಮಕ್ರೋಧ ಮದಮತ್ಸರವನು ಗೆಲಿದೂ । ತಾಮಸರನು ಹಳಿದೂ । ನೇಮದಿಂದಯಮ ನಿಯಮಗಳನು ವಹಿಸೀ । ಇಂದ್ರಿಯಗಳ ಜೈಸೀ । ತಾಮುದದಿಂದಲಿ ಹರಿಗುಣ ಕೀರ್ತನೆಯಾ । ಮಾಡುತ ನರ್ತನೆಯಾ ॥ ಪ್ರೇಮದಿಂದ ಮಾಡಿ ದೇಶದಲ್ಲಿ ಮೆರೆದಾ । ನಾಮ ಸುಧೆಯನ್ನೆರದಾ ॥ ೨ ॥ ಯೇಸು ಪೇಳಲಿ ಇವರ ಚರಿತೆಯನ್ನು । ಆಪಾರವು ಇನ್ನೂ । ಸೋಸಿ ನೋಡಲು ಎನಗೆ ವಶವಲ್ಲಾ । ಇದು ಪುಸಿಯು ಅಲ್ಲಾ ॥ ವಿಾಸಲ ಮನದಲಿ ತುತಿಸಲು ಸಂತಾಪಾ । ಪೋಪದುನಿರ್ಲೇಪಾ । ಶ್ರೀಶಾ ಪ್ರಾಣೇಶ ವಿಠ್ಠಲತಾಬಲ್ಲಾ । ವಲಿದೀಹನಲ್ಲಾ ॥ ೩ ॥ ಶ್ರೀ ಮಧ್ವೇಶಾರ್ಪಣಮಸ್ತು ॥

೧೩. ಪದ, ರಾಗ-ಕೇದಾರಗೌಳ (ಆದಿತಾಳ).

ಪೋಷಿಸೆನ್ನ ಜೀಯಾ । ಗುರು । ಪ್ರಾಣೇಶ ದಾಸರಾಯಾ ॥ ಶ್ರೀಶನ ಗುಣ ಸಂತೋಷದಿ ಪಾಡುವ । ದಾಸ ಕುಲಾಗ್ರಣಿಯೋ । ಎಣಿಯೆ ॥ ಪಲ್ಲ ॥ ಹರಿ ಸ್ಮರಣೆಯ ಮರೆದೂ । ಸರ್ವದ । ಪರರನ್ನಕೆ ಬೆರೆದೂ ॥ ದುರುಳ ಜನರ

ಸಹವಾಸವನ್ನು ಮಾಡಿ । ಬರಿದೆ ದಿನವ ಕಳದೇ ಉಳದೇ ॥ ೧ ॥ ಪವನ ಮತದೊಳಿಟ್ಟೂ । ಶ್ರೀಹರಿ । ಸ್ತವನನ್ನೆ ಕೊಟ್ಟೂ ॥ ಕವಿಗಳ ಮುಖದಿಂ ತತ್ವ ವಿಚಾರದಿ । ಕವಲ ಮ । ತಿಯ ಪಾಲಿಸೀ ಉದ್ಧರಿಸೀ ॥ ೨ ॥ ಯನ್ನ ಬಿನ್ನಿವ ವನ್ನು । ಕೇಳಿ । ಮನ್ನಿಸು ಸುರಧೇನೂ ॥ ಘನ್ನ ಶ್ರೀಶ ಪ್ರಾಣೇಶ ವಿಠಲನ ಧ್ಯಾನ । ವನ್ನು । ಮಾಳ್ಪ ಶಕ್ತಾವಿರಕ್ತಾ ॥ ೩ ॥ ಶ್ರೀ ಮಧ್ವೇಶಾರ್ಪಣ ಮಸ್ತು ॥

೧೪. ಪದ, ರಾಗ—ಕಾಂಬೋಧಿ (ಝಂಪೆತಾಳ).

ವಾಸುದೇವನ ಪುರಕೆ ತೆರಳಿದಾರು । ಶ್ರೀಶನಾ ಪ್ರೀಯ ಗುರು ಪ್ರಾಣೇಶ ದಾಸಾರ್ಯ ॥ ಪಲ್ಲ ॥ ಸ್ನಾನ ಊರ್ಧ್ವಪುಂಡ್ರಗಳ ವಿಧಿಯಿಂ ಧರಿಸೀಸಂ । ಧ್ಯಾನ ಗಾಯತ್ರಿ ಜಪವನ್ನು ಮಾಡೀ ॥ ಸಾನುರಾಗದಿ ಬಿಂಬ ಮೂರ್ತಿ ಧ್ಯಾನ ಮಾಡೀ ತತ್ವ । ಮಾನಿಗಳೊಳೊಮ್ಮೊಂದೊಮ್ಮೆ ಆನಂದ ದಿಂದಲೀ । ವಾಂ ॥ ೧ ॥ ಹರಿಯೆ ಸರ್ವೋತ್ತುಮಾ ತದ್ಪ್ರಾಣಿ ಶಿರಿಬೊಮ್ಮ । ಮರುತದೇವರೆ ಗುರುವು ತಾರತಮ್ಯಾ ॥ ವರಪಂಚಭೇದ ಜ್ಞಾನವನರಿತು । ಮನದಿ ಹರಿ । ಪುರದೊಳಿಹ । ಪರಮ ಭಕ್ತರ ಕಾಣಬೇಕೆನುತ ॥ ೨ ॥ ಮೋಕ್ಷರೌದ್ರೀ ಅಬ್ದಮಾಘದಶಾ ಪೂರ್ವಭಾದ್ರರಾ । ನಕ್ಷತ್ರ ಸೋಮ ವಾರಾದಿವ ದ್ವಿತಿಯ ಯಾಮದೀ ॥ ಲಕ್ಷಿ ಇಟ್ಟೂ ಲಯದ ಚಿಂತನೆಯ ಗೈಯುತಲಿ ಪಕ್ಷಿವಾಹನ ಶ್ರೀಶ ಪ್ರಾಣೇಶ ವಿಠಲೆನುತ ॥ ೩ ॥ ಶ್ರೀ ಮಧ್ವೇ ಶಾರ್ಪಣಮಸ್ತು ॥

हरी: ॐ

वादि विजय शीलायवरदाय वरार्थिनां ।
वदान्यजन सिंहाय वरदेंद्रायतेनमः ॥

ಶ್ರೀ ವರದೇಂದ್ರ ಸ್ವಾಮಿಗಳವರು
ಶ್ರೀಪ್ರಾಣೇಶ ದಾಸಾರ್ಯರಿಗೆ ಒಲಿದು
ಪುಣೆಯಿಂದ ಲಿಂಗಸೂಗೂರಿಗೆ (ದಯಪಾಲಿಸಿದ),
ವರದೇಶ ವಿಠಲ ವಿರಚಿತ

ಸ್ವಪ್ನ ವೃಂದಾವನಾಖ್ಯಾನ.

हरी: ॐ

॥ श्री लक्ष्मीवेंकटेशप्रसन्न : ॥
श्रीगुराजांतर्गत श्रीगुरुजगन्नाथविठलायनमः
॥ श्रीवरदेंद्रगुरुप्रसन्न : ॥

ಶ್ರೀ ಗುರು ವರದೇಂದ್ರ ಸ್ವಾಮಿಗಳವರ ಸ್ವಪ್ನ ವೃಂದಾವನ ಚರಿತ್ರೆ.

॥ ಶ್ರೀರಸ್ತು ॥ ವಾರ್ಧಿಕ (ಷಟ್ಪದಿ).

ಶಿರಿಬೊಮ್ಮ ಮರುತ ಶಿವ ಉರಗಪತಿ ಗಿರಿಜೇಶ । ಸುರಪಾಂಗ ಜಾತ ಮುಖ, ಸುರವೃಂದವಿನುತ ಪದ । ಶರಧನುರ್ಧಾರಕರ ಶಿರಿ ಜಾನಕೀಶ ಪದ, ಸರಸಿರುಹ ಕಾನಮಿಪೆನಾಂ ॥ ವರದೇಂದ್ರ ಗುರುವರರ ಸುರುಚಿರಾಗಮದ ಕಥೆ । ಬರೆವದಕೆ ನಿರ್ವಿಘ್ನ, ವರಸುಮಂಗಳಗಳನು । ಪರಿಪಾಲಿಸುವದೆಂದು, ಕರಮುಗಿದು ಯಾಚಿಸುವೆ ಹರುಷದಿಂ ಗುರುಹಿರಿಯರಾ ॥ ೧ ॥

ಭಾಮಿನಿಷಟ್ಪದಿ (ತ್ರಿಪುಡೆತಾಳ).

ರಾಘವೇಂದ್ರರ ಕರುಣ ಪಡದಿಹ । ಯೋಗಿವರದೇಂದ್ರಾಖ್ಯ ಗುರುಗಳು । ಜಾಗುಮಾಡದೆ ಬಂದ ರೊಮ್ಮಿಗೆ ಲಿಂಗಸೂಗುರ ಗ್ರಾಮದೀ ॥ ಭಾಗವತ

ರೋಳ್ ಶ್ರೇಷ್ಠರೆನಿಸುವ । ಯೋಗಪತಿ ಕರಣಿಕರ ಗೃಹದಲಿ । ಸಾಗಿ ಬರು
ತಿಹ ಸಂಭ್ರಮುವನಾನೆಂತು ಬಣ್ಣಿಪೆನೋ ॥ ೧ ॥ ॥ ೨ ॥

ಪದ, ರಾಗ–ರೇಗುಪ್ತಿ (ಆದಿತಾಳ).

ಬಂದರು ಗುರುವರರೂ ಚಂದದಿ ಶ್ರೀ ವರದೇಂದ್ರ ಮುನಿಪರೂ ॥ ಬಂದರು ॥ ಪಲ್ಲ ॥ ಕುಂದಣಮಯುವಾದಂದಣೇರಿ ದ್ವಿಜ । ವೃಂದ ಮಧ್ಯದೋಳ್ ಅಂದದಿ ಮೆರಿಯುತ ॥ ೧ ॥ ಭೇರಿ ವಾದ್ಯ ಶ್ರಿಂಗಾರದಿ ಮೆರೆಯುತ ॥ ಸೂರಿಗಳರಸರಪಾರ ಮಹಿಮರೂ ॥ ೨ ॥ ಧ್ವಜ ಪತಾಕೆಗಳು ಭಜಿಪ ಭಟರುದಿ ॥ ದಿಗ್ವಿಜಯಿಪಯತಿ ವರರಜನಿಪತಿಯುತೆರ ॥ ೩ ॥ ದಂಡಕ ಮಂಡುಲಕೊಂಡು ಕರದಿ ಭೂ ॥ ಮಂಡಲದೊಳು ಉದ್ದಂಡ ಪಂಡಿತರು ॥ ೪ ॥ ವರದೇಶ ವಿಠಲನ ಕರುಣದಿ ಧರೆಯೊಳು ॥ ಮೆರೆಯುವ ಹರಿಮತ ಶರಧಿ ಚಂದಿರರೂ ॥ ೫ ॥ ॥ ೭ ॥

ಶ್ರೀ ವರದೇಂದ್ರ ಸ್ವಾಮಿಗಳು ಲಿಂಗಸೂಗೂರಿಗೆ ದಿಗ್ವಿಜಯಮಾಡಿದಾಗ್ಯೆ, ಸ್ವಂತ ಶ್ರೀಪ್ರಾಣೇಶ ದಾಸಾರ್ಯರು, ಮಾಡಿದ ಸ್ತೋತ್ರವು ಇಲ್ಲಿ ಅಚ್ಚು ಹಾಕಿಸಲ್ಪಡುತ್ತದೆ.

ಪದ, ರಾಗ–ಭೈರವಿ (ಅಟತಾಳ).

ಹಿಂದಿನ ಸೂಕರ್ಮವೇ ಸು । ಬಂದೋದಗಿದವ್ರೊ, ವರ । ದೇಂದ್ರ ರಾಯಾ ಬಂದ ನಮ್ಮ ಮಂದಿರಕಿಂದೂ ॥ ಪಲ್ಲ ॥ ಮುತ್ತಿನ ಅಂದಣದೊಳು ಸತ್ತಿಗಿನೆರಳಿಲಿ ಪ್ರ। ಶಸ್ತವಾಗಿ ವೇದಶಾಸ್ತ್ರ ವತ್ತಿ ಓದೂವ ॥ ಉತ್ತುಮಬುಧರ ಕೂಡ ಭೃತ್ಯರ ಸಂಗಡ ಬಹು । ಹತ್ತೆಂಟು ಬಿರುದಾವಳಿ ಯುಕ್ತಬಂದರೂ ॥ ೧ ॥ ತಂಡತಂಡಕ್ಕೆ ಜನರು ಹಿಂಡುಗೂಡಿ ಫಲಗಳ । ಕೊಂಡು ಬಂದು ಮಾಡುವರು ದಂಡ ಪ್ರಣಾಮಾ ॥ ಪಂಡಿತಾಗ್ರಗಣ್ಯರು ಭೂಮಂಡಲದೊಳಾಗ ಶ್ರೀಯಾ । ಖಂಡಲನಂತೆ ತೋರ್ವಾ ಕಮಂಡಲಧರ ॥ ೨ ॥ ಶ್ರೀಕರ ಪ್ರಾಣೇಶ ವಿಠಲಾ । ನೇ ಕಾಂತದಿವಲಿಸುವಲ್ಲಿ• ಈ ಕುಂಭಿಣಿಯೊಳಗೀತಗೆ ಕಾಣೆನೀಡ ॥ ನೀ ಕಾಯಾಬೇಕೆಂದವರ ಶೋಕವ ಪರಿಹರಿಸಿ, । ಜೋಕೆ ಮಾಡುವ ನಿತ್ಯ ದೇಶಿಕ ಕುಲಪತೀ ॥ ೩ ॥

(ಆರ್ಯವೃತ್ತ.)

ಯತಿವರ ಗೃಹದಲಿ ಬರಲು ಮುದದಿ ಆರತಿಯನೆತ್ತಿ ಒಳಬರಮಾಡೀ॥ ಅತಿಹರುಷದಿ ಪೂಜಿಸಿ ಸಂಭ್ರಮದಲಿ । ತುತಿಸುವರೀವರಿಯಲಿ ನೋಡಿ ॥ ೧ ॥ ॥ ೮ ॥

ಪದ, ರಾಗ–ಬೆಹಾಗ (ರೂಪಕತಾಳ).

ಧನ್ಯವಾಯಿತೆನ್ನ ವಂಶವೂ । ಈ ದಿವಸದಲ್ಲಿ ಧನ್ಯವಾಯಿತೆನ್ನ ವಂಶವೂ ॥ ಪಲ್ಲ ॥ ಧನ್ನ್ಯವಾಯಿತೆನ್ನ ವಂಶಯಿನ್ನು ಭವದತಾಪವೆಲ್ಲಿ। ಚನ್ನ ಶ್ರೀ ಗುರು ವರರು ಬಂದು ಯನ್ನನುದ್ಧರಿಸಿದರಿಂದು ॥ ಅನುಪಲ್ಲ ॥ ಶಿರವು ಬಾಗಿತಿವರ ಪದಕೆ। ಕರಗಳಿವರ ಪೂಜಿಸಿದವು॥ ಸ್ಮರಣೆ ಮಾತ್ರದಿಂದ ದುರಿತ । ತರಿವ ಗುರುಗಳನ್ನು ನೋಡಿ ॥ ೧ ॥ ಸಕಲ ತೀರ್ಥಕ್ಷೇತ್ರ ಫಲವು । ನಿಖಿಳ ದಾನಧರ್ಮ ಫಲವು ॥ ಮುಕುತಿ ಸಾಧನಗಳು ಸದ್ವಿ । ರ ಕುತರಿದ್ದ ಎಡಿಯೊಳಿಹವು ॥ ೨ ॥ ಹರಿಯು ಶಿರಿಯು, ಮರುತ ಗಿರೀಶ । ಸುರರು ಯಿವರ ಹೃದಯದಲ್ಲಿ ॥ ಇರುವ ಕಾರಣ ವರ ಪೂಜೆ । ಹರಿಯ ಪೂಜೆ ಎನಿಸುತಿಹದು ॥ ೩ ॥ ಆವ ಪರಿಯಲಿ ವರಚರಣ । ಸೇವೆ ಮಾಡಿ ನಮಿಸಿದವನ ॥ ನೋವು ಕ್ಲೇಶವೆಲ್ಲ ತೊಲಗಿ । ದೇವದೇವನೊಲಿಮೆಯಹದು ॥ ೪ ॥ ದಾಸರಾದ ಜನರ ದೋಷ । ರಾಶಿಯನ್ನು ದಹಿಸಿ ಶ್ರೀವರ । ದೇಶ ವಿಠ್ಠಲನ್ನ ತೋರ್ವ । ರಾಸುಮಹಿಮೆ ಯೇಸು ಪೇಳ್ವೆ ॥ ೫ ॥ ॥ ೧೩ ॥

ಪದ, ರಾಗ–ಬೆಹಾಗ (ರೂಪಕತಾಳ).

ಸಾಕು ಮಾಡಿ ದಾಸವರ್ಯರೇ । ಈ ಸ್ತವನವನ್ನು ಸಾಕು ಮಾಡಿ ದಾಸವರ್ಯರೇ ॥ ಪ ॥ ಸಾಕು ಮಾಡಿರಿನ್ನು ನಿಮ್ಮ ವಾಕು । ಎಷ್ಟು ವರ್ಣಿಸುವಿರಿ ॥ ಲೋಕನಾಥ ಪಾದಭಕುತಿ ಸೋಕಿದವರು ಎಲ್ಲರಿಂತ ॥ ಉಪಪಲ್ಲ॥ ಕಾಶಿ ರಾಮೇಶ್ವರಾದಿ। ಆ ಸುತೀರ್ಥ ಕ್ಷೇತ್ರವೆಲ್ಲ ॥ ದಾಸರಿದ್ದ ಸ್ಥಳದಲಿಹವು। ಲೇಶ ಸಂಶಯವು ಸಲ್ಲ ॥ ೧ ॥ ದಾಸರಿಂದ ಹರಿಯು ಸುಪ್ರ। ಕಾಶವನ್ನು ಐದಿ ಇಹನು॥ ದಾಸರಿಂದ ನಾವು ಸ। ನ್ನ್ಯಾಸ ಕಾದುಕೊಂಡು ಇಹೆವು ॥ ೨ ॥ ದಾಸರಿಲ್ಲದೀಹ ಸ್ಥಳವ । ಶ್ರೀಶನೊಲ್ಲ ಅಲ್ಲಿ ಸ। ನ್ನ್ಯಾಸಿಗಾಳು ಎಂದಿಗೊಲ್ಲ । ರೀಸು ವಾಕ್ಯ ಸಟಯು ಅಲ್ಲ ॥ ೩ ॥ ಸಕಲ ಯಜ್ಞಯಾಗಫಲವು । ನಿಖಿಳ

ವೇದಶಾಸ್ತ್ರಫಲವು । ಅಖಿಳಮಂತ್ರ ಜಪದಫಲವು । ಭಕುತಿಮಾರ್ಗದಿಂದೆ ಇಹವು ॥ ೪ ॥ ದಾಸ್ಯತನದ ಮಹಿಮೆಯು ವರ । ದೇಶ ವಿಠ್ಠಲನ್ನ ನೈಜ । ದಾಸ ಜನರೆ ಬಲ್ಲರಿದನು । ದೋಷಿಗಾಳು ಅರಿವರೆಂತು ॥ ೫ ॥ ॥ ೧೮ ॥

(ಆರ್ಯವೃತ್ತ.)

ಎತ್ತನೋಡೆ ಶ್ರಿಂಗಾರಗೃಹದಿ ಆ । ತಿಥ್ಯದ ಸಂಭ್ರಮದೋರುವದೂ ॥ ಸುತ್ತಲಪ್ರಾಂತದ ದ್ವಿಜರಸಂದಣಿಯು । ಜತ್ತಿಜತ್ತಿಲಿ ಬರುತಿಹದೂ ॥ ೧ ॥ ಎತ್ತನೋಡಲು ವೇದಘೋಷವು । ಎತ್ತಲಿ ಹರಿಗುಣಗಾಯನವೂ ॥ ಉತ್ತಮಾಸನದಿ ಕುಳಿತು ಗುರುವರರು । ತತ್ವವಿಚಾರವ ನಡಿಸಿಹರೂ ॥ ೨ ॥ ಭಕ್ತ ಜನರುಗಳು, ಕಾಣಿಕಿ ತಮ್ಮಯ । ಶಕ್ತ್ಯನುಸಾರದಿ ಕೂಡುತಿಹರೂ ॥ ತಪ್ತ ಮುದ್ರಿಗಳಕೊಂಡು ಗುರುವರರ । ತುತ್ತಿಸಿ ಮೋದವಬಡುತಿಹರೂ ॥ ೩ ॥ ತರುವಾಯದಿ ಗುರುವರು ಸ್ನಾನಗೈ । ದರು ಶಾಸ್ತ್ರೋಕ್ತ ವಿಧಿಯ ಕ್ರಮದಿ ॥ ತರತಮದಿಂದಲಿ ಮೂಲ ರಾಮದೇ । ವರ ಮಂಡಿಸಿದರು ಮಂಟಪದೀ ॥ ೪ ॥ ರಾಮವಿಗ್ರಹವ ಕಾಣಲು ದಾಸರು । ನೈಮರದರು ಅತಿಭಕ್ತಿಯಲೀ ॥ ಪ್ರೇಮದ ಭರದಲಿ ಪೊಗುಳುತನಲಿವರು । ರಾಮನ ಚರಿತೆ ಈ ತೆರದಲ್ಲೀ ॥ ೫ ॥ ॥ ೨೩ ॥

ಪದ, ರಾಗ–ಭೈರವಿ (ಆದಿತಾಳ).

*ರಾಮನ ನೋಡಿರೈ । ರಘುಜಲಲಾಮನ ಪಾಡಿರೈ ॥ ಪಂ ॥ ಶ್ರೀ ಮನೊಹರ ಅಜವ್ಯೋ ಮಾಳಕ ಸುರಸ್ತೋಮಾ । ನುತ ಗುಣಭೂಮಾ ॥ ಅನುಪಲ್ಲ ॥ ಧರಣಿ ಸುತೀಶನ ಚರಣ ತಳಾರುಣ ಹೊಳಲೊ । ಮಾವಿನ ತಳಿಲೊ । ಸುರುಚಿರಹಲ ಕುಲಶಾಬ್ಜ ಪತಾಕದ ಗೆರಿಯೊ । ಶುಭ ನಿಧಿಥೆರಿಯೋ । ಸುರತಟನಿಯ ಜನಕನ ನಖಸಾಲ್‌ಸಾಲ್ ಬೆರಳೊ । ವನರುಹ ದರಳೊ ॥ ಪೆರಡು ಎರಡು ಹೊಂಬೆರಡು ಹಿಂಬಡ ಜಂಘೆಜಾನೋ । ದರ್ಪಣ ವೇನೊ ॥ ೧ ॥ ಶ್ರೀರಮಣನ ಶ್ರಿಂಗಾರ ಸುಪೇರೂರುಗಳೊ । ಕದಳಿ ಮರಗಳೊ । ಶೌರಿಜ ಘನಸುಸಿತಂಬದಿ ಪಲಿವಾಂಬರವೊ । ಅರುಣಾಂಬರವೋ ।

---

* ಈ ಪದವು ಗುರು ಗೋಪಾಲರಾಯರು ರಚಿಸಿದ್ದು. ಆದರೆ, ಈ ಚರಿತ್ರೆ ಕರ್ತೃರು, ಕೆಲವು ಗೌಪ್ಯ ಕಾರಣದಿಂದ ಈ ಚರಿತ್ರೆಯಲ್ಲಿ ಸೇರಿಸಿರುವರು.

ಚಾರುಮೇಖಳ ಕಾಂತಿಗಳಿಂದೊಪ್ಪುವ ಕಟಿಸ್ಥಳವೊ ಸಿಂಹದ ನಿಲವೊ ॥ ಮೂರುವಳಿಯ ನಾಭಿಯು ಸುರೋವರಾವಳಿಯೊ । ತ್ರಿವೇಣಿಸುಳಿಯೋ ॥ ೨ ॥ ಕರುಣನಿಧಿಯ ವಕ್ಷಸ್ಥಳ ವಜ್ರದ ಖಣಿಯೊ । ರಮೆಯರ ಮನಿಯೊ । ವರಿ ಪರಿಹಾರ ತ್ರಿರೇಖಾಂಕಿತ ಕಂಧರವೊ । ಸುಂದರದರವೊ । ಅರಿಭಂಜನ ಸನ್ನುತ ಭುಜಬಾಹುದಂಡಗಳೊ । ಕರಿಶುಂಡಗಳೊ ॥ ಕರತಳಾಂಗುಲಿನಖ ಉರದಲಿ ಕೌಂಸ್ತುಭಮಣಿಯೊ । ಉದಿತ ದ್ಯುಮಣಿಯೋ ॥ ೩ ॥ ಚಂದಿರ ಬಿಂಬ ಸುಮುಖ ಚುಬಕದ ದ್ಯುತಿಯೊ । ಪವಲದಲತಿಯೊ । ಮಂದಸ್ಮಿತ ಮಾಯಾವಿವದನ । ಪಲ್ಲುಗಳೊ । ಮಲ್ಲಿಗಿಮುಗುಳೋ । ಸೌಂದರ್ಯದರಸ ನಿಮ್ನ ಸುನಾಸದಕೊನಿಯೋ । ಸಂಪಿಗಿತೆನಿಯೋ । ಇಂದಿರೇಶನ ಕೃಪಾವ ಲೋಕನ ನಯನಗಳೋ । ಪಂಕಜಯುಗಳೋ ॥ ೪ ॥ ಖಗರೂಢನ ಶಿರಿ ಮೊಗದ ಕಪೋಲ್ಲಳಶಿರಿಯೊ । ಕೂರ್ಮದಮರಿಯೋ । ನಗಧರನನುಪಮ ಕರ್ನಕುಂಡಲಗಳ ದ್ಯುತಿಯೊ । ಇನಶಶಿ ತತಿಯೋ । ಜಗನ್ಮೋಹನ ಜನ ಕನ ಭ್ರೂವಿಲಾಸಗಳೋ । ನಿಂಬದಯುಗಳೋ ॥ ಮೃಗಮದ ತಿಗುರಿ ನಿಂದೊಪ್ಪುವ ಶೋಭನ ಫಣಿಯೊ ಅರಶಶಿಗೆಣಿಯೋ ॥ ೫ ॥ ಕುಂಡಲಿಶಯ ನನ ಕುಟಲಾಳಕಗಳ ವಲವೊ । ಭೃಂಗದ ಕುಲವೊ । ಪಂಡಿತ ಪ್ರೀಯನ ಮಂಡೆಯುಲೊಪ್ಪುವ ಮುಕುಟವೊ । ರತ್ನಕಟಕವೊ ॥ ಚಂಡವಿಕ್ರಮಶರತೂಣಿ ಕೋದಂಡಪಾಣಿ । ಗುಣಗಣಶ್ರೇಣಿ । ಚಂಡೀಶನ ಕೋದಂಡಕಾಂಡ ಖಂಡ್ರಿ ಸಿದಾ । ಖಳರ ದಂಡಿಸಿದಾ ॥ ೬ ॥ ಗುರುಮುಖ ವಿಘ್ನಾಚರಿಸಿದ ಖಳರ । ಶಿಕ್ಷಿ ಸಿದ । ಕೃತು ರಕ್ಷಿಸಿದ । ಗುರುವರದೇಂದ್ರರ ಕರಕಮಲಾರ್ಚಿತ ಚರಣಾ । ಮಾರುತಿ ಶರಣಾ । ಗುರು ಕರುಣದಿ ತನ್ನನು ನಂಬಲು ಅಘಕಡಿವಾ । ರಿಪು ಗಳ ಬಡಿವಾ ॥ ಗುರು ಗೋಪಾಲ ವಿಠಲರಾಮಾ ನಮ್ಮ । ನು ಕಾವಾ ಅತಿ ಮುದವೀವಾ ॥ ೭ ॥ ॥ ೩೦ ॥

(ಭಾಮಿನಿಷಟ್ಪದಿ.)

ಚಲುವ ರಘುರಾಮನರ್ಚನೆ । ಹಲವು ವಿಧದಲಿ ಗೈದು ಮುನಿವರ । ಸಲಿಸಿದರು ನೈವೇದ್ಯ ಆರತಿ ಸಕಲ ಪೂಜೆಯನೂ ॥ ಕಲಿಮಲವ ಕಳವಂಥ ತೀರ್ಥವ । ಕೊಳುತ ಬ್ರಾಹ್ಮಣ ಜನರು ಮುದದಿಂ । ದಲಿ ಸುಭೋಜನವಾ

ಡಿದರು ಶ್ರೀಗಳ ಪ್ರಸಾದವನೂ ॥ ೧ ॥ ಇಂತು ಕಾರ್ಯವ ತೀರ್ದ ಬಳಿಕೇ। ಕಾಂತ ಸ್ಥಳದಲಿ ಗುರುವರು ಶ್ರೀ। ಕಾಂತನನು ಸ್ಮರಿಸುತ್ತ ಆನಂದದಲಿ ಕುಳಿತಿರಲೂ ॥ ಶಾಂತವಾದಾ ಸಮಯದಲಿ। ಏಕಾಂತದಲಿ ಹರಿದಾಸ ವರ್ಯರು। ಇಂತು ಪ್ರಾರ್ಥಿಸುತಿಹರು ಮನಸಿನ ಚಿಂತೆಯನು ತೊರದೂ ॥ ೨ ॥ ॥ ೩೨ ॥

ಪದ, ರಾಗ–ಪೂರ್ವಿ (ಏಕತಾಳ).

ಗುರುರಾಯಾ ಗುರುರಾಯಾ। ಸ್ಮರಿವ ಭಕತರುದ್ಧರಿವ ಸಮರ್ಥಾ ॥ ಪಲ್ಲ ॥ ತಂದೆ ನಿಮ್ಮಯ ದಯ। ದಿಂದಲೇ ಈ ಸುಖ ॥ ಬಂದಿಹದೆನ್ನಗೆ। ಸಂದೇಹವಿಲ್ಲವೋ ॥ ೧ ॥ ಬಡವನು ನಾಖರೆ। ಕಡು ಕರುಣಿಯೆ ನಿ। ನ್ನಡಿಗಳಿಗೆಲ್ಲವು। ತಡೆಯದೆ ಕೊಡುವೆನು ॥ ೨ ॥ ಮನೆಧನ ಧಾನ್ಯವಾ। ಹನ ವಸನಗಳನು ॥ ಅನುಮಾನಿಸದಲೆ। ನಿನಗರ್ಪಿಸುವೆನು ॥ ೩ ॥ ಕಡೆಯ ಮಾತಿದು ಎ। ನ್ನೊಡೆಯನೆಲಾಲಿಸು ॥ ಪೊಡವಿವನ ಪದದಿ। ದೃಢಭಕುತಿಯ ಕೊಡು ॥ ೪ ॥ ವರದೇಂದ್ರನೆ ನೀ। ಸ್ವರುಪವಾಗಲು ಶಿರಿ ॥ ವರದೇಶ ವಿಠಲನು। ಕರುಣಿವ ಸತ್ಯಾ ॥ ೫ ॥ ॥ ೩೭ ॥

(ಗದ್ಯ.)

ಈ ತೆರದಿ ಪ್ರಾರ್ಥಿಸಲು ದಾಸವರ್ಯರು ನಯದಿ। ದಾತ ವರದೇಂದ್ರಾರ್ಯನ ಸುನಗುತ ಮನದೊಳಗೆ। ಪ್ರೀತಿಯಿಂದಲಿ ನುಡಿದನೀಪರಿಯಲತಿ ಹರುಷ। ವಾ ತೋರುತಾಕ್ಷಣದಲೀ ॥ ೧ ॥ ॥ ೩೮ ॥

ಪದ, ರಾಗ–ಭೂಪಾಳಿ (ಆಟತಾಳ).

ಕೊಡುವದು ಗುರುಕಾಣಿಕಿಯನೂ। ತಡಿಯದೇ ಪ್ರಾಣೇಶ ದಾಸವರ್ಯನೆ ನೀನು ॥ ಪಲ್ಲ ॥ ಮನೆಯೊಲ್ಲೆ ಧನವಾ। ಹನ ವಸನಗಳೊಲ್ಲೆ ॥ ಅನುಮಾನಿಸದಲೆ। ಮ್ಮನಸಿನೊಳಿದ್ದದ್ದು ॥ ೧ ॥ ಬಣವಿದೊಡ್ಡಿಯ ಕೃಷ್ಣಾ। ರ್ಪಣವೆಂದು ಕೊಡಲು ॥ ರಾಮನ ದಯ ನಿಮ್ಮಲ್ಲಿ। ಘನವಾಗಿ ಆಹದೂ ॥ ೨ ॥ ಸೋಜಿಗವಲ್ಲವು। ಪೂಜೇತವಾಹದು ॥ ನೈಜವಾಗೀಸ್ಥಳ। ನೀಜವದಿಂದಲಿ ॥ ೩ ॥ ಬೇಡಿದಾಗಲೆ ತಡ। ಮಾಡದೆ ಸ್ವಾಧೀನ ॥ ಮಾಡುವದೆಮ್ಮಗೆ। ನೀಡಿದ ಸ್ಥಳ

ವನೂ ॥ ೪ ॥ ವರದೇಶ ವಿರಲನು । ಸರುವ ದೇವರೊಡ ॥ ನಿರುತಿಹನೀ ಸ್ಥಳ । ಪರಮ ಪವಿತ್ರವು ॥ ೫ ॥ ॥ ೪೩ ॥

(ಕಂದ.)

ಮುನಿವರರ ಹೃದ್ಗತವ ತಿಳಿದು । ಸನುಮತದಿ ಸಂಕಲ್ಪದೊಡನೆ ಕೃಷ್ಣಾ ॥ ರ್ಪಣವೆನುತ ಇತ್ತರುದಾನಂ । ಜನಕಾದುದಾಶ್ಚರ್ಯವೀದಾನ ದಿಂ ॥ ೧ ॥ ॥ ೪೪ ॥

(ಆರ್ಯವೃತ್ತ.)

ಧನ್ಯ ಧನ್ಯ ದಾಸಾರ್ಯರೆ ನಿಮ್ಮಯ । ಪುಣ್ಯಕ ಸರಿಗಾಣೆನು ಜಗದೀ ॥ ಮಾನ್ಯರೆನಿಸಿದಿರಿ ನಿಮ್ಮ ವಂಶಪಾ। ವನ್ನವಾಯಿತಿಂದಿನ ದಿನದೀ ॥ ೧ ॥ ದಾನದ ಮರ್ಮವನರಿಯದೆ ಅಚ್ಚರ । ಕ್ಷೋಣಿಯ ಜನಕಾದದು ಬಹಳಾ ॥ ಜಾನಕಿಪತಿ ಕೆಲಕಾಲದನಂತರ । ತಾನೆ ತೋರುವನು ಜಗ ಕೆಲ್ಲಾ ॥ ೨ ॥ ಇನಿತು ಪೇಳಿ ಸಂಶೇವಿತರಾಗುತ । ಮುನಿಗಳು ತೆರಳಿದ ರ್ಥರುಷದಲೀ ॥ ಪುಣೆಯ ಶೇರಿದರು ದುರ್ವಾದಿಯ ಮತ । ವನು ದಿಗ್ವಿಜ ಯಿಪ ಇಚ್ಛೆಯಲೀ ॥ ೩ ॥ ರಾಮುಶಾಸ್ತ್ರಿ ಎಂಬಾ ಮಹವಾದಿಯು । ತಾಮುದ ಗಜದಂತಿರುತಿಹನೂ ॥ ಶ್ರೀಮಂತರ ಆಶ್ರಯದಿ ತನ್ನ ಸರಿ। ಭೂಮಿಯೊಳಿ ಲ್ಲೆಂದರಿತಿಹನೂ ॥ ೪ ॥ ವರದೇಂದ್ರರು ಬಂದಿರುವ ವಾರ್ತೆಯನು । ಅರಿತು ಅರಸು ಕರತರಿಸಿದನೂ ॥ ಮರಿಯಾದಿಯ ಪೂರ್ವಕದಿ ಅವರ ತ। ನ್ನರ ಮಂದಿರದಲ್ಲಿರಸಿದನೂ ॥ ೫ ॥ ಮುನಿಗಳ ಹೃದ್ಗತ ತಿಳದು ಶಾಸ್ತ್ರಿಗಳ । ಮನ ಸಿನ ಭಾವ ತಿಳುಹಿಸೆಂದಾ ॥ ಪಣದಿಂದಲೆ ವಾದವನು ಮಾಡುವೆವು । ಅನು ಮಾನವು ಯಿದಕಿಲ್ಲೆಂದಾ ॥ ೬ ॥ ಶಾಸ್ತ್ರಿಯ ಭಾವವ ಮುನಿಗಳ ಸಮ್ಮು ಖದಿ । ಸ್ತೋತ್ರ ಮಾಡಿ ತಿಳುಹಿದನಾಗಾ ॥ ಶಾಸ್ತ್ರವಿಚಾರ ಪ್ರತಿಜ್ಞೆಯೊಡನೆ ಈ । ಶಾಸ್ತ್ರಿಯೊಡನೆ ಮಾಡುವದೀಗಾ ॥ ೭ ॥ ॥ ೫೧ ॥

ಪದ, ರಾಗ–ರೇಗುಪ್ತಿ (ತ್ರಿಪುಡೆತಾಳ).

ಶಪಥವ ಮಾಡುವೆ ವೀಪರಿ ಜನರೆಲ್ಲಾ ಕೇಳಿರೆಲ್ಲಾ ॥ ಸುಪಥವ **ಶಾಸ್ತ್ರದಿ ಸಾಧಿಸಿ ಕೊಡೆವೆವು ಸಂದೇಹವಿನಿತಿಲ್ಲಾ** ॥ ಪ॥ ಸಕಲ ಶ್ರುತಿಸ್ಮೃತಿ

ಸಿದ್ಧಾಂತವಿದೆ ಸತ್ಯಾ ಕೇಳಿರೆಲ್ಲಾ ॥ ಯುಕುತಿಗೆ ಅನುಕೂಲವಾದ ತತ್ವ ವಿದು ಸಟಯು ಅಲ್ಲಾ ॥ ೧ ॥ ಹರಿಯೆ ಸರ್ವೋತ್ತುಮಾ ಸಾಕಾರ ಸ್ವಾತಂತ್ರ್ಯ ಸುಗುಣ ಪೂರ್ಣ ॥ ಶಿರಿ ಅಜಭವ ಮುಖ ಸುರರು ತರತಮದಿಂದ ಗುಣದಿ ನ್ಯೂನಾ ॥ ೨ ॥ ಹರಿಯೇ ಜಗತ್ಕರ್ತಾ । ಹರಿಯೆ ಮುಕ್ತಿದಾತಾ ಸರ್ವಾಧೀಶಾ ॥ ಸುರತತಿ ಹರಿಯು ಆಧೀನರು ನಿತ್ಯದಿ ಅವನ ದಾಸಾ ॥ ೩ ॥ ಪಂಚಭೇದವು ಪ್ರಾಪಂಚವು ಸತ್ಯವು ನಿತ್ಯದಲ್ಲೀ ॥ ಪಂಚಿಕಿಯಲಿ ಶಿದ್ಧವಾದ ತತ್ವಾ ಮಧ್ವಶಾಸ್ತ್ರದಲ್ಲೀ ॥ ೪ ॥ ಮಧ್ವಶಾಸ್ತ್ರವೆ ಶಾಸ್ತ್ರಾ ಮಧ್ವರಾಯರೆ ಗುರು ಸತ್ಯಾ ಸತ್ಯಾ ॥ ಅದ್ವೈತ ಶಾಸ್ತ್ರವು ಶುದ್ಧತಾಮಸವದು ಮಿಥ್ಯಾ ವಿಥ್ಯಾ ॥ ೫ ॥ ಈ ಸುವಾದದಿ ಪರಾಜೀತರಾದರೆ ನಾವು ಕೇಳಿ ಬ್ಯಾಗ ॥ ಲೇ ಸುವೈಭವ ಸನ್ಯಾಸ ಸಹಿತವಾಗೀ ತ್ಯಜಿಪೆವೀಗಾ ॥ ೬ ॥ ವರದೇಶ ಪಿರಲನ ಕರುಣದಿ ದುರ್ಮತ ಮೂಲವನ್ನೂ ॥ ಹರಿದುಬಿಡುವೆವು ವಾದಿಯ ಬರಹೇಳು ಸಭೆಯೊಳಿನ್ನೂ ॥ ೭ ॥ ॥ ೫೮ ॥

(ಆರ್ಯವೃತ್ತ)

ಕೇಳಿ ಶಪಥವನು ರಾಮುಶಾಸ್ತ್ರಿ ಬಹು । ತಾಳುತ ಕೋಪವ ಮನ ದಲ್ಲೀ ॥ ಪೇಳುವನೀಪರಿ ನೃಪತಿಯು ಸಭೆಯೊಳು । ಆಲಿಸುವಂದದಿ ಜನರಲ್ಲೀ ॥ ೧ ॥ ಲೇಸು ಲೇಸು ನಾ ಸೋತರೆ ನೃಪವರ । ಈ ಸಂಸ್ಥಾನವ ತ್ಯಜಿಸುವೆನೂ ॥ ದೇಶಾಂತರದಲಿ ವಾಸಮಾಡುತಲಿ । ಶೇಷಾಯುಷ್ಯವನೀಗೂವೆನು ॥ ೨ ॥ ಸಟಯಾತಕೆ ನಾ ಸೋತರೆ ಮುನಿಗಳ । ಮಠವ ಮಾಡಿಸೆ ವ್ಮಯ ಗೃಹವಾ ॥ ಧಿಟತನದಲಿ ಧೂರ್ಜಟಿಯು ಕರುಣದಿಂ । ನಟಸುವೆನೀ ಮುನಿಗಳ ಬಲವಾ ॥ ೩ ॥ ॥ ೬೧ ॥

ಪದ, ರಾಗ–ಶಂಕರಾಭರಣ (ಏಕತಾಳ).

ನಡಸಿದ ಶಾಸ್ತ್ರಿಯು ವಾದವನು । ಮುನಿಯು ತಡಿಯುದೆ ಜೈಸಿದ ವಾದಿಯನೂ ॥ ಪಂ ॥ ಜೀವೇಶರೈಕ್ಯವ ಪೇಳಿದಾ । ಮುನಿಯು ಜೀವೇಶ್ವರರ ಭೇದಾ ಸ್ಥಾಪಿಸಿದಾ ॥ ೧ ॥ ಜಗನ್ಮಿಥ್ಯಾವೆಂದು ನುಡಿದಾನು । ಮುನಿಯು ಜಗತ್ಸತ್ಯಾ ಸಿದ್ಧಮಾಡಿದನೂ ॥ ೨ ॥ ತತ್ವ ಮಸೀತ್ಯಾದಿ ಶೃತಿಗಳಸು

ಮುನಿಯು । ಯುಕ್ತಿಲಿ ದ್ವೈತಾರ್ಥ ಪೇಳಿದನೂ ॥ ೩ ॥ ಆವಾವ ವಾಕ್ಯವ ಪಿಡಿವಾನು ಮುನಿಯು । ಯಾವತ್ತು ದ್ವೈತಾರ್ಥ ನುಡಿವಾನೂ ॥ ೪ ॥ ವರದೇಶ ವಿಠಲನ ಕರುಣದೀ । ನಿರುತ್ತರ ಗೈದಾ ವಾದಿಯ ವಾದದೀ ॥ ೫ ॥ ॥ ೬೬ ॥

(ವಾರ್ಧಿಕಷಟ್ಪದಿ.)

ಪೃಥ್ವಿಪನ ಸಭೆಯೊಳಗೆ ಹತ್ತೇಳು ದಿವಸದಲಿ । ಶೃತಿಶಾಸ್ತ್ರ ಉಪ ನಿಷದ್ಗಳ ಸಾರವುಂ ಪೇಳಿ । ಪ್ರತಿವಾದಿಯುಂ ನಿರುತ್ತರಗೈಸಿ ಶ್ರೀ ಮಧ್ವ ಮತವಸಂಸ್ಥಾಪಿಸಿದನೂ ॥ ಗತ ತೇಜನಾದ ಶಾಸ್ತ್ರಿಯು ಗೃಹವ ಪಣದಂತೆ । ಯತಿ ಶಿರೋಮಣಿಗಾಗಿ ಮಠವ ಸ್ಥಾಪಿಸಿ ವರಾ । ಜಿತನಾದ ಕಾರಣದಿ ಸಂಸ್ಥಾನವಂ ತ್ಯಜಿಸಿಪತಿತನೋಲ್ ಪೊರಮಟ್ಟನೂ ॥ ೧ ॥ ॥ ೬೭ ॥

(ಆರ್ಯವೃತ್ತ.)

ರಾಮನ ಗೃಹ ಪೀರಾಮುಗಾಯ್ತು ಆ । ರಾಮುಗೆ ಪೀರಾಮುವು ಆಯ್ತು ॥ ರಾಮಣಿಯಕ ಪುರದೀ ಮೆರದು ಮುನಿ । ಶ್ರೀಮಂತಗೆ ಸನುಮತ ವಾಯ್ತೂ ॥ ೧ ॥ ಆನಿ ಹಂಡೆ ವಸನಗಳೂ ದ್ರವ್ಯದ । ದಾನದಿ ನೃಪರನು ಮರಸಿದನೋ ॥ ಜ್ಞಾನ ಭಕುತಿ ವೈರಾಗ್ಯದಿ ವರಸರಿ । ಕ್ಷೋಣಿಯೊಳಗೆ ಯಿಲ್ಲೆನಿಸಿದನೊ ॥ ೨ ॥ ಅಬ್ದವು ವಿಶ್ವಾವಸು ಆಷಾಢದ । ಶುದ್ಧ ಷಷ್ಟಿ ಕುಜ ವಾರದಲೀ ॥ ಸಿದ್ಧಾಸನದಲಿ ಕುಳಿತನು ಮುನಿವರ । ಶುದ್ಧ ಸಮಾಧಿಯ ನಿಕ್ಕುತಲೀ ॥ ೩ ॥ ಸಾಧನ ಬಹುವಿಧ ತೀರಿಸಿ ಮುನಿವರ । ಐದಿದ ಶ್ರೀಹರಿ ಯಾಲಯವಾ ॥ ಸಾಧುಸುಜನರನು ಪೊರಿಯಲು ಅಂಶದಿ । ಈ ಧರಿ ಯೊಳು ಚರಿಸುತಲಿರುವಾ ॥ ೪ ॥ ಕೆಲಕಾಲದ ನಂತರ ದಾಸಾರ್ಯರಿ । ಗೊಲಿದು ಪೇಳಿದನು ಸ್ವಪ್ನದಲೀ ॥ ತುಳಸಿ ರೂಪದಿಂದಲಿ ಬಣವಿಯು ತಳ । ದಲಿ ಬಂದಿರುವೆನು ಶೀಘ್ರದಲೀ ॥ ೫ ॥ ಗುಲಗುಂಜಿಯ ಮೊರಡಿ ಯಲಿ ಒಪ್ಪುತಿಹ । ಶಿಲೆಯನು ವೃಂದಾವನ ಮಾಡೀ ॥ ತುಳಸಿ ವೃಕ್ಷವಿಹ ಸ್ಥಳದಲಿ ಸ್ಥಾಪಿಸಿ । ಬಲು ಭಕುತಿಲಿ ಪೂಜೆಯ ಮಾಡೀ ॥ ೬ ॥ ಮುನಿ ಯಾಜ್ಞವ ಸನ್ಮದಲಿ ಮನ್ನಿಸಿ । ಬಣವಿಯ ತೆಗಸಿದರಾಕ್ಷಣದೀ ॥ ಮನುಜ

ನಳತಿ ಶ್ರೀ ತುಳಸಿ ವೃಕ್ಷವನು । ಜನರೆಲ್ಲರು ಕಂಡರು ಮುದದೀ ॥ ೭ ॥ ಕೆಲಕಾಲದಿ ಶ್ರೀ ತುಳಸಿಯ ಪೂಜಿಸಿ। ಗುಲಗುಂಜಿಯು ಮೊರಡಿಯಲಿಂದಾ ॥ ತಿಲೆಯನು ಮುನಿವರರಾಜ್ಞೆಯಂದದಲಿ । ಬಲು ಸಂಭ್ರಮದಿಂದಲಿ ತಂದಾ ॥ ೮ ॥ ವೃಂದಾವನ ಸ್ಥಾಪಿಪ ಸಮಯದಿ ಭುವ। ನೇಂದ್ರರು ಜಾಮಲಾಪುರ ದಿಂದಾ ॥ ನಂದದಿ ನರಹರಿ ಸಾಲಿಗ್ರಾಮವ । ನಂದು ಕಳುಹಿದರು ಮುದ ದಿಂದಾ ॥ ೯ ॥ ಅತಿ ಸಂಭ್ರಮದಲಿ ವೃಂದಾವನ ಸ್ಥಾ। ಪಿತವಾಯಿತು ಶಾಸ್ತ್ರೋಕ್ತಿಯಲೀ ॥ ಮತಿವಂತರಿಗಾನಂದ ಖೇದ ದು । ರ್ಮತಿಗಳಿಗಾದದು ಮನದಲ್ಲೀ ॥ ೧೦ ॥ ಆ ತರುವಾಯದಿ ಪಾದುಕೆಗಳ ಮುನಿ। ತಾತವಕದಿ ಪುಣೆಯದಲಿಂದಾ ॥ ಪ್ರೀತಿಯಿಂದ ಸ್ವಪ್ನದಲಿ ಪೇಳಿ ನಿಜ। ದೂತರಿಂದ ತರಿಸಿದನಾಗಾ ॥ ೧೧ ॥ ॥ ೭೮ ॥

ಪದ, ರಾಗ–ಭೂಪಾಳಿ (ತ್ರಿಪುಡೆತಾಳ).

ವೃಂದಾವನದಿ ವರದೇಂದ್ರ ಮುನಿವರನು । ಬಂದಿಹನತಿ ಆನಂದಾ ದಿಂದಾ ॥ ಮಂದಜನಕ ಸುಖ। ತಂದುಕೊಡುವದಕೆ। ಮಂದಾರ ತರುವಿ ನೋಲ್ । ನಿಂದು ಪಾಲಿಪನಿತ್ಯಾ ॥ ಪಲ್ಲ ॥ ಗುರುವರನಿಗೆ ಕೀರ್ತಿ। ತರುವ ಉದ್ದೇಶದಿ । ಸರ್ವಜ್ಞ ಮೊದಲಾದ ಮುನಿವೃಂದವೂ । ಹರಮುಖಸುರ ರೊಡಗೂಡಿ ಹರುಷದಿಂದಾ । ಶಿರಿ ಅರಸನು ತಾನೆಯಿರುವನೀ ಸ್ಥಳದಲ್ಲೀ ॥ ೧ ॥ ಸುತರು ಬೇಡುವರಿಗೆ ಸುತರ ಪಾಲಿಸುವ ಆ। ನತರಿಗೆ ಅಖಿಳ ಇಷ್ಟಾ ರ್ಥವನೂ । ಮತಿವಂತರಿಗೆ ಸದ್ಭಕುತಿ ಜ್ಞಾನ ವೈರಾಗ್ಯ । ಪ್ರತಿಪಾಲಿಸು ವನು ಸದ್ಗತಿ ಸಹ ನಿರುತದೀ ॥ ೨ ॥ ದುರುಳಜನಕ ದುಃಖಾಶರಣರಿಗೆ ಸುಖ । ಕರುಣಿಪನವರ ಯೋಗ್ಯತೆಯರಿತೂ ॥ ದುರಭಿಮಾನವ ಬಿಟ್ಟು ಗುರುಗಳ ಚರಣವ। ಸ್ಮರಿಸುವರನು ಪೊರವ ವರದೇಶ ವಿಠಲನೂ ॥ ೩ ॥ ॥ ೮೧ ॥

(ಆರ್ಯವೃತ್ತ.)

ಈ ಗುರುಗಳು ಇಲ್ಲಿಹ ಕಾರಣದಿಂ । ಸಾಗಿಬಹದು ಸಜ್ಜನವೃಂದಾ ॥ ಜಾಗು ಮಾಡದಲೆ ಯೋಗೀಶರ ಪದ। ಬಾಗಿ ಭಜಿಸುವರು ಮುದದಿಂದಾ ॥ ೧ ॥ ಗುರುವಾರದ ದಿವಸದಲಿ ಸಂಭ್ರಮದಿ । ಹರಿಭಕತರ ವೃಂದವು

ಕೂಡೀ । ಗುರುಗಳ ಪಾಲಕಿ ಶೇವಿಯು ಮಾಡುವ । ರ್ಹರುಷದಿ ಗುರುಗಳ ಕೊಂಡಾಡೀ ॥ ೨ ॥ ಪ್ರತಿ ವರುಷದ ಆಷಾಢ ಶುದ್ಧದಲಿ। ತಿಥಿ ಸಪ್ತಮಿ ಶುಭ ದಿವಸದಲೀ ॥ ಯತಿವರ ಬಹು ವಿಜೃಂಭಣೆಯಿಂದಲಿ । ರಥದಲಿ ಮೆರೆವನೀ ಸ್ಥಳದಲ್ಲೀ ॥ ೩ ॥ ಆರಾಧನಿಯಲಿ ಬಹು ದ್ವಿಜವೃಂದವು। ದೂರದೂರದಿಂದಲಿ ಬಹದೂ ॥ ಚಾರುತರದ ಸುಪುರಾಣವು ಬಹು ಶೃಂಗಾರದ ಗಾನವು ನಡೆ ಯುವದೂ ॥ ೪ ॥ ಗುರುಗಳ ಪಾದೋದಕವು ಪ್ರಸಾದವು । ಹರುಷದಿ ಕೊಳ್ಳುತ ಯಿಲ್ಲಿಂದಾ ॥ ವರದೇಶ ವಿಠಲನ ಸ್ಮರಿಸುತ ಎಲ್ಲರು । ತೆರಳುವರತಿ ಹರುಷದಲಿಂದಾ ॥ ೫ ॥ ॥ ೮೭ ॥

ರಾಗ-ಕಾಂಬೋಧಿ (ಅಟತಾಳ).

[ಅಷ್ಟಕ ಧಾಟಿ.]

ಆಲಿಸುವದು ಹರಿಭಕತರೂ ಗುರುಗಳ ಚಾರು । ಚರಿತೆ ಕೇಳಿ ಮೋದಿಪರೂ ॥ ಪಲ್ಲ ॥ ಈ ಪರಿಯಲಿ ಗುರುವರದೇಂದ್ರಾ । ಸದ್ಗುಣ ಸಾಂದ್ರಾ । ವೃಂದಾವನದಲ್ಲಿ ನಿಂದಾ । ಆಪನ್ನ ಶರಣ[illegible] ಪೊರಿವನೂ । ಅಘ ತರಿವನೂ । ಇಷ್ಟಾರ್ಥಗರಿಯುವನೂ । ತಾಪತ್ರಯಾದಿ ದೋಷಗಳೆಲ್ಲಾ । ತರಿವನು ಖುಲ್ಲಾ । ಮಾನವರನೆಂದೂ ವಲ್ಲಾ । ಈ ಪೊಡವಿಯಲಿ ಎಮ್ಮಯ ಗುರೂ । ಯಿಗೆ ಸರಿ ಯಾರು । ಇಲ್ಲವೆಲ್ಲಿ ನೋಡಿದರೂ ॥ ೧ ॥ ಭೂತಪ್ರೇತ ಪಿಶಾಚಿಯ ಪೀಡಾ । ಕಳಿವನು ಗಾಢಾ । ದುರ್ಜನರನೆಂದು ನೋಡಾ ॥ ಪ್ರೀತ ನಾಗುವ ತನ್ನ ಪಾಡಲೂ । ಸೇವೆ ಮಾಡಲೂ । ತನುಮನವನೀಡಾಲು । ತಾತವಕದಿ ಭಕ್ತ ಜನರನೂ । ಕರ ಪಿಡಿವನೂ । ಮುಕುತಿಯ ಕೊಡು ವಾನೂ । ಈತನ ಚರಿತೆಯ ಕೇಳ್ವರೂ। ನೆರೆ ಬಾಳ್ವರೂ । ಭವವನಧಿ ದಾಟು ವರೂ ॥ ೨ ॥ ವರದೇಂದ್ರರ ಸುಚರಿತೆಯನು । ಶ್ರೀಹರಿಯು ತಾನು । ನುಡಿದು ನುಡಿಸಿದನಿದನೂ । ಅರುಹಿದ ಶಕ್ತ್ಯಾನುಸಾರದೀ । ನಿರ್ಹಂಕಾರದಿ । ಜ್ಞಾನಿಗಳು ಕೇಳಿ, ಮುದದೀ । ಇರುವ ದೋಷವು ಕ್ಷಮಿಸುವದೆಂದೂ । ಪ್ರಾರ್ಥಿಪೆನಿಂದೂ । ಬಹು ದೋಷಿ ನಾನೆಂದೂ । ವರದೇಶ ವಿಠಲಾನು ಒಲಿ ಯಾಲಿ । ಪ್ರೀತನಾಗಲೀ । ಜ್ಞಾನಭಕುತಿ ಪಾಲಿಸಲೀ ॥ ೩ ॥ ॥ ೮೮ ॥

ಮಂಗಳಾರುತಿ ಪದ.

ರಾಗ–ಶಂಕರಾಭರಣ (ತಾಳ).

ಜಯು ಗುರು ವರದೇಂದ್ರಾ । ಜಯು ಶುಭಗುಣ ಸಾಂದ್ರಾ ॥ ಜಯು ಮಂಗಳ ಭಕ್ತಾ ಭಯನಿವಾರಕನೇ ॥ ಪಲ್ಲ ॥ ವಸುಧೇಂದ್ರ ಕರಜಾತ । ವಸುಧಿಯೊಳಗಖ್ಯಾತ । ಬಿಶಿಜನಾಭನ ದೂತಾ । ಅಸಮ ಮೌನೀಶಾ ॥ ೧ ॥ ಗಂಗಾಪಿತನ ಪಾದ । ಭೃಂಗನೆ ನಿರುತಾ ॥ ನಂಗತಾಪರಹಿತ । ಮಂಗಳಚರಿತಾ ॥ ೨ ॥ ಅಲವ ಬೋಧಸುಮತ । ಜಲಧಿ ಚಂದ್ರಮನೇ ॥ ಕಲುಷವಿದೂರಕಮಂ । ಡುಲ ದಂಡಧಾರಾ ॥ ೩ ॥ ಪುಣ್ಯಮಂದಿರವಾಸಾ । ಸನ್ನುತ ಜನಪೋಷಾ ॥ ಘನ್ನ ಮಹಿಮ ಕಾ । ರುಣ್ಯಸಾಗರನೇ ॥ ೪ ॥ ವರದೇಶ ವಿಠಲನ । ಚರಣವ ಸ್ಮರಿಸುವ ॥ ಪರಮಸದ್ಭಕುತಿಯು । ಕರುಣಿಪುದೆಮಗೇ ॥ ೫ ॥ ಅಂತೂ ಪದ್ಯ ॥ ೯೪ ॥ ಶ್ರೀ ಗುರು ಮಧ್ವೇಶಾರ್ಪಣಮಸ್ತು ॥

ಇತಿ ಶ್ರೀ ವರದೇಂದ್ರಾರ್ಯರ ಚರಿತಾನು

ವರ್ಣನಕಥಾ ಸಂಪೂರ್ಣ ಮಗಮತ್ ॥

ಮಂಗಳಂ ! ಮಂಗಳಂ !! ಮಂಗಳಂ !!!

ಶ್ರೀ ಮದ್ವರದೇಂದ್ರ ಗುರುಣಾಂತರ್ಗತ ಶ್ರೀ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀ ಸೀತಾಪತೆ ಶ್ರೀ ರಾಮಚಂದ್ರ ಚರಣಾರವಿಂದಯೊರರ್ಪಿತಾ ॥ ಶ್ರೀ ಮಧ್ವೇಶಾರ್ಪಣಮಸ್ತು ॥

ಶಹಲಿವಾನ ಶಖೆ ೧೮೪೦ನೇ ಕಾಲಾಯುಕ್ತಿ ನಾಮ ಸಂ । ಆಷಾಢ ಶು। ೨ ಸೋಮವಾರ ದಿವಸ ಲಿಂಗಸೂಗೂರು ಕ್ಷೇತ್ರ ಶ್ರೀ ವರದೇಂದ್ರ ಗುರುರಾಜರವರ ಸನ್ನಿಧಿಯಲ್ಲಿ ಕೆಲ್ಲೂರ ಕುಲಕರ್ಣಿ ಹನುಮಂತರಾಯನ ತನುಜಾತ ಸ್ವಾಮಿಯ ಹಸ್ತಾಕ್ಷರದಿಂದಾ ಶ್ರೀ ಗುರು ಜಗನ್ನಾಥ ದಾಸರಾಯರ ಅನುಜ್ಞೆಯಿಂದ ಶ್ರೀಹರಿ ವಾಯುಗಳು ಪ್ರೇರಿಸಿ ಬರೆಸಿದ ಈ ಚರಿತೆಯು ಸಂಪೂರ್ಣವಾದದು.

॥ ಶ್ರೀ ಗುರುರಾಜಾಂತರ್ಗತ ಶ್ರೀ ಮಧ್ವೇಶಾರ್ಪಣಮಸ್ತು ॥

ಶ್ರೀ ಶ್ರೀ ಶ್ರೀ